ಭಾನುವಾರ, ಏಪ್ರಿಲ್ 16, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಭ್ರಮ
ಬೆಂಗಳೂರಿನಲ್ಲಿ ಶನಿವಾರ ನಡೆದ ಆರ್‌ಸಿಬಿ - ಡೆಲ್ಲಿ ಕ್ಯಾಪಿಟಲ್ಸ್ ಪಂದ್ಯದಲ್ಲಿ ಅಭಿಮಾನಿಗಳು ಸಂಭ್ರಮಿಸಿದರು

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED: HM, Teachers, Receptionist for V.V. English School andHindi Teacher for Kannada Aided School, Vijayanagar, Bangalore-40. Contact No. 080- 23405860, 7022475881. Email: vves2008@gmail.com

WANTED TRAINED ARTS AND SCIENCE GRADUATES TO TEACH IN HIGH SCHOOL. Apply in person: HEADMISTRESS, M.S.S. HIGH SCHOOL #8, 6th Cross, Prakashnagar, Bengaluru-21. 7676139966

WANTED TEACHERS with BA/MA (Eng/SS) Salary upto 28000/- Contact Sidhartha International School, Peenya,Dasarahalli. Contact 9620100046 / 9964670328.

SSB INTERNATIONAL SCHOOL
Indiranagar, Bangalore - 560038

LADY ACADEMIC HEADS
for All Categories (Kindergarten, Montessori, Primary & High School)

INSTRUCTORS - LIFE SKILLS
Yoga, Music (Vocal) & Dance (Classical)
Physical Education Instructors (M/F)

ADMINISTRATIVE STAFF
System Administrator, Front Office (Receptionist), Clerical Staff with an Experience of Handling Admissions, Store Manager (Lady), DTP Operator cum Graphic Designer

TRAINED LADY TEACHERS
PRE-PRIMARY
Kindergarten Methodology
Montessori Methodology
PRIMARY (PRT)
with B.Sc/BA, B.Ed
HIGH SCHOOL (PGT)
for teaching English, Physics, Chemistry, Geography, Maths, Hindi and Computer Science

ALL APPLICANTS SHOULD POSSESS RELEVANT QUALIFICATION
Apply immediately in person / Email to ssbinternationalschool@gmail.com
The Secretary, SSB Education Society, No.5/A, HAL II-Stage, Indiranagar, Bangalore-38. Ph: 41523548

NIRMAN INTERNATIONAL PUBLIC SCHOOL, Near Automated RTO,7th Block, Vishweshwaraiah Layout, Bangalore-91 Requires Qualified TEACHERS for Nursery, English, Science, Social and PE. Contact: 8123030731/ 9986055970. Email: nirmanorganisation@ gmail.com. Walk in Interview on all working days between 9:30am to 2:00pm.

WANTED ACADEMIC
Head, Teachers for all Subjects. Kindergarten to Tenth Standard School, @ J.P.Nagar. 080-26590773, 9845042249.

WANTED 4BHK
Luxury Flat RENTAL INCOME 70,000/- Rent Budget 140Lakhs North Bangalore, Ready Existing Rental income. 9902789150

St. Benedict's Academy
School (CBSE & Degree College), Asirvanam, Anchepalya, Kengeri, Mysore Road, Bangalore-74
Requires Trained & Experienced
TEACHERS
ENGLISH & HINDI
COMPUTER SCIENCE
ACCOUNTANCY
NURSING TUTORS
MONTESSORI TEACHERS
Call: 9740985741
Mail your resume to: jeromeosb@gmail.com

VASAVI EDUCATIONAL TRUST
14th Main, 2nd Phase, J.P.Nagar, Bangalore - 560 078.
E-Mail : vetinst@rediffmail.com / vetfgc@rediffmail.com

RECRUITMENT 2023-2024

V.E.T. SCHOOL
(Recognised by Government of Karnataka)
- Nursery Teachers : Graduates/PG + B.Ed / NTT
- High School Teachers : Graduates / PG + B.Ed
  English | Social
- Computer Lab Incharge : Diploma/Graduates

V.E.T. SCHOOL
(Recognised by Government of Karnataka)
- High School Teachers : Graduates / PG + B.Ed
  English | Hindi | Sanskrit | Computers | Physical Education
  Art & Craft
- Librarian : B.Lib/M.Lib
- Part Time Teachers : Yoga | Music | Abacus
- Supporting Staff / Ayah

V.E.T. FIRST GRADE COLLEGE
(Permanently Affiliated to Bengaluru City University, Recognised U/s.2f & 12B of UGC Act, NAAC Accredited)
- Assistant Professor :
  Commerce : M.Com / Ph.D, NET/UGC Given Preference
  Fasion Apparel Design : M.Sc-FAD/M.Sc-ATM
  English : M.A
  Physical Director : MPEd
- Office : B.Sc / B.Com, With Computer Knowledge

V.E.T. MANANDI COMPOSITE P.U. COLLEGE
(Recognised by Government of Karnataka, Graded 'A' by P.U. Board)
- Lecturer : • Commerce: M.Com • Computer Science: M.C.A
  •English : M.A •Statistics : M.Sc •Physical Trainer : BPEd
- Librarian : M.Lib / MLiSc

Walk-in-interview on 19th April 2023 between 10.30 am and 4.00 pm
Eligible candidates can send their CV / Resume to the above mentioned mail

ZEENA ENGLISH SCHOOL
(Recognized by the Government of Karnataka)
#51, 11th Cross, Agrahara Layout, Yelahanka Bengaluru - 560 064.
REQUIRES
1) HEAD MISTRESS / HEAD MASTER (aged < 50 years) – Qualified (B A & B Ed. / B Sc. & B Ed.) with at least 5 years relevant experience and well versed with the Board related work
2) Qualified & trained subject TEACHERS for General Science (B.Sc. & B Ed.) & Social Science (B A & B Ed.) for High School with at least 3 years of experience
3)Qualified, trained & experienced TEACHERS for Nursery (PUC, NTT & D Ed.)
Eligible & interested candidates may email their resume within 7 days to zeenaenglishschool2016@gmail.com OR 8123926408

BRIGHT WAY SCHOOL TEACHERS REQUIRED Interview on: 19.04.2023 at 9.30 am MATHS, SCIENCE, COMPUTER SCIENCE, ENGLISH, HINDI, SANSKRIT B.Sc/BCA/M.Sc.B.Ed, B.A/M.A, B.Ed, YOGA TRAINED TEACHER Ph:9241204762/ 26396720 brightways.school@ yahoo.in BRIGHT WAY PU COLLEGE COMPUTER SCIENCE, ENGLISH MCA/ M.Sc/ M.A/B.Ed. Ph:9483494468/ 26665388 bwpucas559@yahoo.in

MMET ENGLISH PRIMARY& HIGH SCHOOL
WANTED TEACHERS
8 Patel Kulappa Road, R.S. Palya, MS Nagar Post, B'lore - 33. Ph. 080 – 25450522, 72596 48179, 86184 78308
mmetschool@gmail.com
Primary Teacher: PUC, D.Ed
TGT: B.Sc B.Ed, BA B.Ed - Maths, Science Kannada, Hindi, English & Social Science
Drawing Teacher : BFA / MFA
PET: C.P.Ed / B. PEd
Librarian: BL .Sc

KNSS VIDYAMANDIR ENGLISH PRIMARY & HIGH SCHOOL
Anandapura, T.C Palya Main Road, Bangalore – 560 036. Ph. No. 080 – 2545 0522, 70224 77196, 86184 78308
knssvidyamandirephs@gmail.com
Pre Primary : PUC, NTT
Primary Teacher : PUC, D.Ed
TGT : Hindi
PET : C.P.Ed / B.P.Ed
Drawing Teacher : BFA / MFA
Office Assistant : B Com with Tally
Send your CV to above Email Id
Attractive salary with benefits offered. Walk in interview on 22.04.23 (Saturday) 10.00 am onwards at MMET School.

CAMLIN ENGLISH SCHOOL 6th 'C' Main Hampinagara Vijayanagar 2nd Stage Bangalore-104. Requires TEACHERS B.Sc., B.Ed. (Maths, Science) B.A., B.Ed. (English, Kannada, Social) TCH/D.Ed., NTT, Computers, Drawings, SECURITY GUARD, ATTENDER, AYA SCHOOL BUS DRIVER. Contact immediately/ Apply: 080-23301363

ABHAY SCHOOL Bannerghatta Road, Required Teachers Science, Maths,PT, English, Social, Hindi, High School (ESI &PF Applicable) Full/ Parttime.Contact: 9538921777/ 9448344014

BEST ENGLISH/ SOCIAL SCIENCE/ MATHS/ HINDI/ GENERAL SCIENCE/ MUSIC/ B.P.Ed TEACHERS for CBSE SCHOOL. Good salary is offered 9449835744/ 9535601743.

WINDERMERE HIGH SCHOOL requires Teachers for Computers, Maths(MSc BEd), Science (MSc BE.d) & Kannada (MA BEd) for High School. ForPrimary School Kannada (BA BEd), Hindi (BA BEd), Social (BA BEd/ DEd) PETeacher. Drivers and Bus attenders. Contact 13/1, 3rd Cross, Magadi Road,Bangalore-560023. Ph: 08040948787, 08023144539, 9902878787. Email:windermerepublicschool@gmail.com

WANTED TRAINED Arts & Science Graduates and P.E TEACHERS for PRIMARY ENGLISH LECTURERS for PU COLLEGE, Walk-in, STRACEY MEMORIAL COMP PU COLLEGE, #52, St.Mark's, Road Bangalore-1, 9482557710 9972912673

FRANK PUBLIC SCHOOL, JP.Nagar 6th phase,requires HIGH SCHOOL ENGLISH, HINDI TEACHERS, PRIMARY SCHOOL TEACHERS. Email Resume: rumysud@gmail.com WhatsApp:9901692223

"WANTED GRADUATED Well experienced Teachers for Nishara Public School, Kaggalipura, Bangalore. Contact : 8095554686, 8904873640"

HOLY ANGEL'S High School Hampinagar, Vijayanagar, Bengaluru-560104, Phone: 23404465/23202042 holyangels.highschool rpclayout@gmail.com Requires Experienced Trained Teachers to handle Nursery, Primary, Higher Primary, High School and Music Teacher for the Academic Year 2023-24 STATE & ICSE. Qualification:NTT, B.A./B.Sc.,B.Ed. M.A./M.Sc.,M.Ed. Only English Medium Candidates need apply

REPUTED ENGLISH Medium School requires experienced trained LADY TEACHERS for Nursery/ Primary/ Higher Secondary for teaching English, Maths, Science, E.V.S, P.E Teacher. Walk-in interview. 10.00 AM to 2:00 PM. Salary Rs.18,000/- above. New Oxford English School, #129, 6th cross Gandhinagar, Bangalore-09. Ph: 22261590, 8884440214.

"ENDEAVOUR'S INTERNATIONAL School" Sarjapura. Skilled Teachers required Nursary,Higher Primary: English,Hindi Maths,Science, Social. High School: English,Goegraphy Maths,Physics Chemistry,P.E. Salary:According to 6th pay commission of Karnataka. Contact:-8722140020/ 9945058552,E-Mail:- endeavoursintlschool@ gmail.com

"ST. MARTIN'S HIGH SCHOOL" 7th cross Behind Anjan Theatre, Magadi Road, Bengaluru-23. Requires: Head Mistress Academic Advisers, Accountant/ Clerk Qualified and Trained Teachers for Nursery, Primary and High School to teach all the subjects including Computer, PE, Drawing. PREFERABLY LADIES. Contact Office- Phone: 080- 23101999, 9449117716, 9591990199

WANTED TRAINED LADY TEACHERS to teach Kannada and All Subjects in Lower Primary, Sanskrit, Chemistry, Biology, Maths, Physical Education and Computer in English Medium Primary and Highschools. Also required HEAD MISTRESS for Primary and Middle School and FRONT OFFICE ASSISTANT. Walk-in Interview on 17.04.2023 between 11.00AM- 1.00PM at PRATHIBHA SHIKSHANA SAMITHI, #9, 18th Main, BSK II Stage, Bangalore-70. Ph: 080- 26710170/ 74833-77387

GURUKULA INTERNATIONAL SCHOOL Requires, NURSERY, English, Maths, Kannada COMPUTER TEACHERS for Primary and High School and LADY ACCOUNTANT with Kannada typing. 9th Cross, Near Magadi Road, Metro Station Bangalore-23, 7829338292 7676676629

ST.CHARLES HIGH SCHOOL #1086,1st Block,3rd Stage, Adarsha-Layout, Basaveshwaranagar, Bangalore-79.Invites application from NTT, TCH,BA B.Ed, BSC B.Ed,QUALIFIED and EXPERIENCED English medium TEACHERS to handle Nursery,Primary and High-School also wanted PE,HM and Co-ordinator. Phone:9886519766

REQUIRED EXPERIENCED candidates to handle Nursery, Primary & High School (English/ Science/ Math) BEd, DEd, NTT & BPEd. Contact: Jnanavahini Vidya Samsthe (JVS) #8, BEML layout, 8th main, Basaveswara Nagar, Bengaluru-79. Phone: 9343745526.

TRILLIUM PUBLIC SCHOOL, RT.Nagar Bangalore. Require ACADEMIC COORDINATORS, HIGH SCHOOL TEACHERS FOR LANGUAGES, MATH, SCIENCE, COMPUTERS. 9740111313/7204740112 trilliumschool3@gmail.com

WANTED TEACHERS for Aakash Tutorial in Sunkadakatte - Part time.Contact Near by Area's 9632961545,9164951545

WORK WITH THE BEST @Jayanagar, Bangalore.
Prabha Eye Clinic, the pioneers in eye care and the leading name in Ophthalmology invites...
Surgical Counsellors – Degree holders with prior surgical counselling experience preferred.
Receptionist – Degree holders with good command in English preferred.
Office Assistant – II PUC/+2 equivalent, fluent in Kannada and English.
Insurance Claims Recovery Specialist Degree holder with Accounts bkg.
CALL : 90368 20345
MAIL YOUR CV TO : info@prabhaeyeclinic.com
Prabha Eye Clinic — Specialty Ophthalmic Hospital — Trust. Tradition. Technology.

EMJAY GROUP
Trading/ Real Estate/ Coffee/ Investments/ Hospitality
Talent acquisition for following positions
- GENERAL MANAGER (ADMIN): Above 10 Yrs Exp.
- PROJECT MANAGER: BE (Civil) Above 10 Yrs Exp. (Resorts).
- ENGINEER: BE (Civil) Above 3 Yrs Exp.
- ACCOUNTS EXECUTIVE
- HR / ADMIN EXECUTIVE
- EXECUTIVE ASSISTANT
- RECEPTIONIST
- DRIVERS: Above 5 Yrs Exp.

Location: Bangalore & Chikmagalur
Walk-in Interview on 21.04.2023 & 24.04.2023 between 11 am to 5 pm. Email CV to: admin@emjaygroup.com Mob # 95135-40824
H M Geneva House, #14, Cunningham Road, Bangalore-560043

Applications are invited for the following posts to work in a reputed House Building Co-operative Society in Bangalore.

SECRETARY
Qualification:
- Graduate with MBA / M.Com
- Min 10 years of Exp in Accounts, Tally, with Co-operative training
- Clerical work such as Typing in English & Kannada
- Working knowledge in Computer
- Secretarial course preferred
- Must be capable of managing the Society.
- Age between 35-40yrs

ESTATE OFFICER
Qualification:
- Graduate with Min 10 years of Experience
- Experience in maintaining Marriage halls, preparation of Accounts, Filing of GST, TDS tax etc.
- Working knowledge in Computer.
- Must be capable of managing the Society's Marriage halls.
- Age between 30-40yrs

CIVIL ENGINEER
Qualification:
- BE Graduate in Civil Engineering.
- Working experience in field such as Supervision of layout works,
- Preparation of Estimate, Bills etc.
- Age between 25-40yrs

Salary according to educational Qualification & Experience.
Application with Expected salary & full details may be sent within 10 days: housingsocietyblr@gmail.com

Authorised Dealer of hp
UNIQUE Computers Peenya, B'lore-58
REQUIRED
Back office / Call Co-ordinator
Account Assistant
Hardware /Network Engr
Delivery Boy
Candidates Should have 1-2 years Exp With analyzing skills & able to Multi-task
For more details contact
Ph: +91 9036003800
E:corporatesales@unique.com

Multiple Vacancy

A Reputed 27 Year old Company in Bangalore
URGENTLY REQUIRED
SALES EXECUTIVE
Attractive Compensation, Incentives & Career growth While minimum experience is 4-5 years, seniors also can apply Experience in selling to Interior Designers / Architects / Consultants & similar is mandatory.
TELE-SALES CALLERS
to work from office Setting up appointment with potential customers Compensation includes Salary & Incentives.
Send CV to Email : cm95.recruitments@gmail.com
Call : 99724 37094

WANTED
ಡ್ರೈವರ್ ಜೊತೆಗೆ ಲೈಸೆನ್ಸ್ badge ಸಂಬಳ 20000/– +OT
ಅಡುಗೆಯವರು, ಸಂಬಳ 20000/–, ಉಚಿತ ಮನೆ ಸೌಲಭ್ಯ
ಸ್ಥಳ: ತಾತಗುಣಿ, ಕನಕಪುರ ಮುಖ್ಯ ರಸ್ತೆ, ಬೆಂಗಳೂರು–560062
Contact: 9945633115

MORE Classifieds IN SUPPLEMENT

Accounts & Finance

WANTED ACCOUNTANT
Qualification B.Com Graduates`Exp: 5-10years with`TDS`& GST Salary:45,000 Age Below`50years Family Accommodation Call:7338084555 9845053636`Mail saiconstructions7889 @gmail.com Interview Time: 10am`to`1pm

REQUIRED EXPERIENCED Male/ Female ACCOUNTANT/ ACCOUNTS ASSISTANT/ OFFICE ASSISTANT for a Pharma Company @ Domlur. Contact: 9480529536/ 7019715711/ 08025353641 medilabindia@yahoo.com.

WANTED ACCOUNTANT from South Bangalore, 2 to 3 Years experience, preferable to handle all the account related matters with Tally Erp-9/Prime, knowledge at Private Limited Company near Bannerghatta Road. Contact: 9880215703, Email-sales@vigirom.com, cc-accounts@vigirom.com.

DEEVIGE CLASSES Malleswaram requires Experienced Accountant. Best Remuneration. 7676557564/ 8762424646. Whatsapp only (Please don't Call)

Engg/ Production Technical

REQUIRE: CNC OPERATORS, ELECTRICAL WINDERS & STORE EXECUTIVE for our Motor and Special Pumps Manufacturing Unit at Devarachikkanahalli, Bannergatta Road, Bangalore. Email: flowoilpumps@ hotmail.com

General

WANTED EXPERIENCED Tally ACCOUNTANT, MARKETING PURCHASE EXECUTIVES Maintenance ENGINEERS, ITI-FITTERS, WELDERS, LABOURS For Mini SIDDAGANGA CEMENT PVT LTD Plant at Tumkur District Chikkanayakanahalli and Peenya, Bangalore Contact 7975591621 6360149473 siddaganga.sgc@gmail.com

WANTED APARTMENT
Maintenance Supervisor`Exp: 5-10years Salary 30,000 Age`Below 45years Two`wheeler is`Mandate Family Accommodation Call:7338084555 9845053636`Mail saiconstructions7889 @gmail.com Interview Time: 10am`to`1pm

WANTED FOR Clerical Job in transport Company Qualification PU or B.Com`Passed Male`only Location Peenya 2nd Stage. Call:9845351200 9535218502.

WANTED DATA Entry Operators for Leading Pharma Company in Ramohalli- Kumbalagodu. Gross Salary 13000-15000. Contact:9884030866 /8866850501.

COUNTER SALESMAN (Male) 2/3 years relevant experience. The Raymond Shop Jayanagar Call 22454458 / 26656934

Hotel

WANTED HOTEL Receptionist and Hotel Manager (English, Hindi,) minimum 2 years experience for 4 star SS Lumina hotel at Kormangala walk-in interview Bangalore. Mobile: 9742003920

Marketing & Sales

JOB VACANCY
Required Male/Female for FIELD MARKETING Qualification: Any Degree,Special Allowance and Incentives with Salary Contact- 9884194032. Star`Office Bazaar Pvt.Ltd. Indiranagar, Bengaluru

EXPERIENCE FMCG SALES REPRESENTATIVE for Leading Coffee`Powder Manufacturer at`Bangalore. Language Knows Kannada, English,`Tulu. Apply Resume moderncoffee33@gmail.com Whatsapp: 9945469899.

Part-Time Jobs

EARN 30K-2L/ Month Age 35-60 VRS, Housewife, Retired People & Self Employee. Bangalore, Jayanagar: 7899493370

EXCELLENT GREAT Opportunity Work From Home Earn Unlimited From 35k-40k Part/ Full Time: 8147236252/ 9886641282

Receptionist/ Secretary

WANTED RECEPTIONIST for Dental Clinic in Basavanagudi. Timings: 9 am to 7 pm with Lunch break or 4 pm to 7 pm. Contact: 99808-68093

Security & Detectives

CHECKMATE SERVICES PVT LTD INDIRANAGAR BANGALORE REQUIRED ACCOUNT EXECUTIVE (Experience 3 to 5 Yrs) and TRAINING MANAGER SECURITY. Gross Salary 20K to 25K based on the experience. Phone: 080- 25200261 /9538877806 E-Mail: banglore@checkmateservices.com

WANTED EXPERIENCED OPERATION MANAGER/ FIELD OFFICER/ AREA MANAGER/ SUPERVISOR/ GUARD FOR A REPUTED SECURITY AGENCY, BANGALORE. CONTACT:9945273400 / 9686911831. Email: gm@ritemanprotection.com

Hospital & Medical Jobs

FPA INDIA requires MEDICAL OFFICER for clinic, ACCOUNTS ASSISTANT for administrative office, COUNSELOR (clinical psychology) for satellite clinic, PROJECT CO-ORDINATOR, COUNSELOR, LAB TECHNICIAN, ORW for the LGBTQI and PLHIV project. Bengaluru candidate apply. Recruitment reflects our commitment to safety, protection of children/ young people. email: bengaluru@fpaindia.org

Wanted

WANTED TYPIST
Freshers /Experienced for Advocate Office. Salary Rs. 10 to 14K. J.P. Nagar. Call: 9916343921

WEEKEND CORNER

First Time in BINNY MILL GROUND Under Water Aquarium Tunnel
ರಾಷ್ಟ್ರೀಯ ಗ್ರಾಹಕರ ಮೇಳ
NATIONAL CONSUMER FAIR
Binny Mill Ground, Near ETA Mall, Tank Bund Road, Bengaluru -23
AQUA TUNNEL SHOW

Complete Family Shopping & Amusement Exhibition
VISIT TODAY | Daily : 4pm - 9pm | Call : 8904727123

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ಗುರುದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿ ಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ, ಮದುವೆ ಯೋಗ, ಪ್ರೇಮ-ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮೀ ಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು. ಸೂಚನೆ: ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ಗುರುದಾಸನ್(ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ.ನಂ. 102, ನಂ. 30, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು), ಬೆಂಗಳೂರು-04
ಮನೆ ವಿಳಾಸ: ಮನೆ ನಂ. 2544, ನಂದಗೋಕುಲ ನಿಲಯ, ಅಂಬರ್ ಲಾಜಿಸ್ಟಿಕ್ ಹತ್ತಿರ, ಕೆಳಮಹಡಿ, 13ನೇ ಮುಖ್ಯ ರಸ್ತೆ, 'ಇ' ಬ್ಲಾಕ್ (ಮೋರ್ ಸೂಪರ್ ಮಾರ್ಕೆಟ್ ಹಿಂಭಾಗ), ಕೊಡಿಗೇಹಳ್ಳಿ ಗೇಟ್, ಸಹಕಾರ ನಗರ, ಬೆಂಗಳೂರು-560092
Mob.: 98441 06430 / 81579 14600
ಭೇಟಿಯ ವೇಳೆ: ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

Matrimonial Bureaus

ಒಕ್ಕಲಿಗ ಜಾತಿಯ ವಧು ವರರ ಅನ್ವೇಷಣಾ ಕೇಂದ್ರ
ಕರ್ನಾಟಕದ ಎಲ್ಲಾ ವಯಸ್ಸಿನ ಮತ್ತು ಎಲ್ಲಾ ವಿದ್ಯಾವಂತ ವಧು–ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ :
7019812036

GROOMS WANTED
CNB Bangalore based Doctor, 32 yrs, 5'7", MBBS MD.
CNB, Rich, Blore based 25 yrs, 5'2" Doctor, own nursing home.
BRIDES WANTED
CNB, Rich Blore based 30 yrs, 5'6", BE, SWE MNC. Good Salary.
Contact USHODHAYA 9611919477 9886884291

PERSONAL

Change of Name

CHANGE OF NAME
I, **Kashvi Singhal**, D/o **Srinandan Singhal**, residing at 94/k, 8th cross, RMV extension, Bangalore 560080, have changed my name from **Kashvi Srinandan Singhal** to **Kashvi Singhal** vide affidavit dtd 15.04.2023 sworn before notary K.Mohan, Bangalore.

MATRIMONIAL

Brides Wanted

Nri/Green Card

BRIDE WANTED
Intel Engineer in US, 25 yrs old, 6ft, Permanent Resident, Masters qualification, no bad habits, focused on healthy living.
Bride should be attractive, professionally qualified and fluent in English. Religion, caste and financial status do not matter.
Please send clear, full- sized pictures of different angles and details.
All emails will receive a reply.
Casual wear with minimal makeup is highly appreciated
gverghese6361@gmail.com

DH ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
@803/-* Per Sqcm Single Column
@825/-* Per Sqcm Multi Column
*conditions apply
For more information Contact:
9845114560 : 9731810277
9901641752 : 9886213331
080 - 45557163 / 164

ಭಾನುವಾರ, ಏಪ್ರಿಲ್ 16, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 105 | ಪುಟ 20

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಚುನಾವಣಾ ಹಾಡಿನ ಜಾದು...

ಜಪಾನ್‌ನಲ್ಲಿ ಪ್ರಚಾರದ ವೇಳೆ ಬಾಂಬ್ ಸ್ಫೋಟ: ಪ್ರಧಾನಿ ಪಾರು 8

ಕೋಲಾರ: 'ಮೋದಿ ಉಪನಾಮ' ವಿವಾದಕ್ಕೆ ಕಾರಣವಾದ ಸ್ಥಳದಿಂದಲೇ ಹೋರಾಟ ಶುರು

ಶಾಸಕ ಮಾಡಾಳ್‌ಗೆ ಜಾಮೀನು ಮಂಜೂರು 5

ಪ್ರಚಾರಕ್ಕೆ ರಾಹುಲ್ ಚಾಲನೆ ಇಂದು 5

'ಸ್ಮಾರ್ಟ್' ಆಗದ ನಗರಗಳು

● ವೆಂಕಟೇಶ ಜಿ.ಎಚ್

₹7,892.2 ಕೋಟಿ ಸ್ಮಾರ್ಟ್ ಸಿಟಿಯಡಿ ಕರ್ನಾಟಕದ ಏಳು ನಗರಗಳಿಗೆ ನಿಗದಿಯಾದ ಒಟ್ಟು ಅನುದಾನ

₹4,319.9 ಕೋಟಿ 2023ರ ಫೆಬ್ರುವರಿ 15ರವರೆಗೆ ಖರ್ಚು ಮಾಡಲಾದ ಹಣ

651 ನಿಗದಿಯಾದ ಯೋಜನೆಗಳು

522 ಪೂರ್ಣಗೊಂಡಿರುವ ಯೋಜನೆಗಳು (2023ರ ಫೆಬ್ರುವರಿ 15ರವರೆಗೆ)

ಶಿವಮೊಗ್ಗ: ದಾವಣಗೆರೆಯ ಮಹಾನಗರ ಪಾಲಿಕೆ ಎದುರಿನ ಪಾದಚಾರಿ ಮಾರ್ಗದಲ್ಲಿ ದೂಳುಹಿಡಿದು, ಕೆಟ್ಟು ನಿಂತ ಸೈಕಲ್‌ಗಳು ಸಾಲುಗಟ್ಟಿದ್ದವು. ಯಾರೋ ಆಟಿಕೆ ಸೈಕಲ್‌ಗಳ ತಂದು ಮಾರಾಟಕ್ಕಿಟ್ಟಿದ್ದಾರೆ ಅಂದುಕೊಂಡೆ. ಆದರೂ ಕುತೂಹಲ ತಾಳಲಾರದೇ ಕೆದಕಿದಾಗ ಗೊತ್ತಾಗಿದ್ದು, ಅದು ಅಲ್ಲಿನ ಸ್ಮಾರ್ಟ್ ಸಿಟಿ ಯೋಜನೆಯಡಿ ಪರಿಚಯಿಸಿದ ಬೈಸಿಕಲ್ ಶೇರಿಂಗ್ ವ್ಯವಸ್ಥೆಯ ಸೈಕಲ್ ಸ್ಟ್ಯಾಂಡ್ (ಡಾಕ್ ಸ್ಟೇಶನ್) ಎಂದು!..

ಒಳನೋಟ

ದೂರದೃಷ್ಟಿ ಇಲ್ಲದ ಯೋಜನೆ

ಪ್ರತಿಕ್ರಿಯಿಸಿ: 9606038256
feedback@prajavani.co.in

ಬಿಸಿಲು, ಮಳೆ-ಗಾಳಿಗೆ ಮೈಯೊಡ್ಡಿ ನಿಂತ ಆ ಸೈಕಲ್ ಸ್ಟ್ಯಾಂಡ್ ಕ್ಷಣ ಹೊತ್ತು ಸ್ಮಾರ್ಟ್ ಕಲ್ಪನೆಯನ್ನೇ ಅಣಕಿಸಿದಂತೆ ತೋರಿತು. ಮಹಾನಗರ ಪಾಲಿಕೆ ಮುಂಭಾಗ ಮಾತ್ರವಲ್ಲ ಅಲ್ಲಿನ ಮೋತಿ ವೀರಪ್ಪ ಕಾಲೇಜು, ಜಯನಗರ, ಐಟಿಐ ಕಾಲೇಜು, ಲಕ್ಷ್ಮೀ ಫ್ಲೋರ್ ಮಿಲ್ ಬಳಿಯೂ ಅದೇ ಚಿತ್ರಣ. ಸೈಕಲ್ ಕೊಂಡು ಅವುಗಳ ನಿರ್ವಹಣೆಗೆಂದೇ ಸ್ಮಾರ್ಟ್ ಸಿಟಿ ಕಂಪೆನಿ ₹ 9.09 ಕೋಟಿ ಮೊತ್ತ ಖರ್ಚು ಮಾಡಿದೆ. ಅದರ ನಿರ್ವಹಣೆ ಹೊಣೆ ಮುಂಬೈನ ಕಂಪೆನಿಗೆ ಕೊಟ್ಟಿದೆ. ಆದರೆ ಸೈಕಲ್‌ಗಳು ಓಡುತ್ತಿಲ್ಲ. ಅನ್‌ಲಾಕ್ ಮಾಡದೇ ಬಹಳಷ್ಟು ತಿಂಗಳು ಕಳೆದಿದೆ. ಟೈರ್‌ಗಳಲ್ಲಿ ಗಾಳಿ ಇಲ್ಲ. ರಿಮ್ ತುಕ್ಕು ಹಿಡಿಯಲು ಆರಂಭವಾಗಿದೆ. ಚೈನ್‌ಗೆ ಗ್ರೀಸ್ ಬಿದ್ದಿಲ್ಲ. ಫೈಬರ್‌ನ ಮಡ್‌ಗಾರ್ಡ್ ಬಿಸಿಲಿಗೆ ಪುಡಿಯಾಗಿ ಉದುರಲು ಆರಂಭವಾಗಿದೆ. ಬಾರ್‌ಕೋಡ್‌ಗಳು ಕೆಲಸ ಮಾಡುತ್ತಿಲ್ಲ. ಹೀಗಾಗಿ ಸೈಕಲ್ ಬೇಕೆಂದು ಬಯಸುವವರಿಗೆ ಸಹ ಸೈಕಲ್ ಸಿಗುತ್ತಿಲ್ಲ. ಒಟ್ಟಾರೆ ಇಡೀ ಸೈಕಲ್ ಶೇರಿಂಗ್ ವ್ಯವಸ್ಥೆಯೇ ಹಾಳುಬಿದ್ದಿದೆ.

ದಾವಣಗೆರೆಯ ಕೊಟ್ರೇಶ್ ವೃತ್ತಿಯಲ್ಲಿ ಆಟೊ ಚಾಲಕ. ನಿರ್ವಹಣೆ ಖರ್ಚು ಕಮ್ಮಿ ಎಂಬ ಪ್ರಚಾರ ನಂಬಿ ತಮ್ಮಲ್ಲಿದ್ದ ಹಳೆಯ ಆಟೊ ಮಾರಾಟ ಮಾಡಿ ₹1.81 ಲಕ್ಷ ಕೊಟ್ಟು ಇ-ಆಟೊ ಖರೀದಿಸಿದ್ದರು.

ವಿವಿಧ ಜಿಲ್ಲೆಯಲ್ಲಿನ ಸ್ಮಾರ್ಟ್‌ಸಿಟಿ ಕಾಮಗಾರಿ ಯೋಜನೆಯ ಸ್ಥಿತಿ

ಬೈಸಿಕಲ್ ಶೇರಿಂಗ್ ವ್ಯವಸ್ಥೆಯ ಸಂಬಂಧ ಗುತ್ತಿಗೆದಾರರಿಗೆ ನೋಟಿಸ್ ನೀಡಲಾಗಿದೆ. ಚುನಾವಣೆ ಬಳಿಕ ವ್ಯಾಪಕ ಪ್ರಚಾರಕ್ಕೆ ಕ್ರಮ ಕೈಗೊಳ್ಳಲಾಗುವುದು

ವೀರೇಶಕುಮಾರ್, ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಟ್ ವ್ಯವಸ್ಥಾಪಕ ನಿರ್ದೇಶಕ

ಯೋಜನೆಗಳ ಗುಣಮಟ್ಟದ ಪರಿಶೀಲನೆಯಾಗದೆ ಹಸ್ತಾಂತರ ಮಾಡಿಕೊಳ್ಳಲ್ಲ. ಈ ಬಗ್ಗೆ ಸಂಬಂಧಪಟ್ಟ ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳಿಗೆ ಪತ್ರ ಬರೆಯುವೆ

ಈರೇಶ ಅಂಚಟಗೇರಿ, ಮೇಯರ್, ಹುಬ್ಬಳ್ಳಿ- ಧಾರವಾಡ

ಶಿವಮೊಗ್ಗದಲ್ಲಿ ಗುಣಮಟ್ಟಕ್ಕೆ ಆದ್ಯತೆ ನೀಡಿದ್ದೇವೆ. ನಿಯಮ ಉಲ್ಲಂಘನೆ, ಕಾಮಗಾರಿ ವಿಳಂಬದ ಕಾರಣಕ್ಕೆ ಗುತ್ತಿಗೆದಾರರಿಂದ ₹1.20 ಕೋಟಿ ದಂಡ ವಿಧಿಸಿದ್ದೇವೆ

ಚಿದಾನಂದ ವಟಾರೆ, ಶಿವಮೊಗ್ಗ ಸ್ಮಾರ್ಟ್ ಸಿಟಿ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ

4ನೇ ಪುಟ ನೋಡಿ

ಶಾಸಕ ಸ್ಥಾನಕ್ಕೆ ಇಂದು ರಾಜೀನಾಮೆ, ಹು–ಧಾ ಸೆಂಟ್ರಲ್ ಕ್ಷೇತ್ರದಿಂದಲೇ ಸ್ಪರ್ಧೆ

ಬಿಜೆಪಿಗೆ ಶೆಟ್ಟರ್ ವಿದಾಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹುಬ್ಬಳ್ಳಿ- ಧಾರವಾಡ ಸೆಂಟ್ರಲ್ ಕ್ಷೇತ್ರದ ಟಿಕೆಟ್ ಕೈತಪ್ಪುವುದು ಖಚಿತವಾಗುತ್ತಿದ್ದಂತೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಜಗದೀಶ ಶೆಟ್ಟರ್ ಶನಿವಾರ ಘೋಷಣೆ ಮಾಡಿದ್ದಾರೆ. ಭಾನುವಾರ ಬೆಳಿಗ್ಗೆ ಶಿರಸಿಯಲ್ಲಿ ವಿಧಾನಸಭಾಧ್ಯಕ್ಷರನ್ನು ಭೇಟಿ ಮಾಡಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತೇನೆ ಎಂದು ತಿಳಿಸಿದರು. ಈ ಮೂಲಕ ಕಳೆದ ಕೆಲವು ದಿನಗಳಿಂದ ನಡೆಯುತ್ತಿದ್ದ ಹಗ್ಗಜಗ್ಗಾಟಕ್ಕೆ ತೆರೆ ಬಿದ್ದಿದೆ.

ವರಿಷ್ಠರ ಸೂಚನೆಯಂತೆ ಪಕ್ಷದ ರಾಜ್ಯ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು 40 ನಿಮಿಷಕ್ಕೂ ಹೆಚ್ಚು ಹೊತ್ತು ನಡೆಸಿದ ಸಂಧಾನ ಸಭೆ ವಿಫಲವಾಯಿತು. ಸುದ್ದಿಗಾರರೊಂದಿಗೆ ಮಾತನಾಡಿದ ಶೆಟ್ಟರ್, ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ನೀಡುತ್ತೇನೆ. ಈ ಚುನಾವಣೆಯಲ್ಲಿ ಸ್ಪರ್ಧಿಸುವ ಮೂಲಕ ಟಿಕೆಟ್ ತಪ್ಪಿಸಿದವರಿಗೆ ಉತ್ತರ ನೀಡುತ್ತೇನೆ ಎಂದು ಸವಾಲು ಹಾಕಿದರು.

'ಯಡಿಯೂರಪ್ಪ ಅವರು ಚುನಾವಣೆಗೆ ಸ್ಪರ್ಧೆ ಮಾಡುವುದಿಲ್ಲ ಎಂದಿದ್ದಾರೆ. ಈಶ್ವರಪ್ಪ ಅವರು ಚುನಾವಣಾ ರಾಜಕಾರಣದಿಂದ ಹಿಂದೆ ಸರಿದಿದ್ದಾರೆ. ರಾಜ್ಯದಲ್ಲಿ ಉಳಿದಿರುವ ಹಿರಿಯ ನಾಯಕ ನಾನೊಬ್ಬನೆ. ನಾನು ಶಾಸನಸಭೆಗೆ ಹೋದರೆ ಸಿ.ಎಂ ಸ್ಥಾನ ಕೇಳಬಹುದು ಎಂದು ಷಡ್ಯಂತ್ರ ರೂಪಿಸಿದ್ದಾರೆ' ಎಂದು ಟೀಕಿಸಿದರು.

'ಜನರ ಪ್ರೀತಿ, ವಿಶ್ವಾಸಕ್ಕೂ ಬೆಲೆ ಕೊಡಲಿಲ್ಲ. ಅವಮಾನ ಮಾಡಿ ಪಕ್ಷದಿಂದ ಹೊರ ಹೋಗುವಂತೆ ಮಾಡಿದ್ದಾರೆ. ನನಗೆ ಯಾವ ಕಾರಣಕ್ಕೆ ಟಿಕೆಟ್ ನಿರಾಕರಿಸಲಾಗಿದೆ ಎಂಬುದಕ್ಕೆ ಈವರೆಗೂ ಉತ್ತರ ನೀಡಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ನೆಹರು ಓಲೇಕಾರ ರಾಜೀನಾಮೆ

ಟಿಕೆಟ್ ವಂಚಿತ ಹಾವೇರಿ ಮೀಸಲು ಕ್ಷೇತ್ರದ ಶಾಸಕ ನೆಹರು ಓಲೇಕಾರ ಅವರು ಕೂಡ ಪಕ್ಷಕ್ಕೆ ಹಾಗೂ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಶನಿವಾರ ರಾತ್ರಿ ಪ್ರಕಟಿಸಿದ್ದಾರೆ.

'ಭಾನುವಾರ ಶಿರಸಿಗೆ ತೆರಳಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿಗೆ ರಾಜೀನಾಮೆ ಪತ್ರ ಸಲ್ಲಿಸುತ್ತೇನೆ. ಅಲ್ಲಿಂದ ಬೆಂಗಳೂರಿಗೆ ತೆರಳಿ ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ನೀಡುತ್ತೇನೆ. ನಂತರ ಜೆಡಿಎಸ್ ಕಚೇರಿಗೆ ತೆರಳಿ ಪಕ್ಷ ಸೇರುತ್ತೇನೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಸಿದ್ದರಾಮಯ್ಯಗೆ ಸಿಗದ ಕೋಲಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ತೀವ್ರ ಹಗ್ಗಜಗ್ಗಾಟದ ಬಳಿಕ ಕಾಂಗ್ರೆಸ್ ಪಕ್ಷವು ಕರ್ನಾಟಕ ವಿಧಾನಸಭಾ ಚುನಾವಣೆಗೆ ಮೂರನೇ ಪಟ್ಟಿಯನ್ನು (43 ಕ್ಷೇತ್ರಗಳು) ಶನಿವಾರ ಪ್ರಕಟಿಸಿದೆ. ಕೋಲಾರ ಕ್ಷೇತ್ರದಿಂದ ಸ್ಪರ್ಧಿಸಲು ಉತ್ಸುಕತೆ ತೋರಿದ್ದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಕೋಲಾರ ದಕ್ಕಿಲ್ಲ.

ವಿಧಾನಸಭೆ ಚುನಾವಣೆ ತಯಾರಿ ಆರಂಭಗೊಳ್ಳುತ್ತಿದ್ದಂತೆ ಕೋಲಾರದಲ್ಲಿ ಸ್ಪರ್ಧಿಸುವ ಬಗ್ಗೆ ಸಿದ್ದರಾಮಯ್ಯ ಆಸಕ್ತಿ ತೋರಿದ್ದಲ್ಲದೇ, ಕ್ಷೇತ್ರಕ್ಕೆ ಭೇಟಿ ನೀಡಿ ಸಿದ್ಧತೆಯನ್ನೂ ನಡೆಸಿದ್ದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಲಹೆ ಬಳಿಕ ಹಿಂದೆ ಸರಿದಿದ್ದ ಅವರು, ಪಕ್ಷ ಸೂಚಿಸಿದ ವರುಣ ಕ್ಷೇತ್ರದಲ್ಲಿ ಸ್ಪರ್ಧೆಗೆ ನಿರ್ಧರಿಸಿದ್ದರು.

ಕೋಲಾರದಲ್ಲಿ ಸ್ಪರ್ಧಿಸಿದರೆ ಸುತ್ತಲಿನ ಎಳೆಂಟು ಕ್ಷೇತ್ರಗಳಲ್ಲಿ ಪಕ್ಷಕ್ಕೆ ಅನುಕೂಲವಾಗುತ್ತದೆ ಎಂದು ಟಿಕೆಟ್ ಆಕಾಂಕ್ಷಿಗಳು ಹೇಳುತ್ತಿದ್ದಾರೆ. ಹೀಗಾಗಿ, ವರುಣ ಜತೆಗೆ ಕೋಲಾರವನ್ನೂ ನೀಡಿದರೆ, ಸ್ಪರ್ಧೆ ಮಾಡುವೆ ಎಂದು ವರಿಷ್ಠರಿಗೆ ತಿಳಿಸಿದ್ದರು. ಎರಡೂ ಕ್ಷೇತ್ರಗಳಲ್ಲಿ ಕಣಕ್ಕೆ ಇಳಿದರೆ, ಸಿದ್ದರಾಮಯ್ಯ ರಾಜ್ಯ ಸುತ್ತಾಡಿ ಪ್ರಚಾರ ಮಾಡುವುದು ಕಷ್ಟವೆಂಬ ಕಾರಣಕ್ಕೆ ಅವರನ್ನು ಒಂದೇ ಕ್ಷೇತ್ರಕ್ಕೆ ಸೀಮಿತಗೊಳಿಸಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಕೋಲಾರದ ಟಿಕೆಟ್ ಯಾರಿಗೆ ಒಲಿಯಲಿದೆ ಎಂಬ ಕಾರಣಕ್ಕೆ ಮೂರನೇ ಪಟ್ಟಿ ತೀವ್ರ ಕುತೂಹಲಕ್ಕೆ ಕಾರಣವಾಗಿತ್ತು. ಈ ಕ್ಷೇತ್ರ ಮಾಜಿ ಶಾಸಕ ಕೊತ್ತೂರು ಜಿ.ಮಂಜುನಾಥ್ ಅವರನ್ನು ಪಕ್ಷ ಅಭ್ಯರ್ಥಿ ಎಂದು ಘೋಷಿಸಿದೆ.

ಕೋಲಾರದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ರ‍್ಯಾಲಿ ಭಾನುವಾರ ನಡೆಯಲಿದ್ದು, ಅದಕ್ಕೆ ಒಂದು ದಿನ ಮುಂಚಿತವಾಗಿ ಕ್ಷೇತ್ರದ ಅಭ್ಯರ್ಥಿಯ ಹೆಸರನ್ನು ಅಖೈರುಗೊಳಿಸಿದೆ. ಪಕ್ಷವು ಈವರೆಗೆ 209 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದೆ.

'ಎರಡು ಕ್ಷೇತ್ರದಲ್ಲಿ ಸ್ಪರ್ಧಿಸಿದರೆ ತಪ್ಪು ಸಂದೇಶ ರವಾನಿಸಿದಂತಾಗುತ್ತದೆ. ಜತೆಗೆ, ಮತ್ತೊಬ್ಬ ಆಕಾಂಕ್ಷಿಯನ್ನು ಅವಕಾಶ ವಂಚಿತರನ್ನಾಗಿ ಮಾಡಿದಂತೆ ಆಗುತ್ತದೆ' ಎಂದು ಪಕ್ಷದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ (ಸಿಇಸಿ) ಚರ್ಚೆಗಳು ನಡೆದಿದ್ದವು. ಸಿದ್ದರಾಮಯ್ಯ ಸ್ಪರ್ಧೆಯ ಕುರಿತು ರಾಹುಲ್ ಗಾಂಧಿ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಪಕ್ಷದ ರಾಜ್ಯ ನಾಯಕರು ಹೇಳಿದ್ದರು. ಇದೀಗ, ಸಿದ್ದರಾಮಯ್ಯ ಸ್ಪರ್ಧೆಗೆ ರಾಹುಲ್ ಒಪ್ಪಿಗೆ ನೀಡಿಲ್ಲ. ಅದರ ಬೆನ್ನಲ್ಲೇ, ಕಾಂಗ್ರೆಸ್ ಕಾರ್ಯಕರ್ತರು ಕೋಲಾರದಲ್ಲಿ ದಾಂದಲೆ ನಡೆಸಿ ಪಕ್ಷದ ವಿರುದ್ಧ ಅಸಮಾಧಾನ ಹೊರ ಹಾಕಿದ್ದಾರೆ. ಇದರ ನಡುವೆ, ಶ್ರೀನಿವಾಸಪುರದ ಶಾಸಕ ಕೆ.ಆರ್. ರಮೇಶ ಕುಮಾರ್ ಮುನಿಸಿಕೊಂಡಿದ್ದಾರೆ. ಟಿಕೆಟ್ ಆಕಾಂಕ್ಷಿಯಾಗಿದ್ದ ವಿ.ಆರ್. ಸುದರ್ಶನ್ ಅವರು ಸಕ್ರಿಯ ರಾಜಕಾರಣದಿಂದ ನಿವೃತ್ತರಾಗುವುದಾಗಿ ಪ್ರಕಟಿಸಿದ್ದಾರೆ.

ವಲಸಿಗರಿಗೆ ಮಣೆ: ಶುಕ್ರವಾರವಷ್ಟೇ ಪಕ್ಷಕ್ಕೆ ಸೇರ್ಪಡೆಯಾದ ಲಕ್ಷ್ಮಣ ಸವದಿ, ಕೆಲವು ದಿನಗಳ ಹಿಂದೆ 'ಕೈ'ಪಾಳಯಕ್ಕೆ ಬಂದ ಕೆ.ಎಂ. ಶಿವಲಿಂಗೇಗೌಡ, ಇತ್ತೀಚೆಗೆ ಪಕ್ಷಕ್ಕೆ ಸೇರ್ಪಡೆಯಾದ ರೇವು ನಾಯಕ ಬೆಳಮಗಿ ಸೇರಿದಂತೆ 12ಕ್ಕೂ ಹೆಚ್ಚು ವಲಸಿಗರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ.

7ನೇ ಪುಟ ನೋಡಿ

'ದಿ ವೈರ್' ಸಂದರ್ಶನದಲ್ಲಿ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಆರೋಪ

'ಪುಲ್ವಾಮಾ ದಾಳಿ ಸರ್ಕಾರದ್ದೇ ಲೋಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಲ್ವಾಮಾ ದಾಳಿಗೆ ಕೇಂದ್ರ ಗೃಹ ಸಚಿವಾಲಯ ಮತ್ತು ಸಿಆರ್‌ಪಿಎಫ್ ಅದಕ್ಷತೆಯೇ ಕಾರಣ. ಯೋಧರ ಪ್ರಯಾಣಕ್ಕೆ ವಿಮಾನವನ್ನು ಕೇಳಿದ್ದರೂ, ಗೃಹ ಸಚಿವಾಲಯ ನೀಡಿರಲಿಲ್ಲ. ಇದು ಸರ್ಕಾರದ್ದೇ ಲೋಪ. ಈ ಬಗ್ಗೆ ಏನೂ ಮಾತನಾಡಬೇಡಿ ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ನನಗೆ ತಾಕೀತು ಮಾಡಿದ್ದರು ಎಂದು ಜಮ್ಮು-ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಹೇಳಿದ್ದಾರೆ. ರಾಜನಾಥ್ ಸಿಂಗ್ ಅವರು ಆಗ ಕೇಂದ್ರ ಗೃಹಸಚಿವರಾಗಿದ್ದರು.

'ದಿ ವೈರ್' ಪೋರ್ಟಲ್‌ಗಾಗಿ ಕರಣ್ ಥಾಪರ್ ಅವರಿಗೆ ನೀಡಿದ ಸಂದರ್ಶನದಲ್ಲಿ ಮಲಿಕ್ ಹೀಗೆ ಹೇಳಿದ್ದಾರೆ.

2019ರ ಫೆಬ್ರುವರಿಯಲ್ಲಿ ಜಮ್ಮು-ಕಾಶ್ಮೀರದ ಪುಲ್ವಾಮಾ ಬಳಿ ಸಾಗುತ್ತಿದ್ದ ಸಿಆರ್‌ಪಿಎಫ್ ಯೋಧರ ಮೇಲೆ ಉಗ್ರರು ದಾಳಿ ನಡೆಸಿದ್ದರು. ದಾಳಿಯಲ್ಲಿ 40 ಯೋಧರು ಹತರಾಗಿದ್ದರು. 2019ರ ಲೋಕಸಭಾ ಚುನಾವಣೆಯಲ್ಲಿ ಈ ದಾಳಿಯು ಚರ್ಚೆಯ ದೊಡ್ಡ ವಿಷಯವಾಗಿತ್ತು. ಪುಲ್ವಾಮಾ ದಾಳಿ ಮತ್ತು ಜಮ್ಮು-ಕಾಶ್ಮೀರದ ವಿಶೇಷ ಸ್ಥಾನ ರದ್ದತಿ ಸಂದರ್ಭದಲ್ಲಿ ಮಲಿಕ್ ಅವರು ಆ ರಾಜ್ಯದ ರಾಜ್ಯಪಾಲರಾಗಿ ಇದ್ದರು.

ಸಿಆರ್‌ಪಿಎಫ್ ಯೋಧರು ಪ್ರಯಾಣಿಸಬೇಕಿದ್ದ ಮಾರ್ಗದ ಸುರಕ್ಷತೆಯ ತಪಾಸಣೆಯೂ ಸಮರ್ಪಕವಾಗಿ ನಡೆದಿರಲಿಲ್ಲ ಎಂಬುದನ್ನು ಮಲಿಕ್ ಅವರು ಎಳೆ ಎಳೆಯಾಗಿ ವಿವರಿಸಿದ್ದಾರೆ.

'ಪುಲ್ವಾಮಾ ದಾಳಿಯು ದೇಶದಲ್ಲಿಯೇ ಅತ್ಯಂತ ದುರಂತಮಯ ಅವಘಡವಾಗಿದೆ. ನಮ್ಮ ಅಸಮರ್ಥತೆಯ ಕಾರಣಕ್ಕೆ 40 ಯೋಧರು ಪ್ರಾಣ ಕಳೆದುಕೊಂಡರು' ಎಂದು ಸತ್ಯಪಾಲ್ ಮಲಿಕ್ ಹೇಳಿದ್ದಾರೆ.

13ನೇ ಪುಟ ನೋಡಿ

ಮಲಿಕ್ ಹೇಳಿದ್ದೇನು?

- ಪ್ರಧಾನಿಯು ಬಿಬಿಸಿ ಪ್ರಕರಣವನ್ನು ನಿರ್ವಹಿಸಿದ ರೀತಿ ಅತ್ಯಂತ ಕೆಟ್ಟದಾಗಿತ್ತು
- ಅದಾನಿ ಪ್ರಕರಣವು ಪ್ರಧಾನಿ ವರ್ಚಸ್ಸಿಗೆ ಗಂಭೀರವಾದ ಹಾನಿ ಉಂಟು ಮಾಡಿದೆ. ಈ ಪ್ರಕರಣವು ಗ್ರಾಮಗಳ ಮಟ್ಟದಲ್ಲಿಯೂ ಚರ್ಚೆ ಆಗುತ್ತಿದೆ. ಮುಂದಿನ ಚುನಾವಣೆಯಲ್ಲಿ ವಿರೋಧ ಪಕ್ಷಗಳು ಒಟ್ಟಾಗಿ ಬಿಜೆಪಿಯ ವಿರುದ್ಧ ಒಮ್ಮತದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದರೆ ಬಿಜೆಪಿಗೆ ಅದು ಪ್ರತಿಕೂಲ ಆಗಲಿದೆ
- ರಾಹುಲ್ ಗಾಂಧಿ ಅವರು ಸಂಸತ್ತಿನಲ್ಲಿ ಮಾತನಾಡಲು ಅವಕಾಶ ಕೊಡದೇ ಇದ್ದದ್ದು ಹಿಂದೆಂದೂ ಆಗಿರದಂತಹ ತಪ್ಪು. ಅದಾನಿ ಪ್ರಕರಣದಲ್ಲಿ ರಾಹುಲ್ ಅವರು ಸರಿಯಾದ ಪ್ರಶ್ನೆಗಳನ್ನೇ ಕೇಳುತ್ತಿದ್ದಾರೆ. ಈ ಪ್ರಶ್ನೆಗಳಿಗೆ ಪ್ರಧಾನಿ ಉತ್ತರ ಕೊಡುವುದು ಸಾಧ್ಯವಿಲ್ಲ

ಸಿಎಪಿಎಫ್ ನೇಮಕಾತಿ: ಕನ್ನಡದಲ್ಲೂ ಪರೀಕ್ಷೆ

ನವದೆಹಲಿ (ಪಿಟಿಐ): ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳ (ಸಿಎಪಿಎಫ್) ಹುದ್ದೆಗಳ ಭರ್ತಿಗಾಗಿ ನಡೆಸುವ ಪರೀಕ್ಷೆಗಳನ್ನು ಹಿಂದಿ, ಇಂಗ್ಲಿಷ್ ಮಾತ್ರವಲ್ಲದೆ, ಕನ್ನಡವೂ ಸೇರಿದಂತೆ 13 ಪ್ರಾದೇಶಿಕ ಭಾಷೆಗಳಲ್ಲೂ ನಡೆಸುವ ಮಹತ್ವದ ನಿರ್ಣಯವನ್ನು ಗೃಹ ಸಚಿವಾಲಯ ತೆಗೆದುಕೊಂಡಿದೆ.

ಸಿಎಪಿಎಫ್ ಪರೀಕ್ಷೆಗಳನ್ನು ಪ್ರಾದೇಶಿಕ ಭಾಷೆಗಳಲ್ಲೂ ನಡೆಸುವ ಈ ನಿರ್ಧಾರವು 2024ರ ಜನವರಿ 1ರಿಂದ ಜಾರಿಗೆ ಬರಲಿದೆ. ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್), ಗಡಿ ರಕ್ಷಣಾ ಪಡೆ (ಬಿಎಸ್‌ಎಫ್), ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್), ಇಂಡೊ–ಟಿಬೆಟನ್ ಗಡಿ ಪೊಲೀಸ್ (ಐಟಿಬಿಪಿ) ಹಾಗೂ ರಾಷ್ಟ್ರೀಯ ಸುರಕ್ಷತಾ ಸಿಬ್ಬಂದಿ (ಎನ್‌ಎಸ್‌ಜಿ) ನೇಮಕಕ್ಕೆ ಸಿಎಪಿಎಫ್ ಪರೀಕ್ಷೆಗಳನ್ನು ನಡೆಸಲಾಗುತ್ತದೆ.

2ನೇ ಪುಟ ನೋಡಿ

ಯಾವ ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ?

ಕನ್ನಡ, ಅಸ್ಸಾಮಿ, ಬಂಗಾಳಿ, ಗುಜರಾತಿ, ಮರಾಠಿ, ಮಲೆಯಾಳ, ತಮಿಳು, ತೆಲುಗು, ಒಡಿಯಾ, ಉರ್ದು, ಪಂಜಾಬಿ, ಮಣಿಪುರಿ ಮತ್ತು ಕೊಂಕಣಿ

ನಟ ಚೇತನ್ 'ಒಸಿಐ' ವೀಸಾ ರದ್ದು

ಬೆಂಗಳೂರು: ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿದ್ದ ಪ್ರಕರಣದಲ್ಲಿ ನಟ ಚೇತನ್ ಕುಮಾರ್ ಅವರ ಭಾರತದ ಸಾಗರೋತ್ತರ ನಾಗರಿಕ (ಒಸಿಐ) ವೀಸಾವನ್ನು ಕೇಂದ್ರ ಗೃಹ ಸಚಿವಾಲಯ ರದ್ದುಪಡಿಸಿದ್ದು, ಕಾರ್ಡ್ ಹಿಂತಿರುಗಿಸಲು 15 ದಿನಗಳ ಗಡುವು ನೀಡಲಾಗಿದೆ. 3

ಕಾಂಗ್ರೆಸ್ 'ಮೌನ ವ್ರತ'; ಬಿಜೆಪಿ 'ಸೌಮ್ಯ' ನಡೆ 6

ಚಿನಕುರಳಿ

ಪ್ರಕಾಶ್ ಶೆಟ್ಟಿ

'ಸಿಬಿಐ, ಇ.ಡಿ ವಿರುದ್ಧ ಕೋರ್ಟ್‌ಗೆ'

ಅಬಕಾರಿ ನೀತಿ ಹಗರಣ ● ಭ್ರಷ್ಟಾಚಾರ ವಿರುದ್ಧ ಧ್ವನಿ ಎತ್ತಿದ್ದಕ್ಕೆ ಸಮನ್ಸ್: ಕೇಜ್ರಿವಾಲ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣ ಪ್ರಕರಣದಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸಿಬಿಐ ಸಮನ್ಸ್ ನೀಡಿರುವುದು, ಆಮ್ ಆದ್ಮಿ ಪಕ್ಷ (ಎಎಪಿ) ಸೇರಿದಂತೆ ವಿಪಕ್ಷಗಳು ಮತ್ತು ಬಿಜೆಪಿ ನಡುವಿನ ವಾಗ್ಯುದ್ಧಕ್ಕೆ ಕಾರಣವಾಗಿದೆ.

'ನಮ್ಮ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಲಾಗಿದೆ. ಹೀಗಾಗಿ, ಸಿಬಿಐ ಹಾಗೂ ಜಾರಿ ನಿರ್ದೇಶನಾಲಯ (ಇ.ಡಿ) ವಿರುದ್ಧ ಕೋರ್ಟ್‌ನಲ್ಲಿ ಸೂಕ್ತ ಪ್ರಕರಣಗಳನ್ನು ದಾಖಲಿಸುತ್ತೇವೆ' ಎಂದು ಕೇಜ್ರಿವಾಲ್ ಗುಡುಗಿದ್ದಾರೆ.

ವಿಚಾರಣೆಗಾಗಿ ಸಿಬಿಐ ಎದುರು ಭಾನುವಾರ ಹಾಜರಾಗುವೆ ಎಂದೂ ಹೇಳಿದ್ದಾರೆ. ಇನ್ನೊಂದೆಡೆ, ಕೇಜ್ರಿವಾಲ್ ಪರ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ನಿಂತಿದ್ದಾರೆ. ಅವರ ವಿರುದ್ಧವೂ ಬಿಜೆಪಿ ವಾಗ್ದಾಳಿ ನಡೆಸಿದೆ.

'ಎಎಪಿ ತುಳಿಯುವ ಹುನ್ನಾರ': 'ದೇಶದ ಜನತೆಗೆ ಎಎಪಿ ಆಶಾಕಿರಣವಾಗಿ ಹೊರಹೊಮ್ಮಿದೆ. ಪಕ್ಷವು, ಬಡತನವನ್ನು ಹೋಗಲಾಡಿಸುವ ಜೊತೆಗೆ ತಮ್ಮನ್ನು ಸುಶಿಕ್ಷಿತರನ್ನಾಗಿ ಮಾಡುತ್ತದೆ ಎಂಬ ಭರವಸೆ ಜನರಲ್ಲಿ ಮೂಡಿದೆ. ಆದರೆ, ಪಕ್ಷವನ್ನು ಗುರಿಯಾಗಿಸುವ ಮೂಲಕ ಜನರಲ್ಲಿನ ಆಶಾಭಾವನೆಯನ್ನು ತುಳಿಯುವ ಕೆಲಸ ಮಾಡಲಾಗುತ್ತಿದೆ' ಎಂದು ಕೇಜ್ರಿವಾಲ್ ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಇಡೀ ಬೆಳವಣಿಗೆಯ ಕೇಂದ್ರ ಬಿಂದುವೇ ದೆಹಲಿ ಅಬಕಾರಿ ನೀತಿಯಾಗಿದೆ. ಇದು ಅತ್ಯುತ್ತಮ ನೀತಿಯಾಗಿದ್ದು, ಪಕ್ಷವು ಆಡಳಿತದಲ್ಲಿರುವ ಪಂಜಾಬ್‌ನಲ್ಲಿ ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ' ಎಂದು ಅಭಿಪ್ರಾಯಪಟ್ಟರು.

'ನಾನು ಭ್ರಷ್ಟ ಎಂದಾದಲ್ಲಿ ಯಾರೂ ಪ್ರಾಮಾಣಿಕರಲ್ಲ'

ನವದೆಹಲಿ: 'ಒಂದು ವೇಳೆ ನಾನು ಭ್ರಷ್ಟ ಎಂದಾದಲ್ಲಿ, ಜಗತ್ತಿನಲ್ಲಿ ಯಾವ ವ್ಯಕ್ತಿಯೂ ಪ್ರಾಮಾಣಿಕ ಅಲ್ಲ' ಎಂದು ಮುಖ್ಯಮಂತ್ರಿ ಕೇಜ್ರಿವಾಲ್ ಹೇಳಿದರು.

ಜಮ್ಮು-ಕಾಶ್ಮೀರ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿರುವುದನ್ನು ಸುದ್ದಿಗೋಷ್ಠಿಯಲ್ಲಿ ಪ್ರಸ್ತಾಪಿಸಿದ ಅವರು, 'ಅಡಿಯಿಂದ ಮುಡಿವರೆಗೆ ಭ್ರಷ್ಟಾಚಾರದಲ್ಲಿಯೇ ಮುಳುಗಿರುವ ವ್ಯಕ್ತಿಗೆ ಭ್ರಷ್ಟಾಚಾರ ಒಂದು ಸಮಸ್ಯೆ ಹೇಗಾಗುತ್ತದೆ' ಎಂದು ಪ್ರಶ್ನಿಸಿದರು. 'ಈ ಪ್ರಕರಣದಲ್ಲಿ ಈಗಾಗಲೇ ಬಂಧಿತರಾದವರಿಗೆ ಕೇಂದ್ರೀಯ ತನಿಖಾ ಸಂಸ್ಥೆಗಳು ಚಿತ್ರಹಿಂಸೆ ನೀಡುತ್ತಿವೆ' ಎಂದು ಆರೋಪಿಸಿದರು.

ಎಎಪಿಯನ್ನು ಗುರಿಯಾಗಿಸಿ ಮಾಡಿದಷ್ಟು ದಾಳಿಯನ್ನು ಕಳೆದ 75 ವರ್ಷಗಳಲ್ಲಿ ಇತರ ಯಾವುದೇ ಪಕ್ಷದ ವಿರುದ್ಧವೂ ಮಾಡಿಲ್ಲ

ಅರವಿಂದ ಕೇಜ್ರಿವಾಲ್
ದೆಹಲಿ ಮುಖ್ಯಮಂತ್ರಿ

ಇನ್ನಷ್ಟು ಸುದ್ದಿಗಳು 13

ಪತ್ರಕರ್ತರ ಸೋಗಿನಲ್ಲಿ ದಾಳಿ ನಡೆಸಿದ ಮೂವರ ಸೆರೆ

ಗ್ಯಾಂಗ್‌ಸ್ಟರ್ ಅತೀಕ್, ಅಶ್ರಫ್ ಗುಂಡೇಟಿಗೆ ಬಲಿ

ಪ್ರಯಾಗ್‌ರಾಜ್ (ಪಿಟಿಐ): ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಗ್ಯಾಂಗ್‌ಸ್ಟರ್, ಮಾಜಿ ಸಂಸದ ಅತೀಕ್ ಅಹ್ಮದ್ ಹಾಗೂ ಆತನ ಸಹೋದರ ಅಶ್ರಫ್ ಅಹ್ಮದ್ ಪೊಲೀಸರ ಬಿಗಿ ಭದ್ರತೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ತೆರಳುತ್ತಿದ್ದಾಗಲೇ ಶನಿವಾರ ರಾತ್ರಿ ದುಷ್ಕರ್ಮಿಗಳ ಗುಂಡೇಟಿಗೆ ಬಲಿಯಾಗಿದ್ದಾರೆ.

ಈ ಗುಂಡಿನ ದಾಳಿಯ ದೃಶ್ಯ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಕೃತ್ಯ ಎಸಗಿದ ಮೂವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಪತ್ರಕರ್ತರ ಸೋಗಿನಲ್ಲಿ ಬಂದ ಮೂವರು ದುಷ್ಕರ್ಮಿಗಳು ಪೊಲೀಸರು ಮತ್ತು ಮಾಧ್ಯಮದವರ ಎದುರೇ ಅತೀಕ್ ಮತ್ತು ಅಶ್ರಫ್ ಮೇಲೆ ಏಕಾಏಕಿ ದಾಳಿ ನಡೆಸಿದರು. ತೀರಾ ಹತ್ತಿರದಲ್ಲಿಯೇ ದಾಳಿ ನಡೆದಿದ್ದು, ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಘಟನಾ ಸ್ಥಳದಲ್ಲಿ ಕೆಲಕಾಲ ಉದ್ರಿಕ್ತ ಪರಿಸ್ಥಿತಿ ತಲೆದೋರಿತ್ತು.

ಪ್ರಯಾಗ್‌ರಾಜ್‌ನಲ್ಲಿ ಪೊಲೀಸರ ಬಿಗಿಭದ್ರತೆಯಲ್ಲಿ ಪಾತಕಿಗಳಾದ ಅಶ್ರಫ್ ಅಹ್ಮದ್ ಮತ್ತು ಆತೀಕ್ ಅಹ್ಮದ್ ಅವರನ್ನು ವೈದ್ಯಕೀಯ ಪರೀಕ್ಷೆಗಾಗಿ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ದೃಶ್ಯ –ಪಿಟಿಐ ಚಿತ್ರ

ಬಿಎಸ್‌ಪಿಯ ಮಾಜಿ ಶಾಸಕ ರಾಜು ಪಾಲ್ ಅವರ ಹತ್ಯೆ ಪ್ರಕರಣದ ಪ್ರಮುಖ ಸಾಕ್ಷಿ ಉಮೇಶ್ ಪಾಲ್ ಕೊಲೆ ಪ್ರಕರಣದಲ್ಲಿ ಈ ಇಬ್ಬರು ಆರೋಪಿಗಳಾಗಿದ್ದರು.

ಉಮೇಶ್ ಪಾಲ್ ಕೊಲೆ ಪ್ರಕರಣದಲ್ಲಿ ಬೇಕಾಗಿದ್ದ ಅತೀಕ್ ಅಹ್ಮದ್‌ನ ಪುತ್ರ ಅಸಾದ್ ಹಾಗೂ ಆತನ ಸಹಚರ ಗುಲಾಮ್ ಉತ್ತರ ಪ್ರದೇಶದ ಪೊಲೀಸರು ಝಾನ್ಸಿಯಲ್ಲಿ ಗುರುವಾರ ನಡೆಸಿದ ಎನ್‌ಕೌಂಟರ್‌ನಲ್ಲಿ ಹತ್ಯೆಯಾಗಿದ್ದರು.

ಪಾತಕಿ ಅತೀಕ್ ಮೇಲೆ ಉಮೇಶ್ ಪಾಲ್ ಕೊಲೆ ಸೇರಿದಂತೆ ನೂರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, ಗುಂಡಿನ ದಾಳಿ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶಿಸಿದ್ದಾರೆ.



ಭಾನುವಾರದ ಉಷ್ಣಾಂಶ 36° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಶುಭ್ರ ಆಕಾಶ, ಬಿರು ಬಿಸಿಲು ಇರಲಿದೆ

ಮುನ್ಸೂಚನೆ: ಸೋಮವಾರ 37° 21° | ಮಂಗಳವಾರ 37° 21° | ಬುಧವಾರ 36° 21°

ಸಿಎಪಿಎಫ್ ನೇಮಕಾತಿ: ಕನ್ನಡದಲ್ಲೂ ಪರೀಕ್ಷೆ

ಒಂದನೇ ಪುಟದಿಂದ

ಗೃಹ ಸಚಿವಾಲಯದ ಈ ತೀರ್ಮಾನವನ್ನು ಐತಿಹಾಸಿಕ ಹೆಜ್ಜೆ ಎಂದು ಬಣ್ಣಿಸಿರುವ ಪ್ರಧಾನಿ ನರೇಂದ್ರ ಮೋದಿ, 'ದೇಶದ ಯುವಕರು ತಾವು ಕಂಡ ಕನಸನ್ನು ನನಸು ಮಾಡಿಕೊಳ್ಳಲು ಈ ನಿರ್ಧಾರವು ಅವಕಾಶ ಮಾಡಿಕೊಡಲಿದೆ. ಯಾವುದೇ ವ್ಯಕ್ತಿಯು ತನ್ನ ಕನಸುಗಳನ್ನು ಈಡೇರಿಸಿಕೊಳ್ಳಲು ಭಾಷೆ ಎಂದಿಗೂ ಅಡೆತಡೆ ಆಗಬಾರದು' ಎಂದು ಹೇಳಿದ್ದಾರೆ.

ಕನ್ನಡ ಭಾಷೆಯಲ್ಲೂ ಸಿಎಪಿಎಫ್ ಪರೀಕ್ಷೆ ನಡೆಸಬೇಕೆನ್ನುವುದು ಕರ್ನಾಟಕದ ಚುನಾವಣೆ ವಿಷಯಗಳಲ್ಲಿ ಒಂದಾಗಿತ್ತು. ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ಅವರು ಕನ್ನಡದಲ್ಲೂ ಪರೀಕ್ಷೆ ನಡೆಸುವಂತೆ ಒತ್ತಾಯಿಸಿದ್ದರು. ಕನ್ನಡಪರ ಸಂಘಟನೆಗಳೂ ಈ ಬೇಡಿಕೆಯನ್ನು ಮುಂದಿಟ್ಟುಕೊಂಡು ರಾಜ್ಯದ ಹಲವೆಡೆ ಪ್ರತಿಭಟನೆಯನ್ನೂ ನಡೆಸಿದ್ದವು.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 01-SNT-MYS-2023
ದಿನಾಂಕ: 10.04.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	ಮೈಸೂರು ವಿಭಾಗದಲ್ಲಿ 18 ಇಂಟರ್‌ಲಾಕ್ ಮಾಡಲಾದ ಎಲ್‌ಸಿ ಗೇಟುಗಳಿಗೆ ಸ್ಲೈಡಿಂಗ್ ಬೂಮ್‌ಗಳ ವ್ಯವಸ್ಥೆ.	ರೂ. 26,72,163.87
2	ಮೈಸೂರು ವಿಭಾಗದಲ್ಲಿ ಟಿಆರ್‌ಆರ್ ಮತ್ತು ಟಿಎಫ್‌ಟಿಆರ್ ಕೆಲಸಗಳಿಗೆ ಸಂಬಂಧಿಸಿದಂತೆ ಸಿಗ್ನಲಿಂಗ್ ಕಾಮಗಾರಿ.	ರೂ. 66,21,489.12
3	ಮೈಸೂರಿನ ಮೈಸೂರು ರೈಲ್ವೆ ನಿಲ್ದಾಣದಲ್ಲಿ ಲಿನೆನ್ ಕೇರ್ ಸೆಂಟರ್ ಮತ್ತು ರೈಲ್ವೆ ಪಾರ್ಸೆಲ್ ಬುಕ್ಕಿಂಗ್ ಕಚೇರಿಯಲ್ಲಿ ಸಿಸಿಟಿವಿ ವ್ಯವಸ್ಥಾ ಪೂರೈಕೆ.	ರೂ. 13,99,724.20
4	ಮೈಸೂರು ವಿಭಾಗದಲ್ಲಿ ಆಲೂರು–ಬಂಟವಾಳ (ಹೆಚ್‌ಎಂಆರ್‌ಡಿಸಿ ವಿಭಾಗ)ದಲ್ಲಿ ಒಂದು ವರ್ಷದ ಅವಧಿಗೆ ಕೊಡಲ್ಪಡುವ ಪ್ರತೀ ಡೀಸಲ್ ಜೆನರೇಟರಿಗೆ ಬೇಕಾದ ಸಮಗ್ರ ವಾರ್ಷಿಕ ನಿರ್ವಹಣಾ ಗುತ್ತಿಗೆ.	ರೂ. 3,70,656.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03.05.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್, ಮೈಸೂರು

PUB/22/AAD/PRB/SWR/2023-24

S.W.Railways SWRRLY SWRRLY

'ಭೂಮಿಕಾ ಕ್ಲಬ್'ನ 5ನೇ ಆವೃತ್ತಿಯ ಕಾರ್ಯಕ್ರಮದಲ್ಲಿ ಸಂಗೀತದ ಹೊನಲು

ಯಕ್ಷಗಾನ ಮೋಡಿ: ಸಾಧಕಿಯರ ಸಾಧನೆ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಕ್ಷಗಾನದ ಮೋಡಿ, ಇಳಿ ಸಂಜೆಯಲ್ಲಿ ಸಂಗೀತದ ಹೊನಲು, ಆಭರಣಗಳ ವಿನ್ಯಾಸದ ಮಾಹಿತಿ, ಮಹಿಳಾ ಸಾಧಕಿಯರ ಸಾಧನೆಗಳ ಅನಾವರಣ...

– ಇದು 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'ನ ಭೂಮಿಕಾ ಕ್ಲಬ್ ಕೋರಮಂಗಲ ಕ್ಲಬ್‌ನಲ್ಲಿ ಶನಿವಾರ ಆಯೋಜಿಸಿದ್ದ 5ನೇ ಆವೃತ್ತಿಯ 'ಸಮರ್ಥ ಮಹಿಳೆ, ಸಶಕ್ತ ಜಗತ್ತು' ಕಾರ್ಯಕ್ರಮದಲ್ಲಿ ಕಂಡುಬಂದ ದೃಶ್ಯಾವಳಿಗಳು.

ಶನಿವಾರ ಕ್ಲಬ್‌ನ ಸಭಾಂಗಣ ಬಹುತೇಕ ಭರ್ತಿಯಾಗಿತ್ತು. ಸಂಗೀತಾಸ್ತಕರು, ಚಿನ್ನಾಭರಣ ಪ್ರೇಮಿಗಳು, ಸಾಧಕರ ಸಮಾಗಮವೇ ಆಗಿತ್ತು.

ಬೆಂಗಳೂರು ಯಕ್ಷಗಾನ ಕಲಾಕದಂಬ ಆರ್ಟ್ ಕೇಂದ್ರದ ಕಲಾವಿದರು ಪ್ರಸ್ತುತಪಡಿಸಿದ ಯಕ್ಷಗಾನ ಪ್ರದರ್ಶನವು ಸಭಿಕರನ್ನು ಮೋಡಿ ಮಾಡಿತು. ಪಾಂಡವರ ರಕ್ಷಣೆಗೆ ತಾಯಿ ಅಪ್ಪಣೆ ಪಡೆದು ಅಭಿಮನ್ಯು ತೆರಳುವ ಸನ್ನಿವೇಶವನ್ನು ಕಲಾವಿದರು ಯಕ್ಷಗಾನದ ಮೂಲಕ ಕಟ್ಟಿಕೊಟ್ಟರು. ಶಾಲಾ– ಕಾಲೇಜು ವಿದ್ಯಾರ್ಥಿಗಳನ್ನು ಒಳಗೊಂಡ ತಂಡವು ಪ್ರದರ್ಶಿಸಿದ ಯಕ್ಷಗಾನವು ಭಾವುಕ ಕ್ಷಣಕ್ಕೆ ಸಾಕ್ಷಿಯಾಯಿತು.

ನಿರ್ದೇಶಕ ಡಾ.ರಾಧಾಕೃಷ್ಣ ಮಾತನಾಡಿ, 'ಯಕ್ಷಗಾನವನ್ನು ಗಂಡುಕಲೆ ಎಂದು ಹೇಳುತ್ತಿದ್ದೆವು. ಆದರೆ, ಎರಡು ದಶಕದಿಂದ ಈಚೆಗೆ ಹೆಣ್ಣು ಮಕ್ಕಳು ಆ ಮಾತನ್ನು ಸುಳ್ಳಾಗಿಸಿದ್ದಾರೆ. ಯಕ್ಷಗಾನದಲ್ಲಿ ಮಹಿಳೆಯರೂ ಛಾಪು ಮೂಡಿಸುತ್ತಿದ್ದಾರೆ' ಎಂದು ಹೇಳಿದರು.

ಅಭಿಮನ್ಯು ಪಾತ್ರ ನಿರ್ವಹಿಸಿದ ಪೂಜಾ, 'ಕೆಲಸಗಳು ಭಾರ ಎನಿಸಿದರೆ ಅದು ಮತ್ತಷ್ಟು ಹೊರೆಯಾಗಲಿವೆ. ಕಲಾ ಪ್ರದರ್ಶನ ಸೇರಿದಂತೆ ಪ್ರತಿ ಕೆಲಸವನ್ನು ಸುಲಭವಾಗಿ ಮಾಡುತ್ತೇನೆಂದು ಮುನ್ನಡೆಯಬೇಕು' ಎಂದರು.

ಸ್ವಂತ ಉದ್ದಿಮೆಗಳನ್ನು ಸ್ಥಾಪಿಸಿದ ಮಹಿಳಾ ಸಾಧಕಿಯರ ಜತೆಗೆ ಸುಚಾರಿತ ಈಶ್ವರ್ ಅವರು ಚರ್ಚೆ ನಡೆಸಿದರು.

'ಯುವರ್ ಸ್ಟೋರಿ' ಸ್ಥಾಪಕಿ ಶ್ರದ್ಧಾ ಶರ್ಮಾ ಮಾತನಾಡಿ, 'ನಮ್ಮ ಆರೋಗ್ಯಕ್ಕಾಗಿ ಪ್ರತಿನಿತ್ಯ ವ್ಯಾಯಾಮ ಮಾಡಬೇಕಿದೆ. ನಮಗೆ ನಾವೇ ಮೊದಲು ಸುಂದರವಾಗಿ ಕಾಣಬೇಕು. ಧ್ಯಾನ ಮಾಡದಿದ್ದರೆ ನಮ್ಮ ಮನಸ್ಸು ಹಿಡಿತದಲ್ಲಿ ಇರಿಸಲು ಸಾಧ್ಯವಿಲ್ಲ. ಎಲ್ಲರಿಗೂ ಕಷ್ಟಗಳಿರುತ್ತವೆ. ಸ್ವ-ಉದ್ಯೋಗದ ವೇಳೆ ಕಷ್ಟಗಳು ಎದುರಾಗುತ್ತವೆ. ಅವುಗಳನ್ನು ಮೀರಿ ಬೆಳೆಯಬೇಕಿದೆ. ನಾನೇ ಸಾಧಕರ ಸಾವಿರಾರು ಕಥೆಗಳನ್ನು ಹೇಳಿದ್ದೇನೆ. ಅವರೆಲ್ಲರ ಕೆಲಸಗಳೂ ಪ್ರೇರಣಾದಾಯಕ' ಎಂದರು.

'ಸಮೋಸ ಪಾರ್ಟಿ' ಸಹ ಸ್ಥಾಪಕಿ ದೀಕ್ಷಾ ಪಾಂಡೆ ಅವರು ಕೋವಿಡ್ ಸಂಕಷ್ಟದ ನಡುವೆ ಎದುರಿಸಿದ ಸವಾಲು, ಹೊಸ ಉದ್ದಿಮೆ ಸ್ಥಾಪನೆಗೆ ಇರುವ ಅವಕಾಶಗಳು, ಮಹಿಳಾ ಉದ್ದಿಮೆದಾರರ ಬೆಳವಣಿಗೆ ಕುರಿತು ವಿವರಿಸಿದರು.

ಹಿನ್ನೆಲೆ ಗಾಯಕಿ ದಿವ್ಯಾ ರಾಮಚಂದ್ರ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಎವಿಆರ್ ಸ್ವರ್ಣ ಮಹಲ್ ಜ್ಯೂವೆಲ್ಲರ್ಸ್ ಹಾಗೂ ಹಟ್ಟಿ ಕಾಫಿಯವರು ಪ್ರಾಯೋಜಕತ್ವ ವಹಿಸಿದ್ದರು.

ಯಕ್ಷಗಾನ ಕಲಾಕದಂಬ ಆರ್ಟ್ ಕೇಂದ್ರದ ಕಲಾವಿದರು ಪ್ರಸ್ತುತ ಪಡಿಸಿದ ಯಕ್ಷಗಾನ – ಪ್ರಜಾವಾಣಿ ಚಿತ್ರ

ಫ್ಯಾಷನ್ ಡಿಸೈನ್‌ಗೆ ವಿಪುಲ ಅವಕಾಶ

ಶುಭ ಸಮಾರಂಭಕ್ಕೆ ಸಿದ್ಧತೆ ಮಾಡಿಕೊಳ್ಳುವ ಕುರಿತು ವಿನ್ಯಾಸ ಗೋಷ್ಠಿಯಲ್ಲಿ ವಿವರಿಸಲಾಯಿತು. ವಿನ್ಯಾಸಕಿ ಪಲ್ಲವಿ ಫೋಲೆ ಅವರು ಫ್ಯಾಷನ್ ಡಿಸೈನ್ ಕಲಿತವರಿಗೆ ಸಾಕಷ್ಟು ಅವಕಾಶಗಳಿವೆ. ಶ್ರದ್ಧೆ ಹಾಗೂ ಆಸಕ್ತಿ ಇರಬೇಕು ಎಂದರು.

ವಿ–ನೆಕ್, ಹೈ–ನೆಕ್‌ಗೆ ಅಂದ ಕಾಣುವ ನೆಕ್ಲೆಸ್ ಯಾವುದು, ಪಾರ್ಟಿಗಳಿಗೆ ಯಾವ ಶೈಲಿಯ ಸಿಂಪಲ್ ಚಿನ್ನಾಭರಣ ಧರಿಸಿದರೆ ಚೆಂದ ಎಂಬುದರ ಕುರಿತು ಪಲ್ಲವಿ ತಿಳಿಸಿದರು. ಇದೇ ವೇಳೆ ಎವಿಆರ್ ಸ್ವರ್ಣ ಮಹಲ್‌ನ ಚಿನ್ನಾಭರಣವನ್ನು ರೂಪದರ್ಶಿಯರು ಪ್ರದರ್ಶಿಸಿದರು.

'ಆತ್ಮವಿಶ್ವಾಸ ಕಳೆದುಕೊಳ್ಳಬೇಡಿ'

'ಯಾವುದೇ ಕ್ಷಣದಲ್ಲೂ ಮಹಿಳೆಯರು ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ತಮ್ಮಲ್ಲಿರುವ ಶಕ್ತಿಯನ್ನು ಬಳಸಿಕೊಳ್ಳಬೇಕು. ಅಂಜಿಕೆ ದೂರ ಮಾಡಿ, ಸಾಧನೆ ಹಾದಿಯಲ್ಲಿ ಮುನ್ನಡೆಯಬೇಕು. ಎಲ್ಲರಿಗೂ ಸಮಸ್ಯೆಗಳು ಇರುತ್ತವೆ. ಅದನ್ನು ಮೀರಿ ಬೆಳೆಯುವ ಪ್ರಯತ್ನ ಮಾಡಬೇಕು' ಎಂದು ನಟಿ ಖುಷಿ ರವಿ ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ನನ್ನ ತಂದೆಯೂ ಪತ್ರಿಕಾ ವಿತರಕ ಕೆಲಸ ಮಾಡುತ್ತಿದ್ದರು' ಎಂದರು.

'ನಿಂದನೆಯೇ ಸವಾಲಾಯಿತು'



ರಾಮೇಶ್ವರಂ ಕೆಫೆ ಸಹ ಸ್ಥಾಪಕಿ ದಿವ್ಯಾ ರಾಘವೇಂದ್ರ ರಾವ್ ಅವರು ಪಿಯುಸಿ ಓದುತ್ತಿರುವಾಗಲೇ ಮನೆಯವರೇ ನಿಶ್ಚಯಿಸಿದ ಮದುವೆ ಧಿಕ್ಕರಿಸಿ 'ಸಿಎ' ವಿದ್ಯಾಭ್ಯಾಸ ಪೂರ್ಣಗೊಳಿಸಿದ್ದು ಹಾಗೂ ನಂತರ ಹೊಸದಾಗಿ ಕೆಫೆ ಆರಂಭಿಸಿದ್ದನ್ನು ವಿವರಿಸಿದರು.

'ವ್ಯಕ್ತಿಯೊಬ್ಬರು ನಿಂದಿಸಿದ್ದರು. ಆ ಮಾತನ್ನು ಸವಾಲಾಗಿ ಸ್ವೀಕರಿಸಿದ್ದೆ. ಈಗ ನನ್ನ ಸಂಸ್ಥೆಯಲ್ಲಿ 600 ಮಂದಿಗೆ ಉದ್ಯೋಗ ನೀಡಿದ್ದೇನೆ' ಎಂದು ಹೆಮ್ಮೆಯಿಂದ ನುಡಿದರು.

'ಭೂಮಿಕಾ ಕ್ಲಬ್' ಆಯೋಜಿಸಿದ್ದ 5ನೇ ಆವೃತ್ತಿ ಕಾರ್ಯಕ್ರಮದಲ್ಲಿ ಚಿನ್ನಾಭರಣ ವಿನ್ಯಾಸಕಿ ಪಲ್ಲವಿ ಫೋಲೆ ಅವರಿಗೆ ಎ.ವಿ.ಆರ್ ಸ್ವರ್ಣ ಮಹಲ್ ಜ್ಯೂವೆಲ್ಲರ್ಸ್‌ನ ಬ್ರಾಂಚ್ ಮ್ಯಾನೇಜರ್ ರಾಘವೇಂದ್ರ ನೆನಪಿನ ಕಾಣಿಕೆ ವಿತರಿಸಿದರು.

CAUTION NOTICE

1. Please take notice that the Schedule Properties are the subject matter of **RFA No.1568/2018** pending before the Hon'ble High Court of Karnataka at Bengaluru, filed by my client **Smt.Usha N.Swamy** D/o M.Venkataswamy, Aged about 63 years, residing at No.2240,Lake Ridge Drive, Belmont, North Carolina, 28012, USA against her family members viz., her father Sri.M.Venkataswamy (died intestate on 23/11/2020), her mother Smt.Jayamma and her sister Smt.Shyla Venkat Swamy alias Shyla Prasad Venkataswamy (Respondents).
2. Please take notice that the said Smt.Shyla Venkataswamy does not possess any absolute authority or power to deal with the Item No.1,3 and 4 of the Schedule Property in any manner as the said properties belong to the joint family of Sri.M.Venkataswamy.
3. Please take notice that the Item No.2 of the Schedule Property exclusively belongs to my client and her sister Smt.Shyla Venkataswamy and my client owns 50% of undivided share in the item No.2 property.
4. Please take notice that any person/s who deals with the Schedule Properties in any manner based on the representations which may be held out by the aforesaid Respondents or otherwise, will be doing so at their peril. Any transaction done without the express written registered consent of my client Smt.Usha Swamy will not be binding on her and the said transaction will be subject to preferential right (right of pre-emption) of my client under Section 6C and 22 of Hindu Succession Act and any transaction so carried out in utter disobedience of the Order dated 19.02.2021 passed by the Hon'ble High Court of Karnataka in RFA No.1568/2018 will amount to contempt of court punishable under the Contempt of Court Act, 1971.
5. Please take further notice that the Schedule Properties being the subject matter of RFA No.1568/2018, the said properties cannot be dealt with either by the Respondents or any person/s claiming under or through them during the pendency of the said Appeal. The Respondents have no manner of right, title and interest to deal with the Schedule Properties, during the pendency of the RFA No.1568/2018, without obtaining permission from the Hon'ble High Court of Karnataka.

SCHEDULE PROPERTY

Item No.1: All that piece and parcel of the land bearing Sy.No.16/2 measuring 41 Acres 20 Guntas situated at Kannanayakana Agrahara Village, Jigani Hobli, Anekal Taluk and bounded on:
East by : Passage
West by : Lands in Sy.Nos.33,34,35,63,64 and a House and Hanumantha Rao Lake
North by : Land in Sy.No.16/1
South by : Land in Sy.No.16/14 belongs to K.K.Shareifs.

Item No.2: All that piece and parcel of the immovable property bearing No.841/c, situated at 37th F Cross, 4th T Block, Jayanagara , Bangalore and bounded on:
East by : Site No.840
West by : Road
North by : Site No.828
South by : Road

Item No.3: All that piece and parcel of the agricultural land bearing Sy.No.138/13 measuring 6 Acres 03 Guntas, situated at Badamanavarthekaval, Kengeri Hobli, Bangalore South Taluk and bounded on:
East by : Property of B.Mariyappa, K.Narasappa and Thamaiah
West by : Property of L.Ramachandra
North by : Property of Achhamma and
South by : Property of Dr.Chikkananjappa

Item No.4: All that piece and parcel of the immovable property bearing Municipal No.89 (Old No.205) situated at Pattabhirama Nagar, 7th Main Road, 4th Block, Jayanagar, Bangalore and bounded on:
East by : 7th Main Road
West by : Property bearing No.216 belongs to J.K. Mansion
North by : Property bearing No.204 belongs to K.Rajagopal Setty and Sons
South by : Property bearing No.206 belongs to M/s. Kwality Ice Creams

Bangalore
Date: 16/04/2023

Sd/- Goutam Chand S.F
Advocate
Goutam Associates
No.60, 2nd Floor, Kanakapura Road,
Basavanagudi, Bangalore – 560 004

ಸಾವಿರಾರು ಕಟ್ಟಡಗಳು ನೆಲಸಮವಾಗುವ ಸಾಧ್ಯತೆ

ಐಆರ್‌ಆರ್: 210 ಕಿ.ಮೀ ವ್ಯಾಪ್ತಿಯಲ್ಲಿ ಭೂಸ್ವಾಧೀನದ ಭಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಚುನಾವಣಾ ನೀತಿ ಸಂಹಿತೆ ಘೋಷಣೆಗೂ ಮುನ್ನ ರಾಜ್ಯ ಸರ್ಕಾರದ ಅಧಿಸೂಚನೆ
- ಬಿಡಿಎ ವ್ಯಾಪ್ತಿಯಲ್ಲೂ ಈ ರಸ್ತೆ ಹಾದು ಹೋಗುತ್ತಿದೆ

ಬೆಂಗಳೂರು: ಅಸ್ತಿತ್ವದಲ್ಲಿರುವ ರಸ್ತೆಗಳನ್ನೇ 'ಇಂಟರ್‌ಮೀಡಿಯೇಟ್ ರಿಂಗ್ ರಸ್ತೆ' ಎನ್ನುವ ಹೆಸರಿನಲ್ಲಿ ವಿಸ್ತರಣೆ ಮಾಡಲು ಸರ್ಕಾರ ಮುಂದಾಗಿದ್ದು, ರಸ್ತೆ ಬದಿಯಲ್ಲಿರುವ ಅಪಾರ ಸಂಖ್ಯೆಯ ಆಸ್ತಿಗಳ ಮಾಲೀಕರಿಗೆ ಈಗ ಭೂಸ್ವಾಧೀನದ ಭಯ ಕಾಡುತ್ತಿದೆ.

ರಿಂಗ್ ರಸ್ತೆಯ ಅಗಲ 90 ಮೀಟರ್ ಎಂದು ಕಡ್ಡಾಯಗೊಳಿಸಲಾಗಿದ್ದು, 210 ಕಿಲೋ ಮೀಟರ್ ಉದ್ದಕ್ಕೂ ಸಾವಿರಾರು ಕಟ್ಟಡಗಳು ಈಗ ನೆಲಸಮವಾಗುವ ಸಾಧ್ಯತೆ ಇದೆ.

ಚುನಾವಣಾ ನೀತಿ ಸಂಹಿತೆ ಘೋಷಣೆಗೂ ಮುನ್ನ ಮಾರ್ಚ್ 16ರಂದು ರಾಜ್ಯ ಸರ್ಕಾರ ಈ ಅಧಿಸೂಚನೆ ಹೊರಡಿಸಿದೆ. ಅಸ್ತಿತ್ವದಲ್ಲಿರುವ ರಸ್ತೆಗಳನ್ನು ಒಟ್ಟುಗೂಡಿಸಿ ಅವುಗಳನ್ನು ಇಂಟರ್‌ಮೀಡಿಯೇಟ್ ರಿಂಗ್ ರಸ್ತೆ ಎಂದು ಕರೆಯಲಾಗಿದೆ.

ಬಿಡದಿ, ಆನೇಕಲ್, ವರ್ತೂರು, ವೈಟ್‌ಫೀಲ್ಡ್, ನೆಲಮಂಗಲ ಮತ್ತು ಬೇಗೂರು ಭಾಗದಲ್ಲಿ ಈ ರಸ್ತೆ ಹಾದು ಹೋಗಲಿದ್ದು, ಹೊಸ ಅಧಿಸೂಚನೆಯ ಪ್ರಕಾರ 210 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಹೊಸ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಂತಿಲ್ಲ. ಬಿಡಿಎ ವ್ಯಾಪ್ತಿಯಲ್ಲೂ ಈ ರಸ್ತೆ ಹಾದು ಹೋಗುತ್ತಿದೆ.

ಚಂದಾಪುರ ಮತ್ತು ಬೂದಿಗೆರೆ ಕ್ರಾಸ್ ನಡುವೆ ಹೆಚ್ಚಿನದಾಗಿ ಕಟ್ಟಡಗಳು ರಸ್ತೆ ಬದಿಯಲ್ಲಿ ತಲೆ ಎತ್ತಿವೆ. ಆಸ್ತಿ ಮಾಲೀಕರು ಈಗ ತಮ್ಮ ಕೃಷಿ ಭೂಮಿಯನ್ನು ಬಹುತೇಕ ವಸತಿ ಮತ್ತು ವಾಣಿಜ್ಯ ಬಳಕೆಗೆ ಪರಿವರ್ತನೆ ಮಾಡಿಕೊಂಡಿದ್ದು, ಭೂಮಿಯ ಮೌಲ್ಯವೂ ಹೆಚ್ಚಾಗಿದೆ. ಆದರೂ, ಈ ಅಧಿಸೂಚನೆಯ ಅನ್ವಯ ಮಾಲೀಕರು ಈ ಭೂಮಿ ಬಿಟ್ಟುಕೊಡಬೇಕಾಗುತ್ತದೆ. ರಸ್ತೆಗಾಗಿ ಅಕ್ಕಪಕ್ಕದ ಆಸ್ತಿಗಳನ್ನು ವಶಪಡಿಸಿಕೊಳ್ಳುವ ಅಧಿಕಾರವನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅಧಿಸೂಚನೆಯಲ್ಲಿ ನೀಡಲಾಗಿದೆ.

ಈ ನಡುವೆ 2007ರಲ್ಲಿ ಪ್ರಸ್ತಾಪಿಸಿದ್ದ 'ಸರ್ಕ್ಯುಲರ್ ಇಂಟರ್‌ಮೀಡಿಯೇಟ್ ರಿಂಗ್' ರಸ್ತೆ ಪ್ರಸ್ತಾವವನ್ನು ಕೈಬಿಟ್ಟು ಹೊಸ ಹೆಸರಿನೊಂದಿಗೆ ಇರುವ ರಸ್ತೆಗಳನ್ನೇ ವಿಸ್ತರಿಸುವ ಇಂಟರ್ ಮೀಡಿಯೇಟ್ ರಿಂಗ್ ರಸ್ತೆ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಹಳೇ ಯೋಜನೆಯಿಂದ ₹15 ಸಾವಿರ ಕೋಟಿ ಮೌಲ್ಯದ 4,100 ಎಕರೆಯಷ್ಟು ಭೂಮಿ ಡಿನೋಟಿಫೈ ಮಾಡಿದಂತಾಗಿದೆ. ಆದರೆ, 'ಡಿನೋಟಿಫಿಕೇಷನ್' ಎಂಬ ಪದವನ್ನು ಸರ್ಕಾರ ಬಳಸಿಲ್ಲ.

ಹೊಸ ಅಧಿಸೂಚನೆಯಲ್ಲಿ ಮೂರು ಅಂಶಗಳಲ್ಲಿ ತಪ್ಪಾಗಿವೆ ಎಂದು ತಜ್ಞರು ಹೇಳುತ್ತಾರೆ. 'ವಿವಿಧ ಸರ್ಕಾರಿ ಪ್ರಾಧಿಕಾರಗಳು ರೂಪಿಸಿದ ಮಾಸ್ಟರ್ ಪ್ಲಾನ್ ವ್ಯಾಪ್ತಿಯಲ್ಲಿ ಈ ರಸ್ತೆಗಳಿವೆ. ಆದರೂ, 90 ಮೀಟರ್ ನಿಯಮ ಹೇರುವುದು ಸರಿಯಲ್ಲ. ಇದರಿಂದ ಅಪಾರ ಸಂಖ್ಯೆಯ ಆಸ್ತಿಗಳು ಅಕ್ರಮಗೊಳಿಸದಂತೆ ಆಗಲಿದೆ' ಎಂದು ಹೇಳುತ್ತಾರೆ.

'ಎರಡನೆಯದಾಗಿ, ಇಂಟರ್ ಮೀಡಿಯೇಟ್ ರಿಂಗ್ ರಸ್ತೆಯ ಹೊಸ ಜೋಡಣೆಯ ಕೆಲ ಭಾಗಗಳು ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ (ಬಿಎಂಎಲ್‌ಟಿ) ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮೇಲ್ವಿಚಾರಣೆಯಲ್ಲಿದ್ದರೂ, ಈ ಎರಡೂ ಪ್ರಾಧಿಕಾರಗಳ ಅನುಮತಿ ಪಡೆದುಕೊಂಡಿಲ್ಲ. ಮೂರನೆಯದಾಗಿ, ಇಂಟರ್ ಮೀಡಿಯೇಟ್ ರಿಂಗ್ ರಸ್ತೆ ಮತ್ತು ಪೆರಿಫೆರಲ್ ರಿಂಗ್ ರಸ್ತೆಗಳು ಚಂದಾಪುರ ಮತ್ತು ಬೂದಿಗೆರೆ ಕ್ರಾಸ್ ನಡುವೆ ಪರಸ್ಪರ ಸಮಾನಾಂತರವಾಗಿ ಸಾಗುತ್ತವೆ' ಎಂದು ವಿವರಿಸುತ್ತಾರೆ.

'ಹೊಸ ರಸ್ತೆ ನಿರ್ಮಿಸುವುದಕ್ಕಿಂತ ಈಗಿರುವ ರಸ್ತೆಯನ್ನು ವಿಸ್ತರಣೆ ಮಾಡುವುದು ಸುಲಭ ಎಂಬ ಕಾರಣಕ್ಕೆ ಈ ಹಿಂದಿನ ಯೋಜನೆ ಕೈಬಿಡಲಾಗಿದೆ' ಎಂದು ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಹೇಳಿದರು.

'ಬ್ಯಾಂಕಿಂಗ್ ಪರೀಕ್ಷೆಯಲ್ಲಿ ಆದ್ಯತೆ ನೀಡಿ'

ಬೆಂಗಳೂರು: 'ಕೇಂದ್ರ ಸಶಸ್ತ್ರ ಭದ್ರತಾ ಪಡೆಯ (ಸಿಎಪಿಎಫ್) ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನ್ನಡಕ್ಕೂ ಅವಕಾಶ ಒದಗಿಸಿರುವುದು ಪ್ರಜಾಪ್ರಭುತ್ವಕ್ಕೆ ಸಿಕ್ಕ ಜಯ. ಬ್ಯಾಂಕಿಂಗ್, ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆ ಸೇರಿ ವಿವಿಧ ಪರೀಕ್ಷೆಗಳಲ್ಲಿಯೂ ಕನ್ನಡಕ್ಕೆ ಅವಕಾಶ ನೀಡಬೇಕು' ಎಂದು ಕನ್ನಡ ಗೆಳೆಯರ ಬಳಗ ಆಗ್ರಹಿಸಿದೆ.

ಸಿ ಎ ಪಿ ಎ ಫ್ ಕಾ ನ್ ಸ್ಟೆ ಬ ಲ್ (ಪೊಲೀಸ್) ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಯು ಇನ್ನು ಮುಂದೆ ಹಿಂದಿ, ಇಂಗ್ಲಿಷ್ ಜೊತೆಗೆ ಕನ್ನಡ ಸೇರಿ 13 ಭಾಷೆಗಳಲ್ಲಿ ಇರಲಿವೆ. ಈ ಬಗ್ಗೆ ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ ಅಧಿಸೂಚನೆ ಹೊರಡಿಸಿದೆ. ಹಿಂದಿಯೇತರ ಭಾಷೆಗಳ ಜನರ ಭಾವನೆಗೆ ಸ್ಪಂದಿಸಿ, ಈ ಜನಪರ ನಿರ್ಧಾರ ಕೈಗೊಂಡ ಕೇಂದ್ರ ಸರ್ಕಾರಕ್ಕೆ ಅಭಿನಂದನೆ' ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ. 'ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಇದು ದಿಟ್ಟ ಹೆಜ್ಜೆಯಾಗಿದೆ. ಇಂತಹ ದೇಶೀಯ ಭಾಷೆಗಳ ಪರ ನಿರ್ಧಾರ ಮಾಡಿರುವ ಮೋದಿ ಅವರ ನೇತೃತ್ವದ ಸರ್ಕಾರಕ್ಕೆ ಕನ್ನಡಿಗರ ಪರವಾಗಿ ಅಭಿನಂದನೆಗಳು' ಎಂದರು.

ಎಸ್.ಎಸ್. ಮೀನಾಕ್ಷಿಸುಂದರಂ ಮೆಚ್ಚುಗೆ

'ಅಧಿಕಾರಿಗಳಿಗೆ ಸ್ವಾತಂತ್ರ್ಯ ನೀಡಿದ್ದ ದೇವೇಗೌಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಹಾಗೂ ಪ್ರಧಾನ ಮಂತ್ರಿಯಾಗಿದ್ದಾಗ ಎಚ್.ಡಿ. ದೇವೇಗೌಡ ಅವರು ಅಧಿಕಾರಿಗಳಿಗೆ ಪೂರ್ಣ ಸ್ವಾತಂತ್ರ್ಯ ನೀಡಿದ್ದರು. ಇದರಿಂದಾಗಿ ಕಾವೇರಿ ಜಲ ವಿವಾದ ಸೇರಿ ವಿವಿಧ ಜಟಿಲ ಸಮಸ್ಯೆಗಳನ್ನೂ ಸುಲಭವಾಗಿ ನಿವಾರಿಸಿ, ಉತ್ತಮ ಆಡಳಿತ ನೀಡಲು ಅವರಿಗೆ ಸಾಧ್ಯವಾಯಿತು' ಎಂದು ಕೇಂದ್ರ ಸರ್ಕಾರದ ಮಾಜಿ ಕಾರ್ಯದರ್ಶಿ ಎಸ್.ಎಸ್. ಮೀನಾಕ್ಷಿಸುಂದರಂ ಮೆಚ್ಚುಗೆ ವ್ಯಕ್ತಪಡಿಸಿದರು.

ಪಾರದರ್ಶಕ ಮಾಧ್ಯಮ ಸಂಸ್ಥೆ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ರೋಸಿ ಡಿಸೋಜಾ ಅವರು ಕನ್ನಡಕ್ಕೆ ಅನುವಾದಿಸಿರುವ ಎಚ್.ಡಿ. ದೇವೇಗೌಡ ಅವರ ಬದುಕು ಮತ್ತು ದುಡಿಮೆ 'ನೇಗಿಲ ಗೆರೆಗಳು' ಕೃತಿ ಬಿಡುಗಡೆ ಮಾಡಿದರು. ಮೂಲ ಕೃತಿಯನ್ನು ಸುಗತ ಶ್ರೀನಿವಾಸರಾಜು ರಚಿಸಿದ್ದು, ಇಂಗ್ಲಿಷ್‌ನಲ್ಲಿದೆ.

'ದೇವೇಗೌಡರ ಜತೆಗೆ ಕೆಲಸ ಮಾಡಿದ್ದು ನನ್ನ ಅದೃಷ್ಟ. ಅವರು ಬಹಳ ಸ್ವಾತಂತ್ರ್ಯ ನೀಡಿ, ಚೆನ್ನಾಗಿ ಕೆಲಸ ಮಾಡಲು ಅವಕಾಶ ನೀಡಿದರು. ಕೆಲವರು ಹೇಗೆ ಮಾಡಬೇಕು ಎನ್ನುವುದನ್ನೂ ತಿಳಿಸಿ, ಮೇಲ್ವಿಚಾರಣೆ ಮಾಡುತ್ತಾರೆ. ಇದಕ್ಕೆ ದೇವೇಗೌಡ ಅವರು ಅಪವಾದ. ಆಳವಾದ ಜ್ಞಾನ, ದೊಡ್ಡತನ, ನಂಬಿಕೆ ಹಾಗೂ ಜನರೊಂದಿಗೆ ಬೆರೆಯುವಿಕೆ ಅವರ ವಿಶೇಷ ಗುಣ' ಎಂದರು. ಕೃತಿಯ ಮೂಲ ಲೇಖಕ ಸುಗತ ಶ್ರೀನಿವಾಸರಾಜು ಹಾಗೂ ಅನುವಾದಕಿ ರೋಸಿ ಡಿಸೋಜಾ ಕೃತಿಯ ಬಗ್ಗೆ ಮಾತನಾಡಿದ್ದು, ಎಚ್.ಡಿ. ದೇವೇಗೌಡ ಹಾಗೂ ಪತ್ನಿ ಚನ್ನಮ್ಮ ಪ್ರೇಕ್ಷಕರ ಸಾಲಿನಲ್ಲಿ ಕುಳಿತು ವೀಕ್ಷಿಸಿದರು

ಕಾರ್ಯಕ್ರಮದಲ್ಲಿ 'ನೇಗಿಲ ಗೆರೆಗಳು' ಕೃತಿಯ ಪ್ರಥಮ ಪ್ರತಿಯನ್ನು ಎಚ್‌.ಡಿ. ದೇವೇಗೌಡ ಅವರಿಗೆ ರೋಸಿ ಡಿಸೋಜಾ ನೀಡಿದರು. ಮಾಜಿ ಶಾಸಕ ರೋಷನ್ ಬೇಗ್, ಎಂ.ಆರ್. ಶ್ರೀನಿವಾಸಮೂರ್ತಿ, ಎಸ್‌.ಎಸ್. ಮೀನಾಕ್ಷಿಸುಂದರಂ, ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಸುಗತ ಶ್ರೀನಿವಾಸರಾಜು ಹಾಗೂ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಇದ್ದಾರೆ. –ಪ್ರಜಾವಾಣಿ ಚಿತ್ರ

ಸಿ.ಟಿ.ರವಿ ಆಸ್ಪತ್ರೆಗೆ ದಾಖಲು

ಚಿಕ್ಕಮಗಳೂರು: ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರಿಗೆ ಹೊಟ್ಟೆನೋವು ಕಾಣಿಸಿಕೊಂಡಿದ್ದು, ಆಶ್ರಯ ಆಸ್ಪತ್ರೆಗೆ ದಾಖಲಿಸಲಾಗಿದೆ ಅವರಿಗೆ ಕಿಡ್ನಿ ಸ್ಟೋನ್‌ನಿಂದಾಗಿ ನೋವು ಕಾಣಿಸಿಕೊಂಡಿದೆ ಎಂದು ಡಾ.ಡಿ.ಎಲ್. ವಿಜಯಕುಮಾರ್ ತಿಳಿಸಿದರು.

ಪ್ರಜಾವಾಣಿ @75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಿಸಿ

8147623791 080 45557204

readerservicecell@deccanherald.co.in

ಸಂಪರ್ಕಿಸಲು ಇಲ್ಲಿ ಸ್ಕ್ಯಾನ್ ಮಾಡಿ
https://forms.gle/gfccR25fCPYVkTR46

ನಗರದಲ್ಲಿ ಇಂದು

ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಭಕ್ತಿ ವಿನಯಾಂಜಲಿ, ಉಚಿತ ಆರೋಗ್ಯ ಮತ್ತು ರಕ್ತದಾನ ಶಿಬಿರ: ಆಯೋಜನೆ: ಸುಹಾಸ್ತಿ ಯುವ ಜೈನ್ ಮಿಲನ್, ಸ್ಥಳ: ಚಕ್ರೇಶ್ವರಿ ಮಹಿಳಾ ಸಮಾಜ, ರಾಕ್ ಗಾರ್ಡನ್, ಜಯನಗರ, ಬೆಳಿಗ್ಗೆ 9ರಿಂದ

'ಚೈತ್ರ ಸ್ವರ ಸೌರಭ': ಹಿಂದೂಸ್ತಾನಿ ಸಂಗೀತ: ವಿನೀತ್ ರಾಣಾಪೂರ್, ಮಕ್ತ ಪಾಟೀಲ್, ಪ್ರಣತಿ, ಸುಗಮ ಸಂಗೀತ: ಆದ್ಯಾ, ಶ್ರೇಯಾ ಶಿರ್ವಾಡ್ಕರ್, ಉಪಸ್ಥಿತಿ: ಉಮಾಮಹೇಶ್ವರ್ ಗುರೂಜಿ, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಆಯೋಜನೆ ಮತ್ತು ಸ್ಥಳ: ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆಯ ಶರಣ ಸಭಾಂಗಣ, ಎ.ಜಿ.ಬಿ ಲೇಔಟ್, ನೇವಿ ಬಡಾವಣೆ, ಬೆಳಿಗ್ಗೆ 10ರಿಂದ

ವಿಕಾಸ್ ನೇಗಿಲೋಣಿ ಅವರ 'ರಥಬೀದಿ ಎಕ್ಸ್‌ಪ್ರೆಸ್', ಡಾ. ಶಾಂತಲಾ ಅವರ 'ದೇವರಾಗಲು ಮೂರೇ ಗೇಣು' ಮತ್ತು ಯಶಸ್ವಿನಿ ಎಸ್.ಎನ್., ಅವರ 'ಚಿಣ್ಣರ ಗೋಲಿ ಆಟ' ಪುಸ್ತಕಗಳ ಬಿಡುಗಡೆ: ಜಗದೀಶ ಶರ್ಮ ಸಂಪ, ಹೃದಯ ಶಿವ, ಆಯೋಜನೆ: ಹರಿವು ಬುಕ್ಸ್, ಸ್ಥಳ: ಪುರವಂಕರ ಸುಚಿತ್ರ ಸಿನಿಮಾ ಮತ್ತು ಕಲ್ಚರಲ್ ಫೌಂಡೇಷನ್, ಬಿ.ವಿ. ಕಾರಂತ ರಸ್ತೆ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10.30

'ಜ್ಞಾನ ಭಂಡಾರ' ನಾಣ್ಯ–ನೋಟು ಹಾಗೂ ಸ್ಟ್ಯಾಂಪ್‌ಗಳ ಸಂಗ್ರಹ ಪ್ರದರ್ಶನ: ಅತಿಥಿಗಳು: ದೀಪಾ ಎನ್. ಆರ್., ವಿನೋದ ಪುರಾಣಿಕರ, ರೋಹಿಣಿ ಚಂಪಾ ಸಿ., ಶಕುಂತಲಾ ಲಕ್ಷ್ಮಣ್, ಉಪಸ್ಥಿತಿ: ಅನುಪಮ ಪಂಚಾಕ್ಷರಿ, ಆರ್. ಜಯದೇವ್, ಹಿರಿಯೂರು ರಾಘವೇಂದ್ರ, ರಾಜ್ ಮುತ್ತಯ್ಯ, ರಮೇಶ್ ಎನ್., ಶ್ರೀಕಂಠಮೂರ್ತಿ ಕೆ.ಆರ್., ಶ್ರೀದೇವಿ ಎನ್., ಆಯೋಜನೆ: ರಂಗ ಮಂಡಲ, ಸಿವಗಂಗ ಟ್ರಸ್ಟ್, ಸ್ಥಳ: ಸಿವಗಂಗ ರಂಗಮಂದಿರ, ಸರ್.ಎಂ.ವಿ. ಬಡಾವಣೆ, ಕೆಂಗೇರಿ ಉಪನಗರ, ಬೆಳಿಗ್ಗೆ 10.30ರಿಂದ

ಪ್ರತಿಭಾ ಪುರಸ್ಕಾರ ಸಮಾರಂಭ: ಉದ್ಘಾಟನೆ: ಸ್ವಾಮಿ ವೀರೇಶಾನಂದ ಸರಸ್ವತಿ, ಅಧ್ಯಕ್ಷತೆ: ಮಹೇಶ ಜೋಶಿ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಬೆಳಿಗ್ಗೆ11

ಅಕ್ಕೈ ಪದ್ಮಶಾಲಿ ಮತ್ತು ಮಾಳವಿಕ ಸಂಪಾದಿಸಿರುವ 'ಅಟೆಂಷನ್ ಪ್ಲೀಸ್' ಕೃತಿ ಬಿಡುಗಡೆ: ಅತಿಥಿಗಳು: ಕವಿತಾ ಲಂಕೇಶ್, ಅಕ್ಷತಾ ಪಾಂಡವಾಪುರ, ಕಾರ್ತಿಕ್ ಹೆಬ್ಬಾರ್, ಚಾಂದ್ ಪಾಷ, ಅಭಿದಾ ಬೇಗಂ, ಪೃಥ್ವಿ, ಆಯೋಜನೆ: ಒಂದೆಡೆ, ಸ್ಥಳ: ಆಶೀರ್ವಾದ ಉದ್ಯಾನ, ಸೇಂಟ್ ಮಾರ್ಕ್ಸ್ ರಸ್ತೆ, ಸಂಜೆ 4ರಿಂದ

'ಸಮರ್ಪಣಾ' ವಿಶೇಷ ಪ್ರವಚನ: ಎಚ್. ಬಾಲಸುಬ್ರಹ್ಮಣ್ಯನ್, ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಸಂಜೆ 4ರಿಂದ

ತಿಂಗಳ ಕಾರ್ಯಕ್ರಮ ಉದ್ಘಾಟನೆ, ಬರಗೂರರ ಪುಸ್ತಕ ಜನಾರ್ಪಣೆ: ಉದ್ಘಾಟನೆ: ಎಚ್.ಎನ್. ನಾಗಮೋಹನದಾಸ್, ಬರಗೂರು ರಾಮಚಂದ್ರಪ್ಪ ಅವರ 'ಮನುಷ್ಯ ಜಾತಿ ತಾನೊಂದೆ ವಲಂ' ಬಿಡುಗಡೆ: ಸಬಿತಾ ಬನ್ನಾಡಿ, ಅಧ್ಯಕ್ಷತೆ: ಕರೀಗೌಡ ಬೀಚನಹಳ್ಳಿ, ಆಯೋಜನೆ: ಬಂಡಾಯ ಸಾಹಿತ್ಯ ಸಂಘಟನೆ, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನದ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 4.30

ಭರತನಾಟ್ಯ ಪ್ರದರ್ಶನ: ನವ್ಯಾ ನಟರಾಜ್, ರೇವತಿ ಶ್ರೀನಿವಾಸರಾಘವನ್, ಆಯೋಜನೆ ಮತ್ತು ಸ್ಥಳ: ಎಂ.ಇ.ಎಸ್. ಕಲಾವೇದಿಯ ಸಭಾಂಗಣ, ಮಲ್ಲೇಶ್ವರ, ಸಂಜೆ 5ರಿಂದ

ಶಾಸ್ತ್ರೀಯ ಸಂಗೀತ ಕಾರ್ಯಕ್ರಮ: ವಿನಯ್ ಶರ್ವ, ಪಿಟೀಲು: ಆರ್. ಅಚ್ಯುತ್ ರಾವ್, ಮೃದಂಗ: ಆನೂರು ಅನಂತಕೃಷ್ಣ ಶರ್ಮಾ, ಮೋರ್ಚಿಂಗ: ಭರದ್ವಾಜ್ ಆರ್. ಆಯೋಜನೆ ಮತ್ತು ಸ್ಥಳ: ಶ್ರೀರಾಮ ಲಲಿತಾಕಲಾ ಮಂದಿರದ ಸಭಾಂಗಣ, ಬನಶಂಕರಿ 2ನೇ ಹಂತ, ಸಂಜೆ 5.30

'ನಮ್ಮೊಳಗೊಬ್ಬ ನಾಜೂಕಯ್ಯ' ನಾಟಕ ಪ್ರದರ್ಶನ: ರಚನೆ: ಟಿ.ಎನ್. ಸೀತಾರಾಮ್, ನಿರ್ದೇಶನ: ಆರ್. ನಾಗೇಶ್, ಮರುನಿರ್ದೇಶನ: ಟಿ.ಎನ್. ಸೀತಾರಾಮ್, ಆಯೋಜನೆ: ನಟರಂಗ, ಸ್ಥಳ: ರಂಗಶಂಕರ, ಸಂಜೆ 7.30

ರಾಮೋತ್ಸವ ವಿಶೇಷ

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಸಂಜನಾ ವಿ ಮತ್ತು ತಂಡ, ಸಂಗೀತ ಕಛೇರಿ: ಅಕ್ಕರೈ ಸಹೋದರಿಯರು, ವಿಜಯ್ ನಟೇಶನ್, ಗಿರಿಧರ್ ಉಡುಪ, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5

ಶ್ರೀರಾಮನವಮಿ ಸಂಗೀತೋತ್ಸವ: ರಾಮಾಂಜನೇಯ ಸಂಗೀತ ರೂಪಕ, ಗಾಯನ: ವಿವೇಕ್ ಸದಾಶಿವಮ್, ಕಥೆ ಹಾಗೂ ಚಿತ್ರಕಲೆ: ವಿನಯ್ ವಾರಣಾಸಿ, ಪಿಟೀಲು: ಬಿ.ಕೆ. ರಘು, ಮೃದಂಗ: ಅದಮ್ಯ ರಮಾನಂದ್, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ರಾಹುಲ್ ವೆಲ್ಲಾಳ್, ಪಿಟೀಲು: ವೈಭವ್ ರಮಣಿ, ಮೃದಂಗ: ಆನೂರು ವಿನೋದ್ ಶ್ಯಾಮ್, ಘಟ: ಶರತ್ ಕೌಶಿಕ್, 'ಮುದಿ ದೊರೆ ಮತ್ತು ಮೂವರು ಮಕ್ಕಳು' ನಾಟಕ ಪ್ರದರ್ಶನ: ರಚನೆ: ಎಚ್.ಎಸ್. ವೆಂಕಟೇಶಮೂರ್ತಿ, ನಿರ್ದೇಶನ: ಎನ್. ಮಂಗಳಾ, ಸಹಕಾರ: ಬಿ.ವಿ. ರಾಜಾರಾಮ್, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 4.15ರಿಂದ

ಭರತನಾಟ್ಯ ರಂಗಪ್ರವೇಶ: ದೀಪಾ ಮಂಜುನಾಥ್, ಮುಕ್ತಾ ಮಂಜುನಾಥ್, ಅತಿಥಿ: ಕೆ.ಎಸ್. ನಾಗಶ್ರೀ, ಶೋಭಾ ಧನಂಜಯ್ಯ, ವೈ.ಕೆ. ಸಂಧ್ಯಾ ಶರ್ಮಾ, ಸ್ಥಳ: ಜೆ.ಎಸ್.ಎಸ್ ಸಭಾಂಗಣ, ಜಯನಗರ, ಬೆಳಿಗ್ಗೆ 10ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಚಿಕ್ಕಪೇಟೆ ಕ್ಷೇತ್ರದಿಂದ ಆರ್‌.ವಿ.ದೇವರಾಜ್‌ಗೆ ಕಾಂಗ್ರೆಸ್ ಟಿಕೆಟ್

ಗಂಗಾಂಬಿಕೆ, ಶಾಝಿಯಾ ನಡೆ ನಿಗೂಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಪೇಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ನಿರೀಕ್ಷೆಯಲ್ಲಿ ನಾಮಪತ್ರ ಸಲ್ಲಿಸಿದ್ದ ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್ ಹಾಗೂ ಯುಸೂಫ್ ಷರೀಫ್ ಅಲಿಯಾಸ್ ಕೆಜಿಎಫ್ ಬಾಬು ಅವರ ಪತ್ನಿ ಶಾಝಿಯಾ ತರನ್ನುಮ್ ಅವರ ನಡೆ ಕುತೂಹಲ ಮೂಡಿಸಿದೆ.

ಚಿಕ್ಕಪೇಟೆ ಕ್ಷೇತ್ರಕ್ಕೆ ಆರ್.ವಿ.ದೇವರಾಜ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದ್ದು, ಟಿಕೆಟ್ ನಿರೀಕ್ಷೆಯಲ್ಲಿ ನಾಮಪತ್ರ ಸಲ್ಲಿಸಿದ್ದ ಇಬ್ಬರ ನಡೆಯೂ ನಿಗೂಢವಾಗಿದೆ.

ಇಬ್ಬರು ಪಕ್ಷೇತರ ಅಭ್ಯರ್ಥಿಗಳಾಗಿ ಉಳಿಯಲಿದ್ದಾರೆಯೇ ಅಥವಾ ಆರ್.ವಿ.ದೇವರಾಜ್ ಅವರಿಗೆ ಬೆಂಬಲ ಘೋಷಿಸಿ ನಾಮಪತ್ರ ವಾಪಸ್ ಪಡೆಯುತ್ತಾರೆಯೇ ಎಂಬ ಚರ್ಚೆ ಕ್ಷೇತ್ರದಲ್ಲಿ ಆರಂಭವಾಗಿದೆ.

> **ವರಿಷ್ಠರು ಇಬ್ಬರೊಂದಿಗೂ ಮಾತುಕತೆ ನಡೆಸಿ, ನಾಮಪತ್ರ ವಾಪಸ್ ತೆಗೆಸಲಿದ್ದಾರೆ. ಏಪ್ರಿಲ್ 18ರಂದು ಬೆಂಬಲಿಗರ ಜತೆಗೆ ತೆರಳಿ ನಾಮಪತ್ರ ಸಲ್ಲಿಸುತ್ತೇನೆ.**
> **ಆರ್.ವಿ.ದೇವರಾಜ್**, ಚಿಕ್ಕಪೇಟೆ ಕಾಂಗ್ರೆಸ್ ಅಭ್ಯರ್ಥಿ

ಗಂಗಾಂಬಿಕೆ ಮಲ್ಲಿಕಾರ್ಜುನ್, ಆರ್.ವಿ.ದೇವರಾಜ್, ಅವರ ಪುತ್ರ ಯುವರಾಜ್, ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ಹಾಗೂ ಕಾಂಗ್ರೆಸ್‌ನಿಂದ ಅಮಾನತುಗೊಂಡು, ಮತ್ತೆ ಪಕ್ಷಕ್ಕೆ ಮರಳಿರುವ ಕೆಜಿಎಫ್ ಬಾಬು ಅವರು ಟಿಕೆಟ್ ನಿರೀಕ್ಷೆಯಲ್ಲಿದ್ದರು. ಅದೇ ನಿರೀಕ್ಷೆಯಲ್ಲಿ ಬಾಬು ತಮ್ಮ ಪತ್ನಿಯಿಂದ ನಾಮಪತ್ರ ಸಲ್ಲಿಸಿದ್ದರು.

> **ಪಕ್ಷವು 'ನಾ ನಾಯಕಿ' ಕಾರ್ಯಕ್ರಮ ನಡೆಸಿತ್ತು. ಪಕ್ಷದಲ್ಲಿರುವ ನಾಯಕಿಯರನ್ನು ಗುರುತಿಸುವುದೇ ಆ ಕಾರ್ಯಕ್ರಮದ ಉದ್ದೇಶವಾಗಿತ್ತು. ಆದರೆ, ಪಕ್ಷವು ನನ್ನ ಸೇವೆಯನ್ನು ಗುರುತಿಸಲಿಲ್ಲ.**
> **ಗಂಗಾಂಬಿಕೆ,** ಮಾಜಿ ಮೇಯರ್

'ಭಾನುವಾರ ಸಭೆ ಕರೆಯಲಾಗಿದೆ. ನನಗೆ ಬೆಂಬಲ ಘೋಷಿಸಿದ್ದ ಪಕ್ಷದ ಮುಖಂಡರು ಹಾಗೂ ಬೆಂಬಲಿಗರು ಅಭಿಪ್ರಾಯ ಪಡೆದು ಅವರ ಹೇಳಿದಂತೆ ಮುಂದುವರಿಯುತ್ತೇನೆ' ಎಂದು ಗಂಗಾಂಬಿಕೆ ತಿಳಿಸಿದ್ದಾರೆ.

'ನಾನು ಬಿಬಿಎಂಪಿ ಮೇಯರ್ ಆಗಿದ್ದ ಅವಧಿಯಲ್ಲಿ ಚಿಕ್ಕಪೇಟೆ ಭಾಗದಲ್ಲಿ ಕೆಲಸ ಮಾಡಿದ್ದೆ. ಮುಂದಿನ ಚುನಾವಣೆಯಲ್ಲಿ ನೀವೇ ಸ್ಪರ್ಧಿಸಿದರೆ ಪಕ್ಷಾತೀತವಾಗಿ ಬೆಂಬಲ ನೀಡುತ್ತೇವೆ ಎಂದು ಕ್ಷೇತ್ರದ ಜನರು ಪ್ರೀತಿ, ಅಭಿಮಾನ ತೋರಿದ್ದರು. ವರಿಷ್ಠರು ನನ್ನ ಕೆಲಸಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಟಿಕೆಟ್ ದೊರೆಯುವ ವಿಶ್ವಾಸದಿಂದ ಏಪ್ರಿಲ್ 13ರಂದು ನಾಮಪತ್ರ ಸಲ್ಲಿಸಿದ್ದೆ' ಎಂದು ಹೇಳಿದರು. ಕೆಜಿಎಫ್ ಬಾಬು ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ಬೆಂಗಳೂರು ದಕ್ಷಿಣ: ಆರ್‌.ಕೆ.ರಮೇಶ್ ಕಾಂಗ್ರೆಸ್ ಅಭ್ಯರ್ಥಿ

ಬೆಂಗಳೂರು: ಕಾಂಗ್ರೆಸ್ ಮೂರನೇ ಪಟ್ಟಿಯಲ್ಲಿ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಆರ್.ಕೆ.ರಮೇಶ್ ಅವರ ಹೆಸರನ್ನು ಕಾಂಗ್ರೆಸ್ ಘೋಷಣೆ ಮಾಡಿದೆ.

2018ರ ಚುನಾವಣೆಯಲ್ಲಿ ಆರ್.ಕೆ.ರಮೇಶ್ ಸ್ಪರ್ಧಿಸಿ 1.22 ಲಕ್ಷ ಮತಗಳನ್ನು ಪಡೆದು ಎರಡನೇ ಸ್ಥಾನದಲ್ಲಿದ್ದರು. ಮತ್ತೊಮ್ಮೆ ಟಿಕೆಟ್ ಪಡೆಯುವ ನಿರೀಕ್ಷೆಯಲ್ಲಿದ್ದ ಅವರು, ಕ್ಷೇತ್ರದಲ್ಲಿ ತಯಾರಿ ನಡೆಸುತ್ತಿದ್ದರು. ಕಾಂಗ್ರೆಸ್ ಮುಖಂಡ ರಾಜಗೋಪಾಲರೆಡ್ಡಿ ಅವರು ಪ್ರಬಲ ಆಕಾಂಕ್ಷಿಯಾಗಿದ್ದರು. ಆರ್.ಕೆ.ರಮೇಶ್ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

BANGALORE SHOWROOMS
SHIVAJI NAGAR • J.P.NAGAR • GANDHI BAZAR • R.T.NAGAR • HSR LAYOUT • KANAKAPURA • UTTARAHALLI • MARATHAHALLI • RAMAMURTHY NAGAR HESARAGATTA • RAMNAGARA • NELAMANGALA • KENGERI • TUMKUR • RR NAGAR • YESHWANTHPUR • BANASHANKARI • MALLESHWARAM JAYANAGAR • YELACHENAHALLI • KG ROAD • RAJAJI NAGAR • VIJAYANAGAR • CHINTAMANI • YELHANKA • KORAMANGALA • DEVANAHALLI
Available @ Company Showrooms & All Leading Textile Shops | Shop Online @ www.ramrajcotton.in

ಆಪ್ ಅಭ್ಯರ್ಥಿ ಒಟ್ಟು ಆಸ್ತಿ ₹ 2.20 ಕೋಟಿ

ಅಕ್ರಮವಾಗಿ ಗುಂಪು ಸೇರಿ ಪ್ರತಿಭಟನೆ: 6 ಎಫ್‌ಐಆರ್ • ಬೆಳ್ಳಂದೂರು ಠಾಣೆಯಲ್ಲಿ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಮ್ ಆದ್ಮಿ ಪಾರ್ಟಿ ರಾಜ್ಯ ಘಟಕದ ಕಾರ್ಯಾಧ್ಯಕ್ಷರೂ ಆಗಿರುವ ಮೋಹನ್ ದಾಸರಿ ಅವರು ಸಿ.ವಿ. ರಾಮನ್ ನಗರ ವಿಧಾನಸಭಾ ಕ್ಷೇತ್ರದಲ್ಲಿ ಶನಿವಾರ ನಾಮಪತ್ರ ಸಲ್ಲಿಸಿದ್ದಾರೆ.

'ಅಕ್ರಮವಾಗಿ ಗುಂಪು ಸೇರಿ ಪ್ರತಿಭಟನೆ ನಡೆಸಿ ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಪಡಿಸಿ, ಶಾಂತಿಗೆ ಧಕ್ಕೆ ತಂದ ಆರೋಪದಡಿ 6 ಎಫ್ಐಆರ್ (ಎಸ್.ಜೆ.ಪಾರ್ಕ್, ಕಬ್ಬನ್ ಪಾರ್ಕ್, ಹೈಗ್ರೌಂಡ್ಸ್, ಬಸವೇಶ್ವನಗರ, ಬೆಳ್ಳಂದೂರು ಠಾಣೆ) ದಾಖಲಾಗಿವೆ. ಪ್ರತಿಭಟನೆಯಲ್ಲಿ ಮಕ್ಕಳನ್ನು ಬಳಸಿಕೊಂಡಿದ್ದ ಆರೋಪದಡಿ ಬೆಳ್ಳಂದೂರು ಠಾಣೆಯಲ್ಲಿ ಪ್ರಕರಣವಿದೆ' ಎಂದು ಮೋಹನ್ ಪ್ರಮಾಣಪತ್ರದಲ್ಲಿ ಘೋಷಿಸಿದ್ದಾರೆ.

ಬಿಇ ಹಾಗೂ ಎಂ.ಎಸ್ ಪದವೀಧರರಾಗಿರುವ ಮೋಹನ್, ಸೈಕ್ರೋನಸ್ ಟೆಕ್ನಾಲಜಿ ಕಂಪನಿಯಲ್ಲಿ ಸಹ ತಾಂತ್ರಿಕ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾರೆ. 2021–22ರಲ್ಲಿ ₹ 37.47 ಲಕ್ಷ ವಾರ್ಷಿಕ ಆದಾಯ ಘೋಷಿಸಿರುವ ಇವರ ಒಟ್ಟು ಆಸ್ತಿ ₹ 1.54 ಕೋಟಿ (₹ ₹12.54 ಲಕ್ಷ ಚರಾಸ್ತಿ, ₹ 90 ಲಕ್ಷ ಸ್ಥಿರಾಸ್ತಿ). '₹74 ಸಾವಿರ ಮೌಲ್ಯದ ಬಜಾಜ್ ಅವೆಂಜರ್ ಬೈಕ್, ₹ 10.30 ಲಕ್ಷ ಮೌಲ್ಯದ ಮಹೇಂದ್ರಾ ಟಿಯುವಿ 300 ಕಾರಿದೆ. 83.80 ಲಕ್ಷ ಸಾಲದ ಹೊಣೆಯಿದೆ' ಎಂದೂ ಮೋಹನ್ ಘೋಷಿಸಿಕೊಂಡಿದ್ದಾರೆ.

'ಪತ್ನಿ ಎ.ಸಿ. ವಾಣಿಶ್ರೀ ಬಾಷ್ ಕಂಪನಿಯಲ್ಲಿ ಹಿರಿಯ ಆರ್ಕಿಟೆಕ್ಟ್ ಆಗಿದ್ದಾರೆ. 2021–22ರಲ್ಲಿ ₹ 21.68 ಲಕ್ಷ ವಾರ್ಷಿಕ ಆದಾಯ ಘೋಷಿಸಿರುವ ಇವರ ಒಟ್ಟು ಆಸ್ತಿ ₹60.60 ಲಕ್ಷ' ಎಂಬ ಮಾಹಿತಿ ಪ್ರಮಾಣಪತ್ರದಲ್ಲಿದೆ.

30 ನಾಮಪತ್ರ ಸಲ್ಲಿಕೆ

ಬೆಂಗಳೂರು: ನಗರದಲ್ಲಿನ ಒಟ್ಟು 28 ಕ್ಷೇತ್ರಗಳಲ್ಲಿ ಶನಿವಾರ ಒಟ್ಟು 30 ನಾಮಪತ್ರಗಳನ್ನು ಸಲ್ಲಿಸಲಾಗಿದೆ.

ಬಿಜೆಪಿಯಿಂದ ಒಬ್ಬರು, ಕಾಂಗ್ರೆಸ್‌ನಿಂದ ಒಬ್ಬರು, ಆಮ್ ಆದ್ಮಿ ಪಕ್ಷದಿಂದ ಇಬ್ಬರು ನಾಮಪತ್ರ ಸಲ್ಲಿಸಿದ್ದಾರೆ.

ಬ್ಯಾಟರಾಯನಪುರ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಅಭ್ಯರ್ಥಿ ಎಚ್.ಸಿ. ತಮ್ಮೇಶಗೌಡ ಅವರು ಶನಿವಾರ ನಾಮಪತ್ರ ಸಲ್ಲಿಸಿದರು. ಈ ಕ್ಷೇತ್ರದಿಂದ ಸ್ಪರ್ಧಿಸಲು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಆರ್. ಪ್ರತಾಪ್ ಮತ್ತು ಸಾರ್ವಜನಿಕ ಆದರ್ಶ ಸೇನಾದಿಂದ ಬ್ರಿಗೇಡಿಯರ್ ರವಿ ಮುನಿಸ್ವಾಮಿ ಅವರು ಸಹ ನಾಮಪತ್ರ ಸಲ್ಲಿಸಿದ್ದಾರೆ.

ಕ್ಷೇತ್ರ	ಬ್ಯಾಟರಾಯನಪುರ
ಅಭ್ಯರ್ಥಿ	ಎಚ್‌.ಸಿ. ತಮ್ಮೇಶ್‌ಗೌಡ(42)
ಪಕ್ಷ	ಬಿಜೆಪಿ
ಒಟ್ಟು ಆಸ್ತಿ	₹ 4.62 ಕೋಟಿ
ಶಿಕ್ಷಣ	ಬಿ.ಎ, ಎಲ್‌ಎಲ್‌ಬಿ
ಅಪರಾಧ ಪ್ರಕರಣ	ಯಾವುದೂ ಇಲ್ಲ
ಚರಾಸ್ತಿ	₹44.03 ಲಕ್ಷ
ಸ್ಥಿರಾಸ್ತಿ	₹1.87 ಕೋಟಿ
ಸಾಲ	₹57,69,563.18
ಪತ್ನಿಯ ಹೆಸರಿನಲ್ಲಿರುವ ಆಸ್ತಿ	₹2.28 ಕೋಟಿ
ಮಕ್ಕಳ ಹೆಸರಿನಲ್ಲಿರುವ ಆಸ್ತಿ	₹2.70 ಲಕ್ಷ



ಕ್ಷೇತ್ರ	ಯಶವಂತಪುರ
ಅಭ್ಯರ್ಥಿ	ಟಿ.ಎನ್.ಜವರಾಯಿಗೌಡ (64)
ಪಕ್ಷ	ಜೆಡಿಎಸ್
ಒಟ್ಟು ಆಸ್ತಿ	₹205 ಕೋಟಿ
ಹಿಂದೆ ಘೋಷಿಸಿದ್ದ ಒಟ್ಟು ಆಸ್ತಿ	₹278 ಕೋಟಿ
ಅಪರಾಧ ಪ್ರಕರಣ	3 ಕ್ರಿಮಿನಲ್ ಪ್ರಕರಣ
ಶಿಕ್ಷಣ	ಮೆಟ್ರಿಕ್ಯುಲೇಷನ್
ಚರಾಸ್ತಿ	₹15.56 ಕೋಟಿ (9.31 ಕೆಜಿ ಚಿನ್ನ)
ಸ್ಥಿರಾಸ್ತಿ	₹56.71 ಕೋಟಿ
ಸಾಲ	₹71.48 ಕೋಟಿ
ವಾಹನಗಳು	ಒಂದು ಬೆಂಜ್ ಕಾರು ಸೇರಿ 3 ಕಾರು
ಪತ್ನಿ ಹೆಸರಿನಲ್ಲಿರುವ ಆಸ್ತಿ	₹98.72 ಕೋಟಿ
ಸಾಲ	₹31.81 ಲಕ್ಷ



ಕ್ಷೇತ್ರ	ಶಿವಾಜಿನಗರ
ಅಭ್ಯರ್ಥಿ	ಪ್ರಕಾಶ್ ನೆಡುಂಗಡಿ (62)
ಪಕ್ಷ	ಆಮ್ ಆದ್ಮಿ ಪಾರ್ಟಿ
ಒಟ್ಟು ಆಸ್ತಿ	₹ 80.30 ಕೋಟಿ
ಶಿಕ್ಷಣ	ಸ್ನಾತಕ ಪದವಿ
ಚರಾಸ್ತಿ	₹15.81 ಕೋಟಿ
ಸ್ಥಿರಾಸ್ತಿ	₹28.90 ಕೋಟಿ
ಸಾಲ	₹1.22 ಕೋಟಿ
ವಾಹನಗಳು	₹ 10 ಲಕ್ಷ ಮೌಲ್ಯದ ಹೊಂಡಾ ಸಿಟಿ ಕಾರು
ಪತ್ನಿ ಇಂದಿರಾ ಮೆನನ್ ಹೆಸರಿನಲ್ಲಿರುವ ಆಸ್ತಿ	₹35.59 ಕೋಟಿ

ಪ್ರಚೋದನಕಾರಿ ಹೇಳಿಕೆ ಪ್ರಕರಣ • ದೇಶ ತೊರೆಯಲು 15 ದಿನ ಗಡುವು

ನಟ ಚೇತನ್ 'ಒಸಿಐ' ವೀಸಾ ರದ್ದು

ಪ್ರಜಾವಾಣಿ ವಾರ್ತೆ

ಚೇತನ್

ಬೆಂಗಳೂರು: ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿದ್ದ ಪ್ರಕರಣದಲ್ಲಿ ನಟ ಚೇತನ್ ಕುಮಾರ್ ಅವರ ಭಾರತದ ಸಾಗರೋತ್ತರ ನಾಗರಿಕ (ಒಸಿಐ) ವೀಸಾವನ್ನು ಕೇಂದ್ರ ಗೃಹ ಸಚಿವಾಲಯ ರದ್ದುಪಡಿಸಿದ್ದು, ಕಾರ್ಡ್ ಹಿಂತಿರುಗಿಸಲು 15 ದಿನಗಳ ಗಡುವು ನೀಡಲಾಗಿದೆ.

ಮಾರ್ಚ್ 28ರಂದು ಹೊರಡಿಸಿರುವ ಆದೇಶದ ಸಮೇತ ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ (ಎಫ್‌ಆರ್‌ಆರ್‌ಒ) ಅಧಿಕಾರಿಗಳು, ಚೇತನ್ ಅವರಿಗೆ ಶುಕ್ರವಾರ (ಏಪ್ರಿಲ್ 14) ಪತ್ರ ಕಳುಹಿಸಿದ್ದಾರೆ.

> **ನನ್ನ ವಿರುದ್ಧದ ಯಾವ ಪ್ರಕರಣವೂ ಸಾಬೀತಾಗಿಲ್ಲ. ವೀಸಾ ರದ್ದುಪಡಿಸಿರುವುದು ನ್ಯಾಯಸಮ್ಮತವಲ್ಲ. ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡುತ್ತೇನೆ**
> **ಚೇತನ್ ಕುಮಾರ್,** ನಟ

'ಹಿಜಾಬ್ ವಿವಾದದ ಬಗ್ಗೆ ಹೈಕೋರ್ಟ್ ತೀರ್ಪು ನೀಡಿತ್ತು. ಅದೇ ವಿಚಾರವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಪ್ರಕಟಿಸಿದ್ದ ಚೇತನ್, '21ನೇ ಶತಮಾನದಲ್ಲೂ ನ್ಯಾಯಮೂರ್ತಿ ಅವರ ಈ ಸ್ತ್ರೀ ದ್ವೇಷ ನಾಚಿಕೆಗೇಡಿನ ಸಂಗತಿ. ಇಂಥ ಅಸಹ್ಯಕರ ಹೇಳಿಕೆ ನೀಡಿದ್ದ ಅದೇ ನ್ಯಾಯಮೂರ್ತಿ, ಸರ್ಕಾರಿ ಶಾಲೆಗಳಲ್ಲಿ ಹಿಜಾಬ್ ಬೇಕೇ ಅಥವಾ ಬೇಡವೇ ಎಂಬುದರ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ. ಅವರಿಗೆ ಈ ಕುರಿತು ಬೇಕಾದ ಸ್ಪಷ್ಟತೆಯಿದೆಯೇ?'ಎಂಬುದಾಗಿ ಕೇಳಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಜಾತಿ, ಧರ್ಮ ಹಾಗೂ ಎರಡು ಗುಂಪಿನ ನಡುವೆ ದ್ವೇಷ ಉಂಟು ಮಾಡುವ ಹೇಳಿಕೆ ಪ್ರಚುರಪಡಿಸಿದ (ಐಪಿಸಿ 505 (2) ಹಾಗೂ ಅಪರಾಧ ಕೃತ್ಯ ಕೈಗೊಳ್ಳಲು ಪ್ರಚೋದನೆ ನೀಡಿದ (ಐಪಿಸಿ 504) ಆರೋಪದಡಿ ಶೇಷಾದ್ರಿಪುರ ಠಾಣೆ ಪೊಲೀಸರು ಅವರನ್ನು ಬಂಧಿಸಿದ್ದರು. ನಂತರ, ಆರೋಪಿಗೆ ಜಾಮೀನು ಸಿಕ್ಕಿತ್ತು.

ಶೋಕಾಸ್ ನೀಡಿದ್ದ ಎಫ್‌ಆರ್‌ಆರ್‌ಒ: 'ಚೇತನ್ ಅವರಿಗೆ ಶೋಕಾಸ್ ನೀಡಿದ್ದ ಎಫ್‌ಆರ್‌ಆರ್‌ಒ ಅಧಿಕಾರಿಗಳು, 'ನ್ಯಾಯಮೂರ್ತಿ ಬಗ್ಗೆ ಪ್ರಚೋದನಕಾರಿ ಹೇಳಿಕೆ ನೀಡಿ ದೇಶ ವಿರೋಧಿ ವರ್ತನೆ ತೋರಿದ್ದೀರಾ. ನಿಮ್ಮ ಒಸಿಐ ವೀಸಾವನ್ನು ರದ್ದು ಮಾಡಲು ಕೇಂದ್ರ ಸರ್ಕಾರಕ್ಕೆ ಏಕೆ ಪ್ರಸ್ತಾವ ಸಲ್ಲಿಸಬಾರದು' ಎಂದು ಕೇಳಿತ್ತು. 'ನಾನು ಸಾಮಾಜಿಕ ಕೆಲಸ ಹಾಗೂ ಸಿನಿಮಾ ನಿರ್ಮಾಣದಲ್ಲಿ ತೊಡಗಿದ್ದೇನೆ. ಭಾರತೀಯ ಯುವತಿಯನ್ನು ಮದುವೆ ಸಹ ಆಗಿದ್ದೇನೆ' ಎಂಬುದಾಗಿ ಚೇತನ್ ಉತ್ತರಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಐಪಿಎಲ್: ವಿಪರೀತ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಟಿ–20 ಕ್ರಿಕೆಟ್ ಪಂದ್ಯದಿಂದಾಗಿ ಶನಿವಾರ ವಿಪರೀತ ಸಂಚಾರ ದಟ್ಟಣೆ ಉಂಟಾಯಿತು.

ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ನಡುವೆ ಪಂದ್ಯ ನಡೆಯಿತು. ಪಂದ್ಯ ವೀಕ್ಷಿಸಲು ಹೆಚ್ಚಿನ ಸಂಖ್ಯೆಯಲ್ಲಿ ಜನರು ಕ್ರೀಡಾಂಗಣದತ್ತ ಬಂದಿದ್ದರು.

ಮೆಟ್ರೊ, ಬಸ್ ಹಾಗೂ ಸ್ವಂತ ವಾಹನಗಳ ಮೂಲಕ ಜನರು ಕ್ರೀಡಾಂಗಣಕ್ಕೆ ಬಂದಿದ್ದರು. ಕ್ರೀಡಾಂಗಣದೊಳಗೆ ಹೋಗುವಾಗ ಜನರ ಸಂಚಾರಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ಸಾರ್ವಜನಿಕರ ವಾಹನಗಳನ್ನು ತಡೆದು ನಿಲ್ಲಿಸಲಾಗಿತ್ತು.

ಕ್ವೀನ್ಸ್ ರಸ್ತೆ, ಕಬ್ಬನ್ ರಸ್ತೆ, ಎಂ.ಜಿ. ರಸ್ತೆ, ರಾಜಭವನ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಸೇಂಟ್ ಮಾರ್ಕ್ಸ್ ರಸ್ತೆ, ಮ್ಯೂಸಿಯಂ ರಸ್ತೆ, ಕಸ್ತೂರಬಾ ರಸ್ತೆ, ವಿಧಾನಸೌಧ–ಹೈಕೋರ್ಟ್ ಎದುರಿನ ರಸ್ತೆ, ಟ್ರಿನಿಟಿ ರಸ್ತೆ, ಲ್ಯಾವೆಲ್ಲೆ ರಸ್ತೆ, ವಿಠ್ಠಲ್ ಮಲ್ಯ ರಸ್ತೆ, ನೃಪತುಂಗ ರಸ್ತೆ ಹಾಗೂ ಸುತ್ತಮುತ್ತ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಈ ರಸ್ತೆಯಲ್ಲಿ ಶನಿವಾರ ಮಧ್ಯಾಹ್ನ 12 ಗಂಟೆಯಿಂದಲೇ ದಟ್ಟಣೆ ಶುರುವಾಗಿತ್ತು. ವಾಹನಗಳು ನಿಧಾನಗತಿಯಲ್ಲಿ ಸಾಗಿದವು.

ಪಂದ್ಯ ಆರಂಭಕ್ಕೂ ಮುನ್ನ ಕ್ರೀಡಾಂಗಣ ಸುತ್ತಮುತ್ತ ಜನರು ಗುಂಪು ಗುಂಪಾಗಿ ಓಡಾಡಿದರು. ಈ ವೇಳೆ ವಾಹನಗಳು ನಿಂತಲೇ ನಿಲ್ಲಬೇಕಾಯಿತು. ರಾತ್ರಿಯೂ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು. ದಟ್ಟಣೆ ನಿಯಂತ್ರಿಸಲು ಪೊಲೀಸರು ಪರದಾಡಿದರು.

ಕ್ರೀಡಾಂಗಣ ಬಳಿ ದಟ್ಟಣೆ ಉಂಟಾಗುವ ಮುನ್ಸೂಚನೆ ಅರಿತಿದ್ದ ಪೊಲೀಸರು, ವಾಹನ ನಿಲುಗಡೆ ನಿರ್ಬಂಧಿಸಿದ್ದರು. ಅಷ್ಟಾದರೂ ಹಲವರು ರಸ್ತೆಯಲ್ಲಿ ವಾಹನ ನಿಲ್ಲಿಸಿ, ಕ್ರೀಡಾಂಗಣದೊಳಗೆ ಹೋಗಿದ್ದರು. ಇಂಥ ವಾಹನಗಳಿಂದಲೂ ದಟ್ಟಣೆ ಉಂಟಾಯಿತು.

ಮೆಟ್ರೊದಲ್ಲಿ ಜನಸಂದಣಿ: ಪಂದ್ಯ ವೀಕ್ಷಿಸುವುದಕ್ಕಾಗಿ ಹೆಚ್ಚಿನ ಸಂಖ್ಯೆಯ ಜನ, ಶನಿವಾರ ಮೆಟ್ರೊದಲ್ಲಿ ಕಬ್ಬನ್ ಪಾರ್ಕ್ ಹಾಗೂ ವಿಧಾನಸೌಧ ನಿಲ್ದಾಣಕ್ಕೆ ಬಂದಿಳಿದರು. ಅಲ್ಲಿಂದಲೇ ನಡೆದುಕೊಂಡು ಕ್ರೀಡಾಂಗಣಕ್ಕೆ ತೆರಳಿದರು. ರಾತ್ರಿ ಸಹ ತಮ್ಮ ಸ್ಥಳಗಳಿಗೆ ಮೆಟ್ರೊದಲ್ಲಿ ತೆರಳಿದರು. ಇದರಿಂದಾಗಿ ನಿಲ್ದಾಣಗಳಲ್ಲಿ ಜನಸಂದಣಿ ಹೆಚ್ಚಿತ್ತು.

ಸವದಿ ಸ್ಥಿತಿ ಏನಾಗಲಿದೆ ಕಾದು ನೋಡಿ: ಕಟೀಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟಿಕೆಟ್ ಕೈತಪ್ಪಿದವರು ಆಕ್ರೋಶ ವ್ಯಕ್ತಪಡಿಸುವುದು ಸಹಜ. ಸಿಟ್ಟಿನಲ್ಲಿ ಪಕ್ಷದಿಂದ ಹೊರ ನಡೆದಿರುವ ಲಕ್ಷ್ಮಣ ಸವದಿ ಸ್ಥಿತಿ ಏನಾಗಲಿದೆ ಕಾದು ನೋಡಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಟಿಕೆಟ್ ಕೈತಪ್ಪಿದ್ದರಿಂದ ಸಿಟ್ಟಾಗಿರುವವರನ್ನು ಪಕ್ಷದ ಜತೆ ಜೋಡಿಸುವ ಶಕ್ತಿ ನಮಗೆ ಇದೆ' ಎಂದರು.

ಅಭ್ಯರ್ಥಿಗಳಿಗಾಗಿ ಬೇರೆ ಪಕ್ಷದಿಂದ ಬರುವವರನ್ನು ಕಾಯಬೇಕಾದ ಚಿಂತಾಜನಕ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಇದೆ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮತ್ತು ಮಲ್ಲಿಕಾರ್ಜುನ ಖರ್ಗೆ ತಂಡಗಳ ಮಧ್ಯೆ ಟಿಕೆಟ್ ಹಂಚಬೇಕಾದ ಬಿಕ್ಕಟ್ಟಿನಲ್ಲಿ ಆ ಪಕ್ಷ ಸಿಕ್ಕಿಕೊಂಡಿದೆ. ಸಿದ್ದರಾಮಯ್ಯ ಮತ್ತು ಶಿವಕುಮಾರ್ ಮಧ್ಯದ ಆಂತರಿಕ ಜಗಳ ಬೀದಿಗೆ ಬರಲಿದೆ ಎಂದು ಹೇಳಿದರು.

ಬಿಜೆಪಿಯು ಸಿದ್ದರಾಮಯ್ಯ ಮತ್ತು ಶಿವಕುಮಾರ್ ವಿರುದ್ಧ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಇಬ್ಬರಿಗೂ ಸೋಲುವ ಆತಂಕ ಎದುರಾಗಿದೆ ಎಂದರು. ವಿಸ್ತೃತವಾದ ಪರಿಶೀಲನೆ ಬಳಿಕ 212 ಕ್ಷೇತ್ರಗಳಿಗೆ ಬಿಜೆಪಿ ಅಭ್ಯರ್ಥಿಗಳನ್ನು ಪ್ರಕಟಿಸಿದೆ.

ಹಿಂದುಳಿದ ವರ್ಗಗಳ 34, ಪರಿಶಿಷ್ಟ ಜಾತಿಯ 34, ಪರಿಶಿಷ್ಟ ಪಂಗಡಗಳ 17 ಮಂದಿ ಹಾಗೂ ಸಾಮಾನ್ಯ ವರ್ಗದ 126 ಮಂದಿಗೆ ಟಿಕೆಟ್ ನೀಡಲಾಗಿದೆ ಎಂದು ಹೇಳಿದರು. ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಭಗವಂತ ಖೂಬಾ, ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಪರಿಶಿಷ್ಟ ಜಾತಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಇದ್ದರು.

ಪಕ್ಷೇತರನಾಗಿ ಸ್ಪರ್ಧೆ: ಅರುಣ್ ಕುಮಾರ್ ಪುತ್ತಿಲ

ಪುತ್ತೂರು: 'ಮೂರು ದಶಕಗಳಿಂದ ಹಿಂದುತ್ವಕ್ಕಾಗಿ ದುಡಿದಿದ್ದು 15 ವರ್ಷಗಳಿಂದ ಬಿಜೆಪಿಯ ಕಾರ್ಯಕರ್ತನ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದ್ದೇನೆ. ಚುನಾವಣೆಯಲ್ಲಿ ನನಗೆ ಅವಕಾಶ ನೀಡುವಂತೆ ಕಾರ್ಯಕರ್ತರು ಆಗ್ರಹಿಸಿದ್ದರು. ಹೊರಗಿನ ಅಭ್ಯರ್ಥಿಯನ್ನು ಆಯ್ಕೆ ಮಾಡಿರುವುದರಿಂದ ನೋವಾಗಿದೆ. ಆದ್ದರಿಂದ ಪಕ್ಷೇತರನಾಗಿ ಸ್ಪರ್ಧಿಸಿ ಗೆದ್ದ ಬಳಿಕ ಬಿಜೆಪಿಗೆ ಶಕ್ತಿ ತುಂಬುವೆ' ಎಂದು ಪುತ್ತೂರಿನಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಅರುಣ್ ಕುಮಾರ್ ಪುತ್ತಿಲ ಹೇಳಿದರು.

ದಾಸರಹಳ್ಳಿ: ಆಕಾಂಕ್ಷಿಗಳ ಅಸಮಾಧಾನ

ಪೀಣ್ಯ ದಾಸರಹಳ್ಳಿ: ಕಾಂಗ್ರೆಸ್ ಪಕ್ಷದಿಂದ ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಎಂಟು ಜನ ಆಕಾಂಕ್ಷಿಗಳಲ್ಲಿ ಶನಿವಾರ ಜಿ. ಧನಂಜಯ ಅವರಿಗೆ ಟಿಕೆಟ್ ಘೋಷಣೆಯಾಗಿದೆ.

ಈ ಘೋಷಣೆ ಬೆನ್ನಲ್ಲೇ ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಹಿಂದೆ ಧನಂಜಯ ಅವರನ್ನು ಹೊರತುಪಡಿಸಿ ಉಳಿದ ಏಳು ಆಕಾಂಕ್ಷಿಗಳಲ್ಲಿ ಯಾರಿಗಾದರೂ ಟಿಕೆಟ್ ನೀಡಿದರೂ ಚುನಾವಣೆಯಲ್ಲಿ ಒಟ್ಟಾಗಿ ಕೆಲಸ ಮಾಡಿ ಗೆಲ್ಲಿಸುತ್ತೇವೆ ಎಂದು ಹೇಳಿದ್ದರು. ಆದರೆ, ಶನಿವಾರ ಏಳು ಜನ ಆಕಾಂಕ್ಷಿಗಳಲ್ಲಿ ಕೆಲವರು ಬಂಡಾಯವೆದ್ದಿದ್ದಾರೆ.

ಪ್ರಬಲ ಆಕಾಂಕ್ಷಿಗಳಲ್ಲಿ ಒಬ್ಬರಾಗಿದ್ದ ಕೆ. ನಾಗಭೂಷಣ್ ಮಾತನಾಡಿ, 'ಕಾಂಗ್ರೆಸ್ ಪಕ್ಷದಿಂದ ಜಿ. ಧನಂಜಯ ಅವರಿಗೆ ಟಿಕೆಟ್ ನೀಡಿರುವುದಕ್ಕೆ ಸಮಾಧಾನವಿಲ್ಲ. ಆದ್ದರಿಂದ, ಆಕಾಂಕ್ಷಿಗಳಾಗಿದ್ದ ಕೆಲವರು ಸೇರಿ ಒಬ್ಬರನ್ನು ಬಂಡಾಯವಾಗಿ ಚುನಾವಣೆಗೆ ಸ್ಪರ್ಧಿಸಲು ತೀರ್ಮಾನಿಸುತ್ತೇವೆ' ಎಂದು ತಿಳಿಸಿದರು.

ಮತ್ತೊಬ್ಬ ಆಕಾಂಕ್ಷಿ ಅಭ್ಯರ್ಥಿ ಡಾ. ನಾಗಲಕ್ಷ್ಮಿ ಚೌದರಿ ಮಾತನಾಡಿ, 'ಬಿಜೆಪಿಯಿಂದ ಬಂದಿರುವವರಿಗೆ ಟಿಕೆಟ್ ನೀಡಿರುವುದು ಅಸಮಾಧಾನವಿದೆ. ನನ್ನ ನಾಯಕತ್ವ ನೋಡಿದ ಕಾರ್ಯಕರ್ತರು, ಮುಖಂಡರು ನನ್ನ ಜೊತೆಯೇ ಇದ್ದಾರೆ. ಅವರೆಲ್ಲ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತೀರಾ ಎಂದು ಪ್ರಶ್ನಿಸುತ್ತಿದ್ದಾರೆ. ಆದರೆ, ನಮ್ಮ ನಾಯಕರಾದ ಸಿದ್ದರಾಮಯ್ಯ ಸೇರಿದಂತೆ ಉಳಿದ ನಾಯಕರ ಜತೆ ಮಾತನಾಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ' ಎಂದರು.

ಸುಧಾ ಓದಿರಿ



ಸಂಗೀತೋತ್ಸವ

ನಗರದ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಆಯೋಜಿಸಿರುವ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಶನಿವಾರ ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್ ಅವರ ಸಂಗೀತ ಕಛೇರಿಯನ್ನು ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಮತ್ತು ಬಿಜೆಪಿ ಮುಖಂಡ ಎಸ್.ಎಂ. ಕೃಷ್ಣ ಆಸ್ವಾದಿಸಿದರು –ಪ್ರಜಾವಾಣಿ ಚಿತ್ರ/ರಂಜು ಪಿ

ಕೊಮ್ಮಘಟ್ಟ: ಬೋನಿಗೆ ಬಿದ್ದ ಚಿರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಹೋಬಳಿ ಸೂಲಿಕೆರೆ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಕೊಮ್ಮಘಟ್ಟ ಬಳಿ ಇರಿಸಿದ್ದ ಬೋನಿಗೆ ಶನಿವಾರ ಬೆಳಿಗ್ಗೆ ಚಿರತೆ ಬಿದ್ದಿದೆ.

ಕೊಮ್ಮಘಟ್ಟ ಸುತ್ತಮುತ್ತ ಐದಾರು ಚಿರತೆಗಳು ಓಡಾಡುತ್ತಿವೆ. ಇದರಿಂದ ಜನರು ಭಯಭೀತರಾಗಿದ್ದಾರೆ ಎಂದು ಬಾಪೂಜಿ ನರ್ಸರಿ ಫಾರಂ ಮಾಲೀಕ ಸೋಮಶೇಖರ್ ಅರಣ್ಯ ಇಲಾಖೆಗೆ ದೂರು ನೀಡಿದ್ದರು. ಅರಣ್ಯ ಇಲಾಖೆ ಸಿಬ್ಬಂದಿ ಒಂದು ಬೋನು ಇಟ್ಟು ಹೋಗಿದ್ದರು.

'ಇದೇ ಪ್ರದೇಶದಲ್ಲಿ ಕೆಂಪೇಗೌಡ ಬಡಾವಣೆ ನಿರ್ಮಾಣವಾಗುತ್ತಿದೆ. ಮೀಸಲು ಅರಣ್ಯದ ಅಂಚಿನಲ್ಲಿ ಸಾಕಷ್ಟು ಜನವಸತಿಯೂ ಇದೆ. ಇಲ್ಲಿ ಓಡಾಡಿಕೊಂಡಿರುವ ಚಿರತೆಗಳು ದನಕರುಗಳು, ನಾಯಿಗಳನ್ನು ಬೇಟೆಯಾಡುವುದು ಸಾಮಾನ್ಯವಾಗಿದೆ. ಬಡಾವಣೆ ಪೂರ್ಣಗೊಂಡರೆ ಜನವಸತಿಯೂ ಹೆಚ್ಚಳವಾಗುತ್ತದೆ. ಭವಿಷ್ಯದಲ್ಲಿ ಭಾರಿ ಅನಾಹುತಗಳು ಸಂಭವಿಸುವ ಮೊದಲು ಅರಣ್ಯ ಇಲಾಖೆ ಎಚ್ಚೆತ್ತುಕೊಳ್ಳಬೇಕು. ಎಲ್ಲ ಚಿರತೆಗಳನ್ನು ಹಿಡಿದು ಬೇರೆ ಕಡೆ ಸಾಗಿಸಬೇಕು' ಎಂದು ಸೋಮಶೇಖರ್ ಒತ್ತಾಯಿಸಿದ್ದಾರೆ.

ಬೆಂಗಳೂರಿನ ಕೊಮ್ಮಘಟ್ಟ ಬಳಿ ಬೋನಿಗೆ ಬಿದ್ದ ಚಿರತೆ.

ಜನ್ಮದಿನ ಆಚರಣೆಗೆ ಕರೆದು ಕೃತ್ಯ

'ಐಎಸ್‌ಡಿ' ಕ್ಲರ್ಕ್ ಹತ್ಯೆ: ಶರಣಾದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಲಗ್ಗೆರೆಯ ಕೊಠಡಿಯೊಂದರಲ್ಲಿ ನವ್ಯಾ (25) ಎಂಬುವವರನ್ನು ಕುತ್ತಿಗೆ ಕೊಯ್ದು ಹತ್ಯೆ ಮಾಡಲಾಗಿದ್ದು, ಆರೋಪಿ ಪ್ರಶಾಂತ್ (28) ಚಾಕು ಸಮೇತ ರಾಜಗೋಪಾಲನಗರ ಠಾಣೆಗೆ ಶರಣಾಗಿದ್ದಾರೆ.

'ಕನಕಪುರದ ನವ್ಯಾ, ಪೊಲೀಸ್ ಇಲಾಖೆಯ ಆಂತರಿಕ ಭದ್ರತಾ ವಿಭಾಗದಲ್ಲಿ (ಐಎಸ್‌ಡಿ) ಕ್ಲರ್ಕ್ ಆಗಿ ಕೆಲಸ ಮಾಡುತ್ತಿದ್ದರು. ಕೋರಮಂಗಲದಲ್ಲಿ ವಾಸವಿದ್ದರು. ಸಂಬಂಧಿಯೇ ಆಗಿದ್ದ ಪ್ರಶಾಂತ್, ವೆಲ್ಡಿಂಗ್ ಕೆಲಸ ಮಾಡುತ್ತಿದ್ದ. ಲಗ್ಗೆರೆಯಲ್ಲಿ ಬಾಡಿಗೆ ಕೊಠಡಿಯೊಂದರಲ್ಲಿ ನೆಲೆಸಿದ್ದ' ಎಂದು ಪೊಲೀಸರು ಹೇಳಿದರು.

'ಏಪ್ರಿಲ್ 18ರಂದು ನವ್ಯಾ ಜನ್ಮದಿನವಿತ್ತು. ಜನ್ಮದಿನ ಆಚರಣೆ ಮಾಡೋಣವೆಂದು ಹೇಳಿದ್ದ ಪ್ರಶಾಂತ್, ನವ್ಯಾ ಅವರನ್ನು ಶುಕ್ರವಾರ ತನ್ನ ಕೊಠಡಿಗೆ ಕರೆಸಿದ್ದ. ಕೇಕ್ ಕತ್ತರಿಸಿದ್ದ ಬಳಿಕ ಜಗಳ ತೆಗೆದು ಕುತ್ತಿಗೆ ಕೊಯ್ದು ನವ್ಯಾ ಅವರನ್ನು ಹತ್ಯೆ ಮಾಡಿದ್ದಾನೆ. ನಂತರ, ಠಾಣೆಗೆ ಶರಣಾಗಿದ್ದಾನೆ' ಎಂದು ತಿಳಿಸಿದರು.

ಆರು ವರ್ಷಗಳ ಪ್ರೀತಿ, ಅಣ್ಣ–ತಂಗಿ ಸಂಬಂಧ: 'ಪ್ರಶಾಂತ್ ಹಾಗೂ ನವ್ಯಾ ಅವರಿಬ್ಬರು ಆರು ವರ್ಷಗಳಿಂದ ಪ್ರೀತಿಸುತ್ತಿದ್ದರು. ಆದರೆ, ಅವರಿಬ್ಬರು ದೂರದಲ್ಲಿ ಅಣ್ಣ– ತಂಗಿ ಆಗಬೇಕಿತ್ತು. ಈ ಸಂಗತಿ ಅವರಿಬ್ಬರಿಗೆ ಗೊತ್ತಿರಲಿಲ್ಲ. ಪ್ರೀತಿ ವಿಷಯ ತಿಳಿದಿದ್ದ ಕುಟುಂಬದವರು, 'ನಿಮ್ಮಿಬ್ಬರು ಅಣ್ಣ–ತಂಗಿ' ಎಂಬುದಾಗಿ ಬುದ್ಧಿವಾದ ಹೇಳಿದ್ದರು' ಎಂದು ವಿವರಿಸಿದರು.

'ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ನವ್ಯಾ ತಂದೆ ತೀರಿಕೊಂಡಿದ್ದರು. ಅನುಕಂಪದ ಆಧಾರದಲ್ಲಿ ನವ್ಯಾ ಅವರಿಗೆ ಕೆಲಸ ಸಿಕ್ಕಿತ್ತು. ಒಂದೂವರೆ ವರ್ಷದಿಂದ ಅವರು ಐಎಸ್‌ಡಿ ಬೆಂಗಳೂರು ಕಚೇರಿಯಲ್ಲಿ ಕ್ಲರ್ಕ್ ಆಗಿ ಕೆಲಸ ಮಾಡುತ್ತಿದ್ದರು' ಎಂದು ಹೇಳಿದರು.

ವಾಟ್ಸ್‌ಆ್ಯಪ್ ಸಂದೇಶದಿಂದ ಜಗಳ: 'ನವ್ಯಾ ಸಹೋದ್ಯೋಗಿಯೊಬ್ಬರ ಜೊತೆ ಸಲುಗೆ ಬೆಳೆಸಿಕೊಂಡಿದ್ದರು. ಅವರ ಜೊತೆ ನಿತ್ಯವೂ ಚಾಟಿಂಗ್ ಮಾಡುತ್ತಿದ್ದರು. ಪ್ರಶಾಂತ್ ಕೊಠಡಿಗೆ ಬಂದಿದ್ದ ವೇಳೆಯಲ್ಲೂ ಸ್ನೇಹಿತನ ಜೊತೆ ಚಾಟಿಂಗ್‌ನಲ್ಲಿ ತೊಡಗಿದ್ದರು' ಎಂದು ಪೊಲೀಸರು ತಿಳಿಸಿದರು.

'ನವ್ಯಾ ಕೇಕ್ ಕತ್ತರಿಸಿದ್ದ ಬಳಿಕ ವಾಟ್ಸ್‌ಆ್ಯಪ್ ಸಂದೇಶ ನೋಡಿದ್ದ ಪ್ರಶಾಂತ್, ಅದೇ ವಿಚಾರವಾಗಿ ಜಗಳ ತೆಗೆದು ಹತ್ಯೆ ಮಾಡಿದ್ದ' ಎಂದರು.

8 ದಿನದ ಮಗು ಕದ್ದೊಯ್ದ ಮಹಿಳೆ

ಬೆಂಗಳೂರು: ವಾಣಿವಿಲಾಸ್ ಆಸ್ಪತ್ರೆಯಲ್ಲಿದ್ದ ಎಂಟು ದಿನದ ಮಗುವನ್ನು ಮಹಿಳೆಯೊಬ್ಬರು ಕದ್ದೊಯ್ದಿದ್ದು, ಈ ಸಂಬಂಧ ವಿ.ವಿ.ಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತುಮಕೂರು ಜಿಲ್ಲೆಯ ತಿಪಟೂರಿನ ಕಾರ್ಮಿಕ ಪ್ರಸನ್ನ ಹಾಗೂ ಸುಮಾ ದಂಪತಿಯ ಮಗುವನ್ನು ಶನಿವಾರ ಬೆಳಿಗ್ಗೆ ಅಪಹರಿಸಲಾಗಿದೆ. ಪೋಷಕರು ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೆರಿಗೆ ನೋವಿನಿಂದ ಬಳಲುತ್ತಿದ್ದ ಸುಮಾ ಅವರನ್ನು ತಿಪಟೂರಿನಿಂದ ವಾಣಿವಿಲಾಸ್ ಆಸ್ಪತ್ರೆಗೆ ಕರೆತರಲಾಗಿತ್ತು. ಎಂಟು ದಿನಗಳ ಹಿಂದೆಯಷ್ಟೇ ಅವರು ಗಂಡು ಮಗುವಿಗೆ ಜನ್ಮ ನೀಡಿದ್ದರು. ಶುಕ್ರವಾರ ರಾತ್ರಿ ನಿದ್ದೆಗೆ ಜಾರಿದ್ದ ಸುಮಾ, ಶನಿವಾರ ಬೆಳಿಗ್ಗೆ ಎಚ್ಚರಗೊಂಡಾಗ ಬೆಡ್ ಮೇಲೆ ಮಗು ಇರಲಿಲ್ಲ. ಗಾಬರಿಗೊಂಡ ಅವರು ವಾರ್ಡ್ ಹಾಗೂ ಆಸ್ಪತ್ರೆ ಬಳಿ ಹುಡುಕಾಡಿದರೂ ಯಾವುದೇ ಸುಳಿವು ಸಿಕ್ಕಿಲ್ಲ' ಎಂದರು. 'ಬೆಳಿಗ್ಗೆ 3 ಗಂಟೆ ಸುಮಾರಿಗೆ ಭದ್ರತಾ ಸಿಬ್ಬಂದಿ ಸಹ ನಿದ್ದೆಗೆ ಜಾರಿದ್ದರು. ಇದೇ ಸಂದರ್ಭದಲ್ಲಿ ಮಹಿಳೆಯೊಬ್ಬರು ಆಸ್ಪತ್ರೆಯೊಳಗೆ ಬಂದು ಮಗುವನ್ನು ಅಪಹರಿಸಿಕೊಂಡು ಹೋಗಿರುವ ಅನುಮಾನವಿದೆ. ಆಸ್ಪತ್ರೆಯಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.



‘ಸ್ಮಾರ್ಟ್’ ಆಗದ ನಗರಗಳು

ಒಂದನೇ ಪುಟದಿಂದ...
ಅದಕ್ಕೆ ₹72,400 ಸಹಾಯಧನ ಕೊಟ್ಟಿದ್ದ ಸ್ಮಾರ್ಟ್ ಸಿಟಿ ಸಂಸ್ಥೆ ಉಳಿದ ಹಣವನ್ನು ತಾನೇ ಮುಂದೆ ನಿಂತು ಬ್ಯಾಂಕ್‌ನಿಂದ ಸಾಲ ಕೊಡಿಸಿತ್ತು. ವರ್ಷ ಕಳೆಯುವುದ-ರೊಳಗೆ ಆ ಆಟೊ ಮೂಲೆ ಸೇರಿದೆ.

‘3 ಗಂಟೆ ಚಾರ್ಜ್ ಆದರೆ ಆಟೊ 80 ಕಿ.ಮೀ ಓಡುತ್ತದೆ ಎಂದು ಸ್ಮಾರ್ಟ್ ಸಿಟಿಯವರು ಹೇಳಿದ್ದರು. ಅದು 35 ಕಿ.ಮೀ ಕೂಡ ಮೈಲೇಜ್ ಕೊಡುತ್ತಿಲ್ಲ. ಕಳಪೆ ಗುಣಮಟ್ಟದಿಂದಾಗಿ ಆಟೊಗಳು ಸರಿಯಾಗಿ ಓಡುವುದಿಲ್ಲ. ಸಣ್ಣ ಗುಂಡಿ ಬಂದರೂ ವಾಲುತ್ತವೆ. ಹಿಂಬದಿ ಕುಳಿತವರನ್ನು ಮೇಲಕ್ಕೆ ಎತ್ತಿ ಹಾಕುತ್ತವೆ. ಪ್ರಯಾಣಿಕರು ಇ-ಆಟೊ ಹತ್ತುತ್ತಲೇ ಇಲ್ಲ. ಒಂದು ತಿಂಗಳು ಮಾತ್ರ ಆಟೊ ಓಡಿದ್ದು, ಈಗ ಮನೆ ಮುಂದೆ ನಿಂತಿದೆ. ಸಾಲ ಒಂದು ಕಂತು ಮಾತ್ರ ಕಟ್ಟಿದ್ದೇವೆ. ಬ್ಯಾಂಕ್‌ನವರು ಪದೇ ಪದೇ ನೋಟಿಸ್ ಕಳುಹಿಸುತ್ತಿದ್ದಾರೆ. ಫೋನ್ ಮಾಡುತ್ತಾರೆ’ ಎಂದು ಕೊಟ್ರೇಶ್ ಅಳಲ ತೋಡಿಕೊಂಡರು.

ಆಟೊ ಚಾಲಕ ಕೊಟ್ರೇಶ್

‘ಇದು ನನ್ನೊಬ್ಬನ ಸಮಸ್ಯೆ ಅಲ್ಲ. ಉಳಿದ 9 ಜನ ಫಲಾನುಭವಿಗಳದ್ದು (ಆಟೊ ಚಾಲಕರು) ಇದೇ ಕಥೆ. ಸಾಲ ಕಟ್ಟಲು ಆಗುತ್ತಿಲ್ಲ. ಜೀವನಕ್ಕಾಗಿ ಬೇರೆ ಆಟೊ ಬಾಡಿಗೆ ಪಡೆದು ಓಡಿಸುತ್ತಿದ್ದೇವೆ. ಅದು ಜೀವನ ನಿರ್ವಹಣೆಗೆ ಸಾಲುತ್ತಿಲ್ಲ. ಇನ್ನು ಇ-ಆಟೋಗಾಗಿ ಪಡೆದ ಸಾಲಕ್ಕೆ ಕಂತು ಎಲ್ಲಿಂದ ಕಟ್ಟುವುದು’ ಎಂದು ಪ್ರಶ್ನಿಸುವ ಅವರು, ‘ಸ್ಮಾರ್ಟ್ ಸಿಟಿ ಅಧಿಕಾರಿಗಳು ನಮ್ಮ ಗೋಳು ಕೇಳುತ್ತಿಲ್ಲ. ಆಟೊ ನೀಡಿದ ಕಂಪನಿಗೆ ನೋಟಿಸ್ ನೀಡಿದ್ದು, ಪ್ರಕರಣದ ವಿಚಾರಣೆ ನ್ಯಾಯಾಲಯದ-ಲ್ಲಿದೆ ಎನ್ನುತ್ತಾರೆ. ಎರಡು ವರ್ಷಗಳಾದರೂ ಸಮಸ್ಯೆ ಬಗೆಹರಿಸಿಲ್ಲ’ ಎಂಬುದು ಅವರ ಅಳಲು.

ಬೇಡದ ಕಡೆ ಬಸ್ ನಿಲ್ದಾಣ: ಶಿವಮೊಗ್ಗದ ರೈಲು ನಿಲ್ದಾಣದಿಂದ ಗಾಂಧಿನಗರದ ಉಷಾ ನರ್ಸಿಂಗ್ ಹೋಂನತ್ತ ಹೊರಟವನು ಮಳೆಗೆ ಸಿಲುಕಿ ರಕ್ಷಣೆಗೆಂದು ರಸ್ತೆ ಪಕ್ಕದ ಬಸ್‌ಸ್ಟಾಪ್‌ನಲ್ಲಿ ಆಶ್ರಯ ಪಡೆದೆ. ಸ್ಟಾಪ್ ಹೊಸದೇ ಅನ್ನಿಸಿದರೂ ಬಳಕೆಯಾಗದೇ ಪಳೆಯುಳಿಕೆಯಂತೆ ತೋರುತ್ತಿತ್ತು. ಅಲ್ಲಿ ಜನರ ಓಡಾಟವೂ ಕಾಣಸಿಕ್ಕಲಿಲ್ಲ. ಅದು ಸ್ಮಾರ್ಟ್ ಸಿಟಿ ಯೋಜನೆಯಡಿ ಕಟ್ಟಿದ್ದು ಎಂಬ ಫಲಕ ಕಾಣಸಿಕ್ಕಿತು.

ತುಮಕೂರಿನ ರಾಧಾಕೃಷ್ಣ ರಸ್ತೆಯ ಪಾದಚಾರಿ ಮಾರ್ಗ ಆಗದಿರುವುದು, ಹುಬ್ಬಳ್ಳಿಯ ಹೊಸೂರು ಬಿಆರ್‌ಟಿಎಸ್ ಬಳಿ ಅಳವಡಿಸಿರುವ ಇ- ಟಾಯ್ಲೆಟ್‌ಗಳು ನಿರ್ವಹಣೆ ಇಲ್ಲದೆ ಸ್ಥಗಿತಗೊಂಡಿರುವುದು (ಬಲಚಿತ್ರ)

ಶಿವಮೊಗ್ಗದಲ್ಲಿ ಸ್ಮಾರ್ಟ್ ಸಿಟಿಯಡಿ ಅಭಿವೃದ್ಧಿ ಅಂದರೆ ಕಾಂಕ್ರೀಟ್ ಹಾಕುವುದು, ಟೈಲ್ಸ್ ಅಳವಡಿಸುವುದು ಎಂಬಂತಾಗಿದೆ. ಯೋಜನೆಯ ಅನುಷ್ಠಾನದಲ್ಲಿ ಎಲ್ಲಿಯೂ ನಿಯಮಾವಳಿ ಪಾಲನೆ ಆಗಿಲ್ಲ.

ಕೆ.ವಿ.ವಸಂತಕುಮಾರ್, ಅಧ್ಯಕ್ಷ, ಶಿವಮೊಗ್ಗ ನಾಗರಿಕ ವೇದಿಕೆ

ಕಾಮಗಾರಿಗಳು ಪೂರ್ಣಗೊಳ್ಳುವುದು ವಿಳಂಬವಾಗುತ್ತಿವೆ. ಸಣ್ಣ ಪುಟ್ಟ ಕಾಮಗಾರಿಗಳೂ ಕಳಪೆ ಕೆಲಸ ಆಗಿರುವುದು ಕಂಡು ಬರುತ್ತಿದೆ. ನಿರ್ವಹಣೆಯೂ ಅಸಮರ್ಪಕವಾಗಿದೆ.

ವಿನಯ್ ಪ್ರಸಾದ್, ತುಮಕೂರು

ನಾಗರಿಕ ಗ್ರಹಿಕಾ ಸಮೀಕ್ಷೆ ಕೇವಲ ನಾಮಕಾವಸ್ತೆ ಎಂಬಂತೆ ಆಗಿದೆ. ಅದರಲ್ಲಿ ಸಾರ್ವಜನಿಕರ ಹಿತಾಸಕ್ತಿ ಮತ್ತು ಸ್ಮಾರ್ಟ್ ಸಿಟಿ ಕಾಮಗಾರಿಗಳ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ. ಕೇವಲ ನಗರದ ಬಗ್ಗೆ ಮಾತ್ರ ಪ್ರಶ್ನೆಗಳನ್ನು ಕೇಳಲಾಗಿತ್ತು. ನಗರದಲ್ಲಿ ಹಲವು ಕೆಲಸಗಳು ನಡೆದರೂ ಆ ಬಗ್ಗೆ ಜನರಿಗೆ ತಿಳಿದಿಲ್ಲ.

ಇಮ್ರಾನ್ ಪಾಷಾ, ತುಮಕೂರು

ಅಚ್ಚರಿಯೆಂದರೆ ಆ ರಸ್ತೆಯಲ್ಲಿ ಸಿಟಿ ಬಸ್‌ನ ಓಡಾಟವೇ ಇಲ್ಲ. ಅದರೂ ಬಾರದ ಬಸ್‌ನ ನಿರೀಕ್ಷೆಯಲ್ಲಿ ಸ್ಟಾಪ್ ಎದ್ದುನಿಂತಿದೆ. ಬರೀ ಅಲ್ಲಿ ಮಾತ್ರವಲ್ಲ ಶಿವಮೊಗ್ಗ ನಗರದಲ್ಲೂ ಯಾವತ್ತೂ ಬಸ್ ಕಾಣದಿದ್ದರೂ ಮೂರು ಕಡೆ ಸ್ಟಾಪ್ ಸಿಂಗಾರಗೊಂಡಿವೆ. ವಿಶೇಷವೆಂದರೆ ಶಿವಮೊಗ್ಗದಲ್ಲಿ ಸ್ಮಾರ್ಟ್ ಸಿಟಿಯಡಿ ನಿರ್ಮಿಸಿರುವ 81 ಬಸ್‌ಸ್ಟಾಪ್‌ಗಳಲ್ಲಿ 29ಕ್ಕೆ ಮಾತ್ರ ಅನುಮತಿ ಇದೆ. ಹೊಸಮನೆ ಬಡಾವಣೆಯ ಸಮೀಪದ ತುಂಗಾ ಚಾನೆಲ್ ದಂಡೆ, ಗೋಪಾಳದ 100 ಅಡಿ ರಸ್ತೆಯಲ್ಲಿ ಹೀಗೆ ಬಸ್ ಓಡಾಡದ ಕಡೆಯಲ್ಲೆಲ್ಲ ಅನುದಾನ ಖರ್ಚು ಮಾಡಲು ಜಾಗ ಹುಡುಕಿ ಬಸ್ ಸ್ಟಾಪ್ ಕಟ್ಟಲಾಗಿದೆ ಎಂದು ಆರೋಪವೂ ಸ್ಥಳೀಯರಿಂದ ಕೇಳಿಬಂದಿತು.

ಜನರ ಸಹಭಾಗಿತ್ವದೊಂದಿಗೆ ಸ್ಥಳೀಯ ಸಂಪನ್ಮೂಲಗಳ ಬಳಕೆ, ಪರಿಸರ ಸ್ನೇಹಿ ಅಭಿವೃದ್ಧಿಯ ಆಶಯದೊಂದಿಗೆ ಕೇಂದ್ರ ಸರ್ಕಾರ ಸ್ಮಾರ್ಟ್ ಸಿಟಿ ಯೋಜನೆ ರೂಪಿಸಿದೆ. 2015ರಲ್ಲಿ ಈ ಯೋಜನೆ ಜಾರಿಗೊಂಡಾಗ ಜಾಗತಿಕ ದರ್ಜೆಯ ಮೂಲ ಸೌಕರ್ಯದ ಬಣ್ಣದ ಕನಸುಗಳನ್ನು ನಗರ ಪ್ರದೇಶದ ನಿವಾಸಿಗಳಲ್ಲಿ ಬಿತ್ತಲಾಗಿತ್ತು. ಆದರೆ ದಾವಣಗೆರೆಯ ಸೈಕಲ್ ಸ್ಟ್ಯಾಂಡ್, ಇ-ಆಟೊ, ಶಿವಮೊಗ್ಗದ ಸ್ಮಾರ್ಟ್ ಬಸ್‌ಸ್ಟಾಪ್‌ಗಳ ನಿದರ್ಶನವು ಅನುಷ್ಠಾನ ಹಂತದಲ್ಲಿ ಅದ್ವಾನಗೊಂಡಾಗಿ ಯೋಜನೆಯ ಆಶಯವೇ ಮಣ್ಣುಪಾಲಾಗುತ್ತಿದೆ ಎನ್ನಬಹುದು.

ಯುರೋಪ್‌ನ ಸುಸಜ್ಜಿತ ನಗರಗಳಲ್ಲಿ ಪರಿಸರ ಸ್ನೇಹಿ ಸೈಕಲ್ ಪಥ, ಮೆಟ್ರೊ, ಟ್ರಾಂ ಇವುಗಳಿಗೆ ಪೂರಕವಾಗಿ ಇ- ಬಸ್, ಅಂಗವಿಕಲರ ಓಡಾಟಕ್ಕೂ ಅನುಕೂಲವಾದ ಗುಣಮಟ್ಟದ ಪಾದಚಾರಿ ಮಾರ್ಗ, ಅದರ ನಡುವೆಯೇ ಹಸಿರು ಹೊದ್ದ ಮರಗಳು, ನಗರದ ಮಧ್ಯೆ ಹರಿಯುವ ಕಲುಷಿತರಹಿತ ನದಿ, ನಡುವೆ ದೋಣಿಗಳ ಓಡಾಟ...ಹೀಗೆ ಸಂಪೂರ್ಣ ನಗರವೇ ಪರಿಸರ ಸ್ನೇಹಿಯಾಗಿರುತ್ತದೆ. ಆದರೆ ಸ್ಮಾರ್ಟ್ ಸಿಟಿ ಯೋಜನೆ ಜಾರಿಯಾಗುತ್ತಿರುವ ನಗರಗಳಲ್ಲಿ ಯೋಜನೆಗಳ ಆಯ್ಕೆ, ಜಾರಿಯಲ್ಲಿ ದೂರದೃಷ್ಟಿಯ ಕೊರತೆ ಎದ್ದು ಕಾಣುತ್ತಿದೆ.

ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಏಳು ನಗರಗಳಲ್ಲಿ (ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಶಿವಮೊಗ್ಗ, ತುಮಕೂರು) ಸ್ಮಾರ್ಟ್ ಸಿಟಿ ಯೋಜನೆ ಅನುಷ್ಠಾನಗೊಂಡಿದೆ. ಕಾಲಮಿತಿಯಂತೆ ಇದೇ ವರ್ಷ (2023) ಜೂನ್ ಅಂತ್ಯಕ್ಕೆ ಪೂರ್ಣಗೊಳ್ಳಬೇಕಿದೆ. ಹೀಗಾಗಿ ಯೋಜನೆ ಅನುಷ್ಠಾನದ ಇಣುಕು ನೋಟಕ್ಕಾಗಿ ‘ಪ್ರಜಾವಾಣಿ’ ಸ್ಮಾರ್ಟ್ ಸಿಟಿಗಳಲ್ಲಿ ಅಡ್ಡಾಡಿದ್ದು, ಅಲ್ಲಿ ಕಂಡದ್ದು, ಕೇಳಿದ್ದು ಮಾತ್ರ ಜನರಿಂದ ದೂರುಗಳ ಸರಮಾಲೆ.

‘ನಲ್ಲಿಯಲ್ಲಿ (ನಳ) ಕಲುಷಿತ ನೀರು ಬಂದರೆ, ದಿನಾಚ್ಚಲೇ ವಿದ್ಯುತ್ ಕಡಿತಗೊಂಡರೆ, ನಗರದ ಮುಖ್ಯ ರಸ್ತೆಗಳಲ್ಲಿ ಅಪಘಾತ ಸಂಭವಿಸಿದರೆ ನಮ್ಮೂರಿನ ಜನರು ಅಲ್ಲಿ ಸ್ಮಾರ್ಟ್ ಸಿಟಿ ಕಾಮಗಾರಿ ನಡೆಯುತ್ತಿದೆ ಅಂದುಕೊಳ್ಳುತ್ತಾರೆ’ ಎಂದು ರವೀಂದ್ರ ನಗರದಲ್ಲಿ ಎದುರಾದ ಶಿವಮೊಗ್ಗದ ನಾಗರಿಕ ವೇದಿಕೆ ಅಧ್ಯಕ್ಷ ಕೆ.ವಿ.ವಸಂತಕುಮಾರ್ ಚಟಾಕಿ ಹಾರಿಸಿದರು.

ಜನಪ್ರತಿನಿಧಿ, ಅಧಿಕಾರಿ, ಗುತ್ತಿಗೆದಾರರ ಹಿತ ಕಾಯುವ, ಅವರ ಜೇಬು ತುಂಬಿಸುವ ಉಮೇದಿನಿಂದ ಸ್ಮಾರ್ಟ್ ಸಿಟಿ ಸಿಲುಕಿದೆ ಎಂದು ಹೇಳಿದ ವಸಂತಕುಮಾರ್, ತಮ್ಮ ಆರೋಪಕ್ಕೆ ಪೂರಕವಾಗಿ ಶಿವಮೊಗ್ಗ ಜಿಲ್ಲಾಡಳಿತ, ಸ್ಮಾರ್ಟ್ ಸಿಟಿ ಸಂಸ್ಥೆಗೆ ನೀಡಿದ ದೂರುಗಳು, ಪತ್ರ ವ್ಯವಹಾರಗಳ ದೊಡ್ಡ ಕಡತವನ್ನೇ ಮುಂದಿಟ್ಟರು.

ಐಆರ್‌ಸಿ ನಿಯಮಾವಳಿ ಉಲ್ಲಂಘನೆ: ಶಿವಮೊಗ್ಗದ ರಸ್ತೆಗಳಲ್ಲಿ ಪಾದಚಾರಿ ಮಾರ್ಗ, ಒಳಚರಂಡಿ ನಿರ್ಮಿಸುವಾಗ ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ) ನಿಯಮಾವಳಿಯ ಸ್ಪಷ್ಟ ಉಲ್ಲಂಘನೆಯಾಗಿದೆ. ಅಗತ್ಯವಿಲ್ಲದಿದ್ದರೂ ಪಾದಚಾರಿ ಮಾರ್ಗ ಹಾಗೂ ಡ್ರೈನ್ ಎತ್ತರಿಸಲಾಗಿದೆ. ಐಆರ್‌ಸಿ ಮಾನದಂಡದಂತೆ ರಸ್ತೆಯಿಂದ ಕೇವಲ ಆರು

ನಗರ	ನಿಗದಿಯಾದ ಅನುದಾನ	ಒಟ್ಟು ಯೋಜನೆಗಳು	ಖರ್ಚು ಮಾಡಲಾದ ಹಣ	ಪೂರ್ಣಗೊಂಡ ಯೋಜನೆಗಳು
ಬೆಳಗಾವಿ	₹1140	108	₹609.2	88
ದಾವಣಗೆರೆ	₹1006.9	115	₹669.4	93
ಹುಬ್ಬಳ್ಳಿ-ಧಾರವಾಡ	₹979.3	63	₹427.3	51
ಮಂಗಳೂರು	₹1401.8	62	₹360.6	35
ಶಿವಮೊಗ್ಗ	₹1151.8	74	₹812.9	61
ತುಮಕೂರು	₹1280.4	185	₹918.2	164
ಬೆಂಗಳೂರು	₹932.1	44	₹522.3	30

(₹ ಕೋಟಿಗಳಲ್ಲಿ) ಆಧಾರ: ನಗರಾಭಿವೃದ್ಧಿ ಇಲಾಖೆ

ಇಂಚು ಎತ್ತರದಲ್ಲಿ ಪಾದಚಾರಿ ಮಾರ್ಗ ಇರಬೇಕು. ಆದರೆ ಇಲ್ಲಿನ ರವೀಂದ್ರ ನಗರ, ಗೋಪಾಳದ 100 ಅಡಿ ರಸ್ತೆಯಲ್ಲಿ 2ರಿಂದ 2.5 ಅಡಿ ಎತ್ತರದಲ್ಲಿ ಪಾದಚಾರಿ ಮಾರ್ಗ ನಿರ್ಮಿಸಲಾಗಿದೆ. ಹಿರಿಯ ನಾಗರಿಕರು ಅಥವಾ ಮಕ್ಕಳು ಹೇಗೆ ಹತ್ತಬೇಕು. ಹಿರಿಯರ ಸಮಸ್ಯೆ ಇವರಿಗೆ ಹೇಗೆ ಅರ್ಥ ಮಾಡುವುದು ಎಂದು ವಸಂತಕುಮಾರ್ ಸ್ವಲ್ಪ ಕರೆದೊಯ್ದು ತೋರಿಸಿದರು.

ವಿಶೇಷವಾಗಿ ಶಿಲ್ಪ್ ಚೇಂಬರ್‌ಗಳಲ್ಲಿ ಒಂದು ಕಡೆಯಾದರೂ ನಿಯಮಾವಳಿ ಪ್ರಕಾರ ಕೆಲಸ ಮಾಡಿಲ್ಲ. ಮಾಡಿರುವುದು ಸಾಬೀತು ಮಾಡಿದರೆ ನಾವು (ನಾಗರಿಕ ವೇದಿಕೆ) ಹೋರಾಟ ಕೈ ಬಿಡುತ್ತೇವೆ ಎಂದು ಸವಾಲು ಹಾಕಿದ ವಸಂತಕುಮಾರ್, ಸ್ಮಾರ್ಟ್ ಸಿಟಿಯವರು ಮಾಡುತ್ತಿರುವ ಈ ಅದ್ವಾನ ಸರಿಪಡಿಸಲು ಪಾಲಿಕೆಯ ಬಳಿ ದುಡ್ಡು ಇಲ್ಲ. ಕೊನೆಗೆ ಜನರೇ ಅನುಭವಿಸಬೇಕು. ಸ್ಥಳೀಯ ಜನಪ್ರತಿನಿಧಿಗಳು ತಮ್ಮ ತಾಳಕ್ಕೆ ಕುಣಿಯುವ ಅಧಿಕಾರಿಗಳ ಇಟ್ಟುಕೊಂಡು ಕಾಮಗಾರಿ ಮಾಡಿಸಿದ ಫಲವನ್ನು ಜನರೇ ಉಣ್ಣಬೇಕಿದೆ ಎಂದು ಆಕ್ರೋಶ ತೋಡಿಕೊಳ್ಳುತ್ತಲೇ ನಮ್ಮನ್ನು ಬೀಳ್ಕೊಟ್ಟರು.

ರವೀಂದ್ರ ನಗರ, ರಾಜೇಂದ್ರ ನಗರ, ಗಾಂಧಿನಗರ, ಡಿ.ಸಿ ಕಚೇರಿ, ಗಾಂಧಿ ಬಜಾರ್, ಪಾಲಿಕೆ ಆವರಣ, ವಿನೋಬ ನಗರದಲ್ಲಿ ಅಡ್ಡಾಡಿದಾಗ ಕಾಣಸಿಕ್ಕಿದ್ದು ಗುಂಡಿ ಬಿದ್ದ ರಸ್ತೆ, ಫುಟ್‌ಪಾತ್‌ನಲ್ಲಿ ಕಿತ್ತು ಬಂದ ಟೈಲ್ಸ್, ಮುರಿದುಬಿದ್ದ ತಡೆಗೋಡೆ, ಚರಂಡಿಯಲ್ಲೇ ಕುಸಿದಿದ್ದ ಕಾಂಕ್ರೀಟ್‌ನ ಮುಚ್ಚಳ, ಮತ್ತೆ ಹಳೆಯ ಸ್ಥಿತಿಗೆ ಬಂದ ಕನ್ಸರ್ವೆನ್ಸಿ, ಅರೆಬರೆ ಕಾಮಗಾರಿ, ಸ್ಮಾರ್ಟ್ ಪಾರ್ಕಿಂಗ್‌ನಲ್ಲೇ ಅಣಕಿಸಿದಂತೆ ತೋರಿತು. ನಾಗರಿಕ ವೇದಿಕೆ ಆರೋಪಕ್ಕೂ ಸಾಕ್ಷ್ಯ ಸಿಕ್ಕಿತು.

ಇನ್ನು ನಗರದ ಹಸಿರೀಕರಣಕ್ಕೆ ₹ 3 ಕೋಟಿ ವೆಚ್ಚದಲ್ಲಿ (ಪ್ರತಿ ಗಿಡಕ್ಕೆ ₹ 2,900 ವೆಚ್ಚ) ಗಿಡಗಳನ್ನು ನೆಟ್ಟಿರುವುದಾಗಿ ಸ್ಮಾರ್ಟ್ ಸಿಟಿ ಹೇಳಿದರೂ ಬಹಳಷ್ಟು ಕಡೆ ಗಿಡಗಳು ನೆಟ್ಟ ದಿನದ ಫೋಟೊ ದಾಖಲೆಯಾಗಿ ಮಾತ್ರ ಕಂಡವು. ಫುಟ್‌ಪಾತ್, ರಸ್ತೆಯ ವಿನ್ಯಾಸವನ್ನು ಸಂಗಿದ್ದು, ಪ್ರತ್ಯೇಕ ಸೈಕಲ್ ಪಥ ನಿರ್ಮಿಸಿ ವರ್ಷವೇ ಕಳೆದರೂ ಬೈಸಿಕಲ್ ಶೇರಿಂಗ್ ವ್ಯವಸ್ಥೆ ಆರಂಭವಾಗಿಲ್ಲ. ಅಲ್ಲೀಗ ಬೀದಿ ಬದಿ ವ್ಯಾಪಾರಿಗಳು ನೆಲೆಗೊಂಡಿದ್ದಾರೆ.

ಕಾಮಗಾರಿ ಗುಣಮಟ್ಟಕ್ಕೆ ಆಕ್ಷೇಪ: ಹುಬ್ಬಳ್ಳಿ-ಧಾರವಾಡದಲ್ಲಿ ‘ಸ್ಮಾರ್ಟ್’ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸ್ವತಃ ಅಲ್ಲಿನ ಮಹಾನಗರ ಪಾಲಿಕೆ ಸದಸ್ಯರೇ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸ್ಮಾರ್ಟ್ ಸಿಟಿ ಸಂಸ್ಥೆ ಮತ್ತು ಪಾಲಿಕೆ ಹೊರತುಪಡಿಸಿ, ಮೂರನೇ ವ್ಯಕ್ತಿ ಪರಿಶೀಲನೆ ನಡೆಸಿ, ನಂತರ ನಾವು (ಮಹಾನಗರ ಪಾಲಿಕೆ) ಹಸ್ತಾಂತರ ಮಾಡಿಕೊಳ್ಳಲಿ ಎಂಬುದು ಅವರ ಒತ್ತಾಯ. ಅದಕ್ಕೆ ಸ್ಪಂದಿಸಿದ್ದ ಪಾಲಿಕೆ ಆಡಳಿತ, ಪರಿಶೀಲನೆಗೆ ಬಿವಿಬಿ ಮತ್ತು ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜಿನ ತಾಂತ್ರಿಕ ತಜ್ಞರ ಸಮಿತಿಯನ್ನು ನೇಮಿಸಿದೆ. ವಿಶೇಷವೆಂದರೆ, ಆ ಸಮಿತಿ ವರದಿ ನೀಡುವ ಮುನ್ನವೇ ಸದ್ದಿಲ್ಲದೆ ಯೋಜನೆಗಳ ಹಸ್ತಾಂತರ ಕಾರ್ಯಕ್ಕೆ ಚಾಲನೆ ದೊರೆತಿದೆ. ಸ್ಮಾರ್ಟ್ ಸಿಟಿ ಅಡಿ ಕ್ರೀಡಾ ಸಂಕೀರ್ಣ, ನೆಹರು ಮೈದಾನ ಅಭಿವೃದ್ಧಿ ಸೇರಿದಂತೆ ಕೆಲ ಯೋಜನೆಗಳು ಅಪೂರ್ಣವಾಗಿದ್ದರೂ ತರಾತುರಿಯಲ್ಲಿ ಉದ್ಘಾಟನೆ ಮಾಡಲಾಗಿದೆ.

‘ಕೆಲವು ಯೋಜನೆಗಳ ಡಿಮ್ಯಾಂಡ್ ಆಗಿ ಹಸ್ತಾಂತರ ಗೊಂಡಿವೆ. ಇನ್ನೂ ಅವುಗಳ ಜಂಟಿ ಪರಿಶೀಲನೆ ಆಗಬೇಕಿದೆ’ ಎಂದು ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ಸಿಟಿ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಪ್ರಿಯಾಂಕ ಎಂ. ಹೇಳುತ್ತಾರೆ.

ಹುಬ್ಬಳ್ಳಿಯ ಹೃದಯ ಭಾಗದ ಮಹಾತ್ಮ ಗಾಂಧಿ ಉದ್ಯಾನವನ್ನು ಈ ಮೊದಲು ಪಾಲಿಕೆಯೇ ಅಭಿವೃದ್ಧಿ ಪಡಿಸಿ ನಿರ್ವಹಿಸುತ್ತಿತ್ತು. ಸ್ಮಾರ್ಟ್ ಸಿಟಿಯಡಿ ಮರು ಅಭಿವೃದ್ಧಿಗೆ ಕೈಗೆತ್ತಿಕೊಂಡಿತು. ಚೆನ್ನಾಗಿದ್ದ ಹಳೆಯ ಟೈಲ್ಸ್ ಕಿತ್ತು ಹೊಸದನ್ನು ಅಳವಡಿಸಿ ಒಂದಷ್ಟು ಭೌತಿಕ ಬದಲಾವಣೆ ಮಾಡಿದ್ದಾರೆ.

‘ಮರು ಅಭಿವೃದ್ಧಿ ಕಳಪೆಯಾಗಿದೆ. ಇಲ್ಲಿ ₹ 50 ಕೋಟಿ ದುಂದು ವೆಚ್ಚವಾಗಿದೆ’ ಎಂದು ಆರೋಪಿಸಿ, ಉದ್ಯಾನವನ ವೇದಿಕೆ ಸದಸ್ಯರು ಪ್ರತಿಭಟನೆ ಕೂಡ ನಡೆಸಿದ್ದಾರೆ. ಅಲ್ಲದೆ, ನಗರದ ವಿವಿಧೆಡೆ ಅಳವಡಿಸಿರುವ ₹ 1.1 ಕೋಟಿ ವೆಚ್ಚದ ಇ-ಟಾಯ್ಲೆಟ್ ಬಳಕೆಯಾಗದೆ ತುಕ್ಕು ಹಿಡಿದಿವೆ.

ಹುಬ್ಬಳ್ಳಿಯಲ್ಲಿ ₹ 8.5 ಕೋಟಿ ವೆಚ್ಚದ ಸೈಕಲ್ ಶೇರಿಂಗ್ ಯೋಜನೆ ರೂಪಿಸಿದೆ. ಈಗಾಗಲೇ ₹ 6 ಕೋಟಿ ಕೊಟ್ಟು ಮಲೇಷ್ಯಾದಿಂದ 340 ಸೈಕಲ್‌ಗಳ ತರಿಸಲಾಗಿದೆ. 34 ಕಡೆ ನಿಲ್ದಾಣ ಸ್ಥಾಪಿಸಲಾಗಿದೆ. ಆದರೆ ಟೆಂಡರ್ ಸ್ಟೂರ್ ರಸ್ತೆಯಲ್ಲಿ ಸೈಕಲ್ ಪಥ ಇದ್ದರೂ, ಅಲ್ಲಿ ಸೈಕಲ್ ಓಡಾಟಕ್ಕೆ ಅವಕಾಶವಿಲ್ಲ. ಹೀಗಾಗಿ ಹಸಿರಿಗೆ ಮಾತ್ರ ಸೈಕಲ್ ಶೇರಿಂಗ್ ವ್ಯವಸ್ಥೆ ಬಂದಿದೆ.

ಅರೆಬರೆ ಕಾಮಗಾರಿ...: ತುಮಕೂರು ನಗರ ಸ್ಮಾರ್ಟ್ ಸಿಟಿ ಯೋಜನೆಯಡಿ ಇಡೀ ರಾಜ್ಯದಲ್ಲಿಯೇ ಅತಿಹೆಚ್ಚು ಕಾಮಗಾರಿ ಪೂರ್ಣಗೊಂಡ ಶ್ರೇಯ ಹೊಂದಿದ್ದರೂ ಎಲ್ಲವೂ ದಾಖಲೆಯಲ್ಲಿ ಪೂರ್ಣಗೊಂಡಿವೆ. ಊರಲ್ಲಿ ಅಡ್ಡಾಡಿದರೆ ಕಾಮಗಾರಿ ಎಲ್ಲವೂ ಅರ್ಧಂಬರ್ಧ ಆಗಿರುವುದು ಕಾಣುತ್ತದೆ. ತರಾತುರಿಯಲ್ಲಿ ಉದ್ಘಾಟನೆಯೂ ನಡೆದಿದೆ. ತುಮಕೂರಿನ ಮಂಡಿಪೇಟೆ ಮುಖ್ಯ ರಸ್ತೆಯನ್ನು ಸ್ಮಾರ್ಟ್ ಸಿಟಿ ಅಡಿ ಅಭಿವೃದ್ಧಿಪಡಿಸಲಾಗಿತ್ತು. ಆದರೆ ಮೂರೇ ತಿಂಗಳಿಗೆ ಅದು ಕುಸಿದಿತ್ತು. ಅದನ್ನು ಸರಿಪಡಿಸಲು ಕೊನೆಗೆ ಪಾಲಿಕೆಯಿಂದ ಪ್ರತ್ಯೇಕ ಅನುದಾನ ಬಿಡುಗಡೆ ಮಾಡಲಾಯಿತು.

ಬೆಳಗಾವಿಯ ಚಿದಂಬರ ನಗರದಲ್ಲಿ ಹೊಸ ಬೀದಿದೀಪಗಳ ಅಳವಡಿಸಿದ್ದರೂ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ. ಜನರು ಕತ್ತಲಲ್ಲೇ ಸಂಚರಿಸುವಂತಾಗಿದೆ. ‘ಒಂದು ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ, ಮತ್ತೊಂದು ಕಾಮಗಾರಿ ಕೈಗೊಂಡಿದ್ದೇ ಈ ಎಲ್ಲ ಸಮಸ್ಯೆಗಳಿಗೂ ಮೂಲ’ ಎಂದು ಬೆಳಗಾವಿಯ ಪರಿಸರ ಅಭಿವೃದ್ಧಿ ವೇದಿಕೆ ಅಧ್ಯಕ್ಷ ಸುರೇಶ ಉರಬಿನಹಟ್ಟಿ ಹೇಳುತ್ತಾರೆ.

ರಾಜಧಾನಿ ಬೆಂಗಳೂರನ್ನು ‘ಸ್ಮಾರ್ಟ್’ ಆಗಿಸಲು ಮೂರನೇ ಹಂತದಲ್ಲಿ ಯೋಜನೆ ರೂಪಿಸಲಾಗಿದೆ. ಆದರೆ ‘ಸ್ಮಾರ್ಟ್’ ಆಗಿ ಕಣ್ಣಿಗೆ ಕಾಣುವಂತಹ ವಿಶೇಷಗಳೇನೂ ನಡೆದಿಲ್ಲ. ಬದಲಿಗೆ, ಅದೇ ರಸ್ತೆ, ಅದೇ ಉದ್ಯಾನಕ್ಕೆ ಅಭಿವೃದ್ಧಿಯ ಲೇಪನ ಹಚ್ಚುವುದರಲ್ಲೇ ‘ಸ್ಮಾರ್ಟ್ ಸಿಟಿ’ ಯೋಜನೆ ಅಂತಿಮ ಘಟ್ಟಕ್ಕೆ ಬಂದು ನಿಂತಿದೆ.

‘ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್’ 30 ಕಾಮಗಾರಿಗಳನ್ನು ಈವರೆಗೆ ಪೂರ್ಣಗೊಳಿಸಿದೆ. ಮಿಕ್ಕ 14ರಲ್ಲಿ 13 ಯೋಜನೆಗಳ ಕಾಮಗಾರಿ ಸರಾಸರಿ ಶೇ 85ರಷ್ಟು ಪೂರ್ಣಗೊಂಡಿದೆ. ಒಂದು ಕಾಮಗಾರಿ ಇನ್ನೂ ಆರಂಭವೇ ಆಗಿಲ್ಲ. ನಗರದ ಎಲ್ಲ ಭಾಗಗಳ ಸುರಕ್ಷತೆಗೆ ರೂಪಿಸಿರುವ ಐಸಿಸಿಸಿ (ಇಂಟಿಗ್ರೇಟೆಡ್ ಕಮಾಂಡ್ ಆ್ಯಂಡ್ ಕಂಟ್ರೋಲ್ ಸೆಂಟರ್) ಕೂಡ ಇನ್ನೂ ಕಾರ್ಯ-ನಿರ್ವಹಿಸುತ್ತಿಲ್ಲ. ರಸ್ತೆ ಕಾಮಗಾರಿ ಬಿಟ್ಟರೆ ಅತಿಹೆಚ್ಚು ಹಣ (₹113 ಕೋಟಿ) ಇದಕ್ಕೆ ವೆಚ್ಚ ಮಾಡಿರುವುದು ವಿಶೇಷ.

ಪೂರಕ ಮಾಹಿತಿ: ಕೆ.ಜೆ.ಮರಿಯಪ್ಪ, ಆರ್.ಮಂಜುನಾಥ, ಓದೇಶ ಸಕಲೇಶಪುರ, ಇಮಾಮ್ ಹುಸೇನ್ ಗೂಡುನವರ, ಚಂದ್ರಶೇಖರ್ ಆರ್.

ಯೋಜನೆ ಅನುಷ್ಠಾನದಲ್ಲಿ ಮಾತ್ರ ಕರ್ನಾಟಕವೇ ನಂ 1

ಓರೆಕೋರೆಯ ನಡುವೆಯೂ ದೇಶದಲ್ಲಿಯೇ ಓರೆಕೋರೆಯ ನಡುವೆಯೂ ದೇಶದಲ್ಲಿಯೇ ಸ್ಮಾರ್ಟ್ ಸಿಟಿ ಯೋಜನೆಗಳ ಅನುಷ್ಠಾನದಲ್ಲಿ ಕರ್ನಾಟಕ ಅಗ್ರಸ್ಥಾನ ಪಡೆದಿದೆ.

ರಾಜ್ಯದಲ್ಲಿ ₹7892.2 ಕೋಟಿ ವೆಚ್ಚದಲ್ಲಿ 651 ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು, ಅದರಲ್ಲಿ 2023ರ ಫೆಬ್ರುವರಿ ವೇಳೆಗೆ 522 ಯೋಜನೆಗಳು ಪೂರ್ಣಗೊಂಡಿವೆ. 129 ಪ್ರಗತಿಯಲ್ಲಿವೆ. ನಂತರದ ಸ್ಥಾನದಲ್ಲಿ ಮಧ್ಯಪ್ರದೇಶ, ಉತ್ತರ ಪ್ರದೇಶ ಹಾಗೂ ತಮಿಳುನಾಡು ಇವೆ. ರಾಜ್ಯದಲ್ಲಿ ತುಮಕೂರು ಸ್ಮಾರ್ಟ್ ಸಿಟಿ ವ್ಯಾಪ್ತಿಯಲ್ಲಿ ಅತಿಹೆಚ್ಚು ಕಾಮಗಾರಿ ಪೂರ್ಣಗೊಂಡಿವೆ.

ಯೋಜನೆಯ ವ್ಯಾಪ್ತಿಗೆ ಹೊಸದಾಗಿ ಮೈಸೂರು, ಬಳ್ಳಾರಿ, ಕಲಬುರಗಿ ಹಾಗೂ ವಿಜಯಪುರ ಜಿಲ್ಲೆಗಳನ್ನು ಸೇರಿಸುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಿದೆ ಎಂದು ಸ್ಮಾರ್ಟ್ ಸಿಟಿ ಸಂಸ್ಥೆಯ ಮೂಲಗಳು ಹೇಳುತ್ತವೆ.

ಸರ್ಕಾರಿ ಶಾಲೆ ಮಕ್ಕಳಿಗೆ ‘ಸ್ಮಾರ್ಟ್’ ಭಾಗ್ಯ

• ಸಂಧ್ಯಾ ಹೆಗಡೆ

ಮಂಗಳೂರು: ಸರ್ಕಾರಿ ಶಾಲೆಯ ಮಕ್ಕಳು ಸ್ಮಾರ್ಟ್ ಪರದೆಗಳ ಮೂಲಕ ಪಾಠ ಕೇಳುವ ಭಾಗ್ಯವನ್ನು ಮಂಗಳೂರು ಸ್ಮಾರ್ಟ್ ಸಿಟಿ ಯೋಜನೆ ಕಲ್ಪಿಸಿದೆ.

ಸ್ಮಾರ್ಟ್ ಸಿಟಿ ಮಿಷನ್ ಅಡಿಯಲ್ಲಿ ಎಬಿಡಿ (ಪ್ರದೇಶ ಆಧರಿತ ಅಭಿವೃದ್ಧಿ) ಪ್ರದೇಶದಲ್ಲಿರುವ 13 ಸರ್ಕಾರಿ ಶಾಲೆಗಳನ್ನು ಗುರುತಿಸಿ ಅಲ್ಲಿ ಸ್ಮಾರ್ಟ್ ಕ್ಲಾಸ್‌ರೂಮ್‌ಗಳನ್ನು ನಿರ್ಮಿಸಲಾಗಿದೆ. ಸರ್ಕಾರಿ ಶಾಲೆಗಳೆಡೆಗೆ ಹೆಚ್ಚು ವಿದ್ಯಾರ್ಥಿಗಳನ್ನು ಸೆಳೆಯುವ ಉದ್ದೇಶದಿಂದ ಎರಡು ವರ್ಷಗಳ ಹಿಂದೆ ಅನುಷ್ಠಾನಗೊಳಿಸಿರುವ ಯೋಜನೆಯು ಫಲ ಕಂಡಿದೆ. ಹಿರಿಯ ಪ್ರಾಥಮಿಕ, ಪ್ರೌಢಶಾಲೆ, ಪಿಯು ಕಾಲೇಜುಗಳು, ಮಹಿಳಾ ಪಿಯು ಕಾಲೇಜುಗಳು ಸೇರಿದಂತೆ ಐದನೇ ತರಗತಿಯಿಂದ ಪಿಯುವರೆಗೆ ಕಲಿಯುತ್ತಿರುವ ಸರ್ಕಾರಿ ಶಾಲೆಗಳ ಮಕ್ಕಳು ಈಗ ಕೈಯಲ್ಲಿ ಟ್ಯಾಬ್ ಹಿಡಿದು ಸಂಭ್ರಮದಿಂದ ಪಾಠ ಕೇಳುತ್ತಾರೆ.

ಪಾಠ ಮಾಡಲು ಅನುಕೂಲವಾಗುವಂತೆ ಪರದೆ, ಸ್ಮಾರ್ಟ್ ಬೋರ್ಡ್‌ಗಳನ್ನು ಅಳವಡಿಸಿದ್ದು, ಅಧ್ಯಾಪಕರು ಆನ್‌ಲೈನ್‌ನಲ್ಲಿ ಕೂಡ ಪಾಠ ಮಾಡಬಹುದು. ವಿದ್ಯಾರ್ಥಿಗಳಿಗೆ ಶಿಕ್ಷಕರು ನೀಡುವ ಶಿಕ್ಷಣದ ಗುಣಮಟ್ಟ ಸಹ ಪರಿಶೀಲಿಸಬಹುದು ಎನ್ನುತ್ತಾರೆ ಶಾಲೆಯ ಮುಖ್ಯಸ್ಥರು.

‘ಎಲ್ಲ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಮಾದರಿಯ ನೆಟ್‌ಬುಕ್ ಕೊಡುವುದಾಗಿ ಹೇಳಿದ್ದರೂ, ಎಲ್ಲರಿಗೂ ಇದು ದೊರೆತಿಲ್ಲ. ಒಂದು ತರಗತಿಯಲ್ಲಿ ಸರಿಂದ 10 ನೆಟ್‌ಬುಕ್ ಲಭ್ಯವಿದ್ದು, ಮಕ್ಕಳು ಅದನ್ನೇ ಬಳಸುತ್ತಾರೆ. ಯೋಜನೆಯಂತೆ ಎಲ್ಲರಿಗೂ ಇದು ಲಭ್ಯವಾಗಬೇಕು’ ಎಂದು ಪಾಲಕರೊಬ್ಬರು ವಿನಂತಿಸಿದರು.

ವಿದ್ಯಾರ್ಥಿಗಳು ಡಿಜಿಟಲ್ ಕಲಿಕೆಯಲ್ಲಿ ಹೆಚ್ಚು ಆಸಕ್ತರಾಗಿದ್ದಾರೆ. ಮುಂದಿನ ವರ್ಷದಿಂದ ಪೂರ್ಣ ಪ್ರಮಾಣದಲ್ಲಿ ಇವುಗಳನ್ನು ಬಳಕೆ ಮಾಡಿ, ಗರಿಷ್ಠ ಪ್ರಯೋಜನ ಪಡೆಯಲು ಯೋಚಿಸಲಾಗಿದೆ ಎಂದು ಬಲ್ಮಠ ಪಿಯು ಕಾಲೇಜಿನ ಪ್ರಾಚಾರ್ಯ ವಸಂತ ದೇವಾಡಿಗ ಪ್ರತಿಕ್ರಿಯಿಸಿದರು. ‘ಶಾಲೆಗಳ ಅಗತ್ಯತೆ ಆಧರಿಸಿ, ಒಟ್ಟು 392 ನೆಟ್‌ಬುಕ್‌ಗಳನ್ನು ನೀಡಲಾಗಿದೆ. ಸ್ಮಾರ್ಟ್ ಬೋರ್ಡ್, ಯುಪಿಎಸ್, ಇಂಟರ್‌ನೆಟ್ ಸಂಪರ್ಕವನ್ನು ಒದಗಿಸಿದ್ದು, ಸ್ಮಾರ್ಟ್ ಕ್ಲಾಸ್‌ರೂಮ್‌ಗಳ ನಿರ್ವಹಣೆಯನ್ನು ಸಹ ಸ್ಮಾರ್ಟ್ ಸಿಟಿ ಯೋಜನೆಯಡಿ ಮಾಡಲಾಗುತ್ತಿದೆ. ಶಾಲೆಯಲ್ಲಿ ಕೊಠಡಿ ನವೀಕರಣ, ಮೂಲ ಸೌಕರ್ಯ, ಕ್ರೀಡಾ ಸೌಕರ್ಯ ಹೆಚ್ಚಳಕ್ಕೂ ಆದ್ಯತೆ ನೀಡಲಾಗಿದೆ. ಸ್ಮಾರ್ಟ್ ಕ್ಲಾಸ್ ಪರಿಣಾಮವಾಗಿ ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದೆ’ ಎಂದು ಸ್ಮಾರ್ಟ್ ಸಿಟಿ ಅಧಿಕಾರಿ ಅರುಣ್ ಪ್ರಭ ತಿಳಿಸಿದರು.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 16-4-1998

• **ಕಾವೇರಿ: ಕರ್ನಾಟಕದ ಜೊತೆ ಚರ್ಚೆ ಇಲ್ಲ– ಕರುಣಾನಿಧಿ**

ಚೆನ್ನೈ, ಏ.15– ಕಾವೇರಿ ವಿವಾದವನ್ನು ಇತ್ಯರ್ಥಗೊಳಿಸಲು ಮಾತುಕತೆ ಬೇಕೆಂದು ಕರ್ನಾಟಕದ ಮನವಿಯನ್ನು ತಮಿಳುನಾಡು ಸರ್ಕಾರ ತಿರಸ್ಕರಿಸಿದೆ. ಈ ಕುರಿತಂತೆ ಕರ್ನಾಟಕದೊಂದಿಗೆ ಯಾವುದೇ ಮಾತುಕತೆ ನಡೆಸಲು ನಿರಾಕರಿಸಿದೆ.

ಎರಡೂ ರಾಜ್ಯಗಳ ನಡುವೆ ಮಾತುಕತೆ ನಡೆಸಲು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಉತ್ಸುಕರಾದರೂ ಅದನ್ನು ನಿರಾಕರಿಸುವುದಾಗಿ ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರು ವಿಧಾನಸಭೆಯಲ್ಲಿ ಇಂದು ಪ್ರಕಟಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 16-4-1973

• **ಶ್ರೀಮಂತ ರಾಷ್ಟ್ರ ಗಳಿಂದ ವಿಚ್ಛಿದ್ರಕಾರಿ ಶಕ್ತಿಗಳಿಗೆ ಬೆಂಬಲ: ಇಂದಿರಾ**

ರೂರ್ಕೆಲ (ಒರಿಸ್ಸಾ), ಏ. 15– ‘ಭಾರತ ಅಭ್ಯುದಯ ಹೊಂದಿ ಬಲಿಷ್ಠ ರಾಷ್ಟ್ರವಾಗಬಾರದೆಂದು ಬಯಸುವ ವಿದೇಶಿ ಹಾಗೂ ಆಂತರಿಕ ವಿಚ್ಛಿದ್ರಕಾರಿ ಶಕ್ತಿಗಳ ಕುತಂತ್ರದ ವಿರುದ್ಧ ಎಚ್ಚರಿಕೆಯಿಂದಿರಬೇಕು’ ಎಂದು ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ಜನತೆಗೆ ಎಚ್ಚರಿಕೆ ನೀಡಿದ್ದಾರೆ.

‘ಭಾರತವು ಸಮಾಜವಾದದ ಪಥದಲ್ಲಿ ಪ್ರಗತಿ ಹೊಂದುವುದನ್ನು ಸಹಿಸದ ಕೆಲವು ಶ್ರೀಮಂತ ರಾಷ್ಟ್ರಗಳು ಭಾರತದ ಕೆಲವು ಭಾಗಗಳಲ್ಲಿ ಭಾಷೆ, ಪ್ರದೇಶ, ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ದೇಶದಲ್ಲಿ ಅವ್ಯವಸ್ಥೆ ಮತ್ತು ಅರಾಜಕತೆಗೆ ಪ್ರೋತ್ಸಾಹ ನೀಡುತ್ತಿವೆ’ ಎಂದು ಹೇಳಿದರು.

ದಿನ ಭವಿಷ್ಯ

ವಿದ್ವಾಂಶಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಏಪ್ರಿಲ್ 16, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಏಕಾದಶಿ ಗಂ. 18-15 ನಕ್ಷತ್ರ: ಧನಿಷ್ಠಾ ಗಂ. 05-52, ಶತಭಿಷ ಗಂ. 28-07 ಯೋಗ: ಶುಕ್ಲ ಗಂ. 24-13, ಕರಣ: ಬವ ಗಂ. 07-30, ಮೇಷ ಮಾಸದ 02 ನೇ ದಿನ, ಮಳೆನಕ್ಷತ್ರ: ಅಶ್ವಿನಿ 1 ರಾಹುಕಾಲ: ಸಾಯಂಕಾಲ 04-30—06-00, ಸೂರ್ಯೋದಯ: 06-21 ಸೂರ್ಯಾಸ್ತ: 06-40, ಮುಸ್ಲಿಂ ದಿನಾಂಕ: 24 ರಂಜಾನ್ ದಿನ ವಿಶೇಷ: ವರೂಥಿನಿ ಏಕಾದಶಿ, ಶ್ರೀ ವಲ್ಲಭಾಚಾರ್ಯ ಜಯಂತಿ, ಲೋ-ಸಂಡೇ (ಕ್ರಿಶ್ಚಿಯನ್), ಅದೃಷ್ಟ ಸಂಖ್ಯೆ: 5, 8

ಮೇಷ: ಮುಖ್ಯವಾದ ವಿಚಾರಗಳನ್ನು ಮರೆಯುವುದರಿಂದಾಗಿ ಕೆಲಸದಲ್ಲಿ ನಿಧಾನಗತಿ ಉಂಟಾಗಬಹುದು. ಇಂದಿನ ನಿಮ್ಮ ಅಡುಗೆಯಲ್ಲಿ ಉಂಟಾದ ವ್ಯತ್ಯಾಸದಿಂದ ಅಸಮಾಧಾನ ಉಂಟಾಗಬಹುದು. ಮಕ್ಕಳ ಮೇಲೆ ನಿಗಾ ಇರಲಿ.

ವೃಷಭ: ವಿಚಿತ್ರವಾದ ರಾತ್ರಿ ಕನಸುಗಳು ನಿಮ್ಮ ಹಗಲನ್ನು ಚಿಂತೆಯಲ್ಲಿ ಕಳೆಯುವಂತೆ ಮಾಡುತ್ತದೆ. ಮದುವೆಯ ತಯಾರಿ ಭರದಲ್ಲಿ ಸಾಗುತ್ತದೆ. ಕುಟುಂಬದ ಸದಸ್ಯರ ಸಹಕಾರವು ಸಂತಸವನ್ನು ಉಂಟುಮಾಡುತ್ತದೆ.

ಮಿಥುನ: ಇಷ್ಟು ದಿನದವರೆಗೂ ಹುಡುಕುತ್ತಿದ್ದ ನಿಮ್ಮ ಇಷ್ಟವನ್ನು ಉಡುಗೊರೆಯ ರೂಪದಲ್ಲಿ ಪಡೆದು ಸಂತೋಷಪಡುವಿರಿ. ಶುಭ್ರವಾದ ವಸ್ತ್ರಗಳನ್ನು ಧರಿಸಿ ಇಂದಿನ ಸಮಾರಂಭದಲ್ಲಿ ಭಾಗವಹಿಸಿದರೆ ನಿಮ್ಮ ಘನತೆ ಹೆಚ್ಚುವುದು.

ಕರ್ಕಾಟಕ: ನಿಮಗೆ ಹಿಂಸೆಯುಂಟಾಗುತ್ತಿದೆ ಎನ್ನಿಸುವ ವಿಚಾರದಿಂದ ಆದಷ್ಟು ದೂರ ಇರುವಂತಹ ಪ್ರಯತ್ನವನ್ನು ಮಾಡಿ. ಆಹಾರದ ಖರ್ಚುದಿಂದ ಬಳಲುವ ಸಾಧ್ಯತೆಯಿದೆ. ಶಿಕ್ಷಕರ ಬಗ್ಗೆ ಗೌರವ ಹೆಚ್ಚಾಗುವುದು.

ಸಿಂಹ: ಪ್ರಕೃತಿಯ ಸಣ್ಣ ಸಣ್ಣ ಬದಲಾವಣೆಗಳನ್ನು ಗಮನಿಸಿ ಬರೆದಂತಹ ಕಾವ್ಯವು ಜನಮಾನಸವನ್ನು ಗೆಲ್ಲಲಿದೆ. ನಿಮ್ಮ ಮನಸ್ಸಿಗೆ ಒಪ್ಪಿಗೆ ಇಲ್ಲದಂತಹ ಕೆಲಸಗಳನ್ನು ಮಾಡುವಂತಹ ಸಹವಾಸಕ್ಕೆ ಕೈಹಾಕಲು ಹೋಗದಿರಿ.

ಕನ್ಯಾ: ನಿಮ್ಮ ಕೆಲಸ ಕಾರ್ಯಗಳನ್ನು ಮಾಡುವ ರೀತಿಯನ್ನು ಒಬ್ಬರಿಗೆ ವಿಸ್ತಾರವಾಗಿ ವಿವರಿಸುವ ಮೂಲಕ ಅವರ ಸಂದೇಹವನ್ನು ನಿವಾರಿಸಿ ದೂರ ಮಾಡುವಿರಿ. ನಿಮ್ಮ ಕೆಲಸಗಳಿಗೆ ಬೇರೆಯವರ ಮೇಲಿನ ಅತಿಯಾದ ಅವಲಂಬನೆ ಬೇಡ.

ತುಲಾ: ಹಲವು ವಿಷಯದ ಮೇಲೆ ಗಮನ ಇಡುವುದರ ಬದಲು ಒಂದರ ಮೇಲೊಂದರಂತೆ ಮುಗಿಸುವುದು ಒಳಿತು. ಹಲವು ದಿನದಿಂದ ಒಂದೇ ಯೋಜನೆ ಮೇಲೆ ಗಮನ ಹರಿಸುತ್ತಿದ್ದರಿಂದ ಆದ ಆಲಸ್ಯ ಕಡಿಮೆಯಾಗುವುದು.

ವೃಶ್ಚಿಕ: ನಿಮ್ಮ ವಸ್ತುಗಳಿಗಾಗಿ ಇತರರು ಆಸೆ ಪಡುತ್ತಿರುವುದು ನಿಮಗೆ ಹಾಸ್ಯಾಸ್ಪದವಾಗಿ ಕಾಣಬಹುದು. ಮಕ್ಕಳಲ್ಲಿ ಕೆಲವು ವಾಗ್ವಾದಗಳನ್ನು ನೀವು ಮಧ್ಯಪ್ರವೇಶ ಮಾಡಿ ನಿಲ್ಲಿಸುವುದು ಸೂಕ್ತ. ವ್ಯವಹಾರದಲ್ಲಿ ಚಾಣಾಕ್ಷತೆ ಇರಲಿ.

ಧನು: ಮಹಿಳೆಯರು ತಮ್ಮ ದೇಹದಲ್ಲಾಗುತ್ತಿರುವ ಅಸಮರ್ಪಕ ಬದಲಾವಣೆಗಳನ್ನು ಕಡೆಗಣಿಸದೆ ವೈದ್ಯರ ಸಲಹೆಯನ್ನು ಪಡೆದುಕೊಳ್ಳುವುದು ಲೇಸು. ರಂಗೋಲಿ ಕಲಾವಿದರ ಬೇಡಿಕೆ ಹಾಗೂ ಸ್ಥಾನಮಾನ ಹೆಚ್ಚುತ್ತದೆ.

ಮಕರ: ಸಾಮಾಜಿಕ ಕಾರ್ಯ ಎಂದ ನೆಪ ಮಾಡಿಕೊಂಡು ಪಾಠ ಪ್ರವಚನಗಳ ಮೇಲೆ ನಿಮ್ಮ ಗಮನ ಕಡಿಮೆಯಾಗುವುದರಿಂದ ಹೆಚ್ಚಿನ ಕಷ್ಟ ಅನುಭವಿಸಬೇಕಾಗುತ್ತದೆ. ಊರಿನ ಅಥವಾ ಪರಊರಿನ ಉತ್ಸವದಲ್ಲಿ ಭಾಗವಹಿಸಿ ಸಂತುಷ್ಟರಾಗುವಿರಿ.

ಕುಂಭ: ಹಲವು ನಿರೀಕ್ಷೆಗಳೊಂದಿಗೆ ಇಂದು ಬಂಧುಗಳ ಮನೆಗೆ ಪ್ರಯಾಣ ಬೆಳೆಸುವಿರಿ. ಕೆಲವು ದಿನಗಳ ಬಳಿಕ ಪ್ರೀತಿಪಾತ್ರರನ್ನು ಭೇಟಿಯಾಗುವಿರಿ. ನಿರ್ಜಲೀಕರಣದ ಸಮಸ್ಯೆಯನ್ನು ತಡೆಗಟ್ಟಲು ಪದೇ ಪದೇ ದ್ರವಾಹಾರ ಸೇವಿಸಿ.

ಮೀನ: ದೂರ ಸಂಬಂಧಿಗಳು ನಿಮ್ಮ ವೈಯಕ್ತಿಕ ವಿಷಯದಲ್ಲಿ ಮೂಗು ತೂರಿಸುವುದು ಮನಸ್ತಾಪಕ್ಕೆ ಕಾರಣವಾಗುತ್ತದೆ. ಒಪ್ಪಿಗೆ ಹೆಚ್ಚಿನ ಹಣ ಕ್ರೋಢೀಕರಣದಿಂದ ದುಂದುವೆಚ್ಚ ಮಾಡದೆ ಹಣದ ಸದ್ವಿನಿಯೋಗ ಮಾಡಿ.

ಪದಬಂಧ 5290 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆಗಸದಲ್ಲಿ ಹಾರುವ ಲೋಹದ ಹಕ್ಕಿ (3)
3.ಇದು ಹಿಂದಿಯವನ ತೊಂದರೆ! (4)
5.ಅಲಂಕಾರಗಳನ್ನು ಕೊಲ್ಲಲು ನಿಯುಕ್ತನಾದವನು (4)
6.ಸೂರ್ಯನಿಂದ ಬರುವ ಬಿಸಿಲು (4)
6.ಸಹುರದಲ್ಲಿರುವ ದ್ರವ (4)
8.ಕನ್ನಡಿಗನಾದಿರ ಚೀನ್ (4)
10.ಚಾರನ ಒಳ್ಳೆಯ ನಡತೆ (4)
13.ತಿರುಗಿಸಿದ ಕೈ (2)
15.ಮಾದರಿಯಾಗಿದ್ದವರ ಬಡಿದಾಟ (4)
17.ವಲಸೆ ಹೊರಟವರು ನೆಲೆ ನಿಂತ ಪ್ರದೇಶ (4)
18.ವ್ಯಾಕರಣದಲ್ಲಿ ಗಂಡು ಜಾತಿಯನ್ನು ಸೂಚಿಸುವ ಶಬ್ದ (3)

ಮೇಲಿಂದ ಕೆಳಕ್ಕೆ

1.ಹೊಡತಿಯನ್ನು ಕಳೆದುಕೊಂಡವನು (3)
2.ಒಂಬತ್ತಾದರೂ ಇದು ಹೊಸದು (2)
3.ಈ ತರ ಸಿದ್ದತೆ ಬಂದಿದೆ (4)
4.ಪುರಿಯಲ್ಲಿರುವ ರಾಜಕೀಯ ಮುಂದಾಳು (3)
7.ಸೂಕ್ತವಾದುದನ್ನು ಹೀಗೆನ್ನಿ (4)
8.ಚಮರದ ಕೆಲಸಗಾರನಿವನು (3)
9.ಬೇರೆಯ ಉಪಾಯವಿದು (4)
11.ಸಂತೋಷಗೊಳಿಸುವ ಮಾತು (4)
12.ಗಡಕ್ಕನೆ ಬಂದೆರಗಿದ ಗಂಡುಕೋತಿ (3)
14.ಕದ ಪಡೆದು ಖರೀದಿಸಿರುವ ಕೈಬಳೆ (3)
16.ಶತ್ರು ಇಲ್ಲಿದ್ದಾನೆ (2)

1		2	■	■	3		4
■	■	5				■	
6	7			■	■	■	
	■	■	8			9	
		■		■	■		■
■	10		11		■		■
12	■	■		■		13	14
	■	15			16	■	
17			■	■	18		

5289ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹುತ್ತಾಂಗಣ 3.ಉಪೋದ್ಘಾತ 5.ಕೆಸರು 7.ದುಮ್ಮಾನ 9.ಮಧುರ 10.ಶರಣ 11.ಆದರಿಸು 15.ಕರವಾಲ 16.ಕಾರಬಾರು

ಮೇಲಿಂದ ಕೆಳಕ್ಕೆ: 1.ಹರಕೆ 2.ಡಬ್ಬು 3.ಉಮೇದುವಾರ 4.ತಿಥಿ 6.ಸದವಕಾಶ 8.ನರೆದಲೆ 9.ಮಣಕಾಲ 12.ದಬಾರು 13.ಬಿರಕ 14.ಕಾಕಾ

ಸುಡೊಕು 5676

				2		3		5
3		6	5		8		1	
	4			7	3	2		6
	6						7	9
9		1		8				
						1		8
		2	3		7		5	
7	1					6		3
		3	4		2		9	1

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನು ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5675 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋಲಾರ: 'ಮೋದಿ ಉಪನಾಮ' ವಿವಾದಕ್ಕೆ ಕಾರಣವಾದ ಸ್ಥಳದಿಂದಲೇ ಹೋರಾಟ ಶುರು

ಪ್ರಚಾರಕ್ಕೆ ರಾಹುಲ್ ಚಾಲನೆ ಇಂದು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 2019ರ ಏಪ್ರಿಲ್ 13ರಂದು ಮಾಡಿದ್ದ ಭಾಷಣ
- 11 ಎಕರೆ ಜಾಗದಲ್ಲಿ ವೇದಿಕೆ; ಲಕ್ಷ ಆಸನ ವ್ಯವಸ್ಥೆ
- ಮೂರು ಹೆಲಿಪ್ಯಾಡ್ ನಿರ್ಮಾಣ

ದೇಶ ಉಳಿಸಲು ರಾಹುಲ್ ದೇಶದ ಜನರಿಗೆ ಸಂದೇಶ ನೀಡಲಿದ್ದಾರೆ. ಕೋಲಾರ ದೇವಮೂಲೆಯಲ್ಲಿದ್ದು, ಇಲ್ಲಿಂದಲೇ ರಾಜ್ಯ ಚುನಾವಣಾ ಪ್ರಚಾರಕ್ಕೂ ಚಾಲನೆ ನೀಡಲಿದ್ದಾರೆ

ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಕೋಲಾರ: ಕಾಂಗ್ರೆಸ್ ಪಕ್ಷದ 'ಜೈ ಭಾರತ್' ಸಮಾವೇಶವು ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಕೋಲಾರದ ಹೊರವಲಯದಲ್ಲಿ ಭಾನುವಾರ ನಡೆಯಲಿದೆ. ಲೋಕಸಭೆಗೆ 2019ರಲ್ಲಿ ನಡೆದ ಚುನಾವಣೆಯ ಪ್ರಚಾರದ ವೇಳೆಯಲ್ಲಿ, 'ಎಲ್ಲ ಕಳ್ಳರಿಗೂ ಮೋದಿ ಎಂಬ ಉಪನಾಮ ಏಕಿದೆ' ಎಂದು ರಾಹುಲ್ ಇಲ್ಲಿಯೇ ಪ್ರಶ್ನಿಸಿದ್ದರು. ಇದರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಾಗಿ ಅದರಲ್ಲಿ ರಾಹುಲ್ ಅವರಿಗೆ ಶಿಕ್ಷೆ ಪ್ರಕಟವಾಗಿ, ಸಂಸತ್ ಸದಸ್ಯತ್ವದಿಂದ ಅವರು ಅನರ್ಹಗೊಂಡಿದ್ದಾರೆ.

ಇದು, ಬಿಜೆಪಿ ವಿರುದ್ಧದ ರಾಹುಲ್ ಹೋರಾಟದ ಜೊತೆಗೆ ರಾಜ್ಯ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಅಧಿಕೃತ ಪ್ರಚಾರದ ಸಭೆಯೂ ಆಗಿದೆ.

ಬೆಳಿಗ್ಗೆ 11.30ಕ್ಕೆ ಆರಂಭವಾಗಲಿರುವ ಸಮಾವೇಶದಲ್ಲಿ ರಾಹುಲ್ ಅಲ್ಲದೇ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಆಳ್ವಿಕೆ ಇರುವ ಮೂರು ರಾಜ್ಯಗಳ ಮುಖ್ಯಮಂತ್ರಿಗಳು, ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ರಾಷ್ಟ್ರ ಹಾಗೂ ರಾಜ್ಯ ನಾಯಕರು ಪಾಲ್ಗೊಳ್ಳಲಿದ್ದಾರೆ.

ಸಮಾವೇಶಕ್ಕೆ ಟಮಕದಲ್ಲಿ 11 ಎಕರೆ ವಿಶಾಲ ಪ್ರದೇಶದಲ್ಲಿ ಬೃಹತ್ ಪೆಂಡಾಲ್ ಹಾಗೂ ವೇದಿಕೆ ಸಜ್ಜುಗೊಂಡಿದೆ. ಒಂದು ಲಕ್ಷ ಆಸನ ವ್ಯವಸ್ಥೆ ಕಲ್ಪಿಸಲಾಗಿದೆ. ಕಾರ್ಯಕರ್ತರನ್ನು ಕರೆತರಲು 750ಕ್ಕೂ ಹೆಚ್ಚು ಸರ್ಕಾರಿ ಬಸ್ ಮತ್ತು 650ಕ್ಕೂ ಹೆಚ್ಚು ಖಾಸಗಿ ಬಸ್ ವ್ಯವಸ್ಥೆ ಮಾಡಲಾಗಿದೆ. ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿನ ಪಕ್ಷದ ಕಾರ್ಯಕರ್ತರು ಹಾಗೂ ಇತರರನ್ನು ಕರೆ ತರುತ್ತಿದ್ದಾರೆ.

ಖರ್ಗೆ, ರಾಹುಲ್, ಪ್ರಿಯಾಂಕಾ ಅವರಲ್ಲದೇ, ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿಗಳ ಕಟೌಟ್‌ಗಳು ರಾರಾಜಿಸುತ್ತಿವೆ. ರಾಷ್ಟ್ರೀಯ ಹೆದ್ದಾರಿ ಕೋಲಾರದ ಗಡಿಯಿಂದ ಸಮಾವೇಶದ ವೇದಿಕೆವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಪಕ್ಷದ ಬ್ಯಾನರ್, ಧ್ವಜ, ಕಟೌಟ್ ಅಳವಡಿಸಲಾಗಿದೆ.

ರಾಹುಲ್, ಪ್ರಿಯಾಂಕಾ ಹಾಗೂ ಖರ್ಗೆ ಆಗಮಿಸುವ ಹೆಲಿಕಾಪ್ಟರ್‌ಗಳಿಗೆಂದು ಮೂರು ಹೆಲಿಪ್ಯಾಡ್‌ಗಳನ್ನು ಜಾಲಪ್ಪ ಆಸ್ಪತ್ರೆಗೆ ಸೇರಿದ ಸ್ಥಳದಲ್ಲಿ ನಿರ್ಮಿಸಲಾಗಿದೆ. ಅಲ್ಲಿಂದ ವೇದಿಕೆಗೆ ವಾಹನದಲ್ಲಿ ಬರಲಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ತ, ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ, ಜಿಲ್ಲಾ ಅಧ್ಯಕ್ಷ ಸಿ.ಲಕ್ಷ್ಮಿನಾರಾಯಣ ಈ ಎಲ್ಲಾ ವ್ಯವಸ್ಥೆಯನ್ನು ಶನಿವಾರ ವೀಕ್ಷಿಸಿದರು.

'ರಾಹುಲ್ ಮೇಲೆ ಪ್ರಕರಣ ದಾಖಲಿಸಿ ತೊಂದರೆ ಕೊಟ್ಟಿದ್ದಾರೆ. ಶಿಕ್ಷೆ ಕೊಡಿಸುವುದರ ಜೊತೆಗೆ ಸಂಸತ್ ಸದಸ್ಯತ್ವದಿಂದ ಅನರ್ಹಗೊಳಿಸಿದ್ದಾರೆ. ಹೀಗಾಗಿ, ರಾಹುಲ್ ಇಲ್ಲಿಂದಲೇ ದೇಶದ ಜನರೊಂದಿಗೆ ತಮ್ಮ ಭಾವನೆ ಹಂಚಿಕೊಳ್ಳಲಿದ್ದಾರೆ. 'ಜೈ ಭಾರತ್' ಸಮಾವೇಶದ ಮೂಲಕ ದೇಶವನ್ನು ಒಂದುಗೂಡಿಸುವ ಪ್ರಯತ್ನ ಮಾಡಲಿದ್ದಾರೆ' ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಕೋಲಾರದಲ್ಲಿ ಸಮಾವೇಶ ನಡೆಯಲಿರುವ ವೇದಿಕೆ ಮುಂಭಾಗ ಅಳವಡಿಸಿರುವ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಮತ್ತು ಇತರ ನಾಯಕರ ಬೃಹತ್ ಕಟೌಟ್‌ಗಳು

ಆಕ್ರೋಶ ಭುಗಿಲೇಳುವ ಆತಂಕ

ಸಿದ್ದರಾಮಯ್ಯ ಅವರಿಗೆ ಕೋಲಾರ ಕ್ಷೇತ್ರದ ಟಿಕೆಟ್ ನೀಡದ್ದಕ್ಕೆ ಅವರ ಬೆಂಬಲಿಗರು ಹಾಗೂ ಕಾರ್ಯಕರ್ತರಿಂದ ಸಮಾವೇಶದಲ್ಲೂ ಆಕ್ರೋಶ ಭುಗಿಲೇಳುವ ಆತಂಕ ಕಾಂಗ್ರೆಸ್ ಮುಖಂಡರಿಗೆ ಎದುರಾಗಿದೆ.

ಹೀಗಾಗಿ ಮುನ್ನೆಚ್ಚರಿಕೆ ಕ್ರಮ ವಹಿಸಲಾಗಿದೆ. ಯಾರಿಗೂ ಮಾತನಾಡಲು ಅವಕಾಶ ನೀಡದಂತೆ ಕ್ರಮವಹಿಸಲು ಮುಖಂಡರಿಗೆ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಮುಸ್ಲಿಂ ಮುಖಂಡರು ಸೇರಿದಂತೆ ಪಕ್ಷದ ಕೆಲ ಕಾರ್ಯಕರ್ತರು ಸಮಾವೇಶ ಬಹಿಷ್ಕರಿಸಲೂ ನಿರ್ಧರಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ 75
www.prajavani.net
ಇಂದು
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ಪ್ರಸಾರ

ಸೆಲೆಬ್ರಿಟಿ PREMIERE
ಸುನೀಲ್ ಪುರಾಣಿಕ್
ಚಿತ್ರನಟ
ಪುರಾಣಿಕ್ ಪಯಣ
ಬೆಳಿಗ್ಗೆ 10 ಕ್ಕೆ
Prajavani.net Prajavani Prajavani
ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಸಿಡಿ ಬಂಡಿ ಉತ್ಸವ: ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ವಿಜಯಪುರ: ಸಿಡಿ ಬಂಡಿ ಉತ್ಸವದಲ್ಲಿ ಹರಕೆ ಸಲ್ಲಿಸುವ ಸಮಯದಲ್ಲಿ ಸಿಡಿ ಕಂಬಕ್ಕೆ ಕಟ್ಟಿದ್ದ ಮಹಿಳೆಯೊಬ್ಬರು ಸುಮಾರು 25 ಅಡಿ ಎತ್ತರದಿಂದ ಕೆಳಗೆ ಬಿದ್ದು ಸಾವಿಗೀಡಾದ ಘಟನೆ ಇಂಡಿ ತಾಲ್ಲೂಕಿನ ತಾಂಬಾ ಗ್ರಾಮದ ಮಹಾಲಕ್ಷ್ಮೀ ದೇಗುಲದಲ್ಲಿ ಶುಕ್ರವಾರ ನಡೆದಿದೆ.

ಲಕ್ಷ್ಮಿಬಾಯಿ ಮಲ್ಲಪ್ಪ ಪೂಜಾರಿ (58) ಸಾವಿಗೀಡಾದ ಮಹಿಳೆ. ಸಿಡಿ ಬಂಡಿಯ ಕಂಬಕ್ಕೆ ಜೋತಾಡುವಂತೆ ಲಕ್ಷ್ಮಿಬಾಯಿ ಅವರ ಟೊಂಕಕ್ಕೆ ಹುಕ್ಕಿನಿಂದ ಚುಚ್ಚಿ, ಹಗ್ಗದಿಂದ ಕಟ್ಟಲಾಗಿತ್ತು. ಮೆರವಣಿಗೆಯ ವೇಳೆ ಟೊಂಕಕ್ಕೆ ಕಟ್ಟಿದ್ದ ಹಗ್ಗ ಮತ್ತು ಹುಕ್ಕು ತುಂಡಾಗಿ ಲಕ್ಷ್ಮಿ ಅವರು ಕೆಳಗೆ ಬಿದ್ದು, ತೀವ್ರವಾಗಿ ಗಾಯಗೊಂಡಿದ್ದರು. ಬಳಿಕ ಅವರನ್ನು ವಿಜಯಪುರದ ಖಾಸಗಿ ಆಸ್ಪತ್ರೆಗೆ ಸಾಗಿಸಲಾಯಿತು. ಅಷ್ಟರಲ್ಲೇ ತೀವ್ರ ರಕ್ತಸ್ರಾವದಿಂದ ಅವರು ಮೃತಪಟ್ಟಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್.ಡಿ.ಆನಂದಕುಮಾರ್, 'ಯಾವುದೇ ಸುರಕ್ಷಿತ ಕ್ರಮ ಕೈಗೊಳ್ಳದೇ ಕಾರ್ಯಕ್ರಮ ಆಯೋಜಿಸಿರುವ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ ಮತ್ತು ಸದಸ್ಯರ ವಿರುದ್ಧ ದೂರು ದಾಖಲಿಸಿದ್ದು, ಅವರ ವಿರುದ್ಧ ಕ್ರಮಗೊಳ್ಳಲಾಗುವುದು' ಎಂದು ತಿಳಿಸಿದರು.

ಜಿಲ್ಲಾಧಿಕಾರಿ ವಿಜಯ ಮಹಾಂತೇಶ್ ಮಾತನಾಡಿ, 'ಇಂಡಿ ತಹಶೀಲ್ದಾರ್ ಅವರು ಸ್ಥಳಕ್ಕೆ ಭೇಟಿ ನೀಡಿ ದೂರು ದಾಖಲಿಸಿದ್ದಾರೆ. ಸಿಡಿ ಬಂಡಿ ಉತ್ಸವವು ಮೂಢನಂಬಿಕೆ ಆಚರಣೆ ನಿಷೇಧ ಕಾಯ್ದೆ ವ್ಯಾಪ್ತಿಗೆ ಒಳಪಟ್ಟಿರುವ ಬಗ್ಗೆ ಪರಿಶೀಲಿಸಿ, ಸೂಕ್ತಕ್ರಮ ಕೈಗೊಳ್ಳಲಾಗುವುದು. ಜಿಲ್ಲೆಯಲ್ಲಿ ಸಿಡಿ ಬಂಡಿ ಉತ್ಸವ ಆಚರಣೆ ನಿಷೇಧಕ್ಕೆ ಅಗತ್ಯಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಶಾಸಕ ಮಾಡಾಳ್‌ಗೆ ಜಾಮೀನು ಮಂಜೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ಕಚ್ಚಾವಸ್ತು ಪೂರೈಕೆ ಟೆಂಡರ್ ಪ್ರಕ್ರಿಯೆಯಲ್ಲಿ ಲಂಚ ಪಡೆದ ಆರೋಪದ ಮೇಲೆ ಬಂಧಿತರಾಗಿದ್ದ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಕೆ. ಮಾಡಾಳ್ ವಿರೂಪಾಕ್ಷಪ್ಪ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಜಾಮೀನು ಕೋರಿ ವಿರೂಪಾಕ್ಷಪ್ಪ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ. ಜಯಂತ್ ಕುಮಾರ್, ಆದೇಶ ಕಾಯ್ದಿರಿಸಿದ್ದರು. ಶನಿವಾರ ಆದೇಶ ಪ್ರಕಟಿಸಿದ್ದು, ಶಾಸಕರ ಅರ್ಜಿಯನ್ನು ಮಾನ್ಯ ಮಾಡಲಾಗಿದೆ.

ವಿರೂಪಾಕ್ಷಪ್ಪ ಅವರು ₹ 5 ಲಕ್ಷ ಮೌಲ್ಯದ ಬಾಂಡ್ ಹಾಗೂ ಇಬ್ಬರ ವೈಯಕ್ತಿಕ ಶ್ಯೂರಿಟಿ ನೀಡಬೇಕು. ಮೂರು ವಾರಕ್ಕೊಮ್ಮೆ ಲೋಕಾಯುಕ್ತ ಪೊಲೀಸ್ ಕಚೇರಿಗೆ ಹಾಜರಾಗಬೇಕು. ಪ್ರಕರಣದ ತನಿಖೆ ಪೂರ್ಣಗೊಳ್ಳುವವರೆಗೂ ಕೆಎಸ್‌ಡಿಎಲ್ ಕಚೇರಿ ಅಥವಾ ಕಾರ್ಖಾನೆಗಳಿಗೆ ಭೇಟಿ ನೀಡಬಾರದು. ಆರೋಪಿಯು ತಮ್ಮ ಪಾಸ್‌ಪೋರ್ಟ್ ಅನ್ನು ತನಿಖಾಧಿಕಾರಿಯ ವಶಕ್ಕೆ ನೀಡಬೇಕು. ಹೈಕೋರ್ಟ್ ನಿಗದಿಪಡಿಸಿರುವ ಎಲ್ಲ ಮಾರ್ಗಸೂಚಿ ಪಾಲಿಸಬೇಕು ಎಂದು ನ್ಯಾಯಾಲಯ ಷರತ್ತು ವಿಧಿಸಿದೆ.

ಕೆಎಸ್‌ಡಿಎಲ್‌ಗೆ ಕಚ್ಚಾವಸ್ತು ಪೂರೈಕೆ ಗುತ್ತಿಗೆ ಪಡೆದಿದ್ದ ಶ್ರೇಯಸ್ ಕಶ್ಯಪ್ ಎಂಬುವವರಿಂದ ₹ 40 ಲಕ್ಷ ಲಂಚ ಪಡೆಯುತ್ತಿದ್ದ ವಿರೂಪಾಕ್ಷಪ್ಪ ಅವರ ಮಗ, ರಾಜ್ಯ ಲೆಕ್ಕಪತ್ರ ಇಲಾಖೆಯ ಅಧಿಕಾರಿ ಪ್ರಶಾಂತ್ ಮಾಡಾಳ್ ಹಾಗೂ ಇತರರನ್ನು ಲೋಕಾಯುಕ್ತ ಪೊಲೀಸರು ಮಾರ್ಚ್ 2ರಂದು ಬಂಧಿಸಿದ್ದರು. ಕೆಎಸ್‌ಡಿಎಲ್ ಅಧ್ಯಕ್ಷರೂ ಆಗಿದ್ದ ವಿರೂಪಾಕ್ಷಪ್ಪ ಈ ಪ್ರಕರಣದಲ್ಲಿ ಮೊದಲ ಆರೋಪಿಯಾಗಿದ್ದರು. ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡು ನಿರೀಕ್ಷಣಾ ಜಾಮೀನಿಗಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಮಾರ್ಚ್ 7ರಂದು ಹೈಕೋರ್ಟ್ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು. ಆದರೆ, ಷರತ್ತುಗಳನ್ನು ಪಾಲಿಸದ ಕಾರಣದಿಂದ ಜಾಮೀನು ಅರ್ಜಿಯನ್ನು ತಿರಸ್ಕರಿಸಿ ಮಾರ್ಚ್ 27ರಂದು ಆದೇಶ ಹೊರಡಿಸಿತ್ತು. ಅದೇ ದಿನ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು. ಹೈಕೋರ್ಟ್‌ನ ಹಿರಿಯ ವಕೀಲ ಸಿ.ವಿ. ನಾಗೇಶ್ ಅವರು ವಿರೂಪಾಕ್ಷಪ್ಪ ಪರ ವಾದ ಮಂಡಿಸಿದ್ದರು.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ವಿರೂಪಾಕ್ಷಪ್ಪ ಶನಿವಾರ ರಾತ್ರಿಯೇ ಬಿಡುಗಡೆಯಾದರು.

₹ 70 ಲಕ್ಷ ದೇಣಿಗೆ ನೀಡಿದ ಹಳೆ ವಿದ್ಯಾರ್ಥಿ

ಸರ್ಕಾರಿ ಶಾಲೆಗೆ ಊಟದ ಸಭಾಂಗಣ ನಿರ್ಮಿಸಲು ಮುಂದಾದ ಪ್ರಕಾಶ್ ರುಕ್ಮಯ್ಯ

● ಮಲ್ಲಿಕಾರ್ಜುನ ಮುಂಬಾಳು

ಆನಂದಪುರ (ಶಿವಮೊಗ್ಗ ಜಿಲ್ಲೆ): ಸಾಗರ ತಾಲ್ಲೂಕಿನ ಆನಂದಪುರದ ಸರ್ಕಾರಿ ಶಾಲೆಯಲ್ಲಿ ಓದಿದ ವಿದ್ಯಾರ್ಥಿಯೊಬ್ಬರು ತಮ್ಮದೇ ಸಂಸ್ಥೆಯನ್ನು ಕಟ್ಟಿ ಉನ್ನತ ಸ್ಥಾನಕ್ಕೆ ತಲುಪಿದ್ದು, ತಮಗೆ ಶಿಕ್ಷಣ ನೀಡಿದ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಬೆಂಗಳೂರಿನ ರೇಕ್ಯೂ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ರುಕ್ಮಯ್ಯ ಅವರು ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ (ಈಗಿನ ಕರ್ನಾಟಕ ಪಬ್ಲಿಕ್ ಸ್ಕೂಲ್) ಓದಿದ್ದರು. ಈಗ ಅದೇ ಶಾಲೆಗೆ ಹೈಟೆಕ್ ಸ್ಪರ್ಶ ನೀಡುತ್ತಿದ್ದಾರೆ.

₹ 70 ಲಕ್ಷದ ವೆಚ್ಚದಲ್ಲಿ ಆಧುನಿಕ ಸೌಲಭ್ಯಗಳಿರುವ ಸುಸಜ್ಜಿತ ಊಟದ ಸಭಾಂಗಣ ನಿರ್ಮಿಸಿಕೊಡಲು ಮುಂದಾಗಿದ್ದಾರೆ. ಸಭಾಂಗಣ ನಿರ್ಮಾಣ ಕಾಮಗಾರಿಗೆ ಅವರು ಶನಿವಾರ ಭೂಮಿಪೂಜೆ ನೇರವೇರಿಸಿದ್ದಾರೆ.

ಈ ಮೊದಲು,ಪ್ರಕಾಶ್ ಅವರು ₹ 4 ಲಕ್ಷ ವೆಚ್ಚದಲ್ಲಿ ಅನ್ನ ತಯಾರಿಸುವ ಬಾಯ್ಲರ್‌ಗಳು, ₹ 14 ಲಕ್ಷ ವೆಚ್ಚದಲ್ಲಿ ಅಡುಗೆ ಕೊಠಡಿ ಹಾಗೂ ಧ್ವಜಸ್ತಂಭವನ್ನು ನಿರ್ಮಿಸಿಕೊಟ್ಟಿದ್ದರು. ಜೆರಾಕ್ಸ್, ಪ್ರಿಂಟಿಂಗ್ ಯಂತ್ರವನ್ನೂ ಶಾಲೆಗೆ ಕೊಡುಗೆ ನೀಡಿದ್ದರು.

ಈ ಶಾಲೆಯಲ್ಲಿ ಎಲ್‌ಕೆಜಿಯಿಂದ ದ್ವಿತೀಯ ಪಿಯುವರೆಗೆ ಒಟ್ಟು 1,200 ವಿದ್ಯಾರ್ಥಿಗಳು ಓದುತ್ತಿದ್ದಾರೆ.

'ಶಾಲೆಯಲ್ಲಿ ಓದಿದ ಎಲ್ಲ ವಿದ್ಯಾರ್ಥಿಗಳಿಗೆ ತಮ್ಮ ಶಾಲೆಯ ಅಭಿವೃದ್ಧಿ ಮಾಡಬೇಕು ಎಂಬ ಮನೋಭಾವ ಬರುವುದಿಲ್ಲ. ಆದರೆ, ಪ್ರಕಾಶ್ ಅವರು ಮಕ್ಕಳ ಏಳಿಗೆಗಾಗಿ ಹೃದಯ ವೈಶಾಲ್ಯ ತೋರಿರುವುದು ಹೆಮ್ಮೆಯ ವಿಷಯ' ಎಂದು ಶಾಲೆಯ ಉಪ ಪ್ರಾಂಶುಪಾಲ ಈಶ್ವರಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ವೀರಾಂಜನೇಯ ಸೇವಾ ಟ್ರಸ್ಟ್ ಅಧ್ಯಕ್ಷ ಹಾಲಪ್ಪ, ಶಿಕ್ಷಕರಾದ ಶಾಂತಕುಮಾರಿ, ಇಂದಿರಾ, ಶ್ರೀನಿವಾಸ್ ಸಿಂಗ್, ಟೀಕಪ್ಪ, ಎಂಜಿನಿಯರ್ ಪವನ್, ಪ್ರಕಾಶ್ ಅವರ ಸಹೋದರ ಜಗನ್ನಾಥ್ ಸಮಾರಂಭದಲ್ಲಿ ಇದ್ದರು.

ಆನಂದಪುರದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ರೇಕ್ಯೂ ಸಂಸ್ಥೆಯಿಂದ ನಿರ್ಮಾಣವಾಗುತ್ತಿರುವ ಊಟದ ಸಭಾಂಗಣ ನಿರ್ಮಾಣಕ್ಕೆ ಸಂಸ್ಥೆಯ ಸಿಇಒ ಪ್ರಕಾಶ್ ರುಕ್ಮಯ್ಯ ಭೂಮಿಪೂಜೆ ನೆರವೇರಿಸಿದರು

'ವರ್ಷದೊಳಗೆ ಶಾಲೆಗೆ ಹಸ್ತಾಂತರ'

'ಊಟದ ಸಭಾಂಗಣ ಕಟ್ಟಡವನ್ನು ಒಂದು ವರ್ಷದೊಳಗೆ ನಿರ್ಮಿಸಿ ಶಾಲೆಗೆ ಹಸ್ತಾಂತರಿಸುವ ಯೋಜನೆ ಮಾಡಲಾಗಿದೆ. ಸಾರ್ವಜನಿಕ ಜೀವನದಲ್ಲಿ ಗುರುತಿಸುವಂತೆ ಮಾಡಿದ ಈ ಶಾಲೆಗೆ ಮರಳಿ ನಾನು ಏನು ಕೊಡಲು ಸಾಧ್ಯ ಎಂಬುದನ್ನು ಯೋಚನೆ ಮಾಡಿ ಈ ನಿರ್ಧಾರ ಕೈಗೊಂಡೆ. ನಮ್ಮ ಕುಟುಂಬದ 8 ಜನ ಇದೇ ಶಾಲೆಯಲ್ಲಿ ಓದಿದ್ದಾರೆ. ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬ ವಿದ್ಯಾರ್ಥಿಗೆ ಈ ವರ್ಷದಿಂದ ದಿವಂಗತ ತಾಯಿ-ತಂದೆ ಶಾಂತಮ್ಮ-ರುಕ್ಮಯ್ಯ ಹೆಸರಿನಲ್ಲಿ ₹10 ಸಾವಿರ ನೀಡಲಾಗುವುದು' ಎಂದು ಪ್ರಕಾಶ್ ರುಕ್ಮಯ್ಯ ತಿಳಿಸಿದ್ದಾರೆ.

ಪ್ರಕಾಶ್ ರುಕ್ಮಯ್ಯ

'ಲೋಕಸಭಾ ಚುನಾವಣೆಯಲ್ಲಿ ಎಡ ಪಕ್ಷಗಳಿಗೆ ಬೆಂಬಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆಗೆ 2024ರಲ್ಲಿ ನಡೆಯುವ ಚುನಾವಣೆಯಲ್ಲಿ ಎಡಪಕ್ಷಗಳಿಗೆ ಜೆಡಿಎಸ್ ಬೆಂಬಲ ನೀಡಲಿದೆ ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಸಿಪಿಎಂ ನಾಯಕ ಸೀತಾರಾಂ ಯೆಚೂರಿ ಸಂಪರ್ಕದಲ್ಲಿದ್ದಾರೆ. ಕೇರಳದಲ್ಲಿ ಎಡಪಕ್ಷಗಳೊಂದಿಗೆ ಜೆಡಿಎಸ್ ಸೀಟುಗಳನ್ನು ಹಂಚಿಕೊಳ್ಳುತ್ತಿದೆ. ಈ ಕುರಿತು ಒಂದಷ್ಟು ಮಾತುಕತೆಗಳು ನಡೆದಿವೆ ಎಂದರು.

'ತಮ್ಮ ಪರಿಶ್ರಮದಿಂದಾಗಿಯೇ ವಾಲ್ಮೀಕಿ ಸಮುದಾಯಕ್ಕೆ ಎಸ್.ಟಿ ಮೀಸಲಾತಿ ದೊರಕಿದೆ. ಹಾವನೂರು ಆಯೋಗವು ಗ್ರಾಮೀಣ ಒಕ್ಕಲಿಗರನ್ನು ಅತ್ಯಂತ ಹಿಂದುಳಿದವರು ಎಂದು ಗುರುತಿಸಿ ಶೇ 9ರಷ್ಟು ಮೀಸಲಾತಿ ನೀಡಿತ್ತು. ನಾನು ಮುಸ್ಲಿಮರಿಗೆ ಶೇ 4, ಅತಿ ಹಿಂದುಳಿದವರಿಗೆ ಶೇ 1 ಹಾಗೂ ಒಕ್ಕಲಿಗರಿಗೆ ಶೇ 4ರಷ್ಟು ಮೀಸಲಾತಿ ಖಾತ್ರಿಪಡಿಸಿದ್ದೆ' ಎಂದರು.

'ನಾನು ಆಕಸ್ಮಿಕ ಪ್ರಧಾನಿ ಅಲ್ಲ ಎಂದು ಪುನರುಚ್ಚರಿಸಿದ ದೇವೇಗೌಡರು, 13 ಪಕ್ಷಗಳ ಬೆಂಬಲದೊಂದಿಗೆ ಚುನಾಯಿತ ಪ್ರಧಾನಿಯಾಗಿದ್ದೆ. ಆಗ ನಾವು ಕರ್ನಾಟಕದಲ್ಲಿ 16 ಸ್ಥಾನಗಳನ್ನು ಪಡೆದಿದ್ದೆವು. ಜ್ಯೋತಿ ಬಸು ಅವರ ವಿನಂತಿಯನ್ನು ನೋವಿನಿಂದ ಸ್ವೀಕರಿಸಿದ್ದೆ. ಈಗ ಮತ್ತೆ ಎಡ ಪಕ್ಷಗಳ ಜತೆ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದೇವೆ' ಎಂದರು.

ಎಂಜಿನಿಯರಿಂಗ್: ಕಳೆದ ಸಾಲಿನ ಪ್ರವೇಶಕ್ಕೆ ಅನುಮೋದನೆ ವಿಳಂಬ

ಬೆಂಗಳೂರು: ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಮೊದಲ ಸೆಮಿಸ್ಟರ್ ಪರೀಕ್ಷೆ ಮುಂದಿನ ವಾರ ಆರಂಭವಾಗುತ್ತಿದ್ದರೂ, 2022-23 ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ದಾಖಲಾತಿಗೆ ತಾಂತ್ರಿಕ ಶಿಕ್ಷಣ ಇಲಾಖೆ ಅನುಮೋದನೆಯನ್ನೇ ನೀಡಿಲ್ಲ.

ರಾಜ್ಯದ 208 ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಮೊದಲ ವರ್ಷದ ಎಂಜಿನಿಯರಿಂಗ್ ಕೋರ್ಸ್‌ಗೆ 75,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಅನುಮೋದನೆ ನೀಡದೆ ಪರೀಕ್ಷೆಗಳನ್ನು ನಡೆಸುವುದು ಸಾಧ್ಯವಾಗುವುದಿಲ್ಲ. ಹಾಗೆ ಮಾಡುವುದು ಕಾನೂನು ಬಾಹಿರವಾಗುತ್ತದೆ. ಈ ವಿಷಯವನ್ನು ಆದ್ಯತೆಯ ಮೇಲೆ ಪರಿಗಣಿಸಿ, ತುರ್ತು ಅನುಮೋದನೆ ನೀಡುವಂತೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಮಾಡಿದ ವಿನಂತಿಗೂ ಇಲಾಖೆಯ ಸ್ಪಂದನೆ ದೊರೆತಿಲ್ಲ.

'ಎಲ್ಲ ತಾಂತ್ರಿಕ ದೋಷಗಳನ್ನು ಸರಿಪಡಿಸಿಕೊಂಡು ಅನುಮೋದನೆ ನೀಡುವ ಪ್ರಕ್ರಿಯೆ ನಡೆದಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಶಿವಮೂರ್ತಿ ಶರಣರ ಮೇಲೆ ಮತ್ತೊಂದು ದೋಷಾರೋಪ ನಿಗದಿ

ಚಿತ್ರದುರ್ಗ: ಪೋಕ್ಸೊ ಹಾಗೂ ಪರಿಶಿಷ್ಟ ಜಾತಿ, ಪಂಗಡದ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಬಂಧಿತರಾಗಿರುವ ಮುರುಘಾಮಠದ ಶಿವಮೂರ್ತಿ ಶರಣರು ಸೇರಿ ಮೂವರ ಮೇಲಿನ ದೋಷಾರೋಪವನ್ನು ಜಿಲ್ಲಾ ನ್ಯಾಯಾಲಯ ಶನಿವಾರ ನಿಗದಿಪಡಿಸಿತು.

ಪ್ರಕರಣದ ತನಿಖೆ ನಡೆಸಿದ ಪೊಲೀಸರು ನ್ಯಾಯಾಲಯಕ್ಕೆ ಪ್ರತ್ಯೇಕವಾಗಿ ಸಲ್ಲಿಸಿದ್ದ ಎರಡು ದೋಷಾರೋಪ ಪಟ್ಟಿಗಳ ಪೈಕಿ ಒಂದರಲ್ಲಿನ ದೋಷಾರೋಪವನ್ನು ಏ.13ರಂದು ನಿಗದಿಪಡಿಸಲಾಗಿತ್ತು. ಮತ್ತೊಂದು ದೋಷಾರೋಪ ಪಟ್ಟಿಯಲ್ಲಿನ ಆರೋಪವನ್ನು ಶನಿವಾರ ನಿಗದಿಪಡಿಸಲಾಯಿತು.

ಪ್ರಕರಣದ ಮೊದಲ ಆರೋಪಿ ಶಿವಮೂರ್ತಿ ಶರಣರು, ಹಾಸ್ಟೆಲ್‌ನ ಮಹಿಳಾ ವಾರ್ಡನ್ ಹಾಗೂ ಮಠದ ವ್ಯವಸ್ಥಾಪಕರಾಗಿದ್ದ ಪರಮಶಿವಯ್ಯ ನ್ಯಾಯಾಲಯದಲ್ಲಿ ಹಾಜರಿದ್ದರು.

2ನೇ ಜಿಲ್ಲಾ ಸೆಷನ್ಸ್ ನ್ಯಾಯಾಧೀಶೆ ಬಿ.ಕೆ. ಕೋಮಲಾ ವಿಚಾರಣೆಯನ್ನು ಏಪ್ರಿಲ್ 21ಕ್ಕೆ ಮುಂದೂಡಿದರು.

ನೀರು ಬಿಡುಗಡೆಗೆ ಮನವಿ

ಬೆಳಗಾವಿ: ಬೆಳಗಾವಿ, ಕಲಬುರಗಿ ಸೇರಿದಂತೆ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಮೇ ತಿಂಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗುವ ಸಾಧ್ಯತೆಯಿದೆ. ಹಾಗಾಗಿ ಜನರು ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಪೂರೈಸಲು ಕೃಷ್ಣಾ ಹಾಗೂ ಭೀಮಾ ನದಿಗಳಿಗೆ ತಲಾ 3 ಟಿಎಂಸಿ ಅಡಿ ನೀರು ಬಿಡುಗಡೆಗೊಳಿಸಬೇಕು ಎಂದು ರಾಜ್ಯ ಸರ್ಕಾರ ಮಹಾರಾಷ್ಟ್ರ ಸರ್ಕಾರಕ್ಕೆ ಶುಕ್ರವಾರ ಪತ್ರ ಬರೆದಿದೆ.

ವಾಣಿಜ್ಯ ತೆರಿಗೆ ಇಲಾಖೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ,
(ಜಾಗೃತಿ), 3ನೇ ಮಹಡಿ, ವಿಟಿಕೆ-2, 'ಎ' ಬ್ಲಾಕ್, ಕೋರಮಂಗಲ,
ಬೆಂಗಳೂರು – 560 047. ದೂರವಾಣಿ : 080-2570 4962.
ಸಂಖ್ಯೆ : ವಾತೆಜಂಆ/ಜಾಗೃತಿ/ವಾತೆಅ.12/ಬಅಸ/2021-22 ದಿನಾಂಕ : 13-04-2023
ಪತ್ರಿಕಾ ಪ್ರಕಟಣೆ
ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ)-12, ಬೆಂಗಳೂರು ಇವರು ದಿನಾಂಕ : 15-03-2021 ರಲ್ಲಿ ತೆರಿಗೆ / ದಂಡ ಬಾಬ್ತಿಗೆ ಮುಟ್ಟುಗೋಲು ಹಾಕಿಕೊಂಡಿರುವ ಸರಕುಗಳಾದ Copper Metal Scrap (13,956 kgs) Brass Metal Scrap (534 kgs) Aluminium Metal Scrap (978 kgs) Aluminium Copper Scrap (1532 kgs) ಗಳನ್ನು ಬಹಿರಂಗ ಹರಾಜಿನಲ್ಲಿ ದಿನಾಂಕ : 27-04-2023 ರ ಬೆಳಿಗ್ಗೆ 11.30 ಗಂಟೆಗೆ ವಿಲೇವಾರಿ ಮಾಡಲಿದ್ದು, ಆಸಕ್ತರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸ ಬಹುದಾಗಿರುತ್ತದೆ. ಹರಾಜಿನ ಇ.ಎಂ.ಡಿ. ಮೊತ್ತ ರೂ. 25,000/- ಗಳಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕೆಳಗಿನ ಸಹಿ ಮಾಡಿದ ಅಧಿಕಾರಿಯವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಲು ಕೋರಿರುತ್ತಾರೆ.
ಸಹಿ/- ವಾಣಿಜ್ಯ ತೆರಿಗೆ ಅಧಿಕಾರಿ,
(ಜಾಗೃತಿ)-12, ಬೆಂಗಳೂರು.
ವಾಸಾಇ/ಬೆಂ.ನ./12/ಮಣಿಪಾಲ್/2023-24

ಚಾಲಕರಿಗೆ ರಾಷ್ಟ್ರಮಟ್ಟದ ಪ್ರಶಸ್ತಿ

ಹುಬ್ಬಳ್ಳಿ: ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಚಿಕ್ಕೋಡಿ ವಿಭಾಗದ ಅಥಣಿ ಘಟಕದ ಚಾಲಕ ಕೇದಾರಿ ತಮ್ಮಣ್ಣ ಬಕಾರಿ ಮತ್ತು ಬೆಳಗಾವಿ ವಿಭಾಗದ ಬೆಳಗಾವಿ- 2ನೇ ಘಟಕದ ಚಾಲಕ ಸುರೇಶ ಎನ್. ಭಾವಿಕಟ್ಟಿ ಅವರು ಎಎಸ್‌ಟಿಆರ್‌ಯು (ಅಸೋಸಿಯೇಷನ್ ಆಫ್ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಅಂಡರ್‌ಟೇಕಿಂಗ್ಸ್) 'ಹೀರೋಸ್ ಆನ್ ದ ರೋಡ್' ರಾಷ್ಟ್ರಮಟ್ಟದ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಏ. 18ರಂದು ದೆಹಲಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ

ನಿಧನ ವಾರ್ತೆ

ಮಾಜಿ ಶಾಸಕ ವೆಂಕಟಸ್ವಾಮಿ

ದೇವನಹಳ್ಳಿ (ಬೆಂಗಳೂರು ಗ್ರಾ.): ದೇವನಹಳ್ಳಿಯ ಮಾಜಿ ಶಾಸಕ, ಕಾಂಗ್ರೆಸ್ ಮುಖಂಡ ವೆಂಕಟಸ್ವಾಮಿ (53) ಅವರು ಹೃದಯಾಘಾತದಿಂದ ಶನಿವಾರ ನಿಧನರಾದರು.

ಅವರಿಗೆ ಇಬ್ಬರು ಮಕ್ಕಳು ಮತ್ತು ಪತ್ನಿ ಇದ್ದಾರೆ. ಸಾದಹಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಿತು. ಇದಕ್ಕೂ ಮೊದಲು ಸ್ವಗೃಹದ ಬಳಿ ಪ್ರಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಪಕ್ಷಾತೀತವಾಗಿ ಎಲ್ಲ ರಾಜಕೀಯ ಮುಖಂಡರು ಆಗಮಿಸಿ ಮೃತರಿಗೆ ಅಂತಿಮ ನಮನ ಸಲ್ಲಿಸಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಾಮಲಿಂಗಾರೆಡ್ಡಿ, ಕೃಷ್ಣ ಬೈರೇಗೌಡ, ಕೆ.ಎಚ್.ಮುನಿಯಪ್ಪ ಪುಷ್ಪನಮನ ಸಲ್ಲಿಸಿದರು.

2008ರಲ್ಲಿ ಜೆಡಿಎಸ್ ಅಭ್ಯರ್ಥಿ ಜಿ.ಚಂದ್ರಣ್ಣ ಅವರನ್ನು ಸೋಲಿಸಿದ್ದ ವೆಂಕಟಸ್ವಾಮಿ ಶಾಸಕರಾಗಿದ್ದರು. 2013ರಲ್ಲಿ ಜೆಡಿಎಸ್‌ನ ಪಿಳ್ಳಮುನಿಶಾಮಪ್ಪ ವಿರುದ್ಧ ಪರಭಾವಗೊಂಡಿದ್ದರು. 2018ರಲ್ಲಿ ಜೆಡಿಎಸ್‌ನ ನಿಸರ್ಗ ನಾರಾಯಣಸ್ವಾಮಿ ವಿರುದ್ಧ ಸೋಲು ಅನುಭವಿಸಿದ್ದರು. ಈ ಬಾರಿ ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಅವರಿಗೆ ಟಿಕೆಟ್ ಕೈ ತಪ್ಪಿತ್ತು.

ಕಳೆದ ಒಂದು ತಿಂಗಳಲ್ಲಿಯೇ ವೆಂಕಟಸ್ವಾಮಿ ಅವರಿಗೆ ಎರಡು ಬಾರಿ ಲಘು ಹೃದಯಾಘಾತವಾಗಿತ್ತು. ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಕ್ಷೇತ್ರಕ್ಕೆ ಮರಳಿದ್ದರು. ಶುಕ್ರವಾರ ತಡರಾತ್ರಿ ಮೂರನೇ ಬಾರಿ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ಬೆಂಗಳೂರಿನ ನಾರಾಯಣ ಹೃದಯಾಲಯಕ್ಕೆ ಸೇರಿಸಲಾಗಿತ್ತು.

ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಈಗಿನ ರಾಜಕೀಯ ಚಿತ್ರಣ • ಅಭಿವೃದ್ಧಿ ಮಂತ್ರ ಜಪಿಸುತ್ತಿರುವ ವಿವಿಧ ಪಕ್ಷಗಳ ನಾಯಕರು

ಕಾಂಗ್ರೆಸ್ 'ಮೌನ ವ್ರತ'; ಬಿಜೆಪಿ 'ಸೌಮ್ಯ' ನಡೆ

• ಗಣೇಶ ಚಂದನಶಿವ/ಪ್ರವೀಣ ಕುಮಾರ್ ಪಿ.ವಿ/ ಸಂಧ್ಯಾ ಹೆಗಡೆ

ಮಂಗಳೂರು: ವಿಧಾನಸಭಾ ಚುನಾವಣೆ ಘೋಷಣೆ ಯಾಗುತ್ತಿದ್ದಂತೆ ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಾಂಗ್ರೆಸ್‌ನವರು 'ಹಿಂದುತ್ವ'ದ ವಿಚಾರದಲ್ಲಿ ಎಚ್ಚರಿಕೆಯ ನಡೆ ಇಡುತ್ತಿದ್ದರೆ, ಬಿಜೆಪಿಯವರು ಅಭಿವೃದ್ಧಿ ವಿಷಯವನ್ನು ಮುನ್ನೆಲೆಗೆ ತಂದಿದ್ದಾರೆ.

'ಹಿಂದುತ್ವದ ಪ್ರಯೋಗ ಶಾಲೆ' ಎಂದು ಪ್ರಸಿದ್ಧಿ ಪಡೆದಿರುವ ಈ ಭಾಗದಲ್ಲಿ, ಒಂದು ವರ್ಷದಿಂದ ವಿವಿಧ ರೂಪಗಳಲ್ಲಿ ಸಾಮಾಜಿಕವಾಗಿ ವ್ಯಕ್ತಗೊಳ್ಳು-ತ್ತಿದ್ದ ಪ್ರಖರ ಹಿಂದುತ್ವದ ವಿಚಾರಧಾರೆಗಳು ಈಗ ಸೌಮ್ಯರೂಪ ಪಡೆದಿವೆ.

'ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆಯ ಸಂದರ್ಭದಲ್ಲಿ ಹಿಂದುತ್ವ ವಿಚಾರಧಾರೆಯ ಯುವಕರು ಬಿಜೆಪಿ ಜನಪ್ರತಿನಿಧಿಗಳ ವಿರುದ್ಧವೇ ತಿರುಗಿ ಬಿದ್ದಾಗ, ಪಕ್ಷದ ನಾಯಕರು ಬೆಚ್ಚಿ ಬಿದ್ದಿದ್ದರು. ಹಿಂದುತ್ವದ ಕಾರ್ಯಸೂಚಿ ಪಕ್ಷಕ್ಕೆ ತಿರುಗು-ಬಾಣವಾಗುವ ಆತಂಕದಲ್ಲಿ ಯುವಕರ ಆಕ್ರೋಶವನ್ನು ತಣ್ಣಗಾಗಿಸಲು ಯತ್ನಿಸಿದ್ದರು. ಆಝಾನ್ ಘೋಷಣೆಯ ಬಗ್ಗೆ ಪ್ರಬಲ ಧ್ವನಿ ಎದ್ದಿದ್ದು ಕರಾವಳಿಯಲ್ಲಿ. ಧ್ವನಿವರ್ಧಕ ಬಳಕೆ ಮೇಲಿನ ನಿರ್ಬಂಧದ ಕರಿನೆರಳು ಹಿಂದೂಗಳ ನಂಬಿಕೆಯಾಗಿರುವ ಯಕ್ಷಗಾನ, ಭೂತಕೋಲ ಆಚರಣೆಯ ಮೇಲೆಯೂ ಬಿದ್ದಿತ್ತು. ಇವೆಲ್ಲ ಬೆಳವಣಿಗೆಗಳು ಬಿಜೆಪಿಗೆ ಕತ್ತಿಯ ಮೇಲಿನ ನಡಿಗೆಯಂತಾಗಿದ್ದು, ಹಿಂದುತ್ವ ಕಾರ್ಯಸೂಚಿ ಬದಲಾವಣೆಗೆ ಮುನ್ನುಡಿಯಾಗುತ್ತಿವೆ' ಎಂದು ಹೆಸರು ಬಹಿರಂಗಪಡಿಸಲು ಒಪ್ಪದ ಬಿಜೆಪಿ ಮುಖಂಡರೊಬ್ಬರು ಹೇಳಿದರು.

'ಕೆಲವು ದಿನಗಳ ಹಿಂದೆ ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ ಭಾಗವತ್ ಅವರು ಭಾರತದಲ್ಲಿ ಮುಸ್ಲಿಮರು ಭಯಪಡುವ ಅಗತ್ಯವಿಲ್ಲ, ಭಾರತದಲ್ಲಿ ಬದುಕಲು ಅವರಿಗೆ ಯಾವುದೇ ತೊಂದರೆ ಇಲ್ಲ' ಎಂದಿದ್ದ ಹೇಳಿಕೆ ಚರ್ಚೆಗೆ ಗ್ರಾಸವಾಗಿತ್ತು. ಇದು ಕೂಡ ಕಾರ್ಯತಂತ್ರದ ಮಗ್ಗುಲು ಬದಲಿಸುವ ಸೂಕ್ಷ್ಮ ಸಂದೇಶವಾಗಿದೆ' ಎನ್ನುವುದು ಅವರ ವಿವರಣೆ.

ಬಲಾಬಲ			
ಜಿಲ್ಲೆ	ಒಟ್ಟು ಕ್ಷೇತ್ರ	ಬಿಜೆಪಿ	ಕಾಂಗ್ರೆಸ್
ದಕ್ಷಿಣ ಕನ್ನಡ	8	7	1
ಉಡುಪಿ	5	5	0
ಚಿಕ್ಕಮಗಳೂರು	5	4	1
ಒಟ್ಟು	18	16	2

ಸದಾ ಒಂದಿಲ್ಲೊಂದು ಹೇಳಿಕೆ ಮೂಲಕ ಸುದ್ದಿಯಲ್ಲಿರುತ್ತಿದ್ದ ಕಾಂಗ್ರೆಸ್‌ನ ದಕ್ಷಿಣ ಕನ್ನಡ ಜಿಲ್ಲಾ ಮುಖಂಡರು ಚುನಾವಣೆ ಪ್ರಕ್ರಿಯೆ ಆರಂಭ ವಾದಾಗಿನಿಂದ 'ಮೌನ ವ್ರತ' ಆಚರಿಸುತ್ತಿದ್ದಾರೆ. 2018ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕರ ಕೆಲವೊಂದು ಹೇಳಿಕೆಗಳೇ ಜಿಲ್ಲೆಯಲ್ಲಿ ಪಕ್ಷದ ಅಭ್ಯರ್ಥಿಗಳ ಪಾಲಿಗೆ ಮುಳುವಾದವು ಎಂಬ ಕಾರಣಕ್ಕೆ ಈ ಬಾರಿ 'ಕೈ' ಪಾಳಯದ ಕಲಿಗಳು ಅಳೆದು ತೂಗಿ ಮಾತನಾಡಲಾರಂಭಿಸಿದ್ದಾರೆ.

ಮೂಲ್ಕಿ- ಮೂಡುಬಿದಿರೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಿಥುನ್ ರೈ ಅವರು ಮೂಡುಬಿದಿರೆ ಸಮೀಪದ ಪುತ್ತಿಗೆಯಲ್ಲಿ ಇತ್ತೀಚೆಗೆ ಕಾರ್ಯಕ್ರಮ-ವೊಂದರಲ್ಲಿ ಮಾತನಾಡುವಾಗ, 'ಉಡುಪಿಯ ಶ್ರೀಕೃಷ್ಣ ಮಠಕ್ಕೆ ಜಾಗ ನೀಡಿದ್ದು ಮುಸ್ಲಿಮರು' ಎಂದು ಹೇಳಿದ್ದರು. 'ಹಿಂದೂ ವಿರೋಧಿ' ಎಂಬ ಚರ್ಚೆ ಸಾಮಾಜಿಕ ಮಾಧ್ಯಮಗಳಲ್ಲಿ ನಡೆದಿತ್ತು. ಈ ಹೇಳಿಕೆಯಿಂದ ಅನಗತ್ಯ ಗೊಂದಲ ಸೃಷ್ಟಿಯಾಗುವ ಸೂಚನೆ ಸಿಕ್ಕ ತಕ್ಷಣವೇ ಎಚ್ಚೆತ್ತುಕೊಂಡ ಮಿಥುನ್ ರೈ, 'ನಾನು ಪೇಜಾವರ ಮಠದ ವಿಶ್ವೇಶ ತೀರ್ಥರ ಹೇಳಿಕೆಯನ್ನು ಪುನರುಚ್ಚರಿಸಿದ್ದೆ ಅಷ್ಟೇ' ಎಂದು ಸಮಜಾಯಿಷಿ ನೀಡಿದರು. ಬಳಿಕ ವಿವಾದ ತಣ್ಣಗಾಗಿತ್ತು.

ಈ ಬೆಳವಣಿಗೆ ಬಳಿಕ, ಜಿಲ್ಲಾ ಮುಖಂಡರಿಗೆ, 'ಹೇಳಿಕೆ ನೀಡುವಾಗ ಎಚ್ಚರ ವಹಿಸಿ' ಎಂಬ ಮೌಖಿಕ ಸಂದೇಶ ಪಕ್ಷದ ಮುಖಂಡರಿಂದ ರವಾನೆಯಾಗಿದೆ.

'ನಾವು ಏನೇ ಹೇಳಿಕೆ ನೀಡಿದರೂ ಬಿಜೆಪಿಯವರು ಅದನ್ನು ಅವರ ಅನುಕೂಲಕ್ಕೆ ತಕ್ಕಂತೆ ತಿರುಗಿಸಿಬಿಡು-ತ್ತಾರೆ. ಕೆಲವೊಮ್ಮೆ ಸುದ್ದಿಗೋಷ್ಠಿಗಳಲ್ಲೂ ಪತ್ರಕರ್ತರು ಕೇಳುವ ಪ್ರಶ್ನೆಗೆ ಉತ್ತರಿಸುವಾಗ ಬಾಯಿತಪ್ಪಿ ಬಂದ ಮಾತನ್ನೇ ಮುಂದಿಟ್ಟು ಸಾಮಾಜಿಕ ಮಾಧ್ಯಮ ಗಳಲ್ಲಿ ಬೇರೆಯೇ ರೀತಿ ಬಿಂಬಿಸಲಾಗುತ್ತಿದೆ. ಹಾಗಾಗಿ ಯಾವುದಕ್ಕೂ ಅನಗತ್ಯ ಪ್ರತಿಕ್ರಿಯೆ ನೀಡದೇ, ನಿಮ್ಮ ಪಾಡಿಗೆ ಚುನಾವಣೆ ಪ್ರಚಾರದಲ್ಲಿ ತೊಡಗಬೇಕು ಎಂದು ಪಕ್ಷದ ವರಿಷ್ಠರ ಸೂಚನೆಯೂ ಇದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಕಾಂಗ್ರೆಸ್ ಮುಖಂಡರೊಬ್ಬರು ತಿಳಿಸಿದರು.

ಮಂಗಳೂರಿನಲ್ಲಿ ವಾರಕ್ಕೆ ಕನಿಷ್ಠ ಎರಡಾದರೂ ಸುದ್ದಿಗೋಷ್ಠಿಗಳನ್ನು ನಡೆಸುತ್ತಾ ಆಗುಹೋಗುಗಳಿಗೆ ಪ್ರತಿಕ್ರಿಯಿಸುತ್ತಿದ್ದ ವಿಧಾನಸಭೆಯ ವಿರೋಧ ಪಕ್ಷದ ಉಪ ನಾಯಕ ಯು.ಟಿ.ಖಾದರ್ ಅವರೂ ಚುನಾವಣೆ ಘೋಷಣೆಯಾಗುತ್ತಿದ್ದಂತೆಯೇ ಬಹುತೇಕ 'ಮೌನಿ'ಯಾಗಿದ್ದಾರೆ.

ಸಿ.ಟಿ. ರವಿ ಅಭಿವೃದ್ಧಿ ಮಂತ್ರ

ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಸಹ ಸ್ವ ಕ್ಷೇತ್ರ ಚಿಕ್ಕಮಗಳೂರಲ್ಲಿ ಹಿಂದುತ್ವಕ್ಕಿಂತ ಅಭಿವೃದ್ಧಿಯ ವಿಷಯವನ್ನೇ ಮುನ್ನೆಲೆಗೆ ತರುತ್ತಿದ್ದಾರೆ. ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ, ರಸ್ತೆ ಅಭಿವೃದ್ಧಿಯಂತಹ ಆಗಿರುವ ಕೆಲಸಗಳ ಬಗ್ಗೆಯೇ ಅವರು ಹೆಚ್ಚು ಪ್ರಸ್ತಾಪಿಸುತ್ತಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ದತ್ತ ಪೀಠ ವಿವಾದ ಚುನಾವಣೆಯ ಪ್ರಧಾನ ವಿಷಯವಾಗಿ ಉಳಿದಿಲ್ಲ. ಶೃಂಗೇರಿ ಕ್ಷೇತ್ರದಲ್ಲಿ ಸುಸಜ್ಜಿತ ಸರ್ಕಾರಿ ಆಸ್ಪತ್ರೆ ಸ್ಥಾಪನೆ, ಕಾಡಂಚಿನ ಜನರ ಸಮಸ್ಯೆ ಮತ್ತು ಮೂಲಸೌಲಭ್ಯ, ಕಡೂರು ಕ್ಷೇತ್ರದಲ್ಲಿ ಕೈಗಾರೀಕರಣದ ಮೂಲಕ ಉದ್ಯೋಗ ಸೃಜನೆ, ತರೀಕೆರೆ ಕ್ಷೇತ್ರದಲ್ಲಿ ತೋಟಗಾರಿಕೆ ಬೆಳೆಗಳಿಗೆ ಉತ್ತೇಜನ ಮತ್ತು ಸಂಸ್ಕರಣೆ, ಮೂಡಿಗೆರೆ ವಿಧಾನಸಭಾ ಕ್ಷೇತ್ರಗಳಲ್ಲಿ ವಸತಿ ಮತ್ತು ವನ್ಯಜೀವಿ-ಮಾನವ ಸಂಘರ್ಷ ತಡೆ ವಿಷಯಗಳೇ ಪ್ರಧಾನವಾಗಿ ಚರ್ಚೆಗೆ ಬರುತ್ತಿವೆ.

ಹೇಳಿಕೆ ನೀಡುವಾಗ ಎಚ್ಚರ ವಹಿಸುವಂತೆ ಪಕ್ಷದ ವರಿಷ್ಠರು ಜಿಲ್ಲಾ ಮುಖಂಡರಿಗೆ ಸೂಚನೆ ನೀಡಿರುವುದು ನಿಜ. ಆದರೆ ಯಾವುದೇ ಹೇಳಿಕೆ ನೀಡದಂತೆ ಪಕ್ಷವು ಯಾರ ಮೇಲೂ ನಿರ್ಬಂಧ ಹೇರಿಲ್ಲ

ಹರೀಶ್ ಕುಮಾರ್, ದ.ಕ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ

'ಬಿಜೆಪಿಯೇ ಭರವಸೆ' ಎಂಬುದು ಈ ಬಾರಿಯ ಚುನಾವಣೆಯ ಘೋಷವಾಕ್ಯ. ಬಿಜೆಪಿಯ ರಾಷ್ಟ್ರೀಯ ವಿಚಾರಧಾರೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಾಧನೆಯನ್ನು ಮುಂದಿಟ್ಟುಕೊಂಡು ಮತ ಕೇಳುತ್ತೇವೆ

ಸುದರ್ಶನ್ ಮೂಡುಬಿದಿರೆ, ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ

ರಮಾನಾಥ ರೈ 'ಕಲಿತ ಪಾಠ'!

ಬಂಟ್ವಾಳ ಕಾಂಗ್ರೆಸ್ ಅಭ್ಯರ್ಥಿಯೂ ಆಗಿರುವ ಕಾಂಗ್ರೆಸ್ ಹಿರಿಯ ಮುಖಂಡ ರಮಾನಾಥ ರೈ ಅವರಂತೂ ಪಕ್ಷದ ಉಳಿದೆಲ್ಲ ನಾಯಕರಿಗಿಂತ ತೀಕ್ಷ್ಣ ಪ್ರತಿಕ್ರಿಯೆ ನೀಡುವುದಕ್ಕೆ ಹೆಸರುವಾಸಿ.

ಕಲ್ಲಡ್ಕದ ಶಾಲೆಯೊಂದಕ್ಕೆ ಆಹಾರ ಪೂರೈಕೆಗೆ ಸಂಬಂಧಿಸಿದಂತೆ ಅವರು ನೀಡಿದ ಹೇಳಿಕೆಯನ್ನೇ ಮುಂದಿಟ್ಟುಕೊಂಡು ರಾಜಕೀಯ ಎದುರಾಳಿಗಳು 2018ರ ಚುನಾವಣೆ ಸಂದರ್ಭದಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಅವರ ವಿರುದ್ಧ ಮುಗಿಬಿದ್ದಿದ್ದರು. ಈ ಕುರಿತು ರೈ ಅವರು ನೀಡಿದ ಪ್ರತಿಕ್ರಿಯೆಗಳೂ ಅವರಿಗೆ ಚುನಾವಣೆಯಲ್ಲಿ ಹಿನ್ನಡೆಯಾಗುವುದಕ್ಕೆ ಸ್ವಲ್ಪಮಟ್ಟಿಗೆ ಕಾರಣವಾಗಿದ್ದವು ಎಂದು ಕಾಂಗ್ರೆಸ್ ಪಕ್ಷದವರೇ ಒಪ್ಪಿಕೊಳ್ಳುತ್ತಾರೆ.

'ನಾನು ಚುನಾವಣೆಯಲ್ಲಿ ಸೋತಿದ್ದಕ್ಕೆ ಬೇಸರವಿಲ್ಲ. ಆದರೆ, ಇಲ್ಲಸಲ್ಲದ ವಿವಾದ ಸೃಷ್ಟಿಸಿ, ಅಪಪ್ರಚಾರ ನಡೆಸಿ ನನ್ನನ್ನು ಸೋಲಿಸಿದ ಬಗ್ಗೆ ನೋವಿದೆ' ಎಂದು ರಮಾನಾಥ ರೈ ಅವರೇ ಇತ್ತೀಚೆಗೆ ಹೇಳಿಕೊಂಡಿದ್ದರು. ಈ ಸಲದ ಚುನಾವಣೆಯಲ್ಲಿ ರೈ ಅವರು 'ಅನವಶ್ಯಕ' ಹೇಳಿಕೆ ನೀಡುವ ಗೊಡವೆಗೇ ಹೋಗುತ್ತಿಲ್ಲ.

ಪೂರಕ ಮಾಹಿತಿ: **ಬಿ.ಜೆ. ಧನ್ಯಪ್ರಸಾದ್, ಬಾಲಚಂದ್ರ ಎಚ್.**

ಪರಿಣಾಮ ಬೀರಬಹುದಾದ ವಿಷಯಗಳು

ಚಿಕ್ಕಮಗಳೂರು ಜಿಲ್ಲೆ



- ಪ್ರತ್ಯೇಕ ಹಾಲು ಒಕ್ಕೂಟ ಸ್ಥಾಪನೆ
- ಸಾಲದ ಸುಳಿಗೆ ಸಿಲುಕಿ ಸ್ಥಗಿತಗೊಂಡಿರುವ ಕೊಪ್ಪದ ಸಹಕಾರ ಸಾರಿಗೆ ಪುನಶ್ಚೇತನ
- ಕಾಡಂಚಿನ ಗ್ರಾಮಗಳಲ್ಲಿಯ ವಸತಿ, ಭೂಮಿ ಹಾಗೂ ಪ್ರಾಣಿ–ಮಾನವ ಸಂಘರ್ಷದ ಸಮಸ್ಯೆ
- ಪರಿಸರಕ್ಕೆ ಪೂರಕವಾದ ಪ್ರವಾಸೋದ್ಯಮ ಅಭಿವೃದ್ಧಿ
- ವಸತಿ ರಹಿತರು, ವಲಸೆ ಕಾರ್ಮಿಕರಿಗೆ ವಸತಿ ಸಮಸ್ಯೆ
- ಕೈಗಾರಿಕೆ ಅಭಿವೃದ್ಧಿ ಮೂಲಕ ಉದ್ಯೋಗ ಸೃಜನೆ
- ಕೆರೆಗಳಿಗೆ ನೀರು ತುಂಬಿಸುವ ಯೋಜನೆ

ದಕ್ಷಿಣ ಕನ್ನಡ ಜಿಲ್ಲೆ

- ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಪೂರೈಕೆ ಸಮಸ್ಯೆ (ಕಡುಬೇಸಿಗೆಯ ಕಾರಣಕ್ಕೆ)
- ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಸಿಗದ ಉದ್ಯೋಗ
- ಮುಸ್ಲಿಮರ 2ಬಿ ಮೀಸಲಾತಿ ರದ್ದತಿ
- ಕಡಲ್ಕೊರೆತ ಸಮಸ್ಯೆಗೆ ಸಿಗದ ಶಾಶ್ವತ ಪರಿಹಾರ
- ಪ್ರವಾಸೋದ್ಯಮ ಅಭಿವೃದ್ಧಿಗೆ ಬೇಕಾದ ಇನ್ನಷ್ಟು ವೇಗ
- ಸ್ಮಾರ್ಟ್ ಸಿಟಿ ಕಾಮಗಾರಿಯಲ್ಲಿ ವಿಳಂಬ

ಉಡುಪಿ ಜಿಲ್ಲೆ

- ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆ ಪುನಶ್ಚೇತನ
- ವಾರಾಹಿ ನೀರಾವರಿ ಯೋಜನೆ ಅನುಷ್ಠಾನ ವಿಳಂಬ
- ಪ್ರವಾಸೋದ್ಯಮ ಉತ್ತೇಜನಕ್ಕೆ ವಿಮಾನ ನಿಲ್ದಾಣ ಸ್ಥಾಪನೆ
- ಉಡುಪಿಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ

ಮಾತಿನೇಟು



ಲಕ್ಷ್ಮಣ ಸವದಿ ಅವರು ಸದನದಲ್ಲಿ ನೀಲಿ ಚಿತ್ರ ನೋಡಿ ಸಿಕ್ಕಿಬಿದ್ದು ವೈಯಕ್ತಿಕವಾಗಿ ಸಂಕಟಕ್ಕೆ ಸಿಲುಕಿದಾಗ, ಬಿಜೆಪಿ ಅವರ ನೆರವಿಗೆ ಬಂತು. ಅಥಣಿ ಶಾಸಕ ಮಹೇಶ ಕುಮಠಳ್ಳಿ ಹಾಗೂ ಇತರರು ಬಿಜೆಪಿಗೆ ಬಂದಿದ್ದರಿಂದ ಸವದಿ ಅವರು ಉಪ ಮುಖ್ಯಮಂತ್ರಿ ಆಗಲು ಸಾಧ್ಯವಾಯಿತು. ಇದೀಗ ಟಿಕೆಟ್ ಸಿಗಲಿಲ್ಲ ಎಂದು ಕಾಂಗ್ರೆಸ್‌ಗೆ ಹೋಗಿದ್ದಾರೆ. ಕಷ್ಟದಲ್ಲಿ ಅವರ ಜೊತೆಗೆ ನಿಂತ ಪಕ್ಷ ತ್ಯಜಿಸಲು ಅವರಿಗೆ ಮನಸ್ಸಾದರೂ ಹೇಗೆ ಬಂತು?

ಶಶೀಲ್ ಜಿ. ನಮೋಶಿ
ವಿಧಾನಪರಿಷತ್ ಸದಸ್ಯ, ಕಲಬುರಗಿ

ಪ್ರಜಾ ಪತ್ರ

ಚುನಾವಣಾ ದಿನ ಮೋಜಿನ ರಜೆಯಾಗದಿರಲಿ!



ಮತದಾನವೆಂಬುದು ಸಂವಿಧಾನವು ನಮಗೆ ನೀಡಿರುವ ಅಮೂಲ್ಯವಾದ ಹಕ್ಕು ಮಾತ್ರವಲ್ಲ, ಮಹತ್ವವಾದ ಕರ್ತವ್ಯವೂ ಹೌದು. ಒಂದೊಂದು ಮತಕ್ಕೂ ದೇಶದ ಚಹರೆಯನ್ನೇ ಬದಲಾಯಿಸುವ ಶಕ್ತಿಯಿದೆ. ಹಾಗಾಗಿ ಮತದಾನ ದಿನದ ರಜೆಯನ್ನು ಪ್ರವಾಸ ಅಥವಾ ಮೋಜು ಮಸ್ತಿಗೆ ಬಳಸದೆ ಪ್ರಜ್ಞಾವಂತ ನಾಗರಿಕರಾಗಿ ಮತ ಚಲಾಯಿಸೋಣ. ನಮ್ಮ ಕ್ಷೇತ್ರದಲ್ಲಿ ಮಾಡಿರುವ, ಮಾಡಬೇಕಾಗಿರುವ ಅಭಿವೃದ್ಧಿ ಕಾರ್ಯಗಳ ಮೇಲೆ ಅರ್ಹ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು. ಸುಭದ್ರ ಕರ್ನಾಟಕ ಹಾಗೂ ಭಾರತವನ್ನು ಕಟ್ಟಲು ಸಹಯೋಗ ನೀಡೋಣ.

ಪ್ರೇರಣಾ ವಿ. ಪ್ರಸಾದ್, ಬೆಂಗಳೂರು

ಪಕ್ಷ ಪಕ್ಷವೆಂದು ಹೊಡೆದಾಡದಿರಿ

ಪ್ರಜಾಪ್ರಭುತ್ವದ ಪಕ್ಷದ ನೆಲೆಯೇನಾದರು ಬಲ್ಲಿರಾ! ನಾಡಿನ ಸಮಸ್ತ ಜನತೆಯ ಪ್ರತಿ ಮತದಲ್ಲೂ 5 ವರ್ಷದ ನಮ್ಮ ಹಕ್ಕುಗಳು ಮತ್ತು ಸ್ವಾತಂತ್ರ್ಯದ ಪ್ರಶ್ನೆಗಳು ಅಡಗಿವೆ. ಅವುಗಳನ್ನ ಸರಿಯಾಗಿ ಪಾಲನೆ, ಪೋಷಣೆ ಮಾಡುವ ನೈತಿಕ ಹೊಣೆಗಾರಿಕೆಯ ಅಭ್ಯರ್ಥಿಗಳಿಗೆ ನಮ್ಮ ಮತ ಚಲಾಯಿಸೋಣ. ಹಣದ ಆಮಿಷ ತೋರಿಸುವ ಜಾಲಿಮರದಂತಹ ಅಭ್ಯರ್ಥಿಗಳಿಗೆ ನಿಮ್ಮ ಮತ ಹಾಕುವುದಕ್ಕಿಂತ, ಜನ ಸ್ಪಂದನೆಗೆ ನೆರಳಾಗುವ ಆಲದ ಮರದಂತಹ ಅಭ್ಯರ್ಥಿಗಳಿಗೆ ನಿಮ್ಮ ಮತ ನೀಡಿ.

ಅಭಿನಂದನ್, ಹೊಸಕೊಪ್ಪ, ಸಾಗರ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಕರುನಾಡ ಜನರಿಗೆ ಜೆಡಿಎಸ್ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಷಕ್ಕೆ ಐದು ಅಡುಗೆ ಅನಿಲ ಸಿಲಿಂಡರ್, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸಾಲ ಮನ್ನಾ ಸೇರಿದಂತೆ 12 ಅಂಶಗಳ ಭರವಸೆ ಒಳಗೊಂಡ 'ಕರುನಾಡ ಜನರಿಗೆ ಜೆಡಿಎಸ್ ಪರಿಹಾರ' ಪತ್ರವನ್ನು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಶನಿವಾರ ಬಿಡುಗಡೆ ಮಾಡಿದರು.

ಮಾತೃಶ್ರೀ ಮತ್ತು ಮಹಿಳಾ ಸಬಲೀಕರಣ, ರೈತ ಚೈತನ್ಯ, ಹಿರಿಯ ನಾಗರಿಕರಿಗೆ ಸನ್ಮಾನ, ಅಂಗವಿಕಲರಿಗೆ ಆಸರೆ, ಆರಕ್ಷಕರಿಗೆ ಅಭಯ, ಕನ್ನಡವೇ ಮೊದಲು, ಶಿಕ್ಷಣವೇ ಆಧುನಿಕ ಶಕ್ತಿ, ಧಾರ್ಮಿಕ ಅಲ್ಪ ಸಂಖ್ಯಾತರ ಏಳಿಗೆ ಮತ್ತು ಪ್ರಗತಿ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಏಳಿಗೆ, ಆರೋಗ್ಯ ಸಂಪತ್ತು, ಯುವಜನ ಸಬಲೀಕರಣ, ವೃತ್ತಿನಿರತ ವಕೀಲರ ಅಭ್ಯುದಯ ಎಂಬ 12 ತಲೆಬರಹದ ಅಡಿ ಭರವಸೆಗಳನ್ನು ಘೋಷಣೆ ಮಾಡಿದರು.

ಕನ್ನಡಕ್ಕೆ ಅಗ್ರ ಮನ್ನಣೆ, ಖಾಸಗಿ ಕ್ಷೇತ್ರದಲ್ಲಿ ಕನ್ನಡಿಗರ ಉದ್ಯೋಗಕ್ಕೆ ಮೀಸಲಾತಿ, ವಕೀಲರ ರಕ್ಷಣೆಗೆ ಕಾಯ್ದೆ, 500 ಹಾಸಿಗೆಗಳ ಸೌಲಭ್ಯ ಒಳಗೊಂಡ ನಿಮ್ಹಾನ್ಸ್ ಮಾದರಿ ಆಸ್ಪತ್ರೆ, ಗಂಭೀರ ಸ್ವರೂಪದ ಕಾಯಿಲೆಗಳಿಗೆ ₹ 25 ಲಕ್ಷದವರೆಗೆ ಪರಿಹಾರ, ನ್ಯಾ. ಸಾಚಾರ್ ವರದಿ ಜಾರಿಗೆ ಕ್ರಮ, ಪೊಲೀಸರ ವೇತನ ತಾರತಮ್ಯ ನಿವಾರಣೆ, ಅಂಗವಿಕಲರು, ವಿಧವೆಯರ ಪಿಂಚಣಿ ₹ 2,500 ಭರವಸೆ ಯಲ್ಲಿನ ಪ್ರಮುಖ ಅಂಶಗಳು.

ಕನಿಷ್ಠ 15 ವರ್ಷ ಸೇವೆ ಸಲ್ಲಿಸಿ ನಿವೃತ್ತರಾದ ಅಂಗನವಾಡಿ ಕಾರ್ಯಕರ್ತೆ ಯರು, ಸಹಾಯಕಿಯರಿಗೆ ಪಿಂಚಣಿ, ಕೇಂದ್ರ ನಾಗರಿಕ ಸೇವೆಗಳಾದ ರೈಲ್ವೆ, ಬ್ಯಾಂಕಿಂಗ್, ರಾಜ್ಯದಲ್ಲಿರುವ ಕೇಂದ್ರ ಸಾರ್ವಜನಿಕ ಉದ್ಯಮಗಳು, ಕೇಂದ್ರ ಭದ್ರತಾಪಡೆ ಇನ್ನಿತರೆ ನೇಮಕ ದಲ್ಲಿ ಕನ್ನಡದಲ್ಲೇ ಪರೀಕ್ಷೆ ನಡೆಸಿ, ಕನ್ನಡಿಗರಿಗೆ ಆದ್ಯತೆ ನೀಡಲು ಕೇಂದ್ರದ ಮೇಲೆ ಒತ್ತಡ ಹಾಕುವುದು, ಖಾಸಗಿ ಉದ್ಯಮ ಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲು ಕಲ್ಪಿಸಲು ಕಾಯಿದೆ ಜಾರಿ.

ಪ್ರತಿ ಕೃಷಿ ಕಾರ್ಮಿಕ ಕುಟುಂಬಕ್ಕೆ ಮಾಸಿಕ ₹ 2,000 ಸಹಾಯ ಧನ, ಅಶಕ್ತ ಪುರುಷ ಮತ್ತು ಅಬಲೆಯರ ಆಶ್ರಯಕ್ಕೆ ಸಹಾರಾ ಯೋಜನೆ ಜಾರಿ, ಒಂದು ವರ್ಷದ ಕೌಶಲ ಅಭಿವೃದ್ಧಿ ತರಬೇತಿಗೆ ಮಾಸಿಕ ₹ 8,000 ಭತ್ಯೆ, ಕೈಗಾರಿಕೆ ಉತ್ಪನ್ನ ಘಟಕ ಸ್ಥಾಪನೆಗೆ ₹ 10 ಲಕ್ಷ, ಸಣ್ಣ ವ್ಯಾಪಾರ- ವಹಿವಾಟುದಾರರಿಗೆ ₹ 2 ಲಕ್ಷ ಸಹಾಯಧನ, ನೋಂದಾಯಿತ ವಕೀಲರ ಮಾಸಿಕ ಭತ್ಯೆ ₹ 3,000ಕ್ಕೆ ಹೆಚ್ಚಳದ ಭರವಸೆ ನೀಡಿದರು.

ಬೆಂಗಳೂರಿನಲ್ಲಿ ಶನಿವಾರ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಪಕ್ಷದ ಭರವಸೆ ಪತ್ರ ಬಿಡುಗಡೆ ಮಾಡಿದರು. ಸಿ.ಎಂ. ಇಬ್ರಾಹಿಂ, ಎಚ್‌.ಡಿ. ಕುಮಾರಸ್ವಾಮಿ, ಟಿ.ಎ. ಶರವಣ ಇದ್ದರು ಪ್ರಜಾವಾಣಿ ಚಿತ್ರ

ಭರವಸೆಗಳ ಮಹಾಪೂರ

- ರೈತ ಯುವಕರನ್ನು ಮದುವೆ ಆಗುವ ಯುವತಿಯರಿಗೆ ₹ 2 ಲಕ್ಷ ಪ್ರೋತ್ಸಾಹ ಧನ
- ಗರ್ಭಿಣಿಯರ ಆರೈಕೆಗೆ 6 ತಿಂಗಳವರೆಗೆ ಮಾಸಿಕ ₹ 6,000 ಭತ್ಯೆ
- ಪ್ರತಿ ಎಕರೆಗೆ ₹ 10,000 ಸಹಾಯ ಧನ
- ಮಹಿಳಾ ಉದ್ಯಮಿಗಳಿಗೆ ₹ 2 ಕೋಟಿ ಸಾಲ
- ಪರಿಶಿಷ್ಟ ಉದ್ದಿಮೆದಾರರಿಗೆ ಶೇ 2ರ ಬಡ್ಡಿ ದರದಲ್ಲಿ ₹ 5 ಕೋಟಿ ಬಂಡವಾಳ
- ಅಂಗನವಾಡಿ ಕಾರ್ಯಕರ್ತೆ ಯರು, ಸಹಾಯಕಿಯರ ಗೌರವಧನ ₹ 5000 ಹೆಚ್ಚಳ
- ಪ್ರಥಮ ದರ್ಜೆ ಕಾಲೇಜುಗಳ 60 ಸಾವಿರ ವಿದ್ಯಾರ್ಥಿನಿಯರಿಗೆ ವಿದ್ಯುತ್ ಚಾಲಿತ ಮೊಪೆಡ್
- ಹಿರಿಯ ನಾಗರಿಕರ ಪಿಂಚಣಿ ₹ 5000ಕ್ಕೆ ಏರಿಕೆ
- 6.8 ಲಕ್ಷ ಪ್ರೌಢಶಾಲಾ ವಿದ್ಯಾರ್ಥಿ ಗಳಿಗೆ ಉಚಿತ ಸೈಕಲ್

ಅನ್‌ಲೈನ್ ಮೂಲಕ ನಾಮಪತ್ರ ಸಲ್ಲಿಕೆ

ಮಂಡ್ಯ: ಸರ್ವೋದಯ ಕರ್ನಾಟಕ ಪಕ್ಷದ ಮಂಡ್ಯ ಕ್ಷೇತ್ರದ ಅಭ್ಯರ್ಥಿಯಾಗಿ ಎಸ್‌.ಸಿ. ಮಧುಚಂದನ್ ಆನ್‌ಲೈನ್ ಮೂಲಕ ಶನಿವಾರ ನಾಮಪತ್ರ (ಇ-ನಾಮಿನೇಷನ್) ಸಲ್ಲಿಸಿದರು.

ಮಧುಚಂದನ್

ಇದೇ ಮೊದಲ ಬಾರಿಗೆ ಭಾರತ ಚುನಾವಣಾ ಆಯೋಗ ಆನ್‌ಲೈನ್ ಮೂಲಕ ನಾಮಪತ್ರ ಸಲ್ಲಿಸುವ ಅವಕಾಶ ನೀಡಿದ್ದು 'ಸುವಿಧಾ' (suvidha.eic.gov.in) ಪೋರ್ಟಲ್ ಸೃಷ್ಟಿಸಿದೆ. ಆ ಮೂಲಕ ಎಸ್‌.ಸಿ.ಮಧುಚಂದನ್ 'ಫಾರಂ 2ಎ' ಅಡಿ ನಾಮಪತ್ರ, 'ಫಾರಂ 26' ಅಡಿ ಆಸ್ತಿ ವಿವರ ಪ್ರಮಾಣಪತ್ರ ಸಲ್ಲಿಸಿದ್ದಾರೆ.

'ಆನ್‌ಲೈನ್ ಮೂಲಕ ನಾಮಪತ್ರ ಸಲ್ಲಿಸಿದ್ದೇನೆ. ಚುನಾವಣಾ ಆಯೋಗ ನೀಡಿರುವ ಈ ಅವಕಾಶದಿಂದ ಬಹಳ ಸಮಯ ಉಳಿತಾಯವಾಗುತ್ತದೆ'. ಎಂದು ಎಸ್. ಸಿ. ಮಧುಚಂದನ್ ತಿಳಿಸಿದರು.

ಕೆರೆ ಅಂಗಳದಿ ಜಾಗೃತಿ

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಮಾಡ್ಲಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಡ್ಡಿನ ದಾದಪುರ ಗ್ರಾಮದ ಕೆರೆ ಅಂಗಳದಲ್ಲಿ ಮತದಾನ ಜಾಗೃತಿ ಮೂಡಿಸಲಾಯಿತು

ಸೆಲೆಬ್ರಿಟಿ ಮಾತು

ಹಕ್ಕು ಕೇಳಲು ಮತದಾನ ಮಾಡಿ

ಅಲ್ಲಮಪ್ರಭು ಬೆಟ್ಟದೂರು, ಸಾಹಿತಿ

ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಉಳಿವಿಗಾಗಿ ಪ್ರತಿಯೊಬ್ಬರೂ ಮತದಾನ ಮಾಡುವುದು ಅಗತ್ಯ. ಗ್ರಾಮೀಣ ಪ್ರದೇಶದ ಜನರಿಗೆ ಹೋಲಿಸಿದರೆ ನಗರ ಪ್ರ-ದೇಶಗಳಲ್ಲಿನ ಜನರ ರಾಜಕೀಯ ಪ್ರಜ್ಞೆ ಕಮ್ಮಿ ಅಂತಲೇ ಹೇಳಬಹುದು. ನಾವು ವಾಸಿಸುವ ಕ್ಷೇತ್ರದ ಅಭಿವೃದ್ಧಿಗೆ, ಮೂಲಸೌಲಭ್ಯಕ್ಕೆ, ನೆರವಿಗೆ ಜನಪ್ರತಿನಿಧಿಗ-ಳನ್ನು ಸಂಪರ್ಕಿಸಬೇಕು. ಮತದಾನ ಮಾಡಿದರೆ ಚುನಾಯಿತ ಪ್ರತಿನಿಧಿಗಳನ್ನು ಪ್ರಶ್ನಿಸಲು, ಹಕ್ಕು ಕೇಳಲು ಮತ್ತು ಸೌಲಭ್ಯ ಒದಗಿಸುವಂತೆ ಆಗ್ರಹಿಸಲು ನಮಗೆ ನೈತಿಕತೆ ಇರುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಜವಾಬ್ದಾರಿಯಿಂದ ಮತ ಚಲಾಯಿಸಬೇಕು.

ಗಾಳಿ ಮಾತು

ಅಲ್ಲಿದೆ ನಮ್ಮನೆ... ಇಲ್ಲಿ ಬಂದೆ ಸುಮ್ಮನೆ...



ಅಲ್ಲಿದೆ ನಮ್ಮನೆ...ಇಲ್ಲಿ ಬಂದೆ ಸುಮ್ಮನೆ... ಹೀಗೆಂದು ಸಚಿವ ಆರ್‌.ಅಶೋಕ ಮೊನ್ನೆಯಿಂದ ಈಚೆಗೆ ಸದಾ ಈ ಹಾಡು ಗುನುಗುತ್ತಿದ್ದಾರಂತೆ. ಪದ್ಮನಾಭನಗರದಲ್ಲಿ 'ಸಾಮ್ರಾಟ'ನಂತೆ ಮೆರೆಯುತ್ತಿದ್ದ ಈ ಚಕ್ರವರ್ತಿಗೆ ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಹೊರಬಿದ್ದಿದ್ದೇ ತಡ ಎರಡು ದೋಣಿಯಲ್ಲಿ ಕಾಲಿಟ್ಟ ಅನುಭವವಾಗಿದೆಯಂತೆ.

ಕನಕಪುರದಲ್ಲಿ ಬಂಡೆಯಂತೆ ನಿಂತು ಸತತ ಏಳು ಗೆಲುವು ಕಂಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಪದ್ಮನಾಭನಗರದಲ್ಲಿ ಮೆರೆಯುತ್ತಿರುವ ಅಶೋಕ ಇಬ್ಬರೂ ಒಕ್ಕಲಿಗ ನಾಯಕ ಕಲಿಗಳು. ಈಚೆಗೆ ವಿಮಾನ ನಿಲ್ದಾಣದಲ್ಲಿ ಹಾಗೂ ವಿಧಾನಸೌಧ ಮುಂಭಾಗ ಕೆಂಪೇಗೌಡರ ಪ್ರತಿಮೆ ನಿಲ್ಲಿಸಿ ಬಿಜೆಪಿ ಶಕ್ತಿ ಪ್ರದರ್ಶನ ಮಾಡಿದ್ದಕ್ಕೆ ಪ್ರತಿಯಾಗಿ ಅಶೋಕಗೆ ಪಕ್ಷ ಈ ಪರಿ 'ಬಳುವಳಿ' ನೀಡಿದ್ದನ್ನು ಅರಗಿಸಿಕೊಳ್ಳಲು ಆಗಿಲ್ಲವಂತೆ.

ಟಿಕೆಟ್ ಘೋಷಣೆಯಾಗಿ ಮೂರ್ನಾಲ್ಕು ದಿನವಾದರೂ ಅಶೋಕ ಮಾತ್ರ ಇನ್ನೂ ಕನಕಪುರಕ್ಕೆ ಕಾಲಿಟ್ಟಿಲ್ಲ. ಭಾರಿ ಹುಮ್ಮಸ್ಸಿನಲ್ಲಿರುವ ಬಿಜೆಪಿ ಕಾರ್ಯ-ಕರ್ತರಿಗೆ ಸಹಜವಾಗಿಯೇ ಇದರಿಂದ ನಿರಾಸೆ ಆಗಿದೆಯಂತೆ. 'ಯೋಚನೆ ಮಾಡಬೇಡಿ, ಬಸವರಾಜ ಬೊಮ್ಮಾಯಿ, ಅರುಣ್ ಸಿಂಗ್ ಸಮೇತ ಇದೇ 18ರಂದು ಅಶೋಕ ಕನಕಪುರ ಕೋಟೆಗೆ ಲಗ್ಗೆ ಇಡಲಿದ್ದಾರೆ' ಎಂದು ಪಕ್ಷದ ಅಳಿದುಳಿದ ನಾಯಕರು ಕಾರ್ಯಕರ್ತರಿಗೆ ಉತ್ಸಾಹ ತುಂಬುವ ಪ್ರಯತ್ನದಲ್ಲಿ ಇದ್ದಾರಂತೆ.

ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗ ನಾಯಕರ ನಡುವೆ ಪಕ್ಷಗಳ ಹೊರತಾಗಿಯೂ ಒಂದು ಸಾಮರಸ್ಯದ ಬಾಂಧವ್ಯ ಇದೆ. ಇದೀಗ ಬಿಜೆಪಿ ಹೈಕಮಾಂಡ್ ಅದಕ್ಕೆ ಬೆಂಕಿ ಇಟ್ಟಂತಿದೆ. 'ಇಲ್ಲಿ ಅಬ್ಬರಿಸಲು ಪ್ರಯತ್ನಿಸಿದರೆ ಪದ್ಮನಾಭನಗರದಲ್ಲಿ ಡಿಚ್ಚಿ ಕೊಡುವುದು ಖಚಿತ' ಎಂದು ಡಿ.ಕೆ.ಸಹೋದರರು ಈಗಾಗಲೇ ಅಶೋಕಗೆ ನಯವಾಗಿ ಎಚ್ಚರಿಸಿದ್ದಾರಂತೆ. ಹೀಗಾಗಿ ಕನಕಪುರ ದಲ್ಲಿ ತುಸು ಎಚ್ಚರದಿಂದಲೇ ಹೆಜ್ಜೆ ಇಡಲು ಯೋಚಿಸುತ್ತಿದ್ದು, ಸಹವರ್ತಿಗಳನ್ನು ಗುಂಪುಗೂಡಿಸಿಕೊಂಡು ಚರ್ಚೆ ನಡೆಸುತ್ತಿದ್ದಾರೆಂತೆ.

ಕ್ಷೇತ್ರದ ಕೂಗು

- **ಕ್ಷೇತ್ರ: ಹುಣಸೂರು**
- **ಶಾಸಕ: ಎಚ್‌.ಪಿ.ಮಂಜುನಾಥ್** (ಕಾಂಗ್ರೆಸ್)

▸ ಧರ್ಮಾಪುರ ಜಿಲ್ಲಾ ಪಂಚಾಯಿತಿ ಕ್ಷೇತ್ರದ ವ್ಯಾಪ್ತಿಯಲ್ಲಿ ರಸ್ತೆಗಳು ಗುಂಡಿ ಬಿದ್ದಿವೆ. ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಆಗಬೇಕು. ಈ ಭಾಗದಲ್ಲಿ ಬ್ಯಾಂಕ್ ವ್ಯವಸ್ಥೆ ಇಲ್ಲದೆ ಜನ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಕ್ಕಳಿಗೆ ಮೈದಾನವಿಲ್ಲ. ಸ್ಮಶಾನಗಳಿಗೆ ಮೂಲ ಸೌಕರ್ಯ ಗಳಿಲ್ಲ. ಗ್ರಂಥಾಲಯಗಳು ದುಸ್ಥಿತಿಯಲ್ಲಿವೆ. ಜೀವನದಿ ಲಕ್ಷ್ಮಣತೀರ್ಥ ತ್ಯಾಜ್ಯ ಮುಕ್ತಗೊಂಡಿಲ್ಲ. ಕಾಡಂಚಿನ ಗ್ರಾಮಗಳ ಜನರ ಸಮಸ್ಯೆಗಳು ಪರಿಹಾರ ಕಂಡಿಲ್ಲ. ಆನೆ, ಚಿರತೆ ಮತ್ತು ಹುಲಿ ದಾಳಿಗೆ ಅತಂತ್ರರಾಗಿದ್ದಾರೆ. ಗಿರಿಜನರಿಗೆ ಸಾಗುವಳಿ ಪತ್ರ ನೀಡಿಲ್ಲ. ನಾಗರಹೊಳೆ ಅರಣ್ಯದಿಂದ ಹೊರಬಂದ 3,481 ಗಿರಿಜನರು ಉತ್ತಮ ಪುನರ್ವಸತಿ ಕೇಂದ್ರಕ್ಕಾಗಿ ಹೋರಾಟ ನಡೆಸುತ್ತಲೇ ಬಂದಿದ್ದಾರೆ. ಭೂಮಿ ಸಿಕ್ಕಿದ್ದರೂ ಅನ್ಯರ ಕಾಟ ತಪ್ಪಿಲ್ಲ; ಕೊಡಗಿನ ಕಾಫಿ ತೋಟಗಳಲ್ಲಿ ಕೂಲಿಯಾಗಿ ದುಡಿಯುವುದು ನಿಂತಿಲ್ಲ.

- **ಕ್ಷೇತ್ರ: ನಂಜನಗೂಡು**
- **ಶಾಸಕ: ಬಿ.ಹರ್ಷವರ್ಧನ್** (ಬಿಜೆಪಿ)

▸ ನಂಜನಗೂಡು ಶ್ರೀಕಂಠೇಶ್ವರನ ದರ್ಶನಕ್ಕೆ ನಿತ್ಯವೂ ಸಾವಿರಾರು ಭಕ್ತರು ಬರುತ್ತಾರೆ. ಕಪಿಲಾ ನದಿಯಲ್ಲಿ ಸ್ನಾನದ ಬಳಿಕ ಹಳೆಯ ಬಟ್ಟೆ, ಹೂ ತ್ಯಾಜ್ಯ, ಮಡಿಕೆ, ಕುಡಿಕೆ ಹಾಕುತ್ತಿದ್ದು, ನದಿ ಕಲುಷಿತಗೊಳ್ಳುತ್ತಿದೆ. ಶೌಚಾಲಯಗಳ ನೀರು ಕೂಡ ನದಿ ಸೇರುತ್ತಿದ್ದು, ಕಡಿವಾಣ ಹಾಕಬೇಕಿದೆ. ಶ್ರೀಕಂಠೇಶ್ವರನಿಗೆ ಹರಕೆ ಹೊತ್ತವರು ದೇವರ ಗೂಳಿ ಬಿಡುವ ಪದ್ಧತಿ ಇದೆ. ಅವುಗಳನ್ನು ದುಷ್ಕರ್ಮಿಗಳು ರಾತ್ರಿ ವೇಳೆ ಕದ್ದು ಸಾಗಿಸುತ್ತಾರೆ. ದೇವಾಲಯದಿಂದ ಗೋಶಾಲೆ ಸ್ಥಾಪಿಸಿ, ಗೂಳಿಗಳನ್ನು ಸಲಹಬೇಕು. ನಂಜನಗೂಡು– ಹುಲ್ಲಹಳ್ಳಿ ರಸ್ತೆ ಹಾಳಾಗಿದ್ದು, ಅಭಿವೃದ್ಧಿಪಡಿಸಬೇಕು. ನಂಜನಗೂಡಿನ ಅಂಬೇಡ್ಕರ್ ವೃತ್ತದ ಬಳಿ ₹ 9 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ಹೈಟೆಕ್ ಬಸ್ ನಿಲ್ದಾಣ ಬಳಸಬೇಕು. ಹಳ್ಳಿಗಳಲ್ಲಿ ಕುಡಿಯುವ ನೀರು ಸೇರಿದಂತೆ ಮೂಲಸೌಲಭ್ಯ ಕೊರತೆ ಇದೆ. ಕೆರೆಗಳನ್ನು ತುಂಬಿಸುವ ಯೋಜನೆ ಅಗತ್ಯವಿದೆ.

- **ಕ್ಷೇತ್ರ: ತಿ.ನರಸೀಪುರ**
- **ಶಾಸಕ: ಅಶ್ವಿನ್‌ಕುಮಾರ್** (ಜೆಡಿಎಸ್)

▸ ತಿ. ನರಸೀಪುರ ಪಟ್ಟಣದ ಪ್ರಮುಖ ರಸ್ತೆಗಳು ಸಂಪೂರ್ಣವಾಗಿ ಗುಂಡಿ ಬಿದ್ದಿವೆ. ಗ್ರಾಮೀಣ ಭಾಗದ ಕೆಲವು ಪ್ರಮುಖ ರಸ್ತೆಗಳೂ ಹಾಳಾಗಿವೆ. ತಾಲ್ಲೂಕು ಕೇಂದ್ರದಲ್ಲಿ ಕ್ರೀಡಾಂಗಣವಿಲ್ಲ. ಕೆಎಸ್‌ಆರ್‌ಟಿಸಿ ಬಸ್ ಡಿಪೊ ನಿರ್ಮಾಣದ ಬೇಡಿಕೆ ಇದೆ. ತ್ರಿವೇಣಿ ಸಂಗಮದಲ್ಲಿ ಪ್ರವಾಸಿಗರು ಮಾಘ ಸ್ನಾನ, ಯುಗಾದಿ ವೇಳೆ ಹಾಗೂ ಕುಂಭಮೇಳ ಸಮಯದಲ್ಲಿ ಸಾವಿರಾರು ಮಂದಿ ಬರುತ್ತಾರೆ. ಇಲ್ಲಿ ಬಟ್ಟೆ ಬದಲಿಸಲು ಸೂಕ್ತ ಕೊಠಡಿಗಳ ವ್ಯವಸ್ಥೆ-ಗಳಿಲ್ಲ. ಪ್ರಖ್ಯಾತ ಪ್ರವಾಸಿ ತಾಣ ಸೋಮನಾಥಪು-ರದಲ್ಲಿ ಯಾತ್ರಿ ನಿವಾಸ ನಿರ್ಮಿಸಬೇಕು. ತಲಕಾಡು ಪ್ರವಾಸೋದ್ಯಮ ಕೇಂದ್ರವಾಗಿದ್ದು ಮೂಲ ಸೌಲಭ್ಯಗಳ ಕೊರತೆ ಇದೆ. ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆಗೆ ವ್ಯವಸ್ಥೆ ಆಗಬೇಕಿದೆ. ಜಲ ಜೀವನ್ ಮಿಷನ್ ಯೋಜನೆಯಿಂದ ಗ್ರಾಮಾಂತರ ಭಾಗದ ಸಿಮೆಂಟ್ ರಸ್ತೆಗಳು ಹಾಳಾಗಿವೆ. ಜಮೀನುಗಳಿಗೆ ಸಂಪರ್ಕಿಸುವ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕಿದೆ. ತಲಕಾಡು ಮಾಲಂಗಿ ಸೇತುವೆ, ಮಾಧವ ಮಂತ್ರಿ ಅಣೆಕಟ್ಟು ಕಾಮಗಾರಿ ತ್ವರಿತಗೊಳ್ಳಬೇಕು. ತಾಯಿ–ಮಗು ಆಸ್ಪತ್ರೆಯಲ್ಲಿ ವೈದ್ಯರಿಲ್ಲ.

- **ಕ್ಷೇತ್ರ: ಕೆ.ಆರ್‌.ನಗರ**
- **ಶಾಸಕ: ಸಾ.ರಾ.ಮಹೇಶ್** (ಜೆಡಿಎಸ್)



▸ ಕೆ.ಆರ್‌.ನಗರ ಪಟ್ಟಣದ ವಿದ್ಯಾನಗರ ಸೇರಿದಂತೆ ಹೊಸ ಬಡಾವಣೆಗಳಿಗೆ ರಸ್ತೆ, ಚರಂಡಿ ಮೊದಲಾದ ಮೂಲ ಸೌಕರ್ಯ ಗಳಿಲ್ಲ. ರೇಡಿಯೊ ಮೈದಾನ, ಕೃಷ್ಣರಾಜೇಂದ್ರ ಕ್ರೀಡಾಂಗಣ ಅಭಿವೃದ್ಧಿಪಡಿಸಬೇಕಿದೆ. ಬಿಳಿಕೆರೆ–ಬೇಲೂರು ರಾಜ್ಯ ಹೆದ್ದಾರಿ (ಬಿಳಿಕೆರೆಯಿಂದ ತಾಲ್ಲೂಕಿನ ಗಡಿಗ್ರಾಮ ದೊಡ್ಡಹಳ್ಳಿವರೆಗೆ) ಸುಧಾರಿಸಬೇಕಿದೆ. ಸಾಲಿಗ್ರಾಮ ಹೊಸ ತಾಲ್ಲೂಕಾದರೂ ಸೌಲಭ್ಯಗಳು ವೃದ್ಧಿಸಿಲ್ಲ. ಸರ್ಕಾರಿ ಇಲಾಖೆಗಳ ಕಚೇರಿಗಳು ಬಂದಿಲ್ಲದೇ ಜನ ಅಲೆಯುವುದು ತಪ್ಪಿಲ್ಲ. ಚುಂಚನಕಟ್ಟೆ ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಹಳ್ಳಿಗಳಲ್ಲಿ ಕುಡಿಯುವ ನೀರು ಮೊದಲಾದ ಮೂಲಸೌಲಭ್ಯಗಳಿಲ್ಲ.

- **ಕ್ಷೇತ್ರ: ಪಿರಿಯಾಪಟ್ಟಣ**
- **ಶಾಸಕ: ಕೆ. ಮಹದೇವ** (ಜೆಡಿಎಸ್)



▸ 150 ಕೆರೆಗಳಿಗೆ ಕಾವೇರಿ ನದಿಯಿಂದ ನೀರು ತುಂಬಿಸುವ ಯೋಜನೆ ಪೂರ್ಣಗೊಂಡಿಲ್ಲ. ಹೆರಿಗೆ ಆಸ್ಪತ್ರೆ ಬೇಕು. ತಾಲ್ಲೂಕು ಪಂಚಾಯಿತಿ ಕಟ್ಟಡದಲ್ಲಿರುವ ಆಯುರ್ವೇದ ಆಸ್ಪತ್ರೆಗೆ ಸ್ವಂತ ಕಟ್ಟಡ ಒದಗಿಸಬೇಕು. ಕೈಗಾರಿಕೆಗೆ ಉತ್ತೇಜನವೇ ಸಿಕ್ಕಿಲ್ಲ; ನಿವೇಶನಗಳನ್ನೂ ಹಂಚಿಲ್ಲ. ಗ್ರಾಮೀಣ ಪ್ರದೇಶ ಗಳಲ್ಲಿ ವಿದ್ಯುತ್ ಸೌಲಭ್ಯ ಸಮರ್ಪಕವಾಗಿಲ್ಲ. ನೂರು ಹಾಸಿಗೆ ಸಾಮರ್ಥ್ಯದ ಹಾಸಿಗೆ ಇದ್ದರೂ ವೈದ್ಯರು ಸಕಾಲಕ್ಕೆ ಸಿಗುವುದಿಲ್ಲ. ರೋಗಿಗಳಿಗೆ ಪರದಾಟ ತಪ್ಪಿಲ್ಲ. ತಜ್ಞ ವೈದ್ಯರಿದ್ದರೂ ಶಸ್ತ್ರಚಿಕಿತ್ಸೆಗಾಗಿ ಮೈಸೂರಿನ ಆಸ್ಪ-ತ್ರೆಗಳಿಗೆ ಕಳುಹಿಸಲಾಗುತ್ತಿದೆ. ಕ್ಷೇತ್ರದಲ್ಲಿ ಆಶ್ರಯ ಯೋಜನೆಯಲ್ಲಿ ನಿವೇಶನಗಳೇ ಹಂಚಿಕೆಯಾಗಿಲ್ಲ. ಹಳ್ಳಿಗಳಲ್ಲಿ ಸ್ಮಶಾನದ ಕೊರತೆ ಇದೆ.

ಕೊತ್ತೂರು ಮಂಜುನಾಥ್‌ಗೆ ಕಾಂಗ್ರೆಸ್ ಟಿಕೆಟ್ ● ಮುಸ್ಲಿಂ ಮುಖಂಡರ ಅಸಮಾಧಾನ

ಕೋಲಾರ: ಮುಸ್ಲಿಂ ಅಭ್ಯರ್ಥಿ ಕಣಕ್ಕೆ?

ಪ್ರಜಾವಾಣಿ ವಾರ್ತೆ

ಕೋಲಾರ: 'ಸಿದ್ದರಾಮಯ್ಯ ಬರುತ್ತಾರೆ ಎಂದು ಆರು ತಿಂಗಳಿನಿಂದ ಕಾದಿದ್ದೆವು. ಈಗ ನೋಡಿದರೆ 2019ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲ ನೀಡಿದ್ದ ವ್ಯಕ್ತಿ ಕೊತ್ತೂರು ಮಂಜುನಾಥ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಲಾಗಿದೆ. ಈ ರೀತಿ ಮಾಡಿದರೆ ಈ ಬಾರಿ ಬಹಿರಂಗವಾಗಿಯೇ ಬಿಜೆಪಿಗೆ ವೋಟ್ ಹಾಕುತ್ತೇವೆ' ಎಂದು ಮುಸ್ಲಿಂ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಅಭ್ಯರ್ಥಿಗಳ ಮೂರನೇ ಪಟ್ಟಿ ಬಿಡುಗಡೆಯಾಗುತ್ತಿದ್ದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧವೂ ಹರಿಹಾಯ್ದರು. ಬಂಡಾಯ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತೇವೆ ಎಂದು ಎಚ್ಚರಿಕೆಯನ್ನೂ ನೀಡಿದರು.

ಕೆಪಿಸಿಸಿ ಸದಸ್ಯ ನಂದಿನಿ ಪ್ರವೀಣ್ ಅವರ ಕೋಲಾರದ ಹೊರವಲಯದಲ್ಲಿರುವ ನಿವಾಸದಲ್ಲಿ ಶಿವಕುಮಾರ್ ಅವರು ಸ್ಥಳೀಯ ಮುಖಂಡರೊಂದಿಗೆ ಚರ್ಚಿಸುತ್ತಿದ್ದಾಗ ಮುಸ್ಲಿಂ ಮುಖಂಡರು ಆಕ್ರೋಶ ವ್ಯಕ್ತಪಡಿಸಿ, ಸಭೆಯಿಂದ ಹೊರಬಂದರು.

'ಸಿದ್ದರಾಮಯ್ಯ ಸ್ಪರ್ಧಿಸಿದ್ದರೆ ಬೆಂಬಲ ನೀಡುತ್ತಿದ್ದೆವು. ಆದರೆ, ಈಗ ಅವರಿಗೆ ಟಿಕೆಟ್ ತಪ್ಪಿಸಲಾಗಿದೆ. ಈಗ ಮುಸ್ಲಿಂ ಅಭ್ಯರ್ಥಿಯನ್ನು ಪರಿಗಣಿಸಬೇಕು. ಇನ್ನೆರಡು ದಿನಗಳಲ್ಲಿ ಚರ್ಚಿಸಿ ಕೋಲಾರದಲ್ಲಿ ಬಂಡಾಯ ಅಭ್ಯರ್ಥಿ ನಿಲ್ಲಿಸುತ್ತೇವೆ. ಮುಸ್ಲಿಂ ಸಮುದಾಯದವರನ್ನೇ ಕಣಕ್ಕಿಳಿಸುತ್ತೇವೆ' ಎಂದು ಮುಖಂಡ ಅಬ್ದುಲ್ ಕಯ್ಯುಮ್ ತಿಳಿಸಿದರು.

ಮುಖ್ಯಾಂಶಗಳು

- ಸಿದ್ದರಾಮಯ್ಯ ಸ್ಪರ್ಧಿಸದ ಹಿನ್ನೆಲೆಯಲ್ಲಿ ಬೇಸರ
- ಮುಸ್ಲಿಂ ಮುಖಂಡರಿಂದ ಕಾಂಗ್ರೆಸ್‌ಗೆ ಬಂಡಾಯದ ಎಚ್ಚರಿಕೆ
- ಡಿ.ಕೆ. ಶಿವಕುಮಾರ್ ಸುತ್ತುವರಿದು ಆಕ್ರೋಶ

'ಯಾರಾದರೂ ಸಿ.ಎಂ ಆಗಿ; ಪಕ್ಷ ಹಾಳು ಮಾಡಬೇಡಿ'

ಕೋಲಾರದಲ್ಲಿ ರಾಹುಲ್ ಗಾಂಧಿ ಸಮಾವೇಶದ ಸಿದ್ಧತೆ ಪರಿಶೀಲಿಸುತ್ತಿದ್ದ ಡಿ.ಕೆ.ಶಿವಕುಮಾರ್ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ಸುತ್ತುವರಿದು, 'ಯಾರಾದರೂ ಮುಖ್ಯಮಂತ್ರಿ ಆಗಿ. ಸಿದ್ದರಾಮಯ್ಯ ಅವರಿಗೇ ಟಿಕೆಟ್ ನೀಡಿ. ಪಕ್ಷ ಹಾಳು ಮಾಡಬೇಡಿ' ಎಂದು ಮನವಿ ಮಾಡಿದರು.

'ಕೈಮುಗಿದು ಬೇಡಿಕೊಳ್ಳುತ್ತೇವೆ, ಸಿದ್ದರಾಮಯ್ಯ ಅವರನ್ನೇ ಕಣಕ್ಕಿಳಿಸಿ. ಅವರು ನಾಮಪತ್ರ ಹಾಕಿ ಹೋಗಲಿ, ಇನ್ನುಳಿದಿದ್ದನ್ನು ನಾವು ನೋಡಿಕೊಳ್ಳುತ್ತೇವೆ. ಅವರಿಗೆ ಟಿಕೆಟ್ ಘೋಷಣೆ ಮಾಡದಿದ್ದರೆ ರಾಹುಲ್ ಗಾಂಧಿ ಸಮಾವೇಶಕ್ಕೆ ಬರಲ್ಲ. ಕಾಂಗ್ರೆಸ್‌ಗೆ ವೋಟು ಹಾಕಲ್ಲ' ಎಂದು ಕೂಗಾಡಿದರು.

ಕೋಲಾರದ ಕಾಂಗ್ರೆಸ್ ಭವನದಲ್ಲಿ ಸಿದ್ದರಾಮಯ್ಯ ಸ್ಪರ್ಧೆ ವಿಚಾರವಾಗಿ ಶನಿವಾರ ಮುಖಂಡರು ಹಾಗೂ ಕಾರ್ಯಕರ್ತರ ನಡುವೆ ಘರ್ಷಣೆ ನಡೆಯಿತು

ಕಾಂಗ್ರೆಸ್ ಕಚೇರಿಯಲ್ಲಿ ದಾಂದಲೆ

ಪ್ರಜಾವಾಣಿ ವಾರ್ತೆ

ಕೋಲಾರ: ಕೋಲಾರದಿಂದ ಸ್ಪರ್ಧಿಸಲು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಅವಕಾಶ ನೀಡದಿರುವುದಕ್ಕೆ ಕೆರಳಿದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಪಕ್ಷದ ಮುಸ್ಲಿಂ ಮುಖಂಡರು ಶನಿವಾರ ಮಧ್ಯಾಹ್ನ ಕಾಂಗ್ರೆಸ್ ಭವನದಲ್ಲಿ ದಾಂದಲೆ ನಡೆಸಿ ಕುರ್ಚಿಗಳನ್ನು ಮುರಿದು ಹಾಕಿದರು.

'ಸಿದ್ದರಾಮಯ್ಯ ಅವರಿಗೆ ಏಕೆ ಟಿಕೆಟ್ ನೀಡಿಲ್ಲ? ಇಷ್ಟು ದಿನ ಏಕೆ ಅವರ ಹೆಸರು ಹೇಳಿಕೊಂಡು ಆಟವಾಡಿದಿರಿ? ಯಾರನ್ನು ಕೇಳಿ ಕೊತ್ತೂರು ಮಂಜುನಾಥ್ ಅವರಿಗೆ ಟಿಕೆಟ್ ನೀಡಿದ್ದೀರಿ' ಎಂದು ಕಾರ್ಯಕರ್ತರು ಕೂಗಾಡಿದರು.

ವಿಧಾನ ಪರಿಷತ್ ಸದಸ್ಯರಾದ ಎಂ.ಎಲ್. ಅನಿಲ್ ಕುಮಾರ್, ನಸೀರ್ ಅಹ್ಮದ್, ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಊರಬಾಗಿಲು ಶ್ರೀನಿವಾಸ್ ಮುಂತಾದವರು ಕಾರ್ಯಕರ್ತರನ್ನು ಸಮಾಧಾನಪಡಿಸಲು ಯತ್ನಿಸಿ, ಸೋತರು.

ಕಾರ್ಯಕರ್ತರೊಬ್ಬರು ವಿಡಿಯೊ ಮಾಡಿದ್ದಕ್ಕೆ ಮುಸ್ಲಿಂ ಮುಖಂಡರು ಮತ್ತಷ್ಟು ಕೋಪಗೊಂಡರು. ಈ ವೇಳೆ ಕಿತ್ತಾಟ ನಡೆದು, ನಾಯಕರ ಮೇಲೆಯೇ ಕುರ್ಚಿ ಎಸೆದರು. ಸಮಾಧಾನದ ಮಾತು, ಭರವಸೆಗಳಿಗೆ ಮಣಿಯದೆ ನಾಯಕರಿಗೆ ಮುತ್ತಿಗೆ ಹಾಕಿ ತರಾಟೆಗೆ ತೆಗೆದುಕೊಂಡರು. ಈ ವೇಳೆ ಗ್ರಾಮಾಂತರ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಉದಯಶಂಕರ್ ತಲೆಗೆ ಕುರ್ಚಿ ತಾಗಿ ಗಾಯವಾಯಿತು.

ಸಿದ್ದರಾಮಯ್ಯ ಅವರನ್ನೇ ಕಣಕ್ಕಿಳಿಸಿ: ಕೊತ್ತೂರು

ಕೋಲಾರ: 'ಸಿದ್ದರಾಮಯ್ಯ ಅವರೇ ಕೋಲಾರ ಕ್ಷೇತ್ರದ ಅಭ್ಯರ್ಥಿ ಆಗಬೇಕು. ಇನ್ನೂ ಅವಕಾಶವಿದೆ. ಅವರನ್ನೇ ಕಣಕ್ಕಿಳಿಸುವಂತೆ ನಾನು ಮುಖಂಡರಿಗೆ ಮನವಿ ಮಾಡುತ್ತೇನೆ' ಎಂದು ಕೋಲಾರ ಕ್ಷೇತ್ರದ ಅಭ್ಯರ್ಥಿ ಕೊತ್ತೂರು ಮಂಜುನಾಥ್ ತಿಳಿಸಿದರು. ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾನು ಕೋಲಾರ ಕ್ಷೇತ್ರ ಬೇಕೆಂದು ಕೇಳಿದವನಲ್ಲ, ಆಕಾಂಕ್ಷಿಯಾಗಿ ಅರ್ಜಿ ಸಲ್ಲಿಸಿದವನೂ ಅಲ್ಲ. ಪಟ್ಟಿ ಬಿಡುಗಡೆಯಾದ ನಂತರ ನನ್ನ ಗಮನಕ್ಕೆ ಬಂದಿದೆ' ಎಂದರು.

ವರುಣ: ಜೆಡಿಎಸ್ ಅಭ್ಯರ್ಥಿ ಬದಲು

ಬೆಂಗಳೂರು: ಆರು ಅಭ್ಯರ್ಥಿಗಳ ಮತ್ತೊಂದು ಪಟ್ಟಿಯನ್ನು ಜೆಡಿಎಸ್ ಶನಿವಾರ ಬಿಡುಗಡೆ ಮಾಡಿದ್ದು, ವರುಣ ಕ್ಷೇತ್ರಕ್ಕೆ ಈ ಮೊದಲು ಘೋಷಿಸಿದ್ದ ಅಭಿಷೇಕ್ ಬದಲು, ಮಾಜಿ ಶಾಸಕ ಡಾ.ಭಾರತಿ ಶಂಕರ್ ಅವರಿಗೆ ಟಿಕೆಟ್ ನೀಡಲಾಗಿದೆ. ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸಿದ್ದರಾಮಯ್ಯ, ಬಿಜೆಪಿಯಿಂದ ವಿ.ಸೋಮಣ್ಣ ಸ್ಪರ್ಧಿಸುತ್ತಿದ್ದಾರೆ.

ಚಿತ್ರದುರ್ಗಕ್ಕೆ ರಘು ಆಚಾರ್, ಯಾದಗಿರಿ ಕ್ಷೇತ್ರಕ್ಕೆ ಎ.ಬಿ.ಮಾಲಕರೆಡ್ಡಿ ಅವರಿಗೆ ಅವಕಾಶ ನೀಡಲಾಗಿದೆ.

ಚುನಾವಣಾ ರಾಜಕಾರಣಕ್ಕೆ ಸುದರ್ಶನ್ ವಿದಾಯ

ವಿ.ಆರ್. ಸುದರ್ಶನ್

ಕೋಲಾರ: ಕಾಂಗ್ರೆಸ್ ಮುಖಂಡ, ವಿಧಾನ ಪರಿಷತ್ತಿನ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಚುನಾವಣಾ ರಾಜಕಾರಣಕ್ಕೆ ವಿದಾಯ ಹೇಳಿದ್ದಾರೆ.

ಈ ಕುರಿತು ಬೆಳಿಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿ, 'ಕಾಂಗ್ರೆಸ್ ಪಕ್ಷಕ್ಕೆ ಧನ್ಯವಾದಗಳು. ಆ ಪಕ್ಷಕ್ಕೆ ಒಳ್ಳೆಯದಾಗಲಿ. ಆಲೋಚಿಸಿ ನಿರ್ಧಾರ ಕೈಗೊಂಡಿದ್ದೇನೆ' ಎಂದರು.

'ಜನಪರ, ಸಂವಿಧಾನ ಪರ, ಅಭಿವೃದ್ಧಿ ಪರ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತೇನೆ. ಆದರೆ, ಚುನಾವಣಾ ರಾಜಕಾರಣದಲ್ಲಿ ಇರುವುದಿಲ್ಲ. ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಿಲ್ಲ' ಎಂದು ಹೇಳಿದರು.

'ಚುನಾವಣೆಗೆ ನಾಮಪತ್ರ ಪ್ರಕ್ರಿಯೆ ಮುಗಿದ ಮೇಲೆ ಏ.25ರಂದು ಪತ್ರಿಕಾಗೋಷ್ಠಿ ನಡೆಸಿ ಎಲ್ಲಾ ವಿಚಾರ ಹಂಚಿಕೊಳ್ಳುತ್ತೇನೆ' ಎಂದರು.

ಸುದರ್ಶನ್ ಕೂಡ ಕೋಲಾರ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು. 'ಸಿದ್ದರಾಮಯ್ಯ ಸ್ಪರ್ಧಿಸಿದರೆ ಅವರಿಗೆ ಬೆಂಬಲ ನೀಡಿ ಪ್ರಚಾರ ನಡೆಸುತ್ತೇನೆ' ಎಂಬುವುದಾಗಿ ಈ ಹಿಂದೆ ಹೇಳಿದ್ದರು.

1995ರಲ್ಲಿ ಕಾಂಗ್ರೆಸ್ ಸೇರಿದರು. 2004ರಿಂದ 2006ವರೆಗೆ ವಿಧಾನ ಪರಿಷತ್ ಸಭಾಪತಿಯಾಗಿ ಕಾರ್ಯನಿರ್ವಹಿಸಿದರು. 2006ರಲ್ಲಿ ಮತ್ತೆ ವಿಧಾನ ಪರಿಷತ್ ಸದಸ್ಯರಾದರು. ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಮೂರು ಬಾರಿ ಪ್ರಯತ್ನಿಸಿದ್ದ ಅವರಿಗೆ ಟಿಕೆಟ್ ಲಭಿಸಿರಲಿಲ್ಲ.

ಸಾವಿನ ಮನೆಯಲ್ಲೂ ಡಿಕೆಶಿ ಮುಖ್ಯಮಂತ್ರಿ ಕನವರಿಕೆ!

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): 'ನನ್ನನ್ನು ಸಿ.ಎಂ ಮಾಡಬೇಕು ಅಂತ ಇದ್ದೀಯೋ ಇಲ್ವೋ?' – ಹೀಗೆಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಮ್ಮ ಪಕ್ಕದಲ್ಲಿ ಕುಳಿತಿದ್ದ ದೇವನಹಳ್ಳಿ ಕಾಂಗ್ರೆಸ್ ಅಭ್ಯರ್ಥಿ ಕೆ.ಎಚ್.ಮುನಿಯಪ್ಪ ಅವರನ್ನು ನಗುತ್ತಲೇ ಪ್ರಶ್ನಿಸಿದರು. ಇದಕ್ಕೆ ಮುನಿಯಪ್ಪ ಮುಗುಳ್ನಕ್ಕು ಸುಮ್ಮನಾದರು.

ಶನಿವಾರ ನಿಧನರಾದ ದೇವನಹಳ್ಳಿ ಮಾಜಿ ಶಾಸಕ ವೆಂಕಟಸ್ವಾಮಿ ಅವರಿಗೆ ಅಂತಿಮ ನಮನ ಸಲ್ಲಿಸಲು ತಾಲ್ಲೂಕಿನ ಸಾದಹಳ್ಳಿಗೆ ಬಂದಿದ್ದ ಶಿವಕುಮಾರ್ ಮತ್ತು ಮುನಿಯಪ್ಪ ಅಕ್ಕಪಕ್ಕ ಕುಳಿತಿದ್ದರು. ಆಗ ಶಿವಕುಮಾರ್, 'ನನ್ನನ್ನು ಸಿ.ಎಂ ಮಾಡಬೇಕು ಅಂತ ಇದ್ದೀಯೋ ಇಲ್ವೋ ಅಂತ ನನ್ನ ಸ್ನೇಹಿತರಿಗೆ ಕೇಳುತ್ತಿದ್ದೀನಿ' ಎಂದು ಕೆ.ಎಚ್.ಮುನಿಯಪ್ಪ ಅವರನ್ನು ಕುರಿತು ಹೇಳಿದರು.

ಪಕ್ಕದಲ್ಲಿ ಕುಳಿತಿದ್ದ ಬಿಜೆಪಿಯ ಸ್ಥಳೀಯ ಮುಖಂಡ ದೊಡ್ಡ ಬಸವರಾಜ ಅವರನ್ನು ಕುರಿತು, 'ದೇವನಹಳ್ಳಿ ವಿಧಾನಸಭಾ ಕ್ಷೇತ್ರ ಸಾಮಾನ್ಯ ಕ್ಷೇತ್ರವಾಗಿದ್ದರೆ ನೀನು, ಬಚ್ಚೇಗೌಡ ಯಾವಾಗಲೋ ಶಾಸಕ ಆಗಿರುತ್ತಿದ್ದಿರಿ' ಎಂದರು. ಅದಕ್ಕೆ ಬಸವರಾಜ ನಗುತ್ತ ಕೈ ಮುಗಿದರು.

ಸಾವಿನ ಮನೆಯಲ್ಲಿ ಬಂಡಾಯ ಶಮನಕ್ಕೆ ಯತ್ನ: ಸಾವಿನ ಮನೆಯಲ್ಲಿ ಡಿ.ಕೆ. ಶಿವಕುಮಾರ್ ಅವರಿಂದ ಕಾಂಗ್ರೆಸ್ ಬಂಡಾಯ ಶಮನ ಯತ್ನ ಪ್ರಸಂಗವೂ ನಡೆಯಿತು.

ದೇವನಹಳ್ಳಿ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಕೈ ತಪ್ಪಿದ ನಂತರ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎ.ಸಿ. ಶ್ರೀನಿವಾಸ್ ಹಾಗೂ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ವಿ.ಶಾಂತಕುಮಾರ್ ಕ್ಷೇತ್ರದಲ್ಲಿ ಎಲ್ಲಿಯೂ ಸಾರ್ವಜನಿಕವಾಗಿ ಕಾಣಿಸಿಕೊಂಡಿರಲಿಲ್ಲ.

ಅಂತಿಮ ನಮನ ಸಲ್ಲಿಸಲು ಬಂದಿದ್ದ ಇವರಿಬ್ಬರನ್ನೂ ಪಕ್ಕಕ್ಕೆ ಕರೆದೊಯ್ದ ಡಿ.ಕೆ. ಶಿವಕುಮಾರ್ ಅಲ್ಲಿಯೇ ಇಬ್ಬರೊಂದಿಗೆ ಮಾತುಕತೆ ನಡೆಸಿ, ಬಂಡಾಯ ಶಮನಕ್ಕೆ ಯತ್ನಿಸಿದರು. 'ಪಕ್ಷಕ್ಕಾಗಿ ದುಡಿಯುವಂತೆ ಇಬ್ಬರಿಗೂ ಸೂಚಿಸಿದ್ದಾರೆ. ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಉತ್ತಮ ಸ್ಥಾನಮಾನ ನೀಡುವ ಭರವಸೆ ನೀಡಿದ್ದಾರೆ' ಎಂದು ಪಕ್ಷದ ಮೂಲಗಳು ತಿಳಿಸಿವೆ.

ಶಿಗ್ಗಾವಿ: ಬೊಮ್ಮಾಯಿ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಹಾವೇರಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶಿಗ್ಗಾವಿ ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಚುನಾವಣಾಧಿಕಾರಿಗೆ ತಮ್ಮ ನಾಮಪತ್ರವನ್ನು ಶನಿವಾರ ಸಲ್ಲಿಸಿದರು.

ನಂತರ ಬೊಮ್ಮಾಯಿ ಅವರು ಮಾಧ್ಯಮದವರೊಂದಿಗೆ ಮತನಾಡಿ, ಮೂರು ಬಾರಿ ಶಿಗ್ಗಾವಿ ಮತಕ್ಷೇತ್ರದ ಜನರು ಬೆಂಬಲ ಕೊಟ್ಟಿದ್ದಾರೆ. ಈ ಬಾರಿಯೂ ಹಿಂದಿನ ದಾಖಲೆಯನ್ನು ಮುರಿದು, ಅತ್ಯಧಿಕ ಮತಗಳಿಂದ ಆರಿಸಿ ಬರುವ ವಿಶ್ವಾಸವಿದೆ ಎಂದು ಹೇಳಿದರು.

'ಚುನಾವಣೆ ಎಂದರೆ ಕುಸ್ತಿ ಕಣ. ನನ್ನ ಕ್ಷೇತ್ರದಲ್ಲಿ ಎದುರಾಳಿ ಯಾರೇ ಬರಲಿ, ಪ್ರತಿಸ್ಪರ್ಧಿ ಗಟ್ಟಿಯಾಗಿದ್ದರೆ ಚುನಾವಣೆ ಚೆನ್ನಾಗಿ ನಡೆಯುತ್ತದೆ. ನನ್ನ ವಿಶ್ವಾಸ ನನ್ನ ಕ್ಷೇತ್ರದ ಜನರ ಮೇಲಿದೆ. ಏ.19ರಂದು ಇನ್ನೊಂದು ಬಾರಿ ಕಾರ್ಯಕರ್ತರೊಂದಿಗೆ ಮೆರವಣಿಗೆ ನಡೆಸಿ, ನಾಮಪತ್ರ ಸಲ್ಲಿಕೆ ಮಾಡುತ್ತೇನೆ. ಆಗ ನಮ್ಮ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಆಗಮಿಸಲಿದ್ದಾರೆ' ಎಂದರು.

ಆರೋಪ ಸಾಬೀತು ಪಡಿಸಲಿ: 'ನೆಹರು ಓಲೇಕಾರ ನನ್ನ ಮೇಲೆ ಆರೋಪ ಮಾಡಿದ್ದನ್ನು ಸಾಬೀತು ಮಾಡಲಿ. ನಾನು ಎಲ್ಲದಕ್ಕೂ ಸಿದ್ಧನಿದ್ದೇನೆ. ಆದರೆ, ಓಲೇಕಾರ ಅವರು, ಮೊದಲು ಅವರ ಮೇಲಿರುವ ಆರೋಪಗಳ ಬಗ್ಗೆ ಸ್ಪಷ್ಟೀಕರಣ ಕೊಡಲಿ' ಎಂದು ತಿರುಗೇಟು ನೀಡಿದರು.

ನಾಮಪತ್ರ ಸಲ್ಲಿಸುವ ವೇಳೆ, ಬೊಮ್ಮಾಯಿ ಅವರೊಂದಿಗೆ ಸಚಿವ ಸಿ.ಸಿ.ಪಾಟೀಲ, ಸಂಸದ ಶಿವಕುಮಾರ ಉದಾಸಿ ಇದ್ದರು.

ಶಿಗ್ಗಾವಿಯ ತಹಶೀಲ್ದಾರ್ ಕಚೇರಿಯಲ್ಲಿ ಶನಿವಾರ ನಾಮಪತ್ರ ಸಲ್ಲಿಸಿ ಹೊರಬಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

'ಶೆಟ್ಟರ್‌ಗೆ ಟಿಕೆಟ್ ತಪ್ಪಿಸಲು ಯತ್ನಿಸಿಲ್ಲ'

ಹುಬ್ಬಳ್ಳಿ: 'ಶಾಸಕ ಜಗದೀಶ ಶೆಟ್ಟರ್‌ಗೆ ಟಿಕೆಟ್ ಕೊಡಿಸಲು ಎಲ್ಲ ರೀತಿಯಿಂದಲೂ ಪ್ರಯತ್ನಿಸುತ್ತಿದ್ದೇವೆ. ಅವರಿಗೆ ಟಿಕೆಟ್ ತಪ್ಪಿಸಲು ನಾವು ಪ್ರಯತ್ನಿಸುತ್ತಿದ್ದೇವೆ ಎನ್ನುವ ಶೆಟ್ಟರ್ ಬೆಂಬಲಿಗರ ಆರೋಪದಲ್ಲಿ ಹುರುಳಿಲ್ಲ, ಅದು ಕೇವಲ ವದಂತಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶನಿವಾರ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ರಾಜಕಾರಣಕ್ಕೆ ಬರುವುದಕ್ಕಿಂತ ಮೊದಲೇ ಶೆಟ್ಟರ್ ಮತ್ತು ನಾವು ಸ್ನೇಹಿತರು. ಅವರಿಗೆ ಟಿಕೆಟ್ ತಪ್ಪಿಸಲು ಪ್ರಯತ್ನಿಸಿಲ್ಲ. ಟಿಕೆಟ್ ಕೊಡಿಸಬೇಕೆಂದು ಪಕ್ಷದ ವರಿಷ್ಠರೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಜೊತೆಯೂ ಚರ್ಚಿಸಿದ್ದೇನೆ' ಎಂದರು.

'ಟಿಕೆಟ್ ಕೈತಪ್ಪಿದರೆ ಪಕ್ಷೇತರ ಅಭ್ಯರ್ಥಿಯಾಗಿ ನಿಲ್ಲದಂತೆ ಅವರ ಮನವೊಲಿಸುವ ಕಾರ್ಯ ಸಹ ನಡೆದಿದೆ' ಎಂದು ಹೇಳಿದರು.

'ಟಿಕೆಟ್ ಹಂಚಿಕೆ ವಿಷಯದಲ್ಲಿ ಬಿಜೆಪಿಗೆ ಯಾವುದೇ ಗೊಂದಲವಿಲ್ಲ. ಆಕಾಂಕ್ಷಿಗಳ ನಡುವೆ ಪೈಪೋಟಿಯಿದ್ದು, ಎರಡು-ಮೂರು ದಿನಗಳಲ್ಲಿ ಎಲ್ಲವೂ ತಿಳಿಯಾಗಲಿದೆ. ಚುನಾವಣೆ ಎಂದರೆ ಸವಾಲು. ಅದನ್ನ ಸಮರ್ಥವಾಗಿ ಎದುರಿಸುತ್ತೇವೆ' ಎಂದರು. ನಂತರ ಬೊಮ್ಮಾಯಿ ಅವರು ಬೆಂಬಲಿಗರೊಂದಿಗೆ ಸಿದ್ಧಾರೂಢಮಠಕ್ಕೆ ತೆರಳಿ ಸಿದ್ಧಾರೂಢರ ಗದ್ದುಗೆ ದರ್ಶನ ಪಡೆದು, ಪೂಜೆ ಸಲ್ಲಿಸಿದರು.

ಸಿ.ಎಂ ₹29 ಕೋಟಿ ಒಡೆಯ

ಹಾವೇರಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶನಿವಾರ ನಾಮಪತ್ರದೊಂದಿಗೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ₹5.98 ಕೋಟಿ ಮೌಲ್ಯದ ಚರಾಸ್ತಿ, ₹22.95 ಕೋಟಿ ಮೌಲ್ಯದ ಸ್ಥಿರಾಸ್ತಿ ಸೇರಿದಂತೆ ಒಟ್ಟು ₹28.93 ಕೋಟಿ ಮೌಲ್ಯದ ಆಸ್ತಿ ಘೋಷಣೆ ಮಾಡಿಕೊಂಡಿದ್ದಾರೆ.

2018ರ ಚುನಾವಣೆಯಲ್ಲಿ ಬೊಮ್ಮಾಯಿ ಅವರು ₹10.19 ಕೋಟಿ ಆಸ್ತಿ ಘೋಷಿಸಿಕೊಂಡಿದ್ದರು. 5 ವರ್ಷಗಳ ಅವಧಿಯಲ್ಲಿ ಇವರ ವೈಯಕ್ತಿಕ ಆಸ್ತಿ ಮೌಲ್ಯ ಸುಮಾರು ಮೂರು ಪಟ್ಟು ಹೆಚ್ಚಿದಂತಾಗಿದೆ.

ಸಿಎಂ ಬಳಿ ₹1.50 ಕೋಟಿ ಮೌಲ್ಯದ ಚಿನ್ನಾಭರಣವಿದೆ. ಆದರೆ, ಇವರ ಹೆಸರಿನಲ್ಲಿ ಯಾವುದೇ ವಾಹನಗಳಿಲ್ಲ.

ಅವರ ₹3 ಲಕ್ಷ ನಗದು, ಎಫ್‌ಡಿ ಮತ್ತು ಆರ್‌.ಡಿ.ಗಳಲ್ಲಿ ₹6.83 ಲಕ್ಷ, ಉಳಿತಾಯ ಖಾತೆಗಳಲ್ಲಿ ₹33.80 ಲಕ್ಷ ಹೊಂದಿದ್ದಾರೆ. ಸಾರ್ವಜನಿಕ ಕಂಪನಿಗಳಲ್ಲಿ ₹64.77 ಲಕ್ಷ, ಖಾಸಗಿ ಕಂಪನಿಗಳಲ್ಲಿ ₹64.98 ಲಕ್ಷ ಹಾಗೂ ಪಾರ್ಟ್‌ನರ್‌ಶಿಪ್‌ನಲ್ಲಿ ₹1.44 ಕೋಟಿ ಹೂಡಿಕೆ ಮಾಡಿದ್ದಾರೆ. ಪುತ್ರ ಭರತ್ ಬೊಮ್ಮಾಯಿಗೆ ₹14.74 ಲಕ್ಷ ವೈಯಕ್ತಿಕ ಸಾಲ ನೀಡಿದ್ದಾರೆ.

ಆಸ್ತಿ ವಿವರ: ಬಸವರಾಜ ಬೊಮ್ಮಾಯಿ ಅವರಿಗೆ ₹22.95 ಕೋಟಿ ಮೌಲ್ಯದ ಸ್ಥಿರಾಸ್ತಿಯಿದ್ದು, ಹುಬ್ಬಳ್ಳಿ ತಾಲ್ಲೂಕು ತಾರಿಹಾಳ ಗ್ರಾಮದ ಬಳಿ ₹82 ಲಕ್ಷ ಮೌಲ್ಯದ ಕೃಷಿ ಜಮೀನಿದೆ. ಬೆಂಗಳೂರಿನ ಯಲಹಂಕ ಹೋಬಳಿಯಲ್ಲಿ ₹3 ಕೋಟಿ ಮೌಲ್ಯದ ಹಾಗೂ ಹುಬ್ಬಳ್ಳಿ ಬೆಂಗೇರಿಯಲ್ಲಿ ₹4.44 ಕೋಟಿ ಮೌಲ್ಯದ ಕೃಷಿಯೇತರ ಜಮೀನಿದೆ.

ಧಾರವಾಡದ ಲಕಮನಹಳ್ಳಿ ಕೈಗಾರಿಕಾ ಪ್ರದೇಶ, ದೊಡ್ಡಬಳ್ಳಾಪುರ ಕೈಗಾರಿಕಾ ಪ್ರದೇಶ ಹಾಗೂ ಕಾರವಾರ ತಾಲ್ಲೂಕು ಮಾಜಾಳಿ ಗ್ರಾಮದಲ್ಲಿ ಸೇರಿ ₹6.50 ಕೋಟಿ ಮೌಲ್ಯದ ವಾಣಿಜ್ಯ ಕಟ್ಟಡಗಳಿವೆ. ಶಿಗ್ಗಾವಿಯಲ್ಲಿ ಮನೆ ಹಾಗೂ ಬೆಂಗಳೂರಿನ ಲಾವೆಲ್ಲೆ ರಸ್ತೆಯ ಕ್ಯಾಸಲಾವೆಲ್ಲೆಅಪಾರ್ಟ್‌ಮೆಂಟ್‌ನಲ್ಲಿ ಫ್ಲಾಟ್ ಹೊಂದಿದ್ದಾರೆ.

ಸಿಎಂ ಬೊಮ್ಮಾಯಿ ಅವರು ₹5.79 ಕೋಟಿ ಸಾಲವನ್ನೂ ಹೊಂದಿದ್ದಾರೆ. ಪತ್ನಿ ಚೆನ್ನಮ್ಮ ಅವರಲ್ಲಿ ₹50 ಸಾವಿರ ನಗದು, ₹78.83 ಲಕ್ಷ ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣ ಸೇರಿದಂತೆ ₹1.14 ಕೋಟಿ ಮೌಲ್ಯದ ಚರಾಸ್ತಿಯಿದೆ.

ಹಿಂದೂ ಅವಿಭಕ್ತ ಕುಟುಂಬದ ಹೆಸರಿನಲ್ಲಿ ₹19.20 ಕೋಟಿ ಮೌಲ್ಯದ ಸ್ಥಿರಾಸ್ತಿ ಮತ್ತು ₹1.57 ಕೋಟಿ ಮೌಲ್ಯದ ಚರಾಸ್ತಿಯಿದೆ. ಮಗಳ ಹೆಸರಿನಲ್ಲಿ ₹1.28 ಕೋಟಿ ಮೌಲ್ಯದ ಚರಾಸ್ತಿಯಿದೆ.

'ಯು.ವಿ. ಸಿಂಗ್ ಕೊಲೆಗೆ ಯತ್ನಿಸಿದ್ದ ಆರೋಪಿಯೇ ಈಗ ಬಿಜೆಪಿ ಅಭ್ಯರ್ಥಿ'

ಬೆಂಗಳೂರು: ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎನ್. ಚಂದ್ರ (49) ಶನಿವಾರ ತಮ್ಮ ನಾಮಪತ್ರ ಸಲ್ಲಿಸಿದ್ದಾರೆ.

'ಅಕ್ರಮ ಗಣಿಗಾರಿಕೆ ಸಂಬಂಧ ಲೋಕಾಯುಕ್ತ ತನಿಖಾ ತಂಡದ ಮುಖ್ಯಸ್ಥರೂ ಆಗಿದ್ದ ಕೆರೆ ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ. ಯು.ವಿ.ಸಿಂಗ್ ಮೇಲೆ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿದ್ದ ಆರೋಪದಡಿ ನನ್ನ ಮೇಲೆ ಅಮೃತಹಳ್ಳಿ ಠಾಣೆಯಲ್ಲಿ 2011ರಲ್ಲಿ ಪ್ರಕರಣ ದಾಖಲಾಗಿದೆ. 65ನೇ ಸಿಸಿಎಚ್ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇದೆ' ಎಂದು ಚಂದ್ರ ಘೋಷಿಸಿದ್ದಾರೆ.

ಇದೇ ಪ್ರಕರಣದಲ್ಲಿ ಚಂದ್ರ ಅವರ ಸಹೋದರ ಶರವಣನ್ (32) ಮತ್ತು ಮುನಿರೆಡ್ಡಿಪಾಳ್ಯದ ಮಂಜು ಅಲಿಯಾಸ್ ಭರತ್‌ಸಿಂಗ್ (27) ಎಂಬುವವರನ್ನು ಪೊಲೀಸರು ಬಂಧಿಸಿದ್ದರು. ಆದರೆ, ಚಂದ್ರ ತಲೆಮರೆಸಿಕೊಂಡಿದ್ದರು. ನಂತರ, ಜಾಮೀನು ಸಿಕ್ಕಿತ್ತು.

ಎಸ್ಸೆಸ್ಸೆಲ್ಸಿ ಅನುತ್ತೀರ್ಣ: 'ಕೃಷಿಕ' ಎಂದು ಹೇಳಿರುವ ಚಂದ್ರ ಅವರ ಒಟ್ಟು ಆಸ್ತಿ ₹ 10.75 ಕೋಟಿ. ವೈಯಕ್ತಿಕ ₹ 7.80 ಕೋಟಿ ಮೌಲ್ಯದ ಆಸ್ತಿ ಹಾಗೂ ಪತ್ನಿ ಹೆಸರಿನಲ್ಲಿ ₹ 2.95 ಕೋಟಿ ಮೌಲ್ಯದ ಆಸ್ತಿ ಇರುವುದಾಗಿ ಘೋಷಿಸಿದ್ದಾರೆ. ಎಸ್ಸೆಸ್ಸೆಲ್ಸಿಯಲ್ಲಿ ಅನುತ್ತೀರ್ಣವಾಗಿರುವುದಾಗಿ ಹೇಳಿರುವ ಚಂದ್ರ, 2021–22ರಲ್ಲಿ ₹ 6.82 ಲಕ್ಷ ವಾರ್ಷಿಕ ಆದಾಯ ತೋರಿಸಿದ್ದಾರೆ.

'₹33 ಲಕ್ಷ ಮೌಲ್ಯದ ಫಾರ್ಚ್ಯೂನರ್ ಕಾರು ಹೊಂದಿದ್ದೇನೆ ಮತ್ತು ₹ 60.79 ಲಕ್ಷ ಸಾಲ ಮಾಡಿದ್ದೇನೆ. ನನ್ನ ಪತ್ನಿ ಅನುರಾಧಾ ಕೈಯಲ್ಲಿ ₹2 ಲಕ್ಷ ನಗದು ಹಣವಿದೆ' ಎಂದು ಚಂದ್ರ ಹೇಳಿದ್ದಾರೆ.

ಸಿದ್ದರಾಮಯ್ಯಗೆ ಸಿಗದ ಕೋಲಾರ

ಒಂದನೇ ಪುಟದಿಂದ...

ದೇವರ ಹಿಪ್ಪರಗಿ ಕ್ಷೇತ್ರದಿಂದ ಲಿಂಗಾಯತ ಸಮುದಾಯದ ಹಿರಿಯ ನಾಯಕ ಎಸ್.ಆರ್.ಪಾಟೀಲ ಕಣಕ್ಕೆ ಇಳಿಯಲು ಉದ್ದೇಶಿಸಿದ್ದರು. ಈ ಸಂಬಂಧ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಇತ್ತೀಚೆಗೆ ಭೇಟಿ ಮಾಡಿ ಸಮಾಲೋಚನೆ ನಡೆಸಿದ್ದರು. ಆದರೆ, ಅವರಿಗೆ ಅಲ್ಲಿ ಅವಕಾಶ ಸಿಕ್ಕಿಲ್ಲ. ಸಿಂದಗಿ ಕ್ಷೇತ್ರದ ಮಾಜಿ ಶಾಸಕ ಶರಣಪ್ಪ ಸುಣಗಾರ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಲಾಗಿದೆ.

ಚುನಾವಣಾ ವೇಳಾಪಟ್ಟಿ ಪ್ರಕಟಕ್ಕೆ ಮುನ್ನವೇ ಪಕ್ಷವು 124 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಿತ್ತು. ವೇಳಾಪಟ್ಟಿ ಪ್ರಕಟಗೊಂಡ ನಂತರ 42 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲಾಗಿತ್ತು. ಆದರೆ, ಮೂರನೇ ಪಟ್ಟಿಗೆ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒಮ್ಮತಾಭಿಪ್ರಾಯಕ್ಕೆ ಬಂದಿರಲಿಲ್ಲ. '30 ಕ್ಷೇತ್ರಗಳಲ್ಲಿ ನಾನು ಸೂಚಿಸಿದ ಅಭ್ಯರ್ಥಿಗಳನ್ನೇ ಕಣಕ್ಕೆ ಇಳಿಸಬೇಕು' ಎಂದು ಶಿವಕುಮಾರ್ ಪಟ್ಟು ಹಿಡಿದಿದ್ದರು. ಇದರಿಂದಾಗಿ, ಪಟ್ಟಿ ಪ್ರಕಟವಾಗುವುದು ವಿಳಂಬವಾಗಿತ್ತು. ಶಿವಕುಮಾರ್ ಗುಂಪಿನಲ್ಲಿ ಗುರುತಿಸಿಕೊಂಡಿರುವ ಉಮಾಪತಿ ಶ್ರೀನಿವಾಸ ಗೌಡ, ಆರ್.ಕೆ. ರಮೇಶ್, ನಯನಾ ಜ್ಯೋತಿ ಜವಹರ್, ಗಂಗಾಧರ ಎಸ್., ಕೆ.ಎಂ. ಉದಯ್ ಅವರಿಗೆ ಟಿಕೆಟ್ ಲಭಿಸಿದೆ.

ಮೊಯಿಲಿ ಪರಮಾಪ್ತನಿಗಿಲ್ಲ ಟಿಕೆಟ್: ಕೇಂದ್ರದ ಮಾಜಿ ಸಚಿವ ಎಂ. ವೀರಪ್ಪ ಮೊಯಿಲಿ ಪರಮಾಪ್ತ, ಚಾಮರಾಜದ ಮಾಜಿ ಶಾಸಕ ವಾಸು ಅವರಿಗೆ ಅವಕಾಶ ಸಿಕ್ಕಿಲ್ಲ. ವಾಸು ಅವರ ಇಬ್ಬರು ಪುತ್ರರು ಇತ್ತೀಚೆಗೆ ಬಿಜೆಪಿ ಸೇರ್ಪಡೆಯಾಗಿದ್ದರು. 2018ರಲ್ಲಿ ಮುನಿಯಾಲು ಉದಯ ಕುಮಾರ್ ಶೆಟ್ಟಿ ಕಾರ್ಕಳ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಮೊಯಿಲಿ ಒತ್ತಡಕ್ಕೆ ಮಣಿದು ಪಕ್ಷವು ಗೋಪಾಲ ಭಂಡಾರಿ ಅವರನ್ನು ಕಣಕ್ಕೆ ಇಳಿಸಿತ್ತು. ಇದರಿಂದ ಕುಪಿತಗೊಂಡ ಕಾರ್ಯಕರ್ತರು ಮೊಯಿಲಿ ವಿರುದ್ಧ ಪ್ರತಿಭಟನೆ ನಡೆಸಿದ್ದರು. ಶೆಟ್ಟಿ ಅವರು ಮೊಯಿಲಿ ಕೆಂಗಣ್ಣಿಗೆ ಗುರಿಯಾಗಿದ್ದರು. ಬಳಿಕ ಶೆಟ್ಟಿ ಅವರು ಪಕ್ಷದಿಂದ ಅಂತರ ಕಾಯ್ದುಕೊಂಡಿದ್ದರು. ಈ ಸಲ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರಲಿಲ್ಲ. ಆದರೆ, ಪಕ್ಷವು ಈ ಬಾರಿ ಅವರಿಗೆ ಮಣೆ ಹಾಕಿದೆ ಎಂದು ಮೂಲಗಳು ಹೇಳಿವೆ.

ಚಿಕ್ಕಪೇಟೆ ಕ್ಷೇತ್ರದಲ್ಲಿ ಮಾಜಿ ಶಾಸಕ ಆರ್.ವಿ.ದೇವರಾಜ್, ಮಾಜಿ ಮೇಯರ್ ಗಂಗಾಂಬಿಕೆ ಹಾಗೂ ಕೆಜಿಎಫ್ ಬಾಬು ಆಕಾಂಕ್ಷಿಗಳಾಗಿದ್ದರು. ಪಟ್ಟಿ ಪ್ರಕಟಕ್ಕೆ ಮುನ್ನವೇ ಗಂಗಾಂಬಿಕೆ ಹಾಗೂ ಕೆಜಿಎಫ್ ಬಾಬು ಪತ್ನಿ ನಾಮಪತ್ರ ಸಲ್ಲಿಸಿದ್ದರು. ಅಲ್ಲಿ ಬಲಿಜ ಸಮುದಾಯಕ್ಕೆ ಸೇರಿದ ದೇವರಾಜ್ ಅವರಿಗೆ ಪಕ್ಷ ಟಿಕೆಟ್ ನೀಡಿದೆ. ಕುಮಟಾ ಕ್ಷೇತ್ರದಲ್ಲಿ ಮಾಜಿ ರಾಜ್ಯಪಾಲೆ ಮಾರ್ಗರೇಟ್ ಆಳ್ವ ಪುತ್ರ ನಿವೇದಿತ್ ಆಳ್ವ ಅವರಿಗೆ ಟಿಕೆಟ್ ಸಿಕ್ಕಿದೆ. ಸಿದ್ದರಾಮಯ್ಯ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಉಮಾಶ್ರೀ (ತೇರದಾಳ) ಅವರಿಗೆ ಟಿಕೆಟ್ ಸಿಕ್ಕಿಲ್ಲ.

'ಆಪರೇಷನ್' ಸೂತ್ರಧಾರರಿಗೆ ಕೈ–ದಳ ಟಿಕೆಟ್

ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ತರಲು 2019ರಲ್ಲಿ ನಡೆಸಿದ 'ಆಪರೇಷನ್ ಕಮಲ' ಕಾರ್ಯಾಚರಣೆಯ ಸೂತ್ರಧಾರಿಗಳಲ್ಲಿ ಪ್ರಮುಖರಾಗಿದ್ದ ಉದ್ಯಮಿ ಕದಲೂರು ಉದಯ್ ಮತ್ತು ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಆಪ್ತ ಎನ್.ಆರ್. ಸಂತೋಷ್‌ಗೆ ಕಾಂಗ್ರೆಸ್ ಮತ್ತು ಜೆಡಿಎಸ್ ಈಗ ಬಾಗಿಲು ತೆರೆದಿವೆ.

ಬೆಂಗಳೂರಿನಿಂದ ಮುಂಬೈಗೆ ತೆರಳಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರಿಗೆ ವಸತಿ, ಊಟ ಸೇರಿದಂತೆ ಸಕಲವನ್ನೂ ಉದಯ್ ವ್ಯವಸ್ಥೆ ಮಾಡಿದ್ದರು. ಅವರೇ ಸರ್ಕಾರ ಪತನಕ್ಕೆ ಮುಖ್ಯ ಸೂತ್ರಧಾರಿ ಎಂದು ಕುಮಾರಸ್ವಾಮಿ ಆರೋಪಿಸಿದ್ದರು.

ಎನ್.ಆರ್. ಸಂತೋಷ್, ಕಾಂಗ್ರೆಸ್ ಮತ್ತು ಜೆಡಿಎಸ್‌ನ ಅತೃಪ್ತ ಶಾಸಕರನ್ನು ಬೆಂಗಳೂರಿನಿಂದ ಮುಂಬೈಗೆ ವಿಮಾನ ಹತ್ತಿಸಿ ಕರೆದೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇವರ ವಿರುದ್ಧ ಕುಮಾರಸ್ವಾಮಿ ವಿಪರೀತ ರೇಗಾಡಿದ್ದರು. ಅರಸೀಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದ ಸಂತೋಷ್, ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಟಿಕೆಟ್ ಕೈತಪ್ಪುತ್ತಿದ್ದಂತೆ ಜೆಡಿಎಸ್ ಕದ ತಟ್ಟಿದ್ದರು.

ನಾಲ್ವರು ಶಾಸಕರ ಹೆಸರಿಲ್ಲ

'ಕೈ' ಪಾಳಯದ ಹಾಲಿ ಶಾಸಕರು ಇರುವ ನಾಲ್ಕು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಮೂರನೇ ಪಟ್ಟಿಯಲ್ಲೂ ಕಾಣಿಸಿಕೊಂಡಿಲ್ಲ. ಇದರಿಂದಾಗಿ, ಈ ಶಾಸಕರು ಅತಂತ್ರಗೊಂಡಿದ್ದಾರೆ. ಕುಂದಗೋಳ ಕ್ಷೇತ್ರದಲ್ಲಿ ಹಾಲಿ ಶಾಸಕಿ ಕುಸುಮಾವತಿ ಶಿವಳ್ಳಿ ಅವರಿಗೆ ಪಕ್ಷ ಟಿಕೆಟ್ ನೀಡಿದೆ. ಬಿಜೆಪಿ ಟಿಕೆಟ್ ವಂಚಿತರಾಗಿರುವ ಮಾಜಿ ಶಾಸಕ ಎಸ್.ಐ. ಚಿಕ್ಕನಗೌಡ ಅವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ 'ಕೈ' ಪಾಳಯಕ್ಕೆ ಸೇರ್ಪಡೆಯಾಗುವ ಹಂಬಲ ವ್ಯಕ್ತಪಡಿಸಿದ್ದರು. ಇದೀಗ, ಅಭ್ಯರ್ಥಿಯನ್ನಾಗಿ ಕುಸುಮಾವತಿ ಹೆಸರನ್ನು ಪಕ್ಷ ಅಖೈರುಗೊಳಿಸಿದೆ.

ಪುಲಕೇಶಿನಗರ (ಅಖಂಡ ಶ್ರೀನಿವಾಸಮೂರ್ತಿ), ಶಿಡ್ಲಘಟ್ಟ (ವಿ.ಮುನಿಯಪ್ಪ), ಹರಿಹರ (ಎಂ.ರಾಮಪ್ಪ), ಲಿಂಗಸುಗೂರು (ಡಿ.ಎಸ್.ಹೂಲಗೇರಿ) ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಘೋಷಿಸಿಲ್ಲ. ಅಖಂಡ ಅವರು ಟಿಕೆಟ್ ಕೊಡಿಸುವಂತೆ ಸಿದ್ದರಾಮಯ್ಯ ಅವರನ್ನು ದುಂಬಾಲು ಬಿದ್ದಿದ್ದರು. ಈ ಕ್ಷೇತ್ರದಲ್ಲಿ ಮಾಜಿ ಶಾಸಕ ಬಿ. ಪ್ರಸನ್ನ ಕುಮಾರ್ ಅವರನ್ನು ಕಣಕ್ಕೆ ಇಳಿಸುವಂತೆ ಮಲ್ಲಿಕಾರ್ಜುನ ಖರ್ಗೆ ಸೂಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಚಿಂಚನಸೂರಗೆ ಗಾಯ

ಕಲಬುರಗಿ: ಯಾದಗಿರಿ ಜಿಲ್ಲೆ ಗುರುಮಠಕಲ್ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಬಾಬುರಾವ ಚಿಂಚನಸೂರ ಅವರ ಕಾರು ಶುಕ್ರವಾರ ರಾತ್ರಿ ನಗರದ ಆಕಾಶವಾಣಿ ಕೇಂದ್ರದ ಬಳಿ ಅಪಘಾತಕ್ಕೀಡಾಗಿದ್ದು, ಅವರ ತಲೆ ಹಾಗೂ ಕಾಲುಗಳಿಗೆ ಗಾಯಗಳಾಗಿವೆ. ಸ್ಥಳದಲ್ಲಿದ್ದ ಸಾರ್ವಜನಿಕರು ಅವರನ್ನು ನಗರದ ಯುನೈಟೆಡ್ ಆಸ್ಪತ್ರೆಗೆ ದಾಖಲಿಸಿದರು.

'ತಡರಾತ್ರಿ 2 ಗಂಟೆ ಸುಮಾರಿಗೆ ಆಸ್ಪತ್ರೆಗೆ ದಾಖಲಿಸಿಕೊಳ್ಳಲಾಗಿದೆ. ಎಲುಬು ಹಾಗೂ ನರಗಳಿಗೆ ಏಟು ಬಿದ್ದಿದೆ. ಆಸ್ಪತ್ರೆಯ ತಜ್ಞ ವೈದ್ಯರಿಂದ ನಿರಂತರ ಚಿಕಿತ್ಸೆ ಮುಂದುವರಿದಿದೆ' ಎಂದು ಆಸ್ಪತ್ರೆಯ ಅಧಿಕಾರಿಯೊಬ್ಬರು ತಿಳಿಸಿದರು.

ಕ್ಷೇತ್ರದಲ್ಲಿ ಪ್ರಚಾರ ಮುಗಿಸಿಕೊಂಡು ಚಿಂಚನಸೂರ ಅವರು ಕಲಬುರಗಿಯ ಶಾಂತಿನಗರದಲ್ಲಿ ಇರುವ ತಮ್ಮ ಮನೆಗೆ ಮರಳುವಾಗ ಘಟನೆ ನಡೆದಿದೆ. ಕಾರು ಚಾಲಕ ಮತ್ತು ಗನ್‌ಮ್ಯಾನ್ ಅಪಾಯದಿಂದ ಪಾರಾಗಿದ್ದಾರೆ.

'ಬಿಜೆಪಿಯಿಂದ ಲಿಂಗಾಯತರ ಕಡೆಗಣನೆ'

ಬೆಂಗಳೂರು: 'ಲಿಂಗಾಯತ ಸಮುದಾಯವನ್ನು ಬಿಜೆಪಿ ಹೈಕಮಾಂಡ್ ಮೂಲೆಗುಂಪು ಮಾಡುತ್ತಿದೆ' ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಆರೋಪಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಲಿಂಗಾಯತ ನಾಯಕರನ್ನು ಬಿಜೆಪಿ ಹೈಕಮಾಂಡ್ ಗುರಿ ಮಾಡುತ್ತಿದೆ. ಬೇರೆ ಸಮುದಾಯಕ್ಕೆ ಆ ಪಕ್ಷದ ನಾಯಕರು ಮನ್ನಣೆ ಕೊಡುತ್ತಿದ್ದಾರೆ' ಎಂದರು.

'ಲಿಂಗಾಯತ ಸಮುದಾಯದ ಪ್ರಬಲ ನಾಯಕ ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿಸಿ ಬೇರೆಯವರನ್ನು ಮುಖ್ಯಮಂತ್ರಿ ಮಾಡಲು ಬಿಜೆಪಿ ನಾಯಕರು ಹೊರಟಿದ್ದರು. ಆದರೆ, ಹಾಗೆ ಮಾಡಿದರೆ ತಿರುಗುಬಾಣ ಆಗಬಹುದೆಂಬ ಕಾರಣಕ್ಕೆ ಬಸವರಾಜ ಬೊಮ್ಮಾಯಿ ಅವರಿಗೆ ಪಟ್ಟ ನೀಡಿದರು. ಈಗ ಲಕ್ಷ್ಮಣ ಸವದಿ ಅವರಿಗೆ ಟಿಕೆಟ್ ನೀಡಿಲ್ಲ. ಜಗದೀಶ ಶೆಟ್ಟರ್ ಅವರಿಗೂ ಟಿಕೆಟ್ ನೀಡಲು ಸತಾಯಿಸಲಾಗುತ್ತಿದೆ' ಎಂದರು. 'ಲಕ್ಷ್ಮಣ ಸವದಿ ಲಿಂಗಾಯತ ಗಾಣಿಗ ಸಮಾಜದ ಹಿರಿಯ ನಾಯಕ. ಬಾಗಲಕೋಟೆ, ಕಲಬುರಗಿ, ಕೊಪ್ಪಳ ಸೇರಿ 10–12 ಕ್ಷೇತ್ರಗಳಲ್ಲಿ ಆ ಸಮುದಾಯವರು ನಿರ್ಣಾಯಕ. ಸವದಿ ಕಾಂಗ್ರೆಸ್ ಸೇರಿದ್ದರಿಂದ ಪಕ್ಷಕ್ಕೆ ಹೊಸ ಶಕ್ತಿ ಬಂದಿದೆ. ಇದರಿಂದ ಹೆಚ್ಚಿನ ಅನುಕೂಲ ಆಗಲಿದೆ' ಎಂದೂ ಹೇಳಿದರು.

ಶೀಘ್ರವೇ ರಾಜ್ಯಕ್ಕೆ ಮತ್ತೆ ಪ್ರಧಾನಿ

ಬೆಳಗಾವಿ: 'ಈ ತಿಂಗಳಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಪ್ರಚಾರ ಕೈಗೊಳ್ಳಲಿದ್ದಾರೆ' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದರು. ಇಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ರಧಾನಿ ಅವರೊಂದಿಗೆ ಮುಖ್ಯಮಂತ್ರಿ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಪ್ರಚಾರ ನಡೆಸಲಿದ್ದಾರೆ' ಎಂದರು.

ವಲಸಿಗರಿಗೆ ಕಾಂಗ್ರೆಸ್ ಮಣೆ

ಹೆಸರು	ಕ್ಷೇತ್ರ	ಯಾವ ಪಕ್ಷದಿಂದ
ಲಕ್ಷ್ಮಣ ಸವದಿ	ಅಥಣಿ	ಬಿಜೆಪಿ
ಕೆ.ಎಂ. ಶಿವಲಿಂಗೇಗೌಡ	ಅರಸೀಕೆರೆ	ಜೆಡಿಎಸ್
ಅಶೋಕ್‌ಕುಮಾರ್ ರೈ	ಪುತ್ತೂರು	ಬಿಜೆಪಿ
ಬಾಬುರಾವ್ ಚಿಂಚನಸೂರು	ಗುರುಮಠಕಲ್	ಬಿಜೆಪಿ
ಕಿರಣ್‌ಕುಮಾರ್	ಚಿಕ್ಕನಾಯಕನಹಳ್ಳಿ	ಬಿಜೆಪಿ
ಬಿ.ಎಂ. ಕಾಂತರಾಜು	ತುರುವೇಕೆರೆ	ಜೆಡಿಎಸ್
ಎಸ್.ಆರ್. ಶ್ರೀನಿವಾಸ್	ಗುಬ್ಬಿ	ಜೆಡಿಎಸ್
ಎಂ.ಸಿ. ಸುಧಾಕರ್	ಚಿಂತಾಮಣಿ	ಸ್ವತಂತ್ರ
ಪುಟ್ಟಣ್ಣ	ರಾಜಾಜಿನಗರ	ಬಿಜೆಪಿ
ಎಚ್.ನಾಗೇಶ್	ಮಹದೇವಪುರ	ಸ್ವತಂತ್ರ
ಯು.ಬಿ.ಬಣಕಾರ್	ಹಿರೇಕೆರೂರು	ಬಿಜೆಪಿ
ಎನ್.ವೈ. ಗೋಪಾಲಕೃಷ್ಣ	ಮೊಳಕಾಲ್ಮುರು	ಬಿಜೆಪಿ
ರೇವು ನಾಯಕ ಬೆಳಮಗಿ	ಕಲಬುರಗಿ ಗ್ರಾಮೀಣ	ಜೆಡಿಎಸ್

ಬಿಜೆಪಿ ತೊರೆದ ಫೈಟರ್ ರವಿ

ಬೆಂಗಳೂರು: ನಾಗಮಂಗಲ ವಿಧಾನಸಭಾ ಕ್ಷೇತ್ರದ ಟಿಕೆಟ್ ಕೈತಪ್ಪಿದ್ದರಿಂದ ಮುನಿಸಿಕೊಂಡಿರುವ ಬಿ.ಎಂ. ಮಲ್ಲಿಕಾರ್ಜುನ ಅಲಿಯಾಸ್ ಫೈಟರ್ ರವಿ ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ಶನಿವಾರ ರಾಜೀನಾಮೆ ನೀಡಿದ್ದಾರೆ.

ಜೆಡಿಎಸ್ ಅಭ್ಯರ್ಥಿ ಪಟ್ಟಿ ಬದಲು

ಕ್ಷೇತ್ರ	ಅಭ್ಯರ್ಥಿ
ವರುಣ	ಡಾ.ಭಾರತಿ ಶಂಕರ್
ಯಾದಗಿರಿ	ಎ.ಬಿ.ಮಾಲಕರೆಡ್ಡಿ
ಚಿತ್ರದುರ್ಗ	ರಘು ಆಚಾರ್
ಮಡಿಕೇರಿ	ಎನ್.ಎಂ.ಮುತ್ತಪ್ಪ
ಮೂಡಬಿದಿರೆ	ಅಮರಶ್ರೀ
ಬಾಗಲಕೋಟೆ	ದೇವರಾಜ್ ಪಾಟೀಲ

ಕಾಂಗ್ರೆಸ್ ಮೂರನೇ ಅಭ್ಯರ್ಥಿಗಳ ಪಟ್ಟಿ

ಕ್ಷೇತ್ರ	ಅಭ್ಯರ್ಥಿ
ಅಥಣಿ	ಲಕ್ಷ್ಮಣ ಸವದಿ
ರಾಯಬಾಗ	ಮಹಾವೀರ್ ಮೋಹಿತೆ
ಅರಭಾವಿ	ಅರವಿಂದ ದಳವಾಯಿ
ಬೆಳಗಾವಿ ಉತ್ತರ	ಅಸೀಫ್ ಸೇಠ್
ಬೆಳಗಾವಿ ದಕ್ಷಿಣ	ಪ್ರಭಾವತಿ ಮಾಸ್ತಮರಡಿ
ತೇರದಾಳ	ಸಿದ್ದಪ್ಪ ರಾಮಪ್ಪ ಕೊನ್ನೂರು
ದೇವರ ಹಿಪ್ಪರಗಿ	ಶರಣಪ್ಪ ಟಿ.ಸುಣಗಾರ
ಸಿಂದಗಿ	ಅಶೋಕ ಎಂ.ಮನಗೂಳಿ
ಕಲಬುರ್ಗಿ ಗ್ರಾಮಾಂತರ	ರೇವೂ ನಾಯಕ ಬೆಳಮಗಿ
ಔರಾದ್	ಶಿಂಧೆ ಭೀಮಸೇನ ರಾವ್
ಮಾನ್ವಿ	ಜಿ.ಹಂಪಯ್ಯ ನಾಯಕ್
ದೇವದುರ್ಗ	ಶ್ರೀದೇವಿ ಆರ್.ನಾಯಕ್
ಸಿಂಧನೂರು	ಹಂಪನಗೌಡ ಬಾದರ್ಲಿ
ಶಿರಹಟ್ಟಿ	ಸುಜಾತಾ ಎನ್.ದೊಡ್ಡಮನಿ
ನವಲಗುಂದ	ಎನ್.ಎಚ್.ಕೋನರೆಡ್ಡಿ
ಕುಂದಗೋಳ	ಕುಸುಮಾವತಿ ಜಿ. ಶಿವಳ್ಳಿ
ಕುಮಟಾ	ನಿವೇದಿತ್ ಆಳ್ವ
ಸಿರಗುಪ್ಪ	ಬಿ.ಎಂ.ನಾಗರಾಜ್
ಬಳ್ಳಾರಿ ನಗರ	ನಾರಾ ಭರತ್ ರೆಡ್ಡಿ
ಜಗಳೂರು	ಬಿ.ದೇವೇಂದ್ರಪ್ಪ
ಹರಪ್ಪನಹಳ್ಳಿ	ಎನ್.ಕೊಟ್ರೇಶ್
ಹೊನ್ನಾಳಿ	ಡಿ.ಜಿ.ಶಾಂತನಗೌಡ
ಶಿವಮೊಗ್ಗ ಗ್ರಾಮೀಣ	ಡಾ.ಶ್ರೀನಿವಾಸ್ ಕರಿಯಣ್ಣ
ಶಿವಮೊಗ್ಗ	ಎಚ್.ಸಿ.ಯೋಗೇಶ್
ಶಿಕಾರಿಪುರ	ಜಿ.ಬಿ.ಮಾಲತೇಶ್
ಕಾರ್ಕಳ	ಉದಯಕುಮಾರ್ ಶೆಟ್ಟಿ ಮುನಿಯಾಲ್
ಮೂಡಿಗೆರೆ	ನಯನಾ ಜ್ಯೋತಿ ಜವಹರ್
ತರೀಕೆರೆ	ಜಿ.ಎಚ್.ಶ್ರೀನಿವಾಸ್
ತುಮಕೂರು ಗ್ರಾಮೀಣ	ಜಿ.ಎಚ್.ಷಣ್ಮುಖಪ್ಪ ಯಾದವ್
ಚಿಕ್ಕಬಳ್ಳಾಪುರ	ಪ್ರದೀಪ್ ಈಶ್ವರ್ ಅಯ್ಯರ್
ಕೋಲಾರ	ಕೊತ್ತೂರು ಜಿ.ಮಂಜುನಾಥ್
ದಾಸರಹಳ್ಳಿ	ಧನಂಜಯ ಗಂಗಾಧರಯ್ಯ
ಚಿಕ್ಕಪೇಟೆ	ಆರ್.ವಿ.ದೇವರಾಜ್
ಬೊಮ್ಮನಹಳ್ಳಿ	ಉಮಾಪತಿ ಶ್ರೀನಿವಾಸ ಗೌಡ
ಬೆಂಗಳೂರು ದಕ್ಷಿಣ	ಆರ್.ಕೆ. ರಮೇಶ್
ಚನ್ನಪಟ್ಟಣ	ಗಂಗಾಧರ್ ಎಸ್.
ಮದ್ದೂರು	ಕೆ.ಎಂ. ಉದಯ್
ಅರಸೀಕೆರೆ	ಕೆ.ಎಂ.ಶಿವಲಿಂಗೇಗೌಡ
ಹಾಸನ	ಬನವಾಸಿ ರಂಗಸ್ವಾಮಿ
ಮಂಗಳೂರು ನಗರ ದಕ್ಷಿಣ	ಜೆ.ಆರ್.ಲೋಬೊ
ಪುತ್ತೂರು	ಅಶೋಕ ಕುಮಾರ್ ರೈ
ಕೃಷ್ಣರಾಜ	ಎಂ.ಕೆ. ಸೋಮಶೇಖರ್
ಚಾಮರಾಜ	ಕೆ. ಹರೀಶ ಗೌಡ

ಕರ್ಣಾಟಕ ಬ್ಯಾಂಕ್: ಶೇಖರ್ ರಾವ್ ಮಧ್ಯಂತರ ಸಿಇಒ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ಣಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿದ್ದ ಮಹಾಬಲೇಶ್ವರ ಎಂ.ಎಸ್. ಅವರ ಎರಡನೆಯ ಅವಧಿ ಶುಕ್ರವಾರ ಮುಕ್ತಾಯಗೊಂಡಿದ್ದು, ಶೇಖರ್ ರಾವ್ ಅವರನ್ನು ಮಧ್ಯಂತರ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ನೇಮಕ ಮಾಡಲಾಗಿದೆ.

ಬ್ಯಾಂಕ್‌ನಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಮಹಾಬಲೇಶ್ವರ ಅವರನ್ನು ಬೀಳ್ಕೊಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಹಾಬಲೇಶ್ವರ, 'ಕರ್ಣಾಟಕ ಬ್ಯಾಂಕ್ ವ್ಯವಹಾರ ಕೇಂದ್ರಿತ ಬ್ಯಾಂಕ್ ಆಗಿರದೆ ಸಮಾಜಮುಖಿ ಆರ್ಥಿಕ ಆಂದೋಲನ ಮಾಡಿದೆ. ಬ್ಯಾಂಕ್ ₹ 1,48,000 ಕೋಟಿಗೂ ಅಧಿಕ ವಾರ್ಷಿಕ ವಹಿವಾಟು ನಡೆಸಿದ್ದು 130 ಲಕ್ಷ ಗ್ರಾಹಕರು ಇದ್ದಾರೆ' ಎಂದರು.

ಎಚ್‌ಡಿಎಫ್‌ಸಿ ಬ್ಯಾಂಕ್ ಲಾಭ ಶೇ 20ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್ 2022–23ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹12,594 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹10,443 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 20.60ರಷ್ಟು ಹೆಚ್ಚಾಗಿದೆ.

ಬ್ಯಾಂಕ್‌ನ ಒಟ್ಟು ವರಮಾನ ₹41,086 ಕೋಟಿಯಿಂದ ₹53,850 ಕೋಟಿಗೆ ಏರಿಕೆ ಆಗಿದೆ. 2022–23ನೇ ಹಣಕಾಸು ವರ್ಷದಲ್ಲಿ ನಿವ್ವಳ ಲಾಭ ₹45,997 ಕೋಟಿಗೆ ತಲುಪಿದೆ. 2021–22ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 20.9ರಷ್ಟು ಹೆಚ್ಚಳ ಕಂಡುಬಂದಿದೆ.

ನಿವ್ವಳ ಬಡ್ಡಿ ವರಮಾಣ ಶೇ 23.7ರಷ್ಟು ಹೆಚ್ಚಾಗಿ ₹23,351 ಕೋಟಿಗೆ ಏರಿಕೆ ಆಗಿದೆ. ಮುಂಗಡದಲ್ಲಿ ಶೇ 16.9ರಷ್ಟು ಹೆಚ್ಚಾಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 1.7 ರಿಂದ ಶೇ 1.12ಕ್ಕೆ ಇಳಿಕೆ ಕಂಡಿದೆ.

2022–23ನೇ ಹಣಕಾಸು ವರ್ಷಕ್ಕೆ ಪ್ರತಿ ಷೇರಿಗೆ ₹19 ಲಾಭಾಂಶ ನೀಡಲು ಮಂಡಳಿಯು ಶಿಫಾರಸು ಮಾಡಿದೆ. ಕಳೆದ ಬಾರಿ ಪ್ರತಿ ಷೇರಿಗೆ ₹15.5ರಷ್ಟು ನೀಡಲಾಗಿತ್ತು.

ಮಹಾರಾಷ್ಟ್ರದಲ್ಲಿ ಕಮರಿಗೆ ಬಸ್ • ಉತ್ತರಪ್ರದೇಶದಲ್ಲಿ ನದಿಗೆ ಬಿದ್ದ ಟ್ರ್ಯಾಕ್ಟರ್

ಪ್ರತ್ಯೇಕ ಅಪಘಾತ: 24 ಸಾವು

ಮುಂಬೈ/ಷಹಜಹಾನ್‌ಪುರ (ಪಿಟಿಐ): ಮಹಾರಾಷ್ಟ್ರದ ರಾಯಗಢ ಜಿಲ್ಲೆ ಮತ್ತು ಉತ್ತರ ಪ್ರದೇಶದ ಷಹಜಹಾನ್‌ಪುರ ಜಿಲ್ಲೆಯಲ್ಲಿ ಶನಿವಾರ ನಡೆದ ಎರಡು ಭೀಕರ ಅಪಘಾತಗಳಲ್ಲಿ ಒಟ್ಟು 24 ಮಂದಿ ಮೃತಪಟ್ಟಿದ್ದು, 53 ಮಂದಿ ಗಾಯಗೊಂಡಿದ್ದಾರೆ. ಈ ಪೈಕಿ ಏಳು ಜನರ ಸ್ಥಿತಿ ಗಂಭೀರವಾಗಿದೆ.

ರಾಯಗಢ ಜಿಲ್ಲೆಯಲ್ಲಿ ಹಳೆ ಪುಣೆ –ಮುಂಬೈ ರಸ್ತೆಯಲ್ಲಿ ಖಾಸಗಿ ಬಸ್ ಕಮರಿಗೆ ಉರುಳಿ ಅವಘಡ ಸಂಭವಿಸಿದರೆ, ಉತ್ತರ ಪ್ರದೇಶದಲ್ಲಿ ಚಾಲಕನ ನಿಯಂತ್ರಣ ತಪ್ಪಿದ ಟ್ರ್ಯಾಕ್ಟರ್ ಸೇತುವೆಯ ಮೇಲಿನಿಂದ ನದಿಗೆ ಉರುಳಿದೆ.

ಪುಣೆಯಿಂದ ಮುಂಬೈಗೆ ಹೊರಟಿದ್ದ ಖಾಸಗಿ ಬಸ್ ಕಮರಿಗೆ ಉರುಳಿ 13 ಜನರು ಮೃತಪಟ್ಟಿದ್ದು 29 ಜನ ಗಾಯಗೊಂಡರು. ರಾಯಗಢ ಜಿಲ್ಲೆಯಲ್ಲಿ ಶನಿವಾರ ಬೆಳಿಗ್ಗೆ ಸುಮಾರು 4.50ಕ್ಕೆ ಈ ದುರಂತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಿಂಗ್ರೋಬ ದೇವಾಲಯದ ಬಳಿಯ ಘಟ್ಟ ಪ್ರದೇಶದ ರಸ್ತೆಯಲ್ಲಿ ಸಾಗುತ್ತಿದ್ದಾಗ ಬಸ್ ಕಮರಿಗೆ ಉರುಳಿದೆ. 42 ಮಂದಿ ಪ್ರಯಾಣಿಸುತ್ತಿದ್ದು ಅವರೆಲ್ಲರೂ ಮುಂಬೈನ 'ಬಾಜಿ ಪ್ರಭು ವಾದಕ ಗ್ರೂಪ್' ಎಂಬ ಶಾಸ್ತ್ರೀಯ ಸಂಗೀತ ತಂಡದ ಸದಸ್ಯರಾಗಿದ್ದರು.

ಮಹಾರಾಷ್ಟ್ರದ ರಾಯಗಢದ ಹಳೆ ಪುಣೆ– ಮುಂಬೈ ರಸ್ತೆಯಲ್ಲಿ ಶನಿವಾರ ಬೆಳಿಗ್ಗೆ ಕಮರಿಗೆ ಉರುಳಿದ ಬಸ್ಸು –ಪಿಟಿಐ ಚಿತ್ರ

ಪುಣೆಯಲ್ಲಿ ಸಂಗೀತ ಕಚೇರಿಯನ್ನು ಮುಂಬೈಗೆ ಮರಳುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ. ಮೃತರಲ್ಲಿ ಐದು ವರ್ಷದ ಬಾಲಕ ಮತ್ತು 15 ವರ್ಷ ವಯಸ್ಸಿನ ಬಾಲಕಿ ಸೇರಿದ್ದಾರೆ. ಪ್ರಯಾಣಿಕರಲ್ಲಿ ಬಹುತೇಕರು 20 ವರ್ಷ ಆಸುಪಾಸಿನವರು ಎಂದು ಪೊಲೀಸರು ತಿಳಿಸಿದ್ದಾರೆ.

ಗಾಯಾಳುಗಳನ್ನು ನವಿ ಮುಂಬೈನ ಎಂಜಿಎಂ ಆಸ್ಪತ್ರೆ, ಖೊಪೊಲಿಯ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಮೃತರ ಕುಟುಂಬಗಳಿಗೆ ತಲಾ ₹ 5 ಲಕ್ಷ ಪರಿಹಾರ ನೀಡುವುದಾಗಿ ಘೋಷಿಸಿದ್ದಾರೆ. ಗಾಯಗೊಂಡಿರುವವರಲ್ಲಿ ಐವರ ಸ್ಥಿತಿ ಗಂಭೀರವಾಗಿದೆ ಎಂದೂ ತಿಳಿಸಿದ್ದಾರೆ.

ಟ್ರ್ಯಾಕ್ಟರ್ ಉರುಳಿ 11 ಮಂದಿ ಸಾವು (ಷಹಜಹಾನ್‌ಪುರ ವರದಿ): ಬಿರ್ಸಿನಾಗ್‌ಪುರ ಗ್ರಾಮದ ಬಳಿ ಚಾಲಕನ ನಿಯಂತ್ರಣ ತಪ್ಪಿದ ಟ್ರ್ಯಾಕ್ಟರ್ ಸೇತುವೆಯ ಮೇಲಿಂದ ನದಿಗೆ ಉರುಳಿ ಎಂಟು ಮಕ್ಕಳು, ಇಬ್ಬರು ಮಹಿಳೆಯರು ಸೇರಿದಂತೆ 11 ಮಂದಿ ಮೃತಪಟ್ಟರು.

ಗ್ರಾಮದಲ್ಲಿ ನಡೆಯುತ್ತಿದ್ದ ಭಾಗವತ್ ಕಥಾ ಕಾರ್ಯಕ್ರಮಕ್ಕೆ ಘಾರಾ ನದಿಯಿಂದ ನೀರು ತರಲು ಗ್ರಾಮಸ್ಥರು ಟ್ರ್ಯಾಕ್ಟರ್‌ನಲ್ಲಿ ತೆರಳುತ್ತಿದ್ದರು. 24 ಮಂದಿ ಗಾಯಗೊಂಡಿದ್ದು, ಏಳು ಜನರ ಸ್ಥಿತಿ ಗಂಭೀರವಾಗಿದೆ. ಗಾಯಾಳುಗಳನ್ನು ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಸೇರಿಸಲಾಗಿದೆ.

ಮೃತಪಟ್ಟವರ ಕುಟುಂಬಗಳಿಗೆ ಉತ್ತರ ಪ್ರದೇಶ ಸರ್ಕಾರವು ತಲಾ ₹ 2 ಲಕ್ಷ ಹಾಗೂ ತೀವ್ರ ಗಾಯಗೊಂಡವರಿಗೆ ₹ 50 ಸಾವಿರ ಪರಿಹಾರ ಘೋಷಿಸಿದೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಘಟನೆ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಸಂತ್ರಸ್ತ ಕುಟುಂಬಗಳಿಗೆ ಸಾಂತ್ವನ ಹೇಳಿದ್ದಾರೆ. ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವ ಬಗ್ಗೆ ಅಗತ್ಯ ಕ್ರಮವಹಿಸಲು ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ.

ಸಲಿಂಗ ವಿವಾಹಕ್ಕೆ ಮಾನ್ಯತೆ: 18ರಂದು ವಿಚಾರಣೆ

ನವದೆಹಲಿ: ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಗಾಗಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದಲ್ಲಿ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವನ್ನು ರಚಿಸಿದ್ದು, ಏಪ್ರಿಲ್ 18ರಂದು ವಿಚಾರಣೆ ನಡೆಯಲಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಎಸ್. ರವೀಂದ್ರ ಭಟ್, ಹಿಮಾ ಕೊಯ್ಲಿ ಮತ್ತು ಪಿ.ಎಸ್. ನರಸಿಂಹ ಅವರೂ ಈ ಪೀಠದಲ್ಲಿದ್ದಾರೆ ಎಂದು ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಹೇಳಲಾಗಿದೆ.

ಸುಪ್ರಿಯೊ ಅಲಿಯಾಸ್ ಸುಪ್ರಿಯಾ ಚಕ್ರವರ್ತಿ ಮತ್ತು ಇತರರು ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸುವ ವೇಳೆ ನ್ಯಾಯಾಲಯ ಕಲಾಪದ ನೇರ ಪ್ರಸಾರ ಇರಲಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸರ್ಕಾರವು ಈ ಅರ್ಜಿಗಳಿಗೆ ವಿರೋಧ ವ್ಯಕ್ತಪಡಿಸಿದ್ದು, ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡಿದರೆ ಸ್ವೀಕೃತ ಸಾಮಾಜಿಕ ಮೌಲ್ಯಗಳಿಗೆ ಧಕ್ಕೆಯುಂಟಾಗಲಿದೆ ಎಂದು ಹೇಳಿದೆ.

ಸೇನಾ ಮುಖ್ಯಸ್ಥರೇ ಅತ್ಯಂತ ಪ್ರಭಾವಿ ವ್ಯಕ್ತಿ: ಇಮ್ರಾನ್

ಲಾಹೋರ್ (ಪಿಟಿಐ): ಪಾಕಿಸ್ತಾನ ರಾಜಕೀಯದಲ್ಲಿ ಸೇನಾ ಮುಖ್ಯಸ್ಥರೇ ಅತ್ಯಂತ ಪ್ರಭಾವಿ ವ್ಯಕ್ತಿ. ಎಲ್ಲರೂ ಅವರ ನಿರ್ಧಾರಗಳನ್ನು ಅನುಸರಿಸುತ್ತಾರೆ ಎಂದು ಮಾಜಿ ಪ್ರಧಾನಿ ಇಮ್ರಾನ್ ಖಾನ್ ಹೇಳಿದ್ದಾರೆ.

ಶುಕ್ರವಾರ ತಮ್ಮ ನಿವಾಸದಲ್ಲಿ ಪಾಕಿಸ್ತಾನ–ಇ–ಇನ್ಸಾಫ್ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಅವರು, 'ನಾನು ಮತ್ತೆ ಅಧಿಕಾರಕ್ಕೆ ಬರದಂತೆ ತಡೆಯಲು ದೇಶದ ಮಿಲಿಟರಿ ವ್ಯವಸ್ಥೆಯು ಷರೀಫ್ ಮತ್ತು ಜರ್ದಾರಿ ಅವರ 'ಭ್ರಷ್ಟ ಮಾಫಿಯಾ' ಪರವಾಗಿದೆ' ಎಂದು ಅವರು ಆರೋಪಿಸಿದರು.

ಸುಪ್ರೀಂ ಕೋರ್ಟ್ ವಿಭಜನೆ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಅವರು, ಇದು ದೇಶದ ಪಾಲಿಗೆ ದುರಂತವಾಗಲಿದೆ. ಸರ್ವೋಚ್ಚ ನ್ಯಾಯಾಲಯದ ಪರ ನಿಲ್ಲುವಂತೆ ಜನತೆಗೆ ಕರೆ ನೀಡಿದರು.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹245-541
ದ್ವಿತಳಿ (ಬಿ.ವಿ)	₹277-632

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹60,550
ಒಡವೆ ಚಿನ್ನ 1ಗ್ರಾಂ	₹5,738
ಬೆಳ್ಳಿ ಕೆ.ಜಿಗೆ	₹77,300

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹410

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1700 (1700)
ಸೋಯಾ (ರಿಫೈನ್ಡ್)	₹1030 (1030)
ಸೂರ್ಯಕಾಂತಿ (ರಿಫೈನ್ಡ್)	₹1060(1060)
ಪಾಮೋಲಿನ್	₹947 (947)

ಏಪ್ರಿಲ್‌ನಲ್ಲಿ ಬಂಡವಾಳ ಹೂಡಿಕೆಗೆ ಗಮನ

'ಎಫ್‌ಪಿಐ: ಐ.ಟಿ. ಷೇರು ಮಾರಾಟ ಹೆಚ್ಚಲಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿಸಿಎಸ್ ಮತ್ತು ಇನ್ಫೊಸಿಸ್‌ನ ನಾಲ್ಕನೇ ತ್ರೈಮಾಸಿಕ ಫಲಿತಾಂಶವು ಮಾಹಿತಿ ತಂತ್ರಜ್ಞಾನ (ಐ.ಟಿ.) ವಲಯದ ಬೆಳವಣಿಗೆಯು ದುರ್ಬಲವಾಗಿ ಇರುವ ಸೂಚನೆ ನೀಡಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಐ.ಟಿ. ಷೇರುಗಳಿಂದ ವಿದೇಶಿ ಬಂಡವಾಳ ಹಿಂತೆಗೆತ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದರು.

ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಏಪ್ರಿಲ್‌ನಲ್ಲಿ ಷೇರುಗಳನ್ನು ಖರೀದಿಸಲು ಗಮನ ಹರಿಸುತ್ತಿದ್ದಾರೆ. ಬಂಡವಾಳ ಸರಕುಗಳು, ನಿರ್ಮಾಣ ಮತ್ತು ಎಫ್‌ಎಂಸಿಜಿ ವಲಯಗಳಲ್ಲಿ ಹೆಚ್ಚಿನ ಖರೀದಿ ನಡೆಸುತ್ತಿದ್ದು, ಐ.ಟಿ, ತೈಲ ಮತ್ತು ಅನಿಲ ವಲಯದ ಷೇರುಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನ (ಎನ್‌ಎಸ್‌ಡಿಎಲ್) ಮಾಹಿತಿಯ ಪ್ರಕಾರ, ಏಪ್ರಿಲ್‌ನಲ್ಲಿ 13ರವರೆಗೆ ನಡೆದಿರುವ ವಹಿವಾಟಿನಲ್ಲಿ ₹7,531 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ ಎಂದರು.

ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳಲ್ಲಿ ಭಾರತವು ಏಪ್ರಿಲ್‌ನಲ್ಲಿ ಎಫ್‌ಪಿಐ ಹೂಡಿಕೆಗೆ ಉತ್ತಮ ತಾಣಗಳಲ್ಲಿ ಒಂದಾಗಿದೆ. ಕಳೆದ 10 ದಿನಗಳ ವಹಿವಾಟು ಅವಧಿಯಲ್ಲಿ ವಿದೇಶಿ ಹೂಡಿಕೆದಾರರು ಸತತವಾಗಿ ಖರೀದಿ ಮಾಡಿದ್ದಾರೆ. ಮಾರುಕಟ್ಟೆಯು ಕಳೆದ 9 ದಿನಗಳ ವಹಿವಾಟಿನಲ್ಲಿ ಗಳಿಕೆ ಕಂಡುಕೊಂಡಿದೆ ಎಂದು ಅವರು ತಿಳಿಸಿದರು.

ಜಿಡಿಪಿ ಶೇ 7ರಷ್ಟು ಬೆಳವಣಿಗೆ ಕಾಣಲಿದೆ: ನಿರ್ಮಲಾ

ವಾಷಿಂಗ್ಟನ್ (ಪಿಟಿಐ): ಭಾರತದ ಆರ್ಥಿಕತೆಯು (ಜಿಡಿಪಿ) 2022–23ನೇ ಹಣಕಾಸು ವರ್ಷದಲ್ಲಿ ಶೇ 7ರಷ್ಟು ಬೆಳವಣಿಗೆ ಕಾಣುವ ಸಾಧ್ಯತೆ ಇದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಸಾಂಸ್ಥಿಕ ಸುಧಾರಣೆಗಳ ಜೊತೆಗೆ ಅನುಕೂಲಕರವಾದ ದೇಶಿ ನೀತಿಯಿಂದಾಗಿ ಭಾರತದಲ್ಲಿ ಆರ್ಥಿಕ ಚಟುವಟಿಕೆಗಳು ಉತ್ತಮವಾಗಿವೆ ಎಂದು ತಿಳಿಸಿದ್ದಾರೆ.

ಕಾಂಗೊದಲ್ಲಿ ಬಂಡುಕೋರರಿಂದ 42 ಮಂದಿ ಹತ್ಯೆ

ಕಿನ್ಶಾಸ (ಎಪಿ): ಬಂಡುಕೋರರ ಗುಂಪೊಂದು ಶನಿವಾರ ಪೂರ್ವ ಕಾಂಗೊದ ಇಟುರಿ ಪ್ರಾಂತ್ಯದ ಮೂರು ಪಟ್ಟಣಗಳ ಮೇಲೆ ದಾಳಿ ನಡೆಸಿ ಸುಮಾರು 42 ಜನರನ್ನು ಹತ್ಯೆ ಮಾಡಿದೆ ಎಂದು ನಾಗರಿಕ ಸಮಾಜದ ಸಂಘಟನೆಯೊಂದು ತಿಳಿಸಿದೆ.

ಸಿಡಿಇಸಿಒ ಮಿಲಿಟರಿ ತಂಡವು ಈ ದಾಳಿ ನಡೆಸಿದೆ. ಬಂಡುಕೋರರು ಹಲವಾರು ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ. ಗಾಯಗೊಂಡಿರುವ ಏಳು ಮಂದಿಗೆ ಇನ್ನೂ ನೆರವು ದೊರೆತಿಲ್ಲ ಎಂದು ಸಂಘಟನೆಯ ಬನ್ಯಾರಿ ಕಿಲೊ ಪ್ರದೇಶ ಘಟಕದ ಅಧ್ಯಕ್ಷರು ತಿಳಿಸಿದ್ದಾರೆ.

ದಾಳಿಕೋರರಿಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಕಾಂಗೋ ಸೇನೆ ಸ್ಥಳೀಯ ಮಾಧ್ಯಮಗಳಿಗೆ ತಿಳಿಸಿದೆ.

ಜಪಾನ್‌ನಲ್ಲಿ ಪ್ರಚಾರದ ವೇಳೆ ಬಾಂಬ್ ಸ್ಫೋಟ: ಪ್ರಧಾನಿ ಪಾರು

ಟೋಕಿಯೊ (ಎಎಫ್‌): ಜಪಾನ್ ಪ್ರಧಾನಿ ಫುಮಿಯೊ ಕಿಶಿದಾ ಅವರು ಶನಿವಾರ ಪಾಲ್ಗೊಂಡಿದ್ದ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಸ್ಫೋಟ ಸಂಭವಿಸಿದ್ದು, ಘಟನಾ ಸ್ಥಳದಿಂದ ಕಿಶಿದಾ ಅವರನ್ನು ಸುರಕ್ಷಿತವಾಗಿ ಕರೆತರಲಾಗಿದೆ.

ಫುಮಿಯೊ ಕಿಶಿದಾ

ಸ್ಥಳೀಯ ಚುನಾವಣೆಯಲ್ಲಿ ಕಣಕ್ಕಿಳಿದಿರುವ ತಮ್ಮ ಪಕ್ಷದ ಅಭ್ಯರ್ಥಿ ಪರ ಪ್ರಚಾರ ಮಾಡಲು ಕಿಶಿದಾ ಅವರು ಸೈಕರ್ಜಾಕಿ ಬಂದರಿಗೆ ಹೋಗಿದ್ದರು. ಅವರು ಭಾಷಣ ಆರಂಭಿಸುವ ಮುನ್ನ ಸ್ಫೋಟ ಸಂಭವಿಸಿದೆ.

ಘಟನಾ ಸ್ಥಳದಲ್ಲಿಯೇ ಶಂಕಿತ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ. ಸ್ಫೋಟ ಸಂಭವಿಸುತ್ತಿದ್ದಂತೆ ಜನರು ಸ್ಥಳದಿಂದ ದಿಕ್ಕಾಪಾಲಾಗಿ ಓಡಿದ್ದಾರೆ. ಘಟನೆಯಲ್ಲಿ ಸಾವು, ನೋವು ಸಂಭವಿಸಿಲ್ಲ ಎಂದು ಮುಖ್ಯ ಸಂಪುಟ ಕಾರ್ಯದರ್ಶಿ ಹಿರೊಕಾಝು ಮತ್ಸುನೊ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಕಿಶಿದಾ ಅವರು ಸುರಕ್ಷಿತರಾಗಿದ್ದಾರೆ. ಶನಿವಾರ ಸಂಜೆ ಪ್ರಚಾರ ಕಾರ್ಯಕ್ರಮ ಆರಂಭಿಸಿದ್ದಾರೆ ಎಂದು ತಿಳಿಸಿದ್ದಾರೆ.

ಚುನಾವಣಾ ಪ್ರಚಾರಕ್ಕೆ ತೆರಳಿದ್ದ ಹಿಂದಿನ ಪ್ರಧಾನಿ ಶಿಂಜೊ ಅಬೆ ಅವರನ್ನು ದುಷ್ಕರ್ಮಿಯೊಬ್ಬ ಗುಂಡಿಕ್ಕಿ ಹತ್ಯೆಗೈದ ಘಟನೆ ನಡೆದು 9 ತಿಂಗಳಷ್ಟೇ ಕಳೆದಿವೆ. ಅಷ್ಟರಲ್ಲಿ ಮತ್ತೊಂದು ಅಂಥದ್ದೇ ಘಟನೆ ನಡೆದಿರುವುದು ಜಪಾನ್ ಜನರ ಆತಂಕ ಹೆಚ್ಚಿಸಿದೆ.

ಘಟನೆಯ ದೃಶ್ಯಾವಳಿಗಳು ಸುದ್ದಿವಾಹಿನಿಗಳಲ್ಲಿ ಪ್ರಸಾರವಾಗಿವೆ. ಪೊಲೀಸರು ಯುವಕನೊಬ್ಬನನ್ನು ಸುತ್ತುವರೆದು ಒತ್ತಾಯಪೂರ್ವಕವಾಗಿ ಎಳೆದುಕೊಂಡು ಹೋಗುತ್ತಿರುವುದು ಸೆರೆಯಾಗಿದೆ. ಸ್ಫೋಟಕ್ಕೆ ಕಾರಣವಾದ ವಸ್ತು ಯಾವುದು ಎಂಬ ಬಗ್ಗೆ ಸದ್ಯ ಮಾಹಿತಿ ದೊರೆತಿಲ್ಲ.

ಶಂಕಿತನ ಉದ್ದೇಶ ಮತ್ತು ಹಿನ್ನೆಲೆ ಕುರಿತು ಹೇಳಿಕೆ ನೀಡಲು ನಿರಾಕರಿಸಿದ ಮತ್ಸುನೊ, ಘಟನೆ ಕುರಿತು ಪೊಲೀಸರು ಇನ್ನೂ ತನಿಖೆ ನಡೆಸುತ್ತಿದ್ದಾರೆ ಎಂದು ಹೇಳಿದರು.

'ಚುನಾವಣೆಗಳು ಪ್ರಜಾಪ್ರಭುತ್ವದ ಮೂಲದ್ರವ್ಯ. ಹಿಂಸಾಚಾರದ ಮೂಲಕ ಅದಕ್ಕೆ ಬೆದರಿಕೆ ಮತ್ತು ಅಡಚಣೆ ಉಂಟು ಮಾಡುವುದನ್ನು ನಾವು ಸಹಿಸಬಾರದು. ಚುನಾವಣಾ ಪ್ರಚಾರ ಮುಂದುವರೆಸುವ ಮೂಲಕ ಪ್ರಧಾನಿ ಅವರು ಈ ನಿಟ್ಟಿನಲ್ಲಿ ತಮ್ಮ ನಿಲುವು ಸ್ಪಷ್ಟಪಡಿಸಿದ್ದಾರೆ' ಎಂದು ಅವರು ಹೇಳಿದರು.

ಜಪಾನ್‌ನಲ್ಲಿ ಭಾನುವಾರ ಜಿ–7 ದೇಶಗಳ ವಿದೇಶಾಂಗ ಸಚಿವರ ಸಭೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಭದ್ರತೆ ಹೆಚ್ಚಿಸಲಾಗಿದೆ. 2022ರ ಜುಲೈ 8ರಂದು ಕಚ್ಚಾ ಬಂದೂಕು ಬಳಸಿ ಅಬೆ ಅವರನ್ನು ಹತ್ಯೆಗೈಯಲಾಗಿತ್ತು.

ಮೊಜಾಂಬಿಕ್: ಶ್ರೀರಾಮ ದೇಗುಲಕ್ಕೆ ಜೈಶಂಕರ್ ಭೇಟಿ

ಮಾಪುಟೊ (ಪಿಟಿಐ): ಮೂರು ದಿನಗಳ ಮೊಜಾಂಬಿಕ್ ಪ್ರವಾಸ ಮುಕ್ತಾಯಕ್ಕೂ ಮುನ್ನ ಶನಿವಾರ ವಿದೇಶಾಂಗ ಸಚಿವ ಜೈಶಂಕರ್ ಶತಮಾನದಷ್ಟು ಹಳೆಯದಾದ ಸಲಮಾಂಗ ಪ್ರದೇಶದಲ್ಲಿರುವ ಶ್ರೀರಾಮಚಂದ್ರಜೀ ದೇಗುಲಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು.

'ಅಲ್ಲಿರುವ ಭಾರತೀಯ ಸಮುದಾಯದವರ ಜೊತೆಗೆ ಸಂವಾದ ನಡೆಸಿದೆ. ಅವರ ಆರೋಗ್ಯ ಮತ್ತು ಯಶಸ್ಸು ವೃದ್ಧಿಗೆ ದೇವರಲ್ಲಿ ಪ್ರಾರ್ಥಿಸಿದೆ' ಎಂದು ಸಚಿವರು ಟ್ವೀಟ್ ಮಾಡಿದ್ದಾರೆ.

ಪ್ರವಾಸದ ವೇಳೆ ಸಚಿವರು ಭಾರತ ಮತ್ತು ಮೊಜಾಂಬಿಕ್ ನಡುವಿನ ವ್ಯಾಪಾರ, ಹೂಡಿಕೆ ಮತ್ತು ರಕ್ಷಣಾ ವಿಷಯಕ್ಕೆ ಸಂಬಂಧಿಸಿದಂತೆ ಅಲ್ಲಿನ ಅಧ್ಯಕ್ಷರ ಜೊತೆ ಮಾತುಕತೆ ನಡೆಸಿದರು.

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹141
ಗುಡ್ ಲಾಟ್	₹131

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹15200
ಎಸಿ	₹7980
ಆರ್‌ಪಿ	₹10500
ಆರ್‌ಸಿ	₹5610

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1000-1500
ಮಧ್ಯಮ	₹700-1000
ಸಣ್ಣ	₹300-700

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		**ಕಾರ್ಕಳ**		**ಕೆಂಪುಗೋಟು**	
ಕೋಕ	12500-25000	ಹೊಸತು	30000-38500		26199-32350
ಹೊಸತು	27500-38000	ಹಳತು	40000-53000	ರಾಶಿ	41099-44699
ಹಳತು	48000-53000	**ಶಿರಸಿ**		**ಸೊರಬ**	
ಕುಂದಾಪುರ		ಬೆಟ್ಟೆ	33699-42699	ಚಾಲಿ	22989-34599
ಹಳೆಚಾಲಿ	44000-44500	ಬಿಳಿಗೋಟು	23099-33499	ಗೊಬರಲು	26989-32209
ಹೊಸಚಾಲಿ	35000-36000	ಚಾಲಿ	33698-36919	ರಾಶಿ	33899-46509

ಮುಂಬೈ ಧಾರಣೆ

ಶೇಂಗಾ

15-4-2023

ಜಾವಾ 70/80(ಹೊಸ)	11550-11600
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12100-12200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1710 (1710)
ಒಂದು ವಾರದ ಡೆಲಿವರಿ	1705 (1705)
ಸೋಯಾ ಕಚ್ಚಾ	905 (902)
ಪಾಮ್ ವಾರದ ಡೆಲಿವರಿ	945 (945)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (920)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	60,300 (60,550)
ಬೆಳ್ಳಿ ಕೆ.ಜಿ	75,300 (76,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀ ಜನಾರ್ಧನ ರೆಡ್ಡಿ. ಎ
ನಿಧನ 15-04-2023
ನಿಮ್ಮ ಆದರ್ಶಗಳು ನಮಗೆ ದಾರಿದೀಪ
ಸದಾ ನಿಮ್ಮ ನೆನಪಿನಲ್ಲಿರುವ....
ಇಂತಿ ದುಃಖತಪ್ತರು
ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಸಮಸ್ತ ಕುಟುಂಬ ವರ್ಗ
ಮಾರತಹಳ್ಳಿ, ಬೆಂಗಳೂರು. ಮೊ: 9880216849

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ನಂಜುಂಡಯ್ಯ
ಮಾಕನಹಳ್ಳಿ, ತುಮಕೂರು ತಾಲ್ಲೂಕು
ಇವರು ದಿನಾಂಕ : 15.04.2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ
ಇಂತಿ ದುಃಖತಪ್ತರು
ಧರ್ಮಪತ್ನಿ–ಪುಟ್ಟಮ್ಮ, ಮಕ್ಕಳು ಹಾಗೂ ಕುಟುಂಬವರ್ಗ

6ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಜಿ.ಅಶ್ವಥಯ್ಯನವರು
ಮಾಜಿ ಪುರಸಭಾ ಉಪಾಧ್ಯಕ್ಷರು
ಯಲಹಂಕ, ಬೆಂ–64
ನೀವು ನಮ್ಮನ್ನಗಲಿ ಕಳೆಯಿತು 6 ವರ್ಷ.
ಆದರೆ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಅಮರ.
ನಿಮ್ಮ ಆದರ್ಶಗಳು ನಮಗೆ ದಾರಿದೀಪ.
ಇಂತಿ ಶ್ರೀ ವೈ.ಎ.ಶ್ರೀನಿವಾಸಮೂರ್ತಿ ಮತ್ತು ಸಹೋದರರು.
ಮೊ.9845278780, 9845538678.

ಚಿರಶಾಂತಿ



ಶ್ರೀ ಡಿ. ಕಣ್ಣಪ್ಪ
ನಮ್ಮ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಡಿ. ಕಣ್ಣಪ್ಪ ರವರು 15–4–2023ರಂದು ವಿಧಿವಶರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.
ಆಡಳಿತ ಮಂಡಳಿ ಮತ್ತು ಸಿಬ್ಬಂದಿವರ್ಗ
ಕಬ್ಬಿಣ ಮತ್ತು ಉಕ್ಕು ಕೈಗಾರಿಕಾ ಬಳಕೆದಾರರ ಸಹಕಾರ ಸಂಘ ನಿಯಮಿತ
ರಾಜಾಜಿನಗರ, ಬೆಂಗಳೂರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Teachers/ Professors

ಸುವರ್ಣ ಸಂಸ್ಕೃತಿಧಾಮ(ರಿ) ಸುವರ್ಣಮುಖಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ವಡೇರಹಳ್ಳಿ, (ಗಂಟಕನದೊಡ್ಡಿಗೇಟ್) ಕಗ್ಗಲಹಳ್ಳಿ ಅಂಚೆ ಕನಕಪುರ ತಾಲ್ಲೂಕು, ಬೆಂಗಳೂರು ಕನಕಪುರ ರಸ್ತೆ. ಕೆಳಗಿನ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ:1) ಇಂಗ್ಲೀಷ್ ಭಾಷಾ ಶಿಕ್ಷಕರು:01 ಬಿ.ಎ.ಬಿಎಡ್, ಎಂ.ಎ.(ಇಂಗ್ಲೀಷ್ ಮೇಜರ್). 2)ವಿಜ್ಞಾನ ಶಿಕ್ಷಕರು:01 ಬಿಎಸ್ಸಿ.ಬಿಎಡ್(ಪಿಸಿಎಂ). 3)ಸಂಸ್ಕೃತ ಶಿಕ್ಷಕರು:01 (ವಿದ್ವತ್). ಇಲ್ಲೆ ಉಳಿಯುವವರಿಗೆ(ಸಿಂಗಲ್) ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ. ಆಸಕ್ತರು ಕೆಳಕಂಡ ವಿಳಾಸಕ್ಕೆ ತಮ್ಮ ಬಯೋಡೇಟಾವನ್ನು ಕಳುಹಿಸಬಹುದು. Email: suvarnamukhisamskritidhama@gmail.com ಮಾಹಿತಿಗಾಗಿ ಸಂಪರ್ಕಿಸಿ :ಮಹಾದೇವಯ್ಯ 9886128699. ಚಂದ್ರಶೇಖರ್ 9972970502.

Engg/ Production Technical

INSTRUMENTATION AND Electrical installation personal, Industrial background. ITI, diploma, BE. willing to travel all India, factory in Nelamangala: 9513505051

Drivers

ಬೇಕಾಗಿದ್ದಾರೆ ಟಾಟಾ ಏಸ್ 1.5 ಟನ್ ಲಗೇಜ್ ಗಾಡಿ ಸ್ವಂತ ಮಾಲೀಕರು ಲೋಡಿಂಗ್ ಮತ್ತು ಅನ್ ಲೋಡಿಂಗ್ ಮಾಡತಕ್ಕದ್ದು ಆಸಕ್ತಿ ಉಳ್ಳವರು ಉಪ್ಪು ಮತ್ತು ಬೆಂಕಿ ಪಟ್ಟಣ ಮಾರುವುದು ಸಂಬಳ ತಿಂಗಳಿಗೆ ರೂ 35,000 ರಿಂದ 40,000 ಸಂಪರ್ಕಿಸಿ: 9845451135

"ಬೆಂಗಳೂರಿನ ಇಂದಿರಾನಗರದಲ್ಲಿರುವ ಮನೆಗೆ ಅನುಭವವುಳ್ಳ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ: 9845058243"

Wanted

WANTED FOR a luxury HOMESTAY 1. Male/ female HOMESTAY incharge with smart personality, preferably experienced from the hospitality industry, basic knowledge of computers and Hindi. 2. Staff for Housekeeping / cooking . Couples can also apply. Location near Cherambane (Coorg) bus stop. Excellent salary. Send details on WhatsApp number 9079775029 (9 AM to 12 noon) or guddum1964@gmail.com

ಉತ್ತಮ ಅನುಭವವುಳ್ಳ ಇಸ್ತ್ರಿ ಮಾಡುವವರು ಬೇಕಾಗಿದ್ದಾರೆ. ಸಂಬಳ 23000/ರಿಂದ 26000/. ಬೆಳಗ್ಗೆ10.00 ರಾತ್ರಿ8.00. ಆಫೀಸ್ ಸಹಾಯಕರು ಬೆಳಗ್ಗೆ 9.30ರಿಂದ ರಾತ್ರಿ 9.00ಗಂಟೆ. 14000/. ಸ್ಟೋರ್ ಮ್ಯಾನೇಜರ್ (ಡ್ರೈಕ್ಲೀನಿಂಗ್‌ನಲ್ಲಿ ಅನುಭವವಿರಬೇಕು)ಬೆಳಗ್ಗೆ 9.30ರಿಂದರಾತ್ರಿ9.00. ಸಂಬಳ 18,000/ 30,000/. ಸಂಪರ್ಕಿಸಿ: 9880266007.

Book Your Classifieds Ads
Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164

ವ್ಯಾಪಾರ

Business to Business

Business

Earn upto ₹40,000 every month delivering with zomato
Call 7406185588 & get upto ₹4000 Joining Bonus!*
Documents Required
• Aadhar Card
• Pan Card
• Bank Documents
• Driving License &
• Bike not mandatory
Scan the QR code for the link to join :

Finance

FINANCE AGAINST PROPERTY / BUSINESS / PROJECTS. Ct: +918610936362 / 917708215904

ಭವಿಷ್ಯ

Astrology

★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ.ನಾಗಸಾಧು. ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು ನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

ರಿಯಲ್ ಎಸ್ಟೇಟ್ ಬೈಯಿಂಗ್

Sites

Multiple Locations

WANTED 2400/1200 BDA OWNER SITE @ 5500/ SQ FT. FULL RTGS PAYMENT. NO BROKERS. 9980592277

WEEKEND CORNER

ಪುರಾತನ ಶ್ರೀ ಮುನೇಶ್ವರಸ್ವಾಮಿ ದೇವಸ್ಥಾನದ 223ನೇ ಜಾತ್ರೆ ಮಹೋತ್ಸವ
ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಆವಲಹಳ್ಳಿ ಗ್ರಾಮ. ಬೆಂಗಳೂರು–49

ಶ್ರೀ ಮುನೇಶ್ವರಸ್ವಾಮಿ ರಥೋತ್ಸವ 19.04.2023ನೇ ಬುಧವಾರ ಮಧ್ಯಾಹ್ನ 02.00 ಗಂಟೆಗೆ
ದಿನಾಂಕ: 17.04.2023ನೇ ಸೋಮವಾರದಿಂದ 20.04.2023ನೇ ಗುರುವಾರದ ವರೆಗೆ
ಸರ್ವರಿಗೂ ಆದರದ ಸ್ವಾಗತ

ಟೀ ಮಾರಾಟಕ್ಕೆ
ಮೇಘಮಲೈ, ತಲೆಯಾರ್, ರಾಕ್‌ವುಡ್, ಬ್ರಿಯಾರ್ ಟೀ ಎಸ್ಟೇಟ್‌ಗಳಿಂದ
ಟೀ ಪ್ಯಾಕೆಟ್ ನೇರ ಮಾರಾಟ
ಸಂಪರ್ಕಿಸಿ
8870601744 / 9487531481
WOODBRIAR GROUP
Coimbatore
Producers of Monica, Injipara, Srikundra, Pudhuthottam, Murugan, Venniar, Manalaar, Rockwood, Talliar bulk teas

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ದೃಶ್ಯಭಾಷೆಯ ವ್ಯಾಖ್ಯಾನಕಾರ ವಿ.ಕೆ.ಮೂರ್ತಿ 10

ಸಕುರಾ ಸಕುರಾ...ಹೂರಾಗದ ಆಲಾಪ 12



ಚುನಾವಣಾ ಹಾಡಿನ ಜಾಡು...

ಎಂ.ಎನ್.ಯೋಗೇಶ್

ರಾಜ ಮಹಾರಾಜರ ಕಾಲದಲ್ಲಿ ಹುಟ್ಟಿಕೊಂಡ ಲಾವಣಿಗಳು ಈಗಲೂ ಜನರ ನಾಲಗೆ ಮೇಲೆ ನಲಿದಾಡುತ್ತಿವೆ. ಸ್ವಾತಂತ್ರ್ಯ ಸಂಗ್ರಾಮದ ಜೊತೆಜೊತೆಗೆ ಬಂದ ಹೋರಾಟದ ಹಾಡುಗಳು ಇನ್ನೂ ಸಮರ ಸಾರುತ್ತಲೇ ಇವೆ. ಅನಾಮಿಕ ಜನಪದ ಗೀತೆಗಳು ಜನರ ಬಾಯಿಯಿಂದ ಬಾಯಿಗೆ ಹರಿಯುತ್ತಿವೆ. ವಚನ, ತತ್ವಪದ, ಕೀರ್ತನೆ, ದೇವರನಾಮ, ಗಮಕಗಳು ಎಲ್ಲಾ ಕಾಲಕ್ಕೂ ಸಮಾಜವನ್ನು ತಿದ್ದಿ ತೀಡುತ್ತಾ ಬಂದಿವೆ. ಸಿನಿಮಾ ಹಾಡುಗಳು ಕೂಡ ಜನರ ನೆನಪಿನಂಗಳದಲ್ಲಿ ಸಾರ್ವಕಾಲಿಕವಾಗಿ ಮನೆ ಮಾಡಿಕೊಂಡಿವೆ. ಆದರೆ, ಹುಟ್ಟುತ್ತಲೇ ಸಾಯುವ ಕೆಲ ಹಾಡುಗಳು ಕ್ಷಣಿಕವಾಗಿ ಜನರ ಗಮನ ಸೆಳೆಯುತ್ತವೆ, ತನ್ನಿಮಿತ್ತ ಹಾಡುಗಳಿವು. ಆಯಾ ಕಾಲದಲ್ಲಷ್ಟೇ ಅಬ್ಬರಿಸಿ, ಬೊಬ್ಬಿರಿದು ಮರೆಯಾಗುತ್ತವೆ. ಸಾರ್ವಕಾಲಿಕವಾಗಿ ಉಳಿಯುವ ಶಕ್ತಿ ಆ ಗೀತೆಗಳಿಗಿಲ್ಲ. ಅವೇ ಚುನಾವಣೆಯ ಹಾಡುಗಳು.

ಈಗ ಎಲ್ಲೆಲ್ಲೂ ಚುನಾವಣೆಯ ಹಾಡುಗಳೇ ಮೊಳಗುತ್ತಿವೆ. ವಿಧಾನಸಭಾ ಚುನಾವಣೆ ಘೋಷಣೆಯಾಗುತ್ತಿದ್ದಂತೆ ರಾಜ್ಯದ ಬಹುತೇಕ ವಿಧಾನಸಭಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ವರ್ಣಿಸುವ ಗೀತೆಗಳು ಕಿವಿಗಡಚುತ್ತಿವೆ. ಹಾಡುಗಳ ಮೂಲಕ ಮತದಾರರ ಮನಮುಟ್ಟುವ ಪ್ರಯತ್ನ ಎಲ್ಲಾ ಪಕ್ಷಗಳಲ್ಲಿ ನಡೆಯುತ್ತಿದೆ.

ಶಾಸಕರ ಸಾಧನೆಗಳನ್ನು ಗೀತೆಗಳ ಮೂಲಕ ವರ್ಣಿಸಲಾಗುತ್ತಿದೆ. ಯುವ ಮುಖಂಡರು ತಮ್ಮ ಕನಸು, ಕನವರಿಕೆಗಳನ್ನು ಹಾಡುಗಳಲ್ಲಿ ಕಟ್ಟಿಕೊಡುತ್ತಿದ್ದಾರೆ. ಪ್ರಣಾಳಿಕೆಯೇ ಹಾಡುಗಳಾಗಿವೆ. ಬಂಡವರ ಬಂಧು, ಆಪತ್ಬಾಂಧವ, ಅಭಿವೃದ್ಧಿಯ ಹರಿಕಾರ, ಅನಾಥ ರಕ್ಷಕ, ಜನ ಸೇವಕ, ದಣಿವರಿಯದ ನಾಯಕ, ಸೋಲಿಲ್ಲದ ಸರದಾರ, ಆಧುನಿಕ ಭಗೀರಥ, ಜನಸೇವೆ ಜನಾರ್ದನ ಸೇವೆ, ಜನರೇ ದೇವರು, ಮತದಾರ ಪ್ರಭುಗಳು ಮುಂತಾದ ಚುನಾವಣಾ ಭಾಷಣದ ಗುಣವಿಶೇಷಣಗಳೇ ಈಗ ಹಾಡಾಗಿವೆ.

ಪ್ರತಿ ಹಾಡಿಗೂ ಹಿನ್ನೆಲೆ ಇರುತ್ತದೆ, ಸಾಹಿತ್ಯ–ಸಂಗೀತ–ಗಾಯನ ಹಾಡಿನ ಮೂಲ. ಆದರೆ ಚುನಾವಣೆ ಹಾಡುಗಳಿಗೆ ಅಪ್ಪ ಇಲ್ಲ, ಅಮ್ಮ ಇಲ್ಲ. ಸಾಹಿತ್ಯ ಯಾರದು, ಸಂಗೀತ ಸಂಯೋಜಿಸಿದವರು ಯಾರು, ಗಾಯಕರು ಯಾರು ಎಂಬುದನ್ನು ಕೇಳುವವರೇ ಇಲ್ಲ. 'ಇದು ನನ್ನ ಹಾಡು' ಎಂದು ಬಹಿರಂಗವಾಗಿ ಹೇಳಿಕೊಳ್ಳುವ ಸಾಹಿತಿ, ಸಂಗೀತ ಸಂಯೋಜಕ, ಗಾಯಕರೂ ವಿರಳಾತಿ ವಿರಳ. ಇದನ್ನು ಅನಾಮಿಕರ ಹಾಡೆಂದೂ ಕರೆಯಬಹುದು.

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮೂರೂ ಪಕ್ಷಗಳು ಚುನಾವಣಾ ಹಾಡುಗಳ ಹಿಂದೆ ಬಿದ್ದಿವೆ. ರಾಜ್ಯ ಮಟ್ಟದ ಮುಖಂಡರು, ಮುಖ್ಯಮಂತ್ರಿ ಹುದ್ದೆಯ ಆಸೆ ಹೊತ್ತವರು ತಮ್ಮ ಕುರಿತಾದ ಹಾಡುಗಳನ್ನು ಪಕ್ಷದ ವತಿಯಿಂದಲೇ ಮಾಡಿಸಿದ್ದಾರೆ. ಆಯಾ ಪಕ್ಷಗಳ ಸಾಂಸ್ಕೃತಿಕ, ಮಾಧ್ಯಮ ವಿಭಾಗದ ಮುಖ್ಯಸ್ಥರು ಚುನಾವಣಾ ಹಾಡುಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಹಾಡಿನ ಜೊತೆಗೆ ವಿಡಿಯೊ ಕೂಡ ಸೇರಿಸಿ ಆಕರ್ಷಕವಾಗಿಸಿದ್ದಾರೆ. ವೈಭವಯುತವಾಗಿ ಶೂಟಿಂಗ್ ಮಾಡಿಸಿ ಮತದಾರ ಪ್ರಭುಗಳ ಮನಸೂರೆಗೊಳ್ಳುತ್ತಿದ್ದಾರೆ.

ರಾಜ್ಯ ಮುಖಂಡರಿಗೆ ಖ್ಯಾತನಾಮ ಸಾಹಿತಿಗಳೇ ಹಾಡು ಬರೆದಿದ್ದಾರೆ, ಪ್ರಖ್ಯಾತ ಸಂಗೀತ ನಿರ್ದೇಶಕರೇ ಸ್ವರ ಸಂಯೋಜನೆ ಮಾಡಿದ್ದಾರೆ, ಪ್ರಸಿದ್ಧ ಗಾಯಕರೇ ಹಾಡಿದ್ದಾರೆ. ಆದರೆ, ಅವರು ತಮ್ಮ ಹೆಸರನ್ನು ಎಲ್ಲೂ ಬಳಸದಂತೆ ಷರತ್ತು ಹಾಕಿದ್ದಾರೆ. ಪ್ರತಿ ಪಕ್ಷಕ್ಕೂ ಪ್ರತ್ಯೇಕ ಡಿಜಿಟಲ್, ಸೋಷಿಯಲ್ ಮೀಡಿಯಾ, ಐಟಿ ವಿಭಾಗಗಳಿದ್ದು, ಅಲ್ಲಿಯ ತಂತ್ರಜ್ಞರು ಎಲ್ಲವನ್ನೂ ನಿರ್ವಹಣೆ ಮಾಡುತ್ತಿದ್ದಾರೆ.

'ಈಗ ರಾಜ್ಯದ ಬಹುತೇಕ ಸ್ಟುಡಿಯೊಗಳಲ್ಲಿ ಚುನಾವಣೆ ಹಾಡುಗಳ ರೆಕಾರ್ಡಿಂಗ್ ಹೆಚ್ಚು ನಡೆಯುತ್ತಿದೆ. ಟ್ರ್ಯಾಕ್ ಸಿಂಗರ್‌ಗಳು, ರಂಗಭೂಮಿ ಕಲಾವಿದರು, ಸುಗಮ ಸಂಗೀತ ಗಾಯಕರು ಚುನಾವಣೆ ಹಾಡಿಗೆ ಧ್ವನಿಯಾಗುತ್ತಿದ್ದಾರೆ. ಸಾಮಾನ್ಯ ಹಾಡಿಗೆ ಪಡೆಯುವ ಸಂಭಾವನೆಗಿಂತ ಮೂರು ಪಟ್ಟು ಹೆಚ್ಚು ಸಂಭಾವನೆ ದೊರೆಯುತ್ತಿದ್ದು, ಗಾಯಕರಿಗೆ ಇದು ಸುವರ್ಣ ಕಾಲವಾಗಿದೆ' ಎಂದು 10ಕ್ಕೂ ಹೆಚ್ಚು ಚುನಾವಣೆ ಹಾಡು ಹಾಡಿರುವ ಯುವ ಗಾಯಕರೊಬ್ಬರು ಹೆಸರು ಬರೆಯಕೂಡದು ಎಂಬ ಷರತ್ತಿನೊಂದಿಗೆ ತಿಳಿಸಿದರು.

10ನೇ ಪುಟಕ್ಕೆ..

ಹಕ್ಕುಸ್ವಾಮ್ಯ ಉಲ್ಲಂಘನೆ

ಸಿನಿಮಾ ಹಾಡುಗಳ ಟ್ರ್ಯಾಕ್‌ಗಳನ್ನು ಅನುಮತಿ ಇಲ್ಲದೆಯೇ ಬಳಸಿಕೊಳ್ಳುತ್ತಿರುವುದು ಹಕ್ಕುಸ್ವಾಮ್ಯದ ಸ್ಪಷ್ಟ ಉಲ್ಲಂಘನೆಯಾಗುತ್ತದೆ. ಹಕ್ಕುಸ್ವಾಮ್ಯ ಹೊಂದಿರುವ ಆಡಿಯೊ ಕಂಪನಿಗಳು ಮುಂದೆ ಪ್ರಕರಣ ದಾಖಲಿಸುವ ಅಪಾಯವಿದೆ. ಈಗಾಗಲೇ ರಾಹುಲ್ ಗಾಂಧಿ ಭಾರತ್ ಜೋಡೊ ಯಾತ್ರೆ ವೇಳೆ 'ಕೆಜಿಎಫ್–2' ಚಿತ್ರದ ಗೀತೆಗಳನ್ನು ದುರ್ಬಳಕೆ ಮಾಡಿಕೊಂಡ ಆರೋಪದಡಿ ಪ್ರಕರಣ ದಾಖಲಾಗಿದೆ.

'6 ಹಾಡುಗಳ ಟ್ರ್ಯಾಕ್ ಬಳಸಲು ಬಿಜೆಪಿ ನಮ್ಮ ಸಂಸ್ಥೆಯಿಂದ ಅನುಮತಿ ಪಡೆದಿದೆ. 'ಕೆಜಿಎಫ್', 'ಆರ್‌ಆರ್‌ಆರ್', 'ಡಿಯರ್ ಕಾಮ್ರೇಡ್', 'ಪತ್ತಾನ್', 'ಸೈರಾ ನರಸಿಂಹ ರೆಡ್ಡಿ' ಚಿತ್ರದ ಗೀತೆಗಳಿಗೆ ಅನುಮತಿ ನೀಡಲಾಗಿದೆ. ಬಿಜೆಪಿ ಹೊರತುಪಡಿಸಿ ಬೇರೆ ಯಾವ ಪಕ್ಷಗಳೂ ಅನುಮತಿ ಪಡೆದಿಲ್ಲ. ನಮ್ಮ ಪ್ರತಿನಿಧಿಗಳು ನಿಗಾ ಇರಿಸಿದ್ದಾರೆ. ಡಿಜಿಟಲ್ ವೇದಿಕೆಯಲ್ಲಿ ಹೆಚ್ಚು ಟ್ರ್ಯಾಕ್‌ಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಾರೆ. ಟ್ರ್ಯಾಕ್ ದುರ್ಬಳಕೆ ಮಾಡಿಕೊಂಡವರ ವಿರುದ್ಧ ಕಾಪಿರೈಟ್ ಕಾಯ್ದೆಯ ಅಡಿ ಪ್ರಕರಣ ದಾಖಲು ಮಾಡುವುದು ಶತಸ್ಸಿದ್ಧ' ಎಂದು ಲಹರಿ ಆಡಿಯೊ ಕಂಪನಿಯ ಮಾಲೀಕ ಲಹರಿ ವೇಲು ಹೇಳಿದರು.

ತುಂಗಭದ್ರಾ ಹಿನ್ನೀರು ಪ್ರದೇಶದಲ್ಲಿದ್ದ ರಾಜಹಂಸಗಳು

ಹಕ್ಕಿಗಳ ವಲಸೆ; ಬದಲಾದ ವರಸೆ

ಡಾ. ಎಸ್. ಶಿಶುಪಾಲ

ಚಳಿಗಾಲದಲ್ಲಿ ವಲಸೆ ಬಂದು, ಬೇಸಿಗೆಯ ನಡುಘಟ್ಟದವರೆಗೂ ರಾಜ್ಯದಲ್ಲಿ ಉಳಿದು, ಸಂತಾನೋತ್ಪತ್ತಿ ಮಾಡುವ ಹಕ್ಕಿಗಳು ಎತ್ತ ಹಾರುತಿವೆ? ಎಲ್ಲಿ ಹಾರುತಿವೆ? ಈ ಸಲ ರಾಜ್ಯಕ್ಕೆ ಬಂದುಹೋದ ವಲಸೆ ಹಕ್ಕಿಗಳ ಸಂಖ್ಯೆ ಏರುಪೇರಾಗಿದೆ. ವಲಸೆ ಹಕ್ಕಿಗಳ ಬದಲಾದ ವರ್ತನೆ, ಗಣತಿ ಇವೆಲ್ಲವುಗಳ ಒಳಸುಳಿಗಳು ಆಸಕ್ತಿಕರ.

ಕರ್ನಾಟಕ ಜೀವವೈವಿಧ್ಯದ ತಾಣ. ವಿದೇಶಿ ಮತ್ತು ಉತ್ತರ ಭಾರತೀಯ ಹಕ್ಕಿಗಳಿಗೆ ಅಚ್ಚುಮೆಚ್ಚಿನ ತಂಗುದಾಣವೂ ಹೌದು. ಕರ್ನಾಟಕದಲ್ಲಿ ಗುರುತಿಸಲಾಗಿರುವ 530ಕ್ಕೂ ಹೆಚ್ಚಿನ ಪಕ್ಷಿ ಪ್ರಬೇಧಗಳಲ್ಲಿ ಸುಮಾರು 80ರಷ್ಟು ಪ್ರಬೇಧಗಳು ವಲಸೆ ಬರುತ್ತವೆ. ಹೆಚ್ಚು ಹಕ್ಕಿಗಳು ವಲಸೆ ಬಂದರೆ ಅದು ಆ ಸ್ಥಳದ ಅರೋಗ್ಯಕರ ವಾತಾವರಣದ ಜೈವಿಕ ಸೂಚಕ.

ಯೂರೋಪ್, ಮಂಗೋಲಿಯಾ, ಸೈಬೀರಿಯಾ, ರಷ್ಯಾ, ಪಾಕಿಸ್ತಾನ, ಅಫ್ಘಾನಿಸ್ತಾನ, ಆಸ್ಟ್ರೇಲಿಯಾ ಮುಂತಾದ ಪ್ರದೇಶಗಳಿಂದ ಕರ್ನಾಟಕಕ್ಕೆ ಬರುವ ವಲಸೆ ಹಕ್ಕಿಗಳ ಸಂಖ್ಯೆ ಹೆಚ್ಚು. ಇವೆಲ್ಲಾ ಚಳಿಗಾಲದ ವಲಸೆಗಾರರು. ಆದರೆ ಈ ವರ್ಷ ಚಳಿಗಾಲದಲ್ಲಿ ಕರ್ನಾಟಕಕ್ಕೆ ಬಂದ ವಲಸೆ ಹಕ್ಕಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಇದಕ್ಕೆ ಕಾರಣಗಳನ್ನು ತಜ್ಞರು ವಿಶ್ಲೇಷಿಸುತ್ತಿದ್ದಾರೆ.

ಕರ್ನಾಟಕದಲ್ಲಿ ದಾಖಲಾಗಿರುವ ವಲಸೆ ಹಕ್ಕಿಗಳೆಂದರೆ ಮಂಗೋಲಿಯಾದ ಪಟ್ಟೆ ಹೆಬ್ಬಾತು, ಯೂರೋಪಿನ ಉಲಿಯಕ್ಕಿಗಳು, ಕಂದು ಬಾತು, ನಾಮದ ಬಾತು, ಬಿಳಿಹುಬ್ಬಿನ ಬಾತು, ಚಲುಕ ಬಾತು, ವಿವಿಧ ಗೊರವಗಳು, ರಷ್ಯಾದ ಉಲ್ಲಂಕಿಗಳು, ಸೈಬೀರಿಯಾದ ಕಲ್ಲುಚಟಕ ಹಕ್ಕಿ, ಉತ್ತರ ಭಾರತದ ನವರಂಗ, ವಿವಿಧ ನೊಣಹಿಡುಕಗಳು, ಹೆಜ್ಜಾರ್ಲೆ ಮುಂತಾದವುಗಳು.

ಕರ್ನಾಟಕಕ್ಕೆ ಬರುವ ಬಹಳಷ್ಟು ವಲಸೆ ಹಕ್ಕಿಗಳ ತವರು ಭೂಮಿಯ ಉತ್ತರ ಗೋಳದಲ್ಲಿರುವ ಧ್ರುವ ಪ್ರದೇಶವಾಗಿರುತ್ತದೆ. ಅಲ್ಲಿರುವ ಭೌಗೋಳಿಕ ವಾತಾವರಣ ಅವುಗಳ ಸಂತಾನಾಭಿವೃದ್ಧಿಗೆ ಅನುಕೂಲಕರ. ಹಾಗೆಯೇ ಚಳಿಗಾಲದಲ್ಲಿ ವಿರಮಿಸುವ/ಆಹಾರ ದೊರಕುವ ಪ್ರದೇಶವೆಂದರೆ ಭಾರತವೂ ಸೇರಿದಂತೆ ಸಮಭಾಜಕ ವೃತ್ತದ ಪ್ರದೇಶಗಳು. ಸೂಕ್ತ ಪರಿಸರವನ್ನು ಆಧರಿಸಿ ಸ್ಥಳೀಯ ಹಕ್ಕಿಗಳಲ್ಲೂ ವಲಸೆ ಪ್ರವೃತ್ತಿಯನ್ನು ಕಾಣಬಹುದು. ಕರ್ನಾಟಕಕ್ಕೆ ವಲಸೆ ಬರುವ ಹೆಚ್ಚಿನ ಹಕ್ಕಿಗಳು ಇಲ್ಲಿ ವಂಶಾಭಿವೃದ್ಧಿ ಮಾಡುವುದಿಲ್ಲ.

ಕರ್ನಾಟಕದ ಕಡಲ ತೀರಗಳಲ್ಲಿ ಅಪರೂಪಕ್ಕೆ ಕಂಡುಬರುವ ಪಟ್ಟೆ ಬಾಲದ ಗದ್ದೆ ಗೊರವ ಹಕ್ಕಿಯ ಐದು ತಿಂಗಳ ಮರಿಯೊಂದು ಕಳೆದ ವರ್ಷ ಅಮೆರಿಕದ ಅಲಾಸ್ಕ ಪ್ರಾಂತ್ಯದಿಂದ ಹೊರಟು ಸತತವಾಗಿ ಸಮುದ್ರದ ಮೇಲೆ ಹಾರುತ್ತಾ, ಎಲ್ಲಿಯೂ ವಿರಮಿಸದೆ 265 ಗಂಟೆಗಳ ಮಹಾಯಾನ ಮಾಡಿ, 13,560 ಕಿ.ಮೀಗಳ ದೂರದ ಆಸ್ಟ್ರೇಲಿಯಾದ ತಾಸ್ಮೇನಿಯಾ ಕಡಲ ತೀರವನ್ನು ತಲುಪಿ ಹೊಸ ದಾಖಲೆಯನ್ನೇ ನಿರ್ಮಿಸಿತು. ಇದನ್ನು ವಿಜ್ಞಾನಿಗಳು ಉಪಗ್ರಹ ಆಧಾರಿತ ರೇಡಿಯೋ ಟ್ರಾನ್ಸ್‌ಮೀಟರ್ ಬಳಸಿ ದಾಖಲಿಸಿದ್ದರು. ಇದರ ಸಂಬಂಧಿ ಕಪ್ಪುಬಾಲದ ಗೊರವಗಳು ಪ್ರತಿವರ್ಷ ಚಳಿಗಾಲದಲ್ಲಿ ಯೂರೋಪಿನಿಂದ ಸಹಸ್ರ ಸಂಖ್ಯೆಯಲ್ಲಿ ಕರ್ನಾಟಕಕ್ಕೆ ಧಾವಿಸುತ್ತವೆ. ಇಲ್ಲಿನ ಕೆರೆ, ಹಿನ್ನೀರು ಪ್ರದೇಶಗಳಲ್ಲಿ ಒಟ್ಟುಗೂಡಿ ಏಪ್ರಿಲ್‌ವರೆಗೆ ತಂಗುತ್ತವೆ. ಜನವರಿ 2022ರಲ್ಲಿ ದಾವಣಗೆರೆಯ ಕೆರೆಯೊಂದರಲ್ಲಿ ಇವುಗಳ ಸಂಖ್ಯೆ ಹತ್ತು ಸಾವಿರಕ್ಕೂ ಹೆಚ್ಚಿದ್ದು, 2023ರಲ್ಲಿ ಕೇವಲ ಐದುನೂರಷ್ಟು ಮಾತ್ರ ಇದ್ದದ್ದು ದಾಖಲಾಗಿದೆ.

11ನೇ ಪುಟಕ್ಕೆ



ದೃಶ್ಯಭಾಷೆಯ ವ್ಯಾಖ್ಯಾನಕಾರ ವಿ.ಕೆ.ಮೂರ್ತಿ



ಚಿತ್ರಪಟ

ಜಿ.ಎಸ್.ಭಾಸ್ಕರ್

ಭಾರತೀಯ ಚಲನಚಿತ್ರ ಜಗತ್ತು ಕಂಡ ಅಪ್ರತಿಮ ಸಾಧಕರಲ್ಲೊಬ್ಬರು ವಿ.ಕೆ. ಮೂರ್ತಿ. ಮತ್ತೊರ್ವ ಅಸದೃಶ ಛಾಯಾಗ್ರಾಹಕ ಸುಬ್ರೊತೊ ಮಿತ್ರ ಅವರೊಂದಿಗೆ ಒಡಗೂಡಿ ಆಧುನಿಕ ಭಾರತೀಯ ಚಲನಚಿತ್ರ-ಛಾಯಾಗ್ರಹಣಕ್ಕೆ ಭದ್ರ ಬುನಾದಿಯನ್ನು ಕಟ್ಟಿಕೊಟ್ಟವರು; ಖ್ಯಾತ ನಿರ್ದೇಶಕ ಗುರುದತ್ ಅವರ ಸಹಯೋಗದಲ್ಲಿ ದೃಶ್ಯಭಾಷೆಯ ಅನುಸಂಧಾನವನ್ನು ಕೈಗೊಂಡು, ಚಲನಚಿತ್ರಗಳಲ್ಲಿ ನೆರಳು-ಬೆಳಕಿನ ಆಟಕ್ಕೆ ಮಹತ್ತ್ವದ ಸ್ಥಾನವನ್ನು ದೊರಕಿಸಿಕೊಟ್ಟವರು; ದೃಶ್ಯ ಸಂಯೋಜನೆಯ ಮೂಲೋದ್ದೇಶ, ಮೂಲಾಧಾರ ಹಾಗೂ ಸಂಸಿದ್ಧಿಗಳೆಲ್ಲವೂ ಒಂದೇ ಆಗಿದೆ-ಅದುವೇ 'ಭಾವಸ್ಫುರಣ' ಎನ್ನುವುದನ್ನು ಮನೋಜ್ಞ ಕೃತಿಗಳ ಮೂಲಕ ನಿರೂಪಿಸಿದ್ದಷ್ಟೇ ಅಲ್ಲದೆ ಚಿತ್ರರಸಿಕರಿಗೆ, ನಿರ್ಮಾತೃಗಳಿಗೆ ಹಾಗೂ ತಂತ್ರಜ್ಞರಿಗೆ ಅದನ್ನು ಮನದಟ್ಟು ಮಾಡಿಸುವಂತಹ ದೃಶ್ಯ ಸಂಯೋಜನೆಗಳನ್ನು ಸಾಕ್ಷಾತ್ಕರಿಸಿಕೊಂಡಿದ್ದು ಗುರುದತ್-ಮೂರ್ತಿ ಜೋಡಿಯ ಮಹತ್ಸಾಧನೆ.

ಭಾರತೀಯ ಚಿತ್ರರಂಗದ ವಿಕಸನದಲ್ಲಿ ಸತ್ಯಜಿತ್ ರಾಯ್-ಸುಬ್ರೊತೊ ಮಿತ್ರ ಜೋಡಿಯು ನಿರ್ವಹಿಸಿದಷ್ಟೇ ಮಹತ್ತ್ವದ ಭೂಮಿಕೆಯನ್ನು ಈ ಜೋಡಿಯೂ ನಿರ್ವಹಿಸಿತು. ಪಾತ್ರಗಳ ಮಾನಸಿಕ ತುಮುಲಗಳನ್ನು, ಒಳತೋಟಿಯನ್ನು ನೆರಳು-ಬೆಳಕಿನ ವಿವಿಧ ಪದರಗಳಲ್ಲಿ ಬಿಡಿಸಿಟ್ಟು, ದೃಶ್ಯಭಾಷೆಯ ಮೂಲಕ ಪ್ರೇಕ್ಷಕನ ಅಂತಃಕರಣದೊಂದಿಗೆ ಸುಪ್ತಮನದ ಸಂವಾದವನ್ನು ಸಿದ್ಧಿಸಿಕೊಂಡ ಗಾರುಡಿಗನಾಗಿದ್ದರು ವಿ.ಕೆ. ಮೂರ್ತಿ. 'ಕಾಗಜ್ ಕೆ ಫೂಲ್' ಎನ್ನುವ ಮಹೋನ್ನತ ದೃಶ್ಯಕಾವ್ಯದ ಮೂಲಕ 'ಸಿನಿಮಾಸ್ಕೋಪ್' ಎಂದು ಸುಪರಿಚಿತವಾಗಿರುವ ವಿಸ್ತೃತ ಸಿನಿ-ಚೌಕಟ್ಟನ್ನು ಭಾರತೀಯ ಚಿತ್ರರಂಗಕ್ಕೆ ಪರಿಚಯಿಸಿದವರು ಅವರು; ಇದೇ ಚಿತ್ರದಲ್ಲಿನ 'ವಖ್ತ್ ನೆ ಕಿಯಾ..' ಎನ್ನುವ ಹಾಡಿನ ಚಿತ್ರೀಕರಣದಲ್ಲಿ ದಿವ್ಯರಶ್ಮಿಯ ಅನುಸಂಧಾನವನ್ನು ಕೈಗೊಂಡು ಅಪ್ರತಿಮ ಯಶಸ್ಸನ್ನೂ, ಕೀರ್ತಿಯನ್ನೂ ತಮ್ಮದಾಗಿಸಿಕೊಂಡವರು. ಅತ್ಯಂತ ಜನಪ್ರಿಯವಾಗಿರುವ 'ಚೌದವಿ ಕಾ ಚಾಂದ್‌ಹೊ..'ಎನ್ನುವ ಹಾಡನ್ನುಕಪ್ಪು-ಬಿಳುಪು ಹಾಗೂ ವರ್ಣಚಿತ್ರಗಳೆರಡರಲ್ಲೂ ಪ್ರತ್ಯೇಕವಾಗಿ ಚಿತ್ರೀಕರಿಸಿ, ಭಾರತೀಯ ಚಿತ್ರರಂಗದಲ್ಲಿ ವರ್ಣರಂಜಿತ ಚಲನಚಿತ್ರಗಳ ಯುಗಕ್ಕೆ ಅವರು ನಾಂದಿ ಹಾಡಿದರು. ವಿ.ಕೆ.ಮೂರ್ತಿಯವರ ಈ ಎಲ್ಲ ಸಾಧನೆಗಳನ್ನೂ ಗಮನದಲ್ಲಿರಿಸಿಕೊಂಡು ಭಾರತ ಸರ್ಕಾರವು 2008ರಲ್ಲಿ ಅವರಿಗೆ 'ದಾದಾಸಾಹೇಬ್ ಫಾಲ್ಕೆ' ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಸುಮಾರು ನಲವತ್ತು ವರ್ಷಗಳ ಪ್ರಶಸ್ತಿಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಓರ್ವ ಛಾಯಾಗ್ರಾಹಕನಿಗೆ ಈ ಸರ್ವೋಚ್ಚ ಪ್ರಶಸ್ತಿಯು ಸಂದಿತು ಎನ್ನುವುದು ಹಾಗೂ ಆ ಖ್ಯಾತ ಛಾಯಾಗ್ರಾಹಕನು ಓರ್ವ ಕನ್ನಡಿಗ ಎನ್ನುವುದು ನಮ್ಮೆಲ್ಲರಿಗೂ ಹೆಮ್ಮೆ ತರುವ ವಿಷಯವಾಗಿದೆ. (ಇಂದಿನವರೆವಿಗೂ ಮತ್ತಾವ ತಂತ್ರಜ್ಞನೂ ದಾದಾಫಾಲ್ಕೆ ಪ್ರಶಸ್ತಿಗೆ ಭಾಜನನಾಗಿಲ್ಲ ಎನ್ನುವುದು ಗಮನಾರ್ಹ.) ಹಿಂದಿ ಚಿತ್ರರಂಗದ ಫಿಲ್ಮ್‌ಫೇರ್ ಪ್ರಶಸ್ತಿಯನ್ನು ಎರಡು ಬಾರಿ ತಮ್ಮದಾಗಿಸಿಕೊಂಡಿದ್ದಷ್ಟೇ ಅಲ್ಲದೆ ಜೀವಮಾನ ಸಾಧನೆಗಾಗಿ ನೀಡಲಾಗುವ IIFA ಪ್ರಶಸ್ತಿಗೆ ಭಾಜನರಾದ ಹೆಗ್ಗಳಿಕೆಯನ್ನು ಹೊಂದಿದ್ದ ವಿ.ಕೆ.ಮೂರ್ತಿ ಭಾರತದ ಸ್ವಾತಂತ್ರ್ಯ-ಸಂಗ್ರಾಮದಲ್ಲಿ ಪಾಲ್ಗೊಂಡು ಬ್ರಿಟಿಷ್ ಸರ್ಕಾರ ವಿಧಿಸಿದ್ದ ಜೈಲು ಶಿಕ್ಷೆಯನ್ನೂ ಅನುಭವಿಸಿದ್ದರು ಎನ್ನುವುದು ಬಹಳಷ್ಟು ಮಂದಿಗೆ ತಿಳಿದಿರದ ಸಂಗತಿಯಾಗಿದೆ.

ವಿ.ಕೆ.ಮೂರ್ತಿ ಜನ್ಮಶತಮಾನೋತ್ಸವದ ಅಂಗವಾಗಿ ಏರ್ಪಡಿಸಲಾಗಿರುವ Masterclass ಅನ್ನು ಮೇ ತಿಂಗಳ ಎರಡನೇ ಭಾನುವಾರ ಬಸವನಗುಡಿಯ ಡಿವಿಜಿ ರಸ್ತೆಯಲ್ಲಿರುವ ಲಕ್ಷ್ಮಿ ಸೂರ್ಯ ಅಕಾಡೆಮಿಯಲ್ಲಿ ಆಯೋಜಿಸಲಾಗಿದೆ; ಸೀಮಿತ ಸಂಖ್ಯೆಯ ಆಸನ-ವ್ಯವಸ್ಥೆ ಇದೆ. ಭಾಗವಹಿಸಲು ಸಂಪರ್ಕಿಸಿ: lacefilms.com

ಇಂತಹ ಸಾಧಕನಿಗೆ ರಾಜ್ಯ ಸರ್ಕಾರವು ಯಥೋಚಿತ ರೀತಿಯಲ್ಲಿ ಆದರಿಸಲಿಲ್ಲವೆಂಬ ವ್ಯಥೆಯು ಚಿತ್ರರಸಿಕರಲ್ಲಿ ಇದುವರೆವಿಗೂ ಮನೆಮಾಡಿತ್ತು. ಅವರು ನಿಧನರಾದ ದಿನ ಅಂದಿನ ಆಳುವ ಪಕ್ಷದ ಮುಖ್ಯಸ್ಥರು ಹಾಗೂ ಮುಖ್ಯಮಂತ್ರಿಯನ್ನೂ ಒಳಗೊಂಡಂತೆ ಸಕಲ ಸರ್ಕಾರಿ ಆಡಳಿತ ಯಂತ್ರವೇ ಮೂರ್ತಿಯವರ ಪಾರ್ಥಿವ ಶರೀರವನ್ನಿರಿಸಿದ್ದ ಸ್ಥಳದಿಂದ ಕೇವಲ 500 ಮೀ. ದೂರದಲ್ಲಿ ಹಾಜರಿದ್ದರೂ ಅವರಲ್ಲಿ ಯಾರೊಬ್ಬರೂ ಅಂತಿಮ ನಮನವನ್ನು ಸಲ್ಲಿಸುವ ಕನಿಷ್ಠ ಔದಾರ್ಯವನ್ನೂ ತೋರಿರಲಿಲ್ಲ. ಸ್ವತಂತ್ರಸೇನಾನಿಯೊಬ್ಬನಿಗೆ ಸಲ್ಲಿಸಬೇಕಿದ್ದ ಸಾಂಪ್ರದಾಯಿಕ ಗನ್-ಸಲ್ಯೂಟ್ ಅನ್ನು ಸಮರ್ಪಿಸುವಲ್ಲಿ ಅಂದಿನ ಸರ್ಕಾರವು ವಿಫಲವಾಗಿತ್ತು ಎನ್ನುವುದು ಸಭ್ಯ ಸಮಾಜವೊಂದನ್ನು ನಾಚಿಕೆಯಿಂದ ತಲೆತಗ್ಗಿಸುವಂತೆ ಮಾಡಿತ್ತು. ಈ ಬಗೆಯ ಅಕ್ಷಮ್ಯ ಔದಾಸೀನ್ಯಕ್ಕೆ ಪ್ರಾಯಶ್ಚಿತ್ತವೆಂಬಂತೆ ಇತ್ತು, ವಿಧಾನಸೌಧದ ಮಹಾದ್ವಾರದ ಮುಂಭಾಗದಲ್ಲಿ 2023ರ ಮಾರ್ಚ್ 23ರ ಸಂಜೆ ಕರ್ನಾಟಕ ಚಲನಚಿತ್ರ ಅಕಾಡೆಮಿಯ ವತಿಯಿಂದ ಆಯೋಜಿಸಲಾಗಿದ್ದ 14ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಸಮಾರಂಭ.

ಮೈಸೂರಿನಲ್ಲಿ ಹುಟ್ಟಿ, ಬೆಳೆದು ಭಾರತೀಯ ಚಿತ್ರರಂಗವು ಕಂಡ ಅಸದೃಶ ಛಾಯಾಗ್ರಾಹಕನಾಗಿ ಹಲವು ದಶಕಗಳ ಕಾಲ ಚಿತ್ರರಸಿಕರ ಹೃನ್ಮನಗಳನ್ನು ಬೆಳಗಿದ ವಿ.ಕೆ.ಮೂರ್ತಿಯವರ ಜನ್ಮಶತಮಾನೋತ್ಸವದ ಅಂಗವಾಗಿ ಈ ಚಿತ್ರೋತ್ಸವವನ್ನು ಆಚರಿಸಿದ್ದು ಔಚಿತ್ಯಪೂರ್ಣವಾಗಿತ್ತು.

ವಿ.ಕೆ.ಮೂರ್ತಿಯವರ ಬಾಲ್ಯದ ದಿನಗಳು ಕಡುಬಡತನದಿಂದ ಕೂಡಿದ್ದವು. ಕೇವಲ ಒಂಬತ್ತನೆಯ ವಯಸ್ಸಿನಲ್ಲಿ ಅವರು ತಮ್ಮ ತಾಯಿಯನ್ನು ಕಳೆದುಕೊಂಡರು. ಮೂಕಿ-ಚಿತ್ರಗಳಿಗೆ ಹಿನ್ನೆಲೆ ಸಂಗೀತವನ್ನು ಒದಗಿಸುತ್ತಿದ್ದ ಸೋದರ ಸಂಬಂಧಿಯೋರ್ವನಿಂದಾಗಿ ಹಲವಾರು ಬಾರಿ ಸಿನಿಮಾ ಮಂದಿರಗಳಲ್ಲಿ ಚಲನಚಿತ್ರಗಳನ್ನು ನೋಡುವ ಅವಕಾಶ ಅವರಿಗೆ ಒದಗಿತು. ಇದರಿಂದಾಗಿ, ಸಿನಿಮಾ ಕುರಿತಂತೆ ಮತ್ತಷ್ಟು ತಿಳಿದುಕೊಳ್ಳುವ ಕುತೂಹಲ ಅವರಲ್ಲಿ ಹೆಚ್ಚಾಯಿತು. ಸಿನಿ-ಶಿಕ್ಷಣವನ್ನು ನೀಡುವ ಸಂಸ್ಥೆಯ ಜಾಹೀರಾತೊಂದನ್ನು ದಿನಪತ್ರಿಕೆಯಲ್ಲಿ ಕಂಡ ವಿ.ಕೆ.ಮೂರ್ತಿ ಮನೆಯಲ್ಲಿದ್ದ ಪುಡಿಗಾಸೆಲ್ಲವನ್ನೂ ಒಟ್ಟುಗೂಡಿಸಿ ಬೊಂಬಾಯಿಗೆ (ಇಂದಿನ ಮುಂಬೈ) ಪ್ರಯಾಣ ಬೆಳೆಸಿದರು!

ತಾವು ನೋಡಿದ್ದು ಪೊಳ್ಳು ಜಾಹೀರಾತು; ಅಸಲಿಗೆ ಆ ಹೆಸರಿನ ಸಂಸ್ಥೆಯೇ ಇಲ್ಲ ಎನ್ನುವುದು ಅವರ ಅರಿವಿಗೆ ಬರುವ ಹೊತ್ತಿಗೆ ಕಿಸೆಯಲ್ಲಿದ್ದ ಹಣವೆಲ್ಲವೂ ಖರ್ಚಾಗಿತ್ತು! ರೈಲ್ವೇ ಟಿಕೆಟ್ ಕಲೆಕ್ಟರ್ ಕೃಪೆಯಿಂದ, ಎಂತೋ ಏನೋ, ಮೈಸೂರಿಗೆ ವಾಪಸ್ ಆದರು. ಆ ನಂತರದಲ್ಲಿ ತಮ್ಮ ಬಿಡುವಿನ ವೇಳೆಯನ್ನೆಲ್ಲ ಅವರು ವಯೊಲಿನ್ ಅಭ್ಯಾಸಕ್ಕೆ ಮೀಸಲಿಟ್ಟರು. ಈ ವಾದ್ಯದ ನುಡಿಸಾಣಿಕೆಯಲ್ಲಿ ಅವರು ಪಡೆದುಕೊಂಡ ಪರಿಣತಿಯು ಮೈಸೂರು ಮಹಾರಾಜರ ಹಸ್ತಲಾಘವವನ್ನು ದೊರಕಿಸಿಕೊಟ್ಟಿತಷ್ಟೇ ಅಲ್ಲದೆ ಮುಂದೆ ಬೊಂಬಾಯಿಯ ಚಿತ್ರರಂಗವನ್ನು ಪ್ರವೇಶಿಸಿದಾಗ ಅವರಿಗೆ ಮೊಟ್ಟಮೊದಲ ಸಂಭಾವನೆಯನ್ನೂ ತಂದುಕೊಟ್ಟಿತು.

ಸರ್ ಎಂ.ವಿಶ್ವೇಶ್ವರಯ್ಯನವರ ದೂರಗಾಮಿ ಚಿಂತನೆಯ ಫಲವಾಗಿ 1943ರಲ್ಲಿ ರೂಪು ತಳೆದ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್(SJP)ನಲ್ಲಿ ಸಿನಿಮಾಟೊಗ್ರಫಿ, ಎಂದರೆ, ಚಲನಚಿತ್ರ-ಛಾಯಾಗ್ರಹಣದಲ್ಲಿ ತರಬೇತಿಯನ್ನು ನೀಡುವ ಕೋರ್ಸ್ ಒಂದನ್ನು ಆರಂಭಿಸಲಾಗಿದೆ ಎಂದು ತಿಳಿದುಬಂದಾಗ ವಿ.ಕೆ. ಮೂರ್ತಿ ಅವರಿಗಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ನೆರೆಮನೆಯವರಿಂದ ರೈಲು ಚಾರ್ಜಿಗೆಂದು ಒಂದು ರೂಪಾಯಿ ಎರವಲು ಪಡೆದು, ಮೈಸೂರಿನ ಗಣ್ಯವಕ್ತಿಯೋರ್ವರಿಂದ ಅರ್ಹತಾಪತ್ರಕ್ಕೆ ಸಹಿ ಹಾಕಿಸಿಕೊಂಡ ಹದಿಹರೆಯದ ವಿ.ಕೆ. ಮೂರ್ತಿ SJPಯಲ್ಲಿ ಮೌಖಿಕ ಪರೀಕ್ಷೆಗೆ ಹಾಜರಾಗಿಯೇಬಿಟ್ಟರು. "You have done well, young man. Congratulations. Pay your admission fee and join the classes tomorrow itself." ಎಂದು ಪ್ರಿನ್ಸಿಪಾಲರು ನುಡಿದಾಗ, ಉಚಿತ ವಿದ್ಯಾಭ್ಯಾಸದ ಕನಸನ್ನು ಹೊತ್ತು ಬಂದಿದ್ದ ಮೂರ್ತಿ ಅವರಿಗೆ ಕಾಲಬುಡವೇ ಕುಸಿದಂತಹ ಅನುಭವವಾಯಿತು.

ಅಂದು ಸಂಜೆ ಬಾಲ್ಯದ ಗೆಳೆಯ ಶ್ರೀನಿವಾಸನ್ ಅವರನ್ನು ಭೇಟಿಯಾದಾಗ ಅವರೊಂದಿಗೆ ಇದೆಲ್ಲವನ್ನೂ ಹೇಳಿಕೊಂಡ ವಿ.ಕೆ. ಮೂರ್ತಿ ದುಃಖವನ್ನು ತಡೆಯಲಾರದೆ ಗಳಗಳನೆ ಅತ್ತುಬಿಟ್ಟರು. 'ಇಲ್ಲಿಗೆ ನನ್ನ ಕನಸುಗಳೆಲ್ಲವೂ ಪರಿಸಮಾಪ್ತವಾದುವು. ಇನ್ನು ಊರಿಗೆ ಹಿಂದಿರುಗಿ ದೈವನಿಯಾಮಕದಂತೆ ಜೀವನವನ್ನು ಸಾಗಿಸುತ್ತೇನೆ' ಎಂದಂದು ಕೈಚೆಲ್ಲಿ ಕೂತ ಗೆಳೆಯನಿಗೆ ಶ್ರೀನಿವಾಸನ್ ಸಾಂತ್ವನದ ನುಡಿಗಳನ್ನು ಹೇಳಿದರು. ಅಂದು ಅವರು ಮಾಡಿದ ಮಹೋನ್ನತ ಉಪಕಾರವು ಸರಿಸುಮಾರು ಅರವತ್ತು ವರ್ಷಗಳ ನಂತರ ಕನ್ನಡನಾಡಿಗೆ ಎರಡನೇ ದಾದಾ ಫಾಲ್ಕೆ ಪ್ರಶಸ್ತಿಯನ್ನು ತಂದುಕೊಟ್ಟಿತು. ಶ್ರೀನಿವಾಸನ್ ಅವರು ಪ್ರವೇಶ-ಶುಲ್ಕವನ್ನು ಭರಿಸಿದ್ದಷ್ಟೇ ಅಲ್ಲದೆ ತರಬೇತಿಯುದ್ದಕ್ಕೂ ಅಭ್ಯಾಸದ ಖರ್ಚು-ವೆಚ್ಚವನ್ನು ತಾವೇ ನಿರ್ವಹಿಸುವುದಾಗಿ ಭರವಸೆಯನ್ನಿತ್ತರು. ಈ ಬಗೆಯ ಅಲೌಕಿಕ ಸ್ನೇಹಕ್ಕೆ ನಾಡಿನ ಜನತೆ ಕೃತಜ್ಞತಾಪೂರ್ವಕವಾಗಿ ಸಲ್ಲಿಸಿದ ನಮನವು 14ನೇ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ವಿ.ಕೆ.ಮೂರ್ತಿ ಶತಮಾನೋತ್ಸವದ ಸಂಭ್ರಮವಾಗಿ ರೂಪುಗೊಂಡು ಸಾರ್ಥಕ್ಯವನ್ನು ಕಂಡಿತು. ಬಿಂಬ ನಿರ್ಮಿತಿಯಲ್ಲಿ ದಾಪುಗಾಲಿಡುತ್ತಿರುವ ಡಿಜಿಟಲ್ ತಂತ್ರಜ್ಞಾನದಿಂದಾಗಿ ಇತ್ತೀಚಿನವರೆಗೂ ಬಿಂಬ ಸಾಮ್ರಾಜ್ಯದ ಅನಭಿಷಿಕ್ತ ದೊರೆಯಾಗಿ ಮೆರೆದ ಚಲನಚಿತ್ರ ಛಾಯಾಗ್ರಾಹಕನ ಕಾರ್ಯಕ್ಷೇತ್ರದ ಪರಿಧಿಯು ತೀವ್ರಗತಿಯಲ್ಲಿ ಸಂಕುಚಿತಗೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ ಓರ್ವ ಅಸಾಮಾನ್ಯ ಚಲನಚಿತ್ರ-ಛಾಯಾಗ್ರಾಹಕನ ಸಾಧನೆಯನ್ನು ಈ ಪರಿಯಾಗಿ ಸಂಭ್ರಮಿಸಿದ್ದು ನಿಜಕ್ಕೂ ಅರ್ಥಪೂರ್ಣವಾಗಿತ್ತಷ್ಟೇ ಅಲ್ಲದೆ ಚೇತೋಹಾರಿಯೂ ಆಗಿತ್ತು.

(ಲೇಖಕರು ಸಿನಿಮಾ-ಛಾಯಾಗ್ರಹಣಕಾರರು)

ಕಷ್ಟಕರ ರಾಗಗಳ ಮೋಹಿ

ನಾದದಲೆ

ಉಮಾ ಅನಂತ್

ಬೆಂಗಳೂರಿನ ವಿದುಷಿ ಕಲಾವತಿ ಅವಧೂತ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಹೆಸರಾಂತ ಕಲಾವಿದೆ. ಲಯವಾದ್ಯ ಪ್ರವರ್ತಕರಾಗಿದ್ದ ವಿದ್ವಾನ್ ಬೆಂಗಳೂರು ವೆಂಕಟ್ರಾಮ್ ಅವರ ಪುತ್ರಿಯಾಗಿರುವ ಕಲಾವತಿ, ಅಮೆರಿಕ, ನೆದರ್ಲೆಂಡ್, ಯುರೋಪ್ ದೇಶಗಳಲ್ಲಿ ಸಂಗೀತ ಕಛೇರಿ ನೀಡಿದ್ದಾರೆ. ಹಲವು ಪ್ರಶಸ್ತಿಗಳಿಗೂ ಭಾಜನರಾದ ಈ 'ಮಾಗಿದ ಕಲಾವಿದೆ', ಬೆಂಗಳೂರಿನ ಚಾಮರಾಜಪೇಟೆಯ ಕೋಟೆ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಏಪ್ರಿಲ್ 24ರಂದು ಕೇಳುಗರಿಗೆ ಸಂಗೀತ ರಸದೌತಣ ನೀಡಲಿದ್ದಾರೆ. 'ಭಾನುವಾರ ಪುರವಣಿ'ಯೊಂದಿಗೆ ಅವರು ತಮ್ಮ ಸಂಗೀತ ಪಯಣವನ್ನು ಹಂಚಿಕೊಂಡರು.

- **ಪರಂಪರೆಯ ಸಂಗೀತ ಮನೆತನ, ನಿಮ್ಮ ಸಂಗೀತದೊಂದಿಗೆ ಬೆಸೆದದ್ದು ಹೇಗೆ?**

ನಮ್ಮ ಮನೆಯಲ್ಲಿ ಸಂಪೂರ್ಣವಾಗಿ ಸಂಗೀತದ ವಾತಾವರಣವೇ ಇತ್ತು. ತಾಯಿ ಜಿ.ಆರ್. ಜಯಾ ಶಾಸ್ತ್ರೀಯ ಸಂಗೀತ ಹಾಗೂ ಗಮಕ ಕಲಾವಿದೆ. ತಂದೆ ಬೆಂಗಳೂರು ಕೆ. ವೆಂಕಟ್ರಾಮ್ ಘಟಂ ಮತ್ತು ಮೃದಂಗ ವಿದ್ವಾಂಸರಾಗಿದ್ದವರು. ಚಿಕ್ಕವಳಿದ್ದಾಗಲೇ ತಾಯಿ ಬಳಿ ಸಂಗೀತದ ಆರಂಭದ ಪಾಠಗಳನ್ನು ಕಲಿತೆ. ಮುಂದೆ ವಿದುಷಿ ಉಷಾಚಾರ್ ಬಳಿ ಕಲಿತೆ. ಆಮೇಲೆ ವಿದ್ವಾನ್ ಆನೂರು ರಾಮಕೃಷ್ಣ ಅವರ ಬಳಿ, ವಿದುಷಿ ಸೀತಾಲಕ್ಷ್ಮಿ ವೆಂಕಟೇಶನ್ ಹಾಗೂ ಚೆನ್ನೈಯ ವಿದ್ವಾನ್ ಪಿ.ಎಸ್. ನಾರಾಯಣಸ್ವಾಮಿ ಅವರ ಬಳಿಯೂ ಹೆಚ್ಚಿನ ಸಂಗೀತ ಮಾರ್ಗದರ್ಶನ ಪಡೆದುಕೊಂಡೆ.

- **ನಿಮ್ಮ ತಂದೆ ಬೆಂಗಳೂರು ಕೆ. ವೆಂಕಟರಾಮ್ ಲಯವಾದ್ಯಕ್ಕೆ ವಿಶೇಷ ಸ್ಥಾನಮಾನ ತಂದುಕೊಟ್ಟವರು. ಸಂಗೀತಕ್ಕೆ ಅವರ ಕೊಡುಗೆಯನ್ನು ನೆನಪಿಸಿಕೊಳ್ಳುವಿರಾ?**

ನಮ್ಮ ತಂದೆ ಕರ್ನಾಟಕ ಗಾನಕಲಾ ಪರಿಷತ್ತು ಹಾಗೂ ತಾಳವಾದ್ಯ ಕಲಾ ಕೇಂದ್ರ (ಪರ್ಕಷನ್ ಆರ್ಟ್ಸ್ ಸೆಂಟರ್) ಎಂಬ ರಾಜ್ಯದ ಎರಡು ಪ್ರಮುಖ ಸಂಗೀತ ಸಂಸ್ಥೆಯ ಸ್ಥಾಪಕ ಸದಸ್ಯರಾಗಿದ್ದವರು. ಲಯವಾದ್ಯ, ತಾಳವಾದ್ಯಗಳಿಗೆ ಬಹಳ ಪ್ರಾಶಸ್ತ್ಯ ನೀಡುತ್ತಿದ್ದರು. ಹಿರಿಯ ವಿದ್ವಾಂಸರಾಗಿದ್ದ ಪಾಲ್ಘಾಟ್ ಮಣಿ ಅಯ್ಯರ್ ಅವರ ಬಳಿ ನಿಕಟ ಸಂಬಂಧ ಇಟ್ಟುಕೊಂಡಿದ್ದವರು. ಅವರ ನೆನಪಲ್ಲೇ ತಾಳವಾದ್ಯ ಸಂಸ್ಥೆ ಕಟ್ಟಿದರು. ಈ ಸಂಸ್ಥೆ ಮುಖಾಂತರ ಸಂಗೀತದ ಹಲವು ಉಪನ್ಯಾಸಗಳನ್ನು, ಪ್ರಾತ್ಯಕ್ಷಿಕೆಗಳನ್ನು ದಾಖಲೀಕರಣ ಮಾಡಿದ್ದಾರೆ. ತಾಳ ಸಂಗ್ರಹ, ರಾಗ–ತಾನ–ಪಲ್ಲವಿ ಮುಂತಾದ ಪುಸ್ತಕಗಳನ್ನು ಹೊರತಂದಿದ್ದಾರೆ.

ಲಯವಾದ್ಯವನ್ನು ಬಹಳ ಜನಪ್ರಿಯಗೊಳಿಸಿದವರು. ಆಗೆಲ್ಲ ಸಂಗೀತ ಕಛೇರಿಗಳಲ್ಲಿ ತನಿಯಾವರ್ತನ ಭಾಗ ಬಂದಾಗ ಕೇಳುಗರು ಬೋರ್ ಎಂದು ಎದ್ದು ಹೋಗುತ್ತಿದ್ದರು. ರಸಿಕರು ಲಯವಾದ್ಯದ ಸೊಬಗನ್ನು ಅರ್ಥ ಮಾಡುವ ಹಾಗೆ ತಂದೆಯವರು ಪ್ರಯತ್ನಿಸುತ್ತಿದ್ದರು. ವಿಶೇಷ ತಾಳಗಳಾದ ಅಷ್ಟೋತ್ತರ ಶತ ತಾಳ, ಮಾರ್ಗ ತಾಳ, ಮುಖಿ ತಾಳಗಳನ್ನು ಬಳಕೆಗೆ ತಂದರು. ಇದರಲ್ಲಿ ಲಯವಿನ್ಯಾಸ ಅಳವಡಿಸಿ ನೂತನ ಪ್ರಯೋಗ ಮಾಡಿ ಸಂಗೀತ ವಿದ್ಯಾರ್ಥಿಗಳಿಗೂ ಅನುಕೂಲವಾಗುವಂತೆ ಮಾಡಿದರು. ಹೆಸರಾಂತ ಲಯವಾದಕ ಆನೂರು ಅನಂತಕೃಷ್ಣ ಶರ್ಮ ಅವರ ಬಳಿ ವಿಶೇಷ ಸಂಯೋಜನೆ ಮಾಡಿ 'ಪಾಂಚಜನ್ಯ' ಹೆಸರಿನಲ್ಲಿ ವಿವಿಧ ಜತಿಗಳನ್ನು ಸೇರಿಸಿ ವಿಶೇಷ ಕಾರ್ಯಕ್ರಮ ರೂಪಿಸಿದ್ದರು.

ಆಗಿನ ಕಾಲದಲ್ಲಿ ಟಿ.ಬಿ. ನರಸಿಂಹಾಚಾರ್ ಅಂತ ಸಂಗೀತ ವಿಮರ್ಶಕರಿದ್ದರು. ಅವರು ತಂದೆಯವರನ್ನು 'ರೆಸ್ಟ್‌ಲೆಸ್ ರಿದಂ ಮ್ಯಾನ್' ಅಂತ ಕರೀತಿದ್ರು. ಎಂದಿಗೂ ಸಮಯ ಪೋಲು ಮಾಡ್ತಿರಲಿಲ್ಲ.

ಕಲಾವತಿ ಅವಧೂತ

- **ಸಂಗೀತ ಕಲಿಯುವಿಕೆ ಜೊತೆಗೆ ಕೇಳ್ಮೆಯಿಂದಲೂ ಸಾಕಷ್ಟು ಲಾಭ ಇದೆ. ನಿಮ್ಮ ಅನಿಸಿಕೆ ಏನು?**

ಕೇಳ್ಮೆಯಿಂದಲೂ ಸಂಗೀತ ಜ್ಞಾನ ವಿಸ್ತಾರವಾಗುತ್ತದೆ. ನನ್ನ ಗುರುಗಳು ವಿದ್ವಾನ್ ಆನೂರು ರಾಮಕೃಷ್ಣ ಶರ್ಮ ಅವರು ಈ ಮಾತಿನಲ್ಲಿ ಬಹಳ ನಂಬಿಕೆ ಇಟ್ಟವರು. ರಾಗಗಳ ಬಗ್ಗೆ, ಸ್ವರ ಪ್ರಸ್ತಾರದ ಬಗ್ಗೆ ಸವಿಸ್ತಾರವಾದ ಅರಿವು ಮೂಡುತ್ತದೆ. ಒಂದೇ ರಾಗದ ಹಲವು ಕೃತಿಗಳನ್ನು ಕಲಿಯುವುದು, ಇದೇ ಕೃತಿಗಳನ್ನು ಬೇರೆ ಬೇರೆ ವಿದ್ವಾಂಸರು ಯಾವ ರೀತಿಯಲ್ಲಿ ಪ್ರಸ್ತುತಪಡಿಸುತ್ತಾರೆ ಎಂಬುದನ್ನು ಗಮನಿಸುವುದರಿಂದ ಆ ರಾಗದ ವಿವಿಧ ಆಯಾಮಗಳನ್ನು ತಿಳಿಯಬಹುದು. 'one teaches, two learns' (ಒಬ್ಬರು ಕಲಿಸುತ್ತಾರೆ, ಇಬ್ಬರೂ ಕಲಿಯುತ್ತಾರೆ) ಎಂಬ ಮಾತಿದೆ. ಗುರುಗಳು ಪಾಠ ಮಾಡುವುದರಿಂದ ಅವರ ಜ್ಞಾನ ಮತ್ತಷ್ಟು ಪಕ್ವಗೊಳ್ಳುತ್ತದೆ. ವರ್ಣ, ಕೃತಿಗಳಲ್ಲಿ ಯಾವ ಭಾಗ ತೆಗೆದುಕೊಂಡು ಸ್ವರಪ್ರಸ್ತಾರ ಮಾಡಬಹುದು, ನೆರವಲ್ ಮಾಡಬಹುದು ಎಂಬುದು ಕೂಡ ಕೇಳ್ಮೆಯಿಂದಲೇ ಹೆಚ್ಚು ಮನದಟ್ಟಾಗುವಂಥದ್ದು.

- **ಸಿಂಹೇಂದ್ರ ಮಧ್ಯಮ, ಹನುಮ ತೋಡಿ, ಭೈರವಿ, ಬೇಗಡೆಗಳಂತಹ ಕಷ್ಟಕರ ರಾಗಗಳನ್ನು ಕಛೇರಿಗಳಲ್ಲಿ ಆಯ್ಕೆ ಮಾಡಿಕೊಳ್ಳುವ ಕಲಾವಿದರು ಕಡಿಮೆ. ನಿಮ್ಮ ಕಛೇರಿಗಳಲ್ಲಿ ಇಂಥ ರಾಗಗಳನ್ನೇ ಸಲೀಸಾಗಿ ಹಾಡುತ್ತೀರಿ. ಇದು ಹೇಗೆ ಸಾಧ್ಯವಾಯಿತು?**

ಸಾಮಾನ್ಯವಾಗಿ ಎಲ್ಲರೂ ಹಾಡುವುದಕ್ಕಿಂತ ಭಿನ್ನವಾಗಿರಲೆಂದು ಕಷ್ಟಕರ ರಾಗಗಳನ್ನೇ ಇಷ್ಟಪಟ್ಟು ಹಾಡುತ್ತೇನೆ. ಭೈರವಿ, ಕಾಂಬೋಧಿ, ಬೇಗಡೆ, ಯದುಕುಲ ಕಾಂಭೋಜಿ, ಸಹನಾ ಮುಂತಾದವು ಪ್ರಚಲಿತ ರಾಗಗಳೇ ಆದರೂ ಕಷ್ಟಕರವಾದದ್ದು. 'ಭಾವಯಾಮಿ ರಘುರಾಮಂ' ಎಂಬ ಹಾಡನ್ನು ಏಳು ರಾಗಗಳಲ್ಲಿ ಹಾಡಿ ಪ್ರಯೋಗ ಮಾಡಿದ್ದೆ. ರಾಗಮಾಲಿಕೆ ಕೂಡ ಇಂತಹ ಕಷ್ಟರಾಗಗಳಲ್ಲೇ ಹಾಡಿದ್ದೆ. ಜೊತೆಗೆ ಅಷ್ಟರಾಗ, ಚತುರ್ದಶ ರಾಗಮಾಲಿಕೆ ಕೂಡ ಸವಾಲಾಗಿ ಹಾಡಿದ್ದೆ. ಪಂಚ ನಡೆ, ಗತಿಯಲ್ಲಿ 'ಪಲ್ಲವಿ' ಹಾಡಿದ್ದು ಕೂಡ ನನ್ನ ಹೊಸ ಪ್ರಯೋಗವೇ. 'ಪ್ರಾಚೀನ ಪಲ್ಲವಿ' ಎಂಬ ಗಾಯನ ಸರಣಿ ಆರು ಎಪಿಸೋಡ್‌ಗಳಲ್ಲಿ ಆಕಾಶವಾಣಿಗಾಗಿ ಹಾಡಿದ್ದು ಕೂಡ ಕಷ್ಟಕರ ರಾಗಗಳನ್ನು ಸಂಯೋಜಿಸಿಯೇ ಆಗಿದೆ. ಹೀಗೆ ರಾಗ ಸಿಂಹೇಂದ್ರ ಮಧ್ಯಮ ಇರಬಹುದು, ಹನುಮತೋಡಿಯೇ ಇರಬಹುದು. ರಾಗದ ಚೆಲುವನ್ನು ಅನುಭವಿಸಿ, ಧ್ಯಾನಸ್ಥಳಾಗಿ ಹಾಡಿದಾಗ ಅದು ಸಲೀಸಾಗಿಯೇ ಹೊರಹೊಮ್ಮುತ್ತದೆ.

- **ಕಲೆಯನ್ನು ಮುಂದುವರಿಸುವಲ್ಲಿ ನಿಮ್ಮ ಪ್ರಯತ್ನ ಹೇಗೆ ಸಾಗಿದೆ?**

ಸಂಗೀತವನ್ನು ಮುಂದುವರೆಸುವ ನಿಟ್ಟಿನಲ್ಲಿ ಶಕ್ತಿಮೀರಿ ಹಲವು ಯೋಜನೆಗಳಿವೆ. 'ಸ್ವರನಿಧಿ' ಎಂಬ ತಂಡ ಕಟ್ಟಿಕೊಂಡು ತತ್ವಾಧಾರಿತ ಕಾರ್ಯಕ್ರಮ (Themantic programmes) ಮಾಡ್ತೀನಿ. ತ್ಯಾಗರಾಜರ 'ಪ್ರಹ್ಲಾದ ಭಕ್ತವಿಜಯ' ಪರಿಕಲ್ಪನೆಯನ್ನು ಸಂಗೀತಕ್ಕೆ ಅಳವಡಿಸಿ ನನ್ನ ಶಿಷ್ಯಂದಿರ ಬಳಿ ಹಾಡಿಸಿದ್ದೇನೆ. 'ಪುರಂದರದಾಸ ಕೀರ್ತನ ಮಾಲಾ' ಎಂಬ ದಾಸರಪದಗಳ ಗಾಯನ ಹೆಚ್ಚು ಜನರನ್ನು ಸೆಳೆದಿತ್ತು. ಮಗ ದತ್ತಪ್ರಸಾದ ಸಂಗೀತದಲ್ಲಿ ಭರವಸೆ ಮೂಡಿಸುತ್ತಿದ್ದಾನೆ. ರಾಹುಲ್ ವೆಲ್ಲಾಳ್ ಉತ್ತಮ ಗಾಯಕನಾಗಿ ರೂಪುಗೊಂಡಿದ್ದಾನೆ.

ಚುನಾವಣಾ ಹಾಡಿನ ಜಾಡು

9ನೇ ಪುಟದಿಂದ...

ರಾಜ್ಯಮಟ್ಟದ ಮುಖಂಡರ ಹಾಡುಗಳಿಗೆ ಮೂಲ ಸಾಹಿತ್ಯ, ಮೂಲ ಸಂಗೀತ ಸಂಯೋಜನೆ ಇದೆ. ಆದರೆ ಇತರ ವಿಧಾನಸಭಾ ಕ್ಷೇತ್ರಗಳಲ್ಲಿ ಹರಿದಾಡುತ್ತಿರುವ ಬಹುತೇಕ ಹಾಡುಗಳೆಲ್ಲವೂ ಸಿನಿಮಾದಲ್ಲಿ ಪ್ರಸಿದ್ಧಿ ಪಡೆದ ಟ್ರ್ಯಾಕ್‌ಗಳೇ ಆಗಿವೆ. ಶಾಸಕರ, ಮುಖಂಡರ ಅಭಿಮಾನಿಗಳು, ಸ್ಥಳೀಯ ಕಲಾವಿದರು ಈ ಟ್ರ್ಯಾಕ್‌ಗಳಿಗೆ ಹೊಗಳಿಕೆಯ ಪದ ಪೋಣಿಸಿ ಜಾಲತಾಣಗಳಲ್ಲಿ ಹಂಚುತ್ತಿದ್ದಾರೆ. ಸ್ಟುಡಿಯೋ ರೆಕಾರ್ಡಿಂಗ್ ಮಾತ್ರವಲ್ಲದೆ ಆ್ಯಪ್‌ಗಳನ್ನು ಬಳಸಿ ಸ್ಥಳದಲ್ಲೇ ಮಿಕ್ಸಿಂಗ್ ಮಾಡಲಾಗುತ್ತಿದೆ.

ಮೈಸೂರಿನ ಸೀಮೆಯಲಿ
ಹುಟ್ಟಿ ಬಂದಾ ಗಂಡುಗಲಿ
ಜನಮೆಚ್ಚಿದ ಧೀಮಂತ
ಮೈಸೂರು ಹುಲಿಯ ಸಿದ್ದರಾಮಣ್ಣ...

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕುರಿತಾದ ಇಂತಹ ಹಾಡುಗಳು ಜಾಲತಾಣಗಳಲ್ಲಿ ಹೆಚ್ಚು ಸದ್ದು ಮಾಡುತ್ತಿವೆ. ವಿವಿಧ ಪಕ್ಷಗಳ ನಾಯಕರ ಹಾಡುಗಳನ್ನೂ ಹಿಂದಿಕ್ಕಿ ಸಿದ್ದರಾಮಯ್ಯ ಹಾಡುಗಳು ಓಡುತ್ತಿವೆ. 'ಹೌದು ಹುಲಿಯಾ, ಟಗರು' ಪದಗಳಿರುವ ನೂರಾರು ಹಾಡುಗಳಿವೆ. ಸಿನಿಮಾ ಟ್ರ್ಯಾಕ್ ಮಾತ್ರವಲ್ಲದೇ ಜನಪದ ಗೀತೆ, ಉತ್ತರ ಕರ್ನಾಟಕದ ಜನಪದ ಶೈಲಿ ಗೀತೆ, ರಂಗಗೀತೆ ಬಂದಿವೆ. ಅಷ್ಟೇ ಅಲ್ಲದೇ ಸಿದ್ಧಿ, ಬುಡಕಟ್ಟು ಹಾಡುಗಳೂ ಸಿದ್ದರಾಮಯ್ಯರನ್ನು ಹೊಗಳುತ್ತಿವೆ.

ಸಿದ್ದರಾಮಯ್ಯ ಜೀವನಾಧಾರಿತ 'ಬಾರಯ್ಯ ಸಿದ್ದರಾಮಯ್ಯ' ವಿಡಿಯೊ ಗೀತೆ ಜನರ ಮೆಚ್ಚುಗೆ ಗಳಿಸಿದ್ದು, ಇದನ್ನು ಅವರ ಅಭಿಮಾನಿ ಶ್ರೀಧರ್ ರಾವ್ ನಿರ್ಮಿಸಿದ್ದಾರೆ. ತೆಲುಗಿನಲ್ಲಿದು 'ರಾವಯ್ಯ ಸಿದ್ದರಾಮಯ್ಯ' ಆಗಿದ್ದು ಆಂಧ್ರ, ತೆಲಂಗಾಣ ಗಡಿಯ ಮತದಾರರನ್ನು ಸೆಳೆಯಲು ಬಳಸಲಾಗುತ್ತಿದೆ.

ಕೆಪಿಸಿಸಿ ಸಾಂಸ್ಕೃತಿಕ ಘಟಕದ ಜವಾಬ್ದಾರಿ ಹೊತ್ತಿರುವ ನಟ, ಸಂಗೀತ ನಿರ್ದೇಶಕ ಸಾಧುಕೋಕಿಲ ಕಾಂಗ್ರೆಸ್‌ನ ಬಹುತೇಕ ಹಾಡುಗಳನ್ನು ಸಂಯೋಜನೆ ಮಾಡಿದ್ದಾರೆ. ಡಿ.ಕೆ.ಶಿವಕುಮಾರ್ ಅವರ ಮೇಕೆದಾಟು ಪಾದಯಾತ್ರೆಯ ಗೀತೆಗಳು, ಪ್ರಜಾಧ್ವನಿ ಯಾತ್ರೆ, ರಾಹುಲ್ ಗಾಂಧಿ ಭಾರತ್ ಜೋಡೊ ಯಾತ್ರೆಯ ಗೀತೆ ರೂಪಿಸುವ ಜವಾಬ್ದಾರಿಯನ್ನೂ ಅವರು ನಿರ್ವಹಿಸಿದ್ದಾರೆ.

ಈ ಕುರಿತು ಸಾಧುಕೋಕಿಲ ಅವರೊಂದಿಗೆ ಮಾತನಾಡಲು ಯತ್ನಿಸಿದಾಗ ಮಾಹಿತಿ ಕೊಡಲು ಅವರು ಮುಜುಗರಪಟ್ಟರು. 'ಗಿಚ್ಚಿ ಗಿಲಿಗಿಲಿ ಶೂಟಿಂಗ್‌ನಲ್ಲಿ ಇದ್ದೇನೆ, ನಾನೇ ಕರೆ ಮಾಡಿ ಮಾತನಾಡುತ್ತೇನೆ' ಎಂದರು. ಹಲವು ಬಾರಿ ಸಂಪರ್ಕಿಸಲು ಯತ್ನಿಸಿದರೂ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಜೈಜೈಜೈ ಕುಮಾರಣ್ಣ
ಬಡವರ ಬಂಧು ನಮ್ಮ ಕುಮಾರಣ್ಣ
ಮತ್ತೊಮ್ಮೆ ನೀನು ಮುಖ್ಯಮಂತ್ರಿ ಆಗಬೇಕಣ್ಣ...

ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಕುರಿತಾದ ಹಾಡುಗಳಿಗೇನೂ ಕೊರತೆ ಇಲ್ಲ. ಹಳೇ ಮೈಸೂರು ಭಾಗದ ಜಿಲ್ಲೆಗಳಲ್ಲಿ ಕುಮಾರಸ್ವಾಮಿ ಕುರಿತಾದ ಹಾಡುಗಳು ಹೆಚ್ಚು ಹರಿದಾಡುತ್ತಿವೆ. ಎಚ್‌ಡಿಕೆ ಅಭಿಮಾನಿಗಳು ಸ್ಥಳೀಯವಾಗಿ ಸಿನಿಮಾ ಗೀತೆಗಳ ಟ್ರ್ಯಾಕ್‌ಗಳಿಗೆ ಹಾಡಿ, ಹಂಚಿಕೊಂಡಿದ್ದಾರೆ.

'ಪಂಚರತ್ನ' ಯಾತ್ರೆ ಕುರಿತಾದ ಆರು ವಿಶೇಷ ಹಾಡುಗಳನ್ನು ಜೆಡಿಎಸ್ ಪಕ್ಷದ ವತಿಯಿಂದಲೇ ನಿರ್ಮಾಣ ಮಾಡಿಸಲಾಗಿದೆ. ಸಾಹಿತಿ, ಚಿತ್ರ ನಿರ್ದೇಶಕ ನಾಗೇಂದ್ರ ಪ್ರಸಾದ್ ಸಾಹಿತ್ಯ ಬರೆದು, ಸ್ವರ ಸಂಯೋಜನೆಯನ್ನೂ ಮಾಡಿದ್ದಾರೆ. 'ನಾನು ಕುಮಾರಸ್ವಾಮಿ ಅವರೊಬ್ಬರಿಗೆ ಮಾತ್ರ ಹಾಡು ಮಾಡಿಲ್ಲ, ಸಿದ್ದರಾಮಯ್ಯ, ಬಸವರಾಜ ಬೊಮ್ಮಾಯಿ ಅವರಿಗೂ ಹಾಡು ಬರೆದು ಕೊಟ್ಟಿದ್ದೇನೆ. ಈಗ ಜನಾರ್ದನ ರೆಡ್ಡಿ ಅವರ ಬಗ್ಗೆ ಬರೆಯುತ್ತಿದ್ದೇನೆ. ನಾಯಕರ ಸಾಧನೆಗಳನ್ನು ಹಾಡಿನ ಮೂಲಕ ವರ್ಣಿಸುವುದು ತಪ್ಪೇನೂ ಅಲ್ಲ. ಸಂಗೀತ ಪ್ರಭಾವಿ ಮಾಧ್ಯಮವಾಗಿದ್ದು ಅದನ್ನು ಎಲ್ಲರೂ ಬಳಸಿಕೊಳ್ಳುತ್ತಿದ್ದಾರೆ' ಎಂದು ನಾಗೇಂದ್ರ ಪ್ರಸಾದ್ ಹೇಳಿದರು.

ನಾಟ ನಾಟು ನಾಟು ನಾಟು
ಮೋದಿ ಮೋದಿ ಮೋದಿ ಮೋದಿ
ನಮೋ ಎಂಬ ದಿವ್ಯನಾಮ ಕರುನಾಡಿಗೆ ಒಂದು ವರ
ಶಿವಮೊಗ್ಗಕ್ಕೆ ಏರ್ ಪೋರ್ಟು, ಮೈಸೂರಿಗೆ ಹೊಸ ರೂಟು
ಅವರೇನೆ ಮೋದಿ, ಮಾಡ್ತಾರೆ ಮೋಡಿ,
ಎಲ್ಲರೂ ಹೇಳಿ ಮೋದಿ ಮೋದಿ ಮೋದಿ....

ಆಸ್ಕರ್ ಪ್ರಶಸ್ತಿ ಪಡೆದ ತೆಲುಗಿನ 'ನಾಟು ನಾಟು' ಗೀತೆ ಈಗ 'ಮೋದಿ ಮೋದಿ'ಯಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಬಿಜೆಪಿಯು ಉಳಿದೆಲ್ಲಾ ಪಕ್ಷಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಚುನಾವಣೆ ಗೀತೆಗಳನ್ನು ಬಳಸಿಕೊಂಡಿದೆ. ವಿಶೇಷವೆಂದರೆ ಹಾಡುಗಳಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಸೇರಿದಂತೆ ರಾಜ್ಯ ನಾಯಕರು ಹೆಚ್ಚಾಗಿ ಕಾಣಿಸಿಕೊಂಡಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರನ್ನೇ ಹೆಚ್ಚು ವೈಭವೀಕರಿಸಲಾಗಿದೆ.

'ನಾಟು ನಾಟು' ಹಾಡಿಗೆ ನೃತ್ಯವನ್ನೂ ಸಂಯೋಜಿಸಲಾಗಿದೆ. ಯುವ ಮತದಾರರನ್ನೇ ಗುರಿಯಾಗಿಸಿಕೊಂಡು 'ಯುವ ಕರ್ನಾಟಕ' ಅಡಿ ಸಂಗೀತ, ನೃತ್ಯ ಸಂಯೋಜಿಸಲಾಗಿದೆ. ಮೋದಿ ಅವರನ್ನು ಹೊಗಳುವ ರ್‍ಯಾಪ್, ರಾಕ್ ಗೀತೆಗಳೂ ಇವೆ. 'ಬಿಜೆಪಿ ಭರವಸೆ' ಶೀರ್ಷಿಕೆ ಅಡಿ ಸಿನಿಮಾ, ಜನಪದ ಗೀತೆಗಳನ್ನು ಸಂಯೋಜಿಸಲಾಗಿದೆ.

ಬಿಜೆಪಿ ಗೀತೆ ಹಾಡಿರುವ ಗಾಯಕರನ್ನು ಧ್ವನಿಯ ಆಧಾರದ ಮೇಲೆ ಗುರುತಿಸಬಹುದು. ಆದರೆ ಸಾಹಿತ್ಯ, ಸಂಗೀತ ಸಂಯೋಜಿಸಿದವರ ಹೆಸರು ಗೋಪ್ಯವಾಗಿವೆ. 'ಖಾಸಗಿ ಏಜೆನ್ಸಿಯೊಂದು ಗೀತೆಗಳನ್ನು ರೂಪಿಸುತ್ತಿದೆ. ನಾವು ವಿಷಯ ಕೊಡುತ್ತೇವೆ. ಎಲ್ಲವನ್ನೂ ಏಜೆನ್ಸಿಯವರೇ ಮಾಡಿಕೊಡುತ್ತಾರೆ' ಎಂದು ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ನಿತಿನ್ ರಾಜ್ ತಿಳಿಸಿದರು.

ಮುನ್ನೋಟ 16-04-2023 ರಿಂದ 22-04-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಸಹೋದ್ಯೋಗಿಯ ಸಲಹೆ ಅತಿ ಸೂಕ್ತವಾಗಿದ್ದು, ಅದರಂತೆ ನಡೆದು ವ್ಯವಹಾರದಲ್ಲಿ ಸ್ವಲ್ಪ ಮಟ್ಟಿನ ಲಾಭವನ್ನು ಕಾಣುವಿರಿ. ಧಾರ್ಮಿಕ ಕೆಲಸಗಳನ್ನು ಹೆಚ್ಚು ಆಸಕ್ತಿ ಮೂಡಿ ಅದರಲ್ಲಿ ಸ್ವಲ್ಪ ಸಂಪಾದನೆ ಕೂಡ ಆಗುತ್ತದೆ. ತಾಂತ್ರಿಕ ವಿಷಯಗಳ ಸಲಹೆಗಾರರಿಗೆ ಹೆಚ್ಚಿನ ಮನ್ನಣೆ ದೊರೆಯುತ್ತದೆ. ರಾಜಕೀಯ ಚಟುವಟಿಕೆಯಲ್ಲಿರುವವರು ತಮ್ಮ ವೈಯಕ್ತಿಕ ನಡವಳಿಕೆ ಬಗ್ಗೆ ಹೆಚ್ಚು ಎಚ್ಚರ ವಹಿಸಬೇಕು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಉದ್ಯೋಗಕ್ಕೆ ಸಂಬಂಧಿಸಿದಂತೆ ಹೊಸ ಜನರ ಸಂಪರ್ಕ ದೊರೆತು ಉದ್ಯೋಗ ಅಭಿವೃದ್ಧಿಯಾಗುತ್ತದೆ. ಚರ್ಮದ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ವ್ಯಾಪಾರ ಹೆಚ್ಚುತ್ತದೆ. ಕೌಟುಂಬಿಕವಾಗಿ ಇದ್ದ ಕ್ಲೇಶಗಳು ದೂರವಾಗುತ್ತವೆ. ವೈಯಕ್ತಿಕವಾಗಿ ಶುಭ ಸಮಾಚಾರಗಳನ್ನು ಕೇಳುವ ಯೋಗವಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಈ ಹಿಂದೆ ತೆಗೆದುಕೊಂಡಿದ್ದ ನಿರ್ಧಾರ ಸರಿ ಎಂದು ಈಗ ತಿಳಿಯುತ್ತದೆ. ಖಾಸಗಿ ಉದ್ಯೋಗಿಗಳು ತಮ್ಮ ಆದಾಯ ಏರಿಕೆ ವಿಚಾರವನ್ನು ಮೇಲಧಿಕಾರಿಗಳಲ್ಲಿ ಪ್ರಸ್ತಾಪಿಸಬಹುದು. ವಿವಾಹ ಯೋಗ್ಯರಿಗೆ ಶೀಘ್ರ ಸಂಬಂಧ ದೊರೆಯುವ ಸಾಧ್ಯತೆ ಇದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಗಣಿತದಲ್ಲಿ ಪರಿಣತಿ ಹೊಂದಿರುವವರಿಗೆ ವಿದೇಶಿ ಕಂಪನಿಗಳಲ್ಲಿ ಉತ್ತಮ ಸ್ಥಾನ ಸಿಗುತ್ತದೆ. ಸಂದರ್ಶನಗಳಲ್ಲಿ ಧೈರ್ಯವಾಗಿ ಉತ್ತರಿಸಿದಾಗ ಯಶಸ್ಸು ನಿಮ್ಮೊಡನೆ ಇರುತ್ತದೆ. ಆರ್ಥಿಕ ಸ್ಥಿತಿಯು ಮಧ್ಯಮಗತಿಯಲ್ಲಿರುತ್ತದೆ. ದೊಡ್ಡಮಟ್ಟದ ವ್ಯವಹಾರ ನಡೆಸುವವರಿಂದ ಪಾಲುದಾರಿಕೆಗೆ ಕರೆ ಬರಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಹಳೆಯ ವಾಹನವನ್ನು ಮಾರಾಟ ಮಾಡುವವರಿಗೆ ಸ್ವಲ್ಪ ಅಭಿವೃದ್ಧಿ ಇದೆ. ಮೂಳೆ ನೋವುಗಳಿಗಾಗಿ ಚಿಕಿತ್ಸೆ ಪಡೆಯುವಿರಿ. ಧನಾದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಕೃಷಿಕರಿಗೆ ಹೆಚ್ಚಿನ ಲಾಭವಿರುತ್ತದೆ. ಸ್ವಂತ ಉದ್ದಿಮೆಗಾರರಿಗೆ ತಮ್ಮ ಕಾರ್ಯ ಕ್ಷೇತ್ರವನ್ನು ವಿಸ್ತರಿಸುವ ಯೋಗವಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ತಾಂತ್ರಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ದಂಡ ಕಟ್ಟುವ ಪರಿಸ್ಥಿತಿ ಎದುರಾಗಬಹುದು. ಹಿತ್ತಾಳೆ ತಾಮ್ರ ಮುಂತಾದ ಲೋಹಗಳ ಆಲಂಕಾರಿಕ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ವ್ಯಾಪಾರ ವಿಸ್ತರಿಸಿ ಲಾಭ ಹೆಚ್ಚುತ್ತದೆ. ಶುಭ ಕಾರ್ಯಗಳನ್ನು ಆಯೋಜಿಸುವವರಿಗೆ ಉತ್ತಮ ಮಾರುಕಟ್ಟೆ ದೊರೆಯುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಔಷಧಿ ವ್ಯಾಪಾರಿಗಳಿಗೆ ಹೆಚ್ಚು ವ್ಯವಹಾರವಾಗುವ ಸಾಧ್ಯತೆ ಇದೆ. ಸರಕು ಸಾಗಣೆ ಮಾಡುವವರ ಆದಾಯ ಹೆಚ್ಚಾಗಲಿದೆ. ಕಾರ್ಯ ಒತ್ತಡದಿಂದ ವೃತ್ತಿಯಲ್ಲಿ ಸರಿಯಾಗಿ ಕೆಲಸ ಮಾಡಲು ಆಗುವುದಿಲ್ಲ. ಕಬ್ಬಿಣ ಮತ್ತು ಸಿಮೆಂಟ್ ವ್ಯಾಪಾರಿಗಳಿಗೆ ಹೆಚ್ಚಿನ ವ್ಯವಹಾರವಾಗುತ್ತದೆ. ಅತಿ ಉತ್ಸಾಹದಿಂದ ಶುರು ಮಾಡಿದ ಕೆಲಸಗಳು ನಿಲ್ಲುವ ಸಂದರ್ಭಗಳಿವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ನ್ಯಾಯಾಲಯದಲ್ಲಿ ಇದ್ದ ಸಮಸ್ಯೆಗಳಿಗೆ ಈಗ ಉತ್ತರ ಸಿಗುತ್ತದೆ. ಕುಶಲಕರ್ಮಿಗಳಿಗೆ ವಸ್ತುಗಳ ಪ್ರದರ್ಶನ ಮತ್ತು ಮಾರಾಟದಿಂದ ಆದಾಯ ಸ್ವಲ್ಪ ಹೆಚ್ಚುತ್ತದೆ. ಆಹಾರ ಪದಾರ್ಥಗಳನ್ನು ತಯಾರಿಸಿ ಮಾರುವವರಿಗೆ ಹೆಚ್ಚು ವ್ಯವಹಾರವಾಗುತ್ತದೆ. ರಾಜಕಾರಣಿಗಳ ಒಳ ವ್ಯವಹಾರಗಳು ಬಯಲಾಗಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮ ಸರಳ ವ್ಯಕ್ತಿತ್ವ ಗೌರವವನ್ನು ಹೆಚ್ಚಿಸುತ್ತದೆ. ಪೊಲೀಸ್ ಅಧಿಕಾರಿಗಳಿಗೆ ಕೆಲಸದ ಒತ್ತಡ ಹೆಚ್ಚಿಗೆ ಇರುತ್ತದೆ. ಹೂವು ಮತ್ತು ಹಣ್ಣು ಮಾರಾಟ ಮಾಡುವವರಿಗೆ ವ್ಯಾಪಾರ ಹೆಚ್ಚುತ್ತದೆ. ಯಂತ್ರೋಪಕರಣಗಳನ್ನು ರಿಪೇರಿ ಮಾಡುವವರಿಗೆ ಹೆಚ್ಚು ಕೆಲಸಗಳು ದೊರೆಯುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಜೀವನದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಗುಣ ನಿಮಗೆ ಸಿದ್ಧಿಸುತ್ತದೆ. ನಿವೇಶನ ಖರೀದಿಯ ಬಗ್ಗೆ ಮುಂದುವರೆಯುವುದು ಒಳ್ಳೆಯದು. ಸಾಹಿತಿಗಳಿಗೆ ಉತ್ತಮವಾದ ಗೌರವ ದೊರೆಯುವ ಸಂದರ್ಭವಿದೆ. ಕ್ರೀಡಾಪಟುಗಳಿಗೆ ಹೆಚ್ಚಿನ ಪ್ರಗತಿಯನ್ನು ಕಾಣುವ ಯೋಗವಿದೆ. ಸಂಗಾತಿಯು ನಿಮಗೆ ಪೂರಕವಾಗಿ ನಡೆದುಕೊಳ್ಳುತ್ತಾರೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಅಗತ್ಯವಾದ ಕೆಲಸ ಕಾರ್ಯಗಳನ್ನು ಮಾಡಿ ಮುಗಿಸುವುದು ಉತ್ತಮ. ಉದ್ಯೋಗದಲ್ಲಿನ ಬದಲಾವಣೆಗಳು ನಿಧಾನವಾಗಬಹುದು. ಗಣ್ಯ ವ್ಯಕ್ತಿಗಳಿಗೆ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನ ದೊರೆಯುವ ಸಾಧ್ಯತೆ ಇದೆ. ವಕೀಲರಿಗೆ ಹೆಚ್ಚು ದಾವೆಗಳು ದೊರೆತು ಆದಾಯ ಹೆಚ್ಚುತ್ತದೆ. ವೃತ್ತಿಯಲ್ಲಿ ಅಭಿವೃದ್ಧಿ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ದಾಂಪತ್ಯ ಜೀವನದಲ್ಲಿ ತಾಳ್ಮೆಯಿಂದ ಮುನ್ನಡೆಯುವುದು ಮುಖ್ಯ. ಎಣ್ಣೆ ಕಾಳುಗಳ ಬೆಳೆಗಾರರಿಗೆ ಉತ್ತಮ ಫಸಲು ಬರುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಬೇಕಾದ ಪೂರಕ ವಾತಾವರಣಗಳು ದೊರೆಯುತ್ತವೆ. ಅತಿಯಾದ ಖರ್ಚು ಆರ್ಥಿಕ ಏರಿಳಿತಕ್ಕೆ ಕಾರಣವಾಗಬಹುದು.

ಪದಬಂಧ 2785



ಮೇಲಿಂದ ಕೆಳಕ್ಕೆ

1.ಮಂದಿಯನ್ನು ಗೆದ್ದ ಸರ್ಪಯಜ್ಞದ ಕುರುವಂಶ ರಾಜ 5
2. ಸೂರ್ಯವಂಶದ ಶ್ರೇಷ್ಠನಾದ ದಶರಥಾತ್ಮಜನನ್ನು ಹಾಡಲ್ಲಿ ಹೀಗೆ ಸ್ಮರಣೆ 4
3. ಕುಂಕುಮದ ಜೊತೆ ಶೋಭಿಸುವ ಅರಿಶಿನ 3
4. ವಿಷ್ಣು ವಾಹನ ಖಗದ ಪತಾಕೆ 5
6. ರಾರಾಜಿಸುವ ಕೊಡಗಿನ ವೀರರ ಶಹರು 5
8. ಎಲ್ಲಿ ನೋಡಿದರು ಬಂಗಾರವೇ! 3
10. ನಮ್ಮ ಕಾಲದ ಯುಗಪುರುಷನ ಸಂಚಾರ ಸಾಧನ 5
12. ಎಲ್ಲರಿಂದ ಒಪ್ಪಿಗೆ ಪಡೆದು ಸೇರಿಸಿದ ಸಹಿಗಳ ಒಟ್ಟಿಲು 5
14. ಇದೀಗ ಎಲ್ಲವನ್ನು ಕೂಡಿ ಕಳೆವ ಯಂತ್ರ 3
15. ಗಳಿಕೆಯ ಮಂದಿಗೆ ಕಲಿಕೆಯ ಅವಕಾಶ ಕಲ್ಪಿಸುವ ಹಗಲಿನಂತರದ ಮಹಾವಿದ್ಯಾಲಯ 5
17. ಉತ್ತಮರಲ್ಲಿ ಉತ್ತಮ 4
19. ವೀರಗಾಥೆಯ ಜಾನಪದ ಹಾಡು 3

ಎಡದಿಂದ ಬಲಕ್ಕೆ

1.ಯಶೋದೆ ಆಡಿಸಿದ ವಿಶ್ವದ ಮಹಾ ಚೇತನ 5
3. ಗಿಡ ಮರಗಳಿಂದ ಹಬ್ಬಿ ಹರಡಿರುವ ಬಣ್ಣ 3
4. ಹಕ್ಕಿಗೆ ಹಾರಲು ಕಲಿಸುವ ರೆಕ್ಕೆ 2
5. ಮೇ ತಿಂಗಳಲ್ಲಿ ಧಾವಿಸಿ ಬರುವ ಮೆದುಳು ಶಕ್ತಿಯ ಬುದ್ದಿ ಜೀವಿ 3
7. ಉಗ್ರಶಿವನ ದುರಂತ ರಂಗ ಪ್ರದರ್ಶನ 5
9. ಅರಸರಲ್ಲಿ ಅರಸನಾದವನಿಗೆ ಸೂರ್ಯ ಸಮಾನನೆಂಬ ಪರಾಕು 5
10. ಕಲ್ಲು ಹೃದಯದ ಕಸಾಯಿಖಾನೆಯ ನಿರ್ದಯಿ 3
11. ಪತ್ರಿಕೆಯ ಆಂಗ್ಲ ರೂಪ 3
13. ವಿಶ್ವದ ಮಾತೆಲ್ಲಾ ಆಡುವ ಮನೆ ಮುಂದಿನ ಕಟ್ಟೆ 3
14. ಕಿವಿಗೆ ಅಹಿತವಾದ ಗದ್ದಲ 3
16. ಮೃಗರಾಜನಂತೆ ಯುದ್ಧದ ರಾಜ ಈ ಕೇಸರಿ 5
18. ಹಸ್ತದಲ್ಲಿ ಲಕ್ಷ್ಮೀ ಗೌರಿಯರ ಮೂಲ ಮತ್ತು ಅಗ್ರ ಸ್ಥಾನಗಳು ಒಂದಾದಾಗ ಹೀಗಾಗಬಹುದೆ 5
20. ಮಾನವ ಅನುಭವಿಸಬೇಕಾದ ನಾಕದ ವ್ಯತಿರಿಕ್ತ ಸ್ಥಿತಿ ದೀರ್ಘ ಪಡೆದಿದೆ 3
21. ವರ್ಚಸ್ಸಿನಿಂದ ಬೀಸಬಹುದಾದ ಗಾಳಿ ಹಿಂದು ಮುಂದಾಗಿದೆ 2
22. ಕರುಣೆಯೇ ಮೂರ್ತವೆತ್ತ ಭಗವಂತ 3
23. ಭೂಮಿನ್ ತಬ್ಬಿದ್ ಮೋಡದಂತೆ ಕೊಡಗಿನ ಪಟ್ಟಣವನ್ನು ಒತ್ತರಿಸಿ ಆವರಿಸಿರುವ ಇಬ್ಬನಿ 5

ಪದಬಂಧ ಉತ್ತರ -2784

ಮೇಲಿಂದ ಕೆಳಕ್ಕೆ

ಭವ 2.ನಿತ್ಯ 3.ವಾಸು 4.ನಿಜ 5.ಮಾಸಿಕ 7.ಜಿನುಗು 9.ಯಜನ 10.ಸಂತೆ 11.ರಸಂ 12.ಸುತ 13.ಣಗಾ 14.ಜನ 15.ಕವಿ 17.ಗೀಜಗ 19.ಯಮಳ 20.ಹನಿ 21.ಮಂದ 22.ಳಸ್ಥ 23.ಪತಿ 24.ನಿಗಾ 25.ಕಾಲ 27.ನಾಸಿಕ 29.ಪರದ 31.ವಿಜೇತ 33.ರುದ್ರ 34.ಬಡ 35.ನೆಲ 36.ತಾಣ

ಎಡದಿಂದ ಬಲಕ್ಕೆ

ಭವಾನಿ 3.ವಾಸಿನಿ 5.ಮಾವ 6.ತ್ಯಜಿಸು 8.ಜಯ 10.ಸಂಕರ 12.ಸುಗುಣ 14.ಜನಕ 16.ಮಂಗಳ 23.ಪಳನಿ 26.ನಿನಾದ 28.ಸ್ಥಪತಿ 30.ಗಾವಿಲ 32.ಕರು 34.ಬದನೆ 36.ತಾತ 37.ದ್ರವಿಡ 38.ಲಕ್ಷ್ಮಣ

ಸದಾ ನಮ್ಮೊಡನೆ ಶೇಕ್ಸ್‌ಪಿಯರ್

ನೆನಪು

ಶ್ಯಾಮಲಾ ಗುರುಪ್ರಸಾದ್

ಮೈಕೇಲ್ ಆಂಜೆಲೋ ನವೋದಯ ಕಾಲದ ಇಟಲೀ ದೇಶದ ಅಪ್ರತಿಮ ಕಲಾವಿದ. ಅವನ ಕಲಾಕೃತಿಗಳು ಇಂದಿಗೂ ನೋಡುಗನನ್ನು ಬೆರಗುಗೊಳಿಸುತ್ತದೆ. ಸಂತಸ ಮೂಡಿಸುತ್ತದೆ. 1564ರ ಫೆಬ್ರುವರಿ ಹದಿನೆಂಟು ಮೈಕೇಲ್ ಆಂಜೆಲೊ ಮರಣ ಹೊಂದಿದ ದಿನ.

ಪ್ರಕೃತಿ 1564ರಲ್ಲಿಯೇ ಯುರೋಪಿನ ಮತ್ತೊಂದು ದೇಶದಲ್ಲಿ, ಇನ್ನೊಬ್ಬ ಕಲಾವಿದನ ಅನಾವರಣಕ್ಕಾಗಿ ಗಳಿಗೆ ಎಣಿಸುತ್ತಿತ್ತು. 1564, ಏಪ್ರಿಲ್ 26ರಂದು ಲಂಡನ್ ಸಮೀಪದ ಸ್ಟ್ರಾಟ್‌ಫೋರ್ಡ್ ಅಪ್ ಆನ್ ಆವೊನ್‌ನಲ್ಲಿ ಶೇಕ್ಸ್‌ಪಿಯರ್ ಎಂಬ ಅಚ್ಚರಿಗೆ ಬಳುವಳಿ ನೀಡಿತು. ಇಂಗ್ಲೆಂಡ್ ಜನರಲ್ಲಿ ನಾಟಕಕಾರನ ಕೃತಿಗಳು ತಮ್ಮ ಭಾಷೆಯಲ್ಲಿವೆ ಎಂಬ ಗರ್ವವಿದೆ. ಈ ಮೂಲಸತ್ಯವೇ, ಅವನು ಇಂದಿಗೂ ಚರ್ಚಿತನಾಗಿದ್ದಾನೆ. ಆಂಗ್ಲ ಭಾಷೆ ಬಲ್ಲವರು ಅವನತ್ತ ಹೆಜ್ಜೆ ಹಾಕಬಹುದು. ಭಾಷಾಂತರಿಸಬಹುದು. ವಿಮರ್ಶಿಸಬಹುದು.

> ವಿಲಿಯಂ ಶೇಕ್ಸ್‌ಪಿಯರ್ ಹುಟ್ಟಿದ್ದು, ಅಗಲಿದ್ದು ಏಪ್ರಿಲ್ ತಿಂಗಳಿನಲ್ಲಿಯೇ. ತನ್ನ ಕೃತಿವೈವಿಧ್ಯದಿಂದಲೇ ಕಾಲಾತೀತವಾಗಿ ಉಳಿದಿರುವ ಈ ಬರಹಗಾರನಿಗೂ ಭಾಷೆಗೂ ಇದ್ದ ಸಂಬಂಧ ಆಸಕ್ತಿಕರ. ಸ್ಟ್ರಾಟ್‌ಫೋರ್ಡ್ ವ್ಯಾಕರಣ ಶಾಲೆಯ ಅಧ್ಯಯನದ ಪ್ರಕ್ರಿಯೆಯೇ ಅದಕ್ಕೆ ಕನ್ನಡಿ ಹಿಡಿಯುತ್ತದೆ.

ಹೆಲೆನ್ ಮಿರ್ರೆನ್ ಲಂಡನ್ನಿನ ಹಿರಿಯ, ಖ್ಯಾತ ನಟಿ. ಆಕೆಯ ಅಂತರ್ಜಾಲದ ಮಾಸ್ಟರ್ ಕ್ಲಾಸುಗಳಿಗೆ ನಾನೊಮ್ಮೆ ಹೆಸರು ನೋಂದಾಯಿಸಿದ್ದೆ. ಅವರ ಪ್ರಾಸ್ತಾವಿಕ ಭಾಷಣದಲ್ಲಿ, 'ಶೇಕ್ಸ್‌ಪಿಯರ್ ಕುರಿತಾಗಿ ನೀವೇನೂ ಪ್ರಜ್ಞಾಪೂರ್ವಕವಾಗಿ ಆಸಕ್ತರಾಗಬೇಕಿಲ್ಲ. ಆದರೆ ಅವನೇ ನಿಮ್ಮ ಗೋಣು ಹಿಡಿದರೆ, ಆಗ ನಾನೇನೂ ಮಾಡಲಾರೆ' ಎಂದು ಎಚ್ಚರಿಸುತ್ತಾರೆ.

ನಾನು ಬೆಳೆದ ವಾತಾವರಣದಲ್ಲಿ ಶೇಕ್ಸ್‌ಪಿಯರ್ ರಾರಾಜಿಸುತ್ತಿದ್ದ! ನನ್ನ ತಂದೆ ಜಿ.ಕೆ. ಗೋವಿಂದರಾವ್ ಅವರ ನಿತ್ಯ ನಮನಗಳಿಗೆ ಆಶೀರ್ವಚನ ನೀಡುತ್ತಲೇ, ನಮ್ಮ ಮನೆಯಲ್ಲಿ ಗಟ್ಟಿಯಾಗಿ ತಳವೂರಿದ್ದ. ನಾಟಕಕಾರ ನೇರಾನೇರ ಬಿ.ಎ. ತರಗತಿ ಅಂತಿಮ ವರ್ಷದಲ್ಲಿ 'ಮ್ಯಾಕ್‌ಬೆತ್' ಪಠ್ಯರೂಪದಲ್ಲಿ ನನ್ನೆದುರು ಪ್ರಕಟಗೊಂಡಿದ್ದ. ನಂತರ ಅವನನ್ನು ಓದುವ ಅವಕಾಶಗಳು, ಒತ್ತಾಯಗಳು ನನ್ನತ್ತ ಸುಳಿಯಲಿಲ್ಲ.

ಈಗ, ಅಗೋಚರ ಕಿಂಡಿಯಿಂದ ತೂರಿಕೊಂಡು, ಮುನ್ಸೂಚನೆಗಳಿಲ್ಲದೆಯೇ ಒಲಿದು ಬಂದ ದೇವರಂತೆ, ನನ್ನೆದುರಿಗೆ ಧುತ್ತೆಂದು ನಿಂತಿದ್ದಾನೆ. ನಾನೀಗ ನಾಟಕಕಾರನನ್ನು ಮುಖಾಮುಖಿಯಾಗಬೇಕು. ಅವನೆಂದರೆ ತಳಕಾಣದ ಜಗಿತವೆಂದು ಹೆದರಿದ್ದೆ. ಪೀಟರ್ ಆಕ್ರ್ಯಾಡ್ ಬರೆದ ಜೀವನಚರಿತ್ರೆ ಓದಲಾರಂಭಿಸಿದೆ. ಶೇಕ್ಸ್‌ಪಿಯರ್ ಎಂಬ ಮಹಾನ್ ವ್ಯಕ್ತಿ ನನ್ನ ಅನುಭವಕ್ಕೆ ಸಿಗಲಾರಂಭಿಸಿದ. ಇದು ನನ್ನೊಳಗೊಂದು ಅನುದ್ದಿಷ್ಟ ಭಾವ ಸೃಷ್ಟಿಸಿದೆ. ಪೀಟರ್ ಆಕ್ರ್ಯಾಡ್ ಒಂದು ಅಧ್ಯಾಯದಲ್ಲಿ 'ಶೇಕ್ಸ್‌ಪಿಯರ್‌ನಲ್ಲಿ ಭಾಷೆ ಸದಾ ಗುಣುಗುಣುತ್ತಿತ್ತಂತೆ' ಎಂದು ಉದ್ಗರಿಸುತ್ತಾರೆ! ನನಗೆ ಈ ಪದಗುಚ್ಛ ಬಲು ಆಪ್ಯಾಯಮಾನವೆನ್ನಿಸಿ, ಇದನ್ನೇ ವಿಷಯವನ್ನಾಗಿಟ್ಟುಕೊಂಡು ಏನಾದರೂ ಬರೆಯಲೇ ಎನಿಸಿತು. ಶೇಕ್ಸ್‌ಪಿಯರ್‌ನ ಭಾಷೆಯ ಗುಣುಗುಣು ಎಂದರೆ ಪದಕೋಶಗಳ ಗುಂಗಿನಲ್ಲಿದ್ದು ಬಿಡುವುದು. ಹೊಸ ಪದಗಳ ಸಂಶೋಧನೆಯ ಜೊತೆಗೆ ಜಿಜ್ಞಾಸೆ ನಡೆಸುವುದು. ಈ ಗುದ್ದಾಟದಲ್ಲಿ ತನ್ನ ಸ್ವತ್ತಾದ ಪದಗಳನ್ನು ಮನಸೋಇಚ್ಛೆ ಕಿತ್ತು, ಹರಿದು ಮರುಜೋಡಿಸುತ್ತಿದ್ದ. ಭಾಷೆ ಮತ್ತು ಶೇಕ್ಸ್‌ಪಿಯರ್ ಸಂಬಂಧ ರೋಚಕವಾಗಿರುತ್ತಿತ್ತು. ಇಷ್ಟೆಲ್ಲ ಸಾಹಸಗಳ ನಂತರವೂ ತನ್ನ ಕೈಯ್ಯಾರೆ ಸೃಷ್ಟಿಗೊಂಡ ಪದಗುಚ್ಛಗಳನ್ನು ಅನುಮಾನದಿಂದಲೋ, ಅಪನಂಬುಗೆಯಿಂದಲೋ ದೃಷ್ಟಿಸುತ್ತಿದ್ದನಂತೆ. ತನ್ನ ನಾಟಕಗಳ ಭಾವನೆಗಳನ್ನು ಹೊರ ಹಾಕುವಷ್ಟು, ಬಲಶಾಲಿಯಾಗಿಲ್ಲ ಎನ್ನಿಸಿಬಿಡುತ್ತಿತ್ತಂತೆ. ಈ ದ್ವಂದ್ವಗಳನ್ನು ಏನೆಂದು ಕರೆಯೋಣ?

ಭಾಷೆಯಿಂದ ಗಣಿತದ ನಿಖರತೆ ಬೇಡುತ್ತಿದ್ದ. ಅವನ ಮೆದುಳಿಗೆ ಪದಗಳು ಅಂಟಿಕೊಂಡಿರುತ್ತಿದ್ದವು. ಯಾರೋ ಹಿಂದಿನಿಂದ ಗುಮುಕಿದಂತೆ ಶರವೇಗದಲ್ಲಿ ಬರೆಯಬಲ್ಲವನಾಗಿದ್ದ. ಕವಿ ಕೋಲ್‌ರಿಡ್ಜ್ ಶೇಕ್ಸ್‌ಪಿಯರ್‌ನನ್ನು ಹೀಗೆ ವಿವರಿಸುತ್ತಾರೆ: 'ಕತ್ತಲಲ್ಲಿ ಭೂಮಿಗೆ ಬೀಳುವ ಉಲ್ಕೆಯ ವೇಗದಲ್ಲಿ ಅವನಿಂದ ವಾಕ್ಯಗಳು ಒಂದಾದ ನಂತರ ಒಂದರಂತೆ ಹೊರಬರುತ್ತಿದ್ದವು.' ಬೇರೆಯವರು ಸೃಷ್ಟಿಸಿದ ನಾಟಕಗಳು, ಕವನಗಳು, ಭಾಷಣಗಳು, ರಸ್ತೆ ಬದಿಯ ಭಾಷಣಗಳು ಈ ಎಲ್ಲ ಭಾಷಾ ವೈವಿಧ್ಯ ಸದಾ ಅವನನ್ನು ಜಾಗೃತಾವಸ್ಥೆಯಲ್ಲಿ ಇಟ್ಟಿರುತ್ತಿತ್ತು.

ಶೇಕ್ಸ್‌ಪಿಯರ್‌ನ ಏಳು ವರ್ಷಗಳ ಶಿಕ್ಷಣ ಮಟ್ಟ ಹೇಗಿತ್ತೆಂದರೆ, ವಯಸ್ಕ ಬದುಕಿನ ಮಿತಿಗಳು, ಬಾಲ್ಯದಲ್ಲಿದ್ದ ಬಿಡುಗಡೆ ಭಾವ ಕಾಣಿಸದಾದಾಗ, ಅಸಹನೆ, ಅತೃಪ್ತಿ ಉಂಟುಮಾಡುವಷ್ಟು. ಲ್ಯಾಟಿನ್ ಶಾಸ್ತ್ರಬದ್ಧ ಕಲಿಕೆ ಅವನಲ್ಲಿ ಜೀವನಪರ್ಯಂತದ ಪರಿಶ್ರಮದ ಅರಿವು ಮೂಡಿಸಿತ್ತು. ಕ್ಲಿಷ್ಟವಾದ ಲ್ಯಾಟಿನ್ ಕಲಿಕೆಗೆ ವಯಸ್ಸಿಗೂ ಮೀರಿದ ಏಕಾಗ್ರತೆ ಒಟ್ಟುಗೂಡಿಸಿಕೊಂಡು, ಶಾಲಾ ಕಟ್ಟುಪಾಡುಗಳಿಗೆ ಹೆದರುತ್ತಲೆ ತಪಸ್ವಿಯಂತೆ ಮನನ ಮಾಡಿದ. ವಾಕ್ಯರಚನೆ, ಗದ್ಯ ಪದ್ಯಗಳ ಪುನರುಚ್ಚಾರ, ಯಾವ ವಿಶ್ವವಿದ್ಯಾಲಯಕ್ಕೂ ಸ್ಪರ್ಧಿಸುವಂತಿತ್ತು. ಶಾಲೆ, ಮೌಖಿಕ ಸಂಸ್ಕೃತಿಗೆ ಒತ್ತುನೀಡಿತ್ತು. ಮಕ್ಕಳು ಕಥೆಗಳನ್ನು ಕೇಳುವುದು, ಐತಿಹಾಸಿಕ, ಪೌರಾಣಿಕ ನಾಟಕಗಳನ್ನು ನೋಡುವುದು ಕಡ್ಡಾಯವಾಗಿತ್ತು. ಆಲಂಕಾರಿಕ ಭಾಷೆ, ವಾಕ್ಚಾತುರ್ಯ ಕಲಿಕೆ ಇವೆಲ್ಲದಕ್ಕೂ ಕಲಶಪ್ರಾಯವಾಗಿತ್ತು. ಆಗಿನಿಂದಲೇ ಮೋಹಕ ಶೈಲಿಯಲ್ಲಿ ನಾಟಕಗಳಿಗೆ ಸಂಭಾಷಣೆ ಬರೆಯುತ್ತಿದ್ದ. ವ್ಯಾಕರಣ ಶಾಲೆಯ ವಿಷಯಗಳು ಸೃಜನಶೀಲ ವ್ಯಕ್ತಿತ್ವ ವಿಕಸಕ್ಕೆ ದಾರಿ ತೋರುವಂಥವು. ಶೇಕ್ಸ್‌ಪಿಯರ್ ಒಬ್ಬನೇ ಶಾಲೆಯ ನಟನೆಯ ಸಂಸ್ಕಾರವನ್ನು ಜೀವನದ ಕೊನೆತನಕ ಆದರದಿಂದ ಕಾಯ್ದುಕೊಂಡವನು. ಸ್ಟ್ರಾಟ್‌ಫೋರ್ಡ್ ವ್ಯಾಕರಣ ಶಾಲೆ ಸ್ಥಾಪನೆಗೊಂಡದ್ದೇ ಅವನಿಗಾಗಿ ಎಂಬಂತೆ ಅನ್ನಿಸಿಬಿಡುತ್ತದೆ.

ಜಾನ್ ಆಬ್ರೇ, ಪ್ರಾಚೀನ ಅನ್ವೇಷಕ. ಶೇಕ್ಸ್‌ಪಿಯರ್ ಮರಣದ ನಲ್ವತ್ತು ವರ್ಷಗಳ ಬಳಿಕ ಸ್ಟ್ರಾಟ್‌ಫೋರ್ಡ್‌ಗೆ ಭೇಟಿ ನೀಡಿದ್ದ. ಐದು ವರ್ಷದ ಬಾಲಕ ಅವನಪ್ಪನ ವಧಾಗೃಹದಲ್ಲಿ ಗೆಳೆಯರ ಸಮ್ಮುಖದಲ್ಲಿ, ನಾಟಕೀಯ ರೀತಿಯಲ್ಲಿ ಕರುವಿನ ಹತ್ಯೆಗೈದಿದ್ದ. ನಂತರ ಒಂದು ಮನೋಜ್ಞವಾದ ಭಾಷಣ ಮಾಡಿದ್ದ. ಘಟನೆಯನ್ನು ನೆನೆದ ಗೆಳೆಯರು ತಮ್ಮ ಹಳ್ಳಿ ಒಂದು ಅನನ್ಯ ಪ್ರತಿಭೆಗೆ ಜನ್ಮನೀಡಿದೆಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದರು. ಚಾರ್ಲ್ಸ್ ಡಿಕನ್ಸನ್‌ನ ವಿಶ್ಲೇಷಣೆಯಲ್ಲಿ ಆತನಿಗೆ ನಟನೆ ಎಂಬುದು ನಾಟಕೀಯತೆ ಅಥವಾ ಪ್ರದರ್ಶನವಾಗಿರದೇ ಸಹಜ ಪ್ರತಿಕ್ರಿಯೆಯೇ ಆಗಿರುತ್ತಿತ್ತು. ಮುಂದುವರೆಯುತ್ತಾ ಹೀಗೆ ಅಭಿವ್ಯಕ್ತಗೊಳಿಸಿಕೊಳ್ಳುವ ಹಂಬಲ ಯಾವುದೋ ಅದೃಶ್ಯ ಸರಪಳಿಗಳಿಂದ ಬಿಡುಗಡೆ ಹೊಂದಬೇಕೆನ್ನುವ ಶಕ್ತಿಯುತವಾದ, ಆಸಕ್ತಿಕರವಾದ ಸ್ಥಿತಿ ನಿರ್ಮಾಣ ಮಾಡುತ್ತದೆ ಎನ್ನುತ್ತಾರೆ.

ಶೇಕ್ಸ್‌ಪಿಯರ್‌ನ ಸ್ವಚ್ಛಂದ ಬದುಕಿನ ಒಲವು, ಪಕ್ಷಿ-ಕಾನನದ ಗುಣಸೂಚಕವಾಗಿರುತ್ತದೆ. ಪ್ರಕೃತಿರಮ್ಯ ಹಳ್ಳಿಯಲ್ಲಿ ಜನಿಸಿದ ನಾಟಕಕಾರನ ಬೆಳವಣಿಗೆಯಲ್ಲಿ ಪರಿಸರದ ಪ್ರಭಾವ ಸಹಜವಾಗಿ ಮಿಶ್ರಗೊಂಡಿತ್ತು. ಪಕ್ಷಿಗಳ ಒಂದು ಕೂಗು, ಒಂದು ಧ್ವನಿ, ರೆಕ್ಕೆಗಳ ಬಡಿತ, ಬಾನಲ್ಲಿ ಹಾರಾಟ ತನ್ನೊಳಗೆ ಅನೂಹ್ಯ ರೀತಿಯಲ್ಲಿ ದಾಖಲಿಸಿಕೊಳ್ಳತೊಡಗಿದ್ದ. ಅವನ ನಾಟಕಗಳ ದಿವ್ಯ ಸೌಂದರ್ಯದ ಹಿನ್ನೆಲೆ, ಅವನು ಪ್ರಕೃತಿಯಿಂದ ಪಡೆದ ಜ್ಞಾನದ ಗುರುತು. ಶಾಲಾ ಶಿಕ್ಷಣಕ್ಕಿಂತಲೂ ಅಮೂಲ್ಯವಾದ ಗ್ರಹಿಕೆಯಿದು. ಅವನ ನಾಟಕಗಳಲ್ಲಿ ಕಾಣುವ ಮನುಷ್ಯನ ಅಂತಃಶಕ್ತಿಯ ಜಗಿತದಲ್ಲಿ, ಶೇಕ್ಸ್‌ಪಿಯರ್‌ನ ಕಲ್ಪನಾಶಕ್ತಿ, ಜ್ಞಾನಸಂಪತ್ತು ಗೋಚರಿಸುತ್ತದೆ. ಅದೊಂದು ವ್ಯಕ್ತಿಗತವಲ್ಲದ, ಆಳವಾದ ಪ್ರಬುದ್ಧಕಲೆ ಎಂದು ತಜ್ಞರು ಬಣ್ಣಿಸುತ್ತಾರೆ. ಹದಿನೆಂಟನೇ ಶತಮಾನದ ವಿಮರ್ಶಕರು ಶೇಕ್ಸ್‌ಪಿಯರ್‌ನನ್ನು ಪ್ರಕೃತಿಯ ಬಂಧು ಎಂದು ಉಲ್ಲೇಖಿಸುತ್ತಾರೆ.

ಹದಿನಾರನೇ ಶತಮಾನದ ಇಂಗ್ಲೆಂಡಿನಲ್ಲಿ ಜನರ ಆಯುಷ್ಯ ನಲವತ್ತು, ನಲವತ್ತೈದು, ದಾಟುತ್ತಿರಲಿಲ್ಲ. ಶೇಕ್ಸ್‌ಪಿಯರ್ ಸಹ ಅಲ್ಪಾಯುಷಿ ಆಗಿದ್ದ. ತನ್ನ 52ನೇ ವಯಸ್ಸಿನಲ್ಲಿ ಮರಣ ಹೊಂದಿದ. ನಾಟಕಕಾರನ ಜನನವು 1564ರ ಏಪ್ರಿಲ್ 26ರಂದು ನಡೆದರೆ, ಕಾಕತಾಳೀಯವೆಂಬಂತೆ ಏಪ್ರಿಲ್ ಇಪ್ಪತ್ಮೂರು 1916ರಂದು ಕಾಲವಾದನು. ಶೇಕ್ಸ್‌ಪಿಯರ್‌ನನ್ನು ಭೂಮಿಗೆ ಉಡುಗೊರೆ ನೀಡಿದ್ದ ಸೃಷ್ಟಿ ಅವನನ್ನು ಇನ್ನಷ್ಟು ಕಾಲ ಬದುಕಿ, ಬಾಳಿಸಲು ಉದಾಸೀನಗೊಂಡಿತು. ಯಾವುದೋ ತರಾತುರಿಗೆ ಬಿದ್ದಂತೆ ನಾಟಕಕಾರನಿಗೆ ಅಂತ್ಯ ಕಾಣಿಸಿತು. ಸೃಷ್ಟಿ ಹಾಗೂ ಶೇಕ್ಸ್‌ಪಿಯರ್ ಕೊಡು-ಕೊಳ್ಳುವಿಕೆಯಲ್ಲಿ ಕಡೆಯ ನಗು ಶೇಕ್ಸ್‌ಪಿಯರ್‌ನದು. ಶತಮಾನದಿಂದ ಶತಮಾನಕ್ಕೆ ನಾಟಕಕಾರ, ಓದುಗನಲ್ಲಿ ಕೌತುಕ ಹುಟ್ಟಿಸುತ್ತಲೇ ಇದ್ದಾನೆ. ಅವನ ಸಮಗ್ರ ನಾಟಕಗಳು ಸೃಷ್ಟಿಸಿರುವ ಮನುಷ್ಯ ಸಂಬಂಧಗಳ ಅಮೂರ್ತ ಕಲ್ಪನೆಗಳಿಗೆ ತಜ್ಞರು ಅರ್ಥ ಹುಡುಕುತ್ತಲೇ ಇದ್ದಾರೆ.

ಒಳನೋಟ

ಆಹಾರ ಸಂಸ್ಕೃತಿಯ ಲವಲವಿಕೆಯ ನಿರೂಪಣೆ

ಆಹಾರ ಸಂಸ್ಕೃತಿ ವ್ಯಾಪಕವಾದದ್ದು. ಅದರ ಕುರಿತು ತರಹೇವಾರಿ ಕೃತಿಗಳು ಬಂದಿವೆ. ಖಾದ್ಯ ಮಾಡುವುದು ಹೇಗೆ ಎನ್ನುವ ಬಗೆಗಂತೂ ಓತಪ್ರೋತವಾಗಿ ಲೇಖನಗಳು ಪ್ರಕಟವಾಗುತ್ತವೆ. ಜನಾನುಕೂಲಕ್ಕೆ ಇಂತಹ ಬರವಣಿಗೆ ಮುಖ್ಯವೇನೋ ಹೌದು. ಆದರೆ, ಆಹಾರ ಸಂಸ್ಕೃತಿ ಹಾಗೂ ಖಾದ್ಯ ವೈವಿಧ್ಯವನ್ನು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ನೋಡುತ್ತಲೇ, ಲವಲವಿಕೆಯಿಂದ ಬರೆಯುವವರು ವಿರಳ. ಪ್ರೊ.ಕೆ.ಈ. ರಾಧಾಕೃಷ್ಣ ಅವರ 'ಊಟಾ...ಹಾರ' ಕೃತಿಯು ಈ ದೃಷ್ಟಿಯಿಂದ ಅಪರೂಪದ್ದು.

ಲಘು ಧಾಟಿಯಲ್ಲಿ ಅವರು ಇಲ್ಲಿನ ಬರಹಗಳಿಗೆ ಪ್ರವೇಶಿಕೆಯೊಂದನ್ನು ಕಲ್ಪಿಸುತ್ತಾರಾದರೂ, ಅವುಗಳಲ್ಲಿ ಭರಪೂರ ಮಾಹಿತಿಯೂ ಅಡಕವಾಗಿರುವುದು ಗಮನಾರ್ಹ. ಏಳು ಭಾಗಗಳಾಗಿ ಅವರು ಮೂವತ್ತೆಂಟು ಲೇಖನಗಳನ್ನು ವರ್ಗೀಕರಿಸಿದ್ದಾರೆ. 'ನನ್ನಗೀತೆ-ಧರ್ಮಗೀತೆ', 'ಮೂಲಧಾರ-ಮೂಲಾಹಾರ', 'ನಿತ್ಯಾನಂದಕರೀ-ಬಲಕರೀ', 'ಪಿಬರೇ ಆನಂದರಸಮ್'... ಹೀಗೆ ಅಧ್ಯಾಯಗಳಿಗೆ ಅವರು ಶೀರ್ಷಿಕೆ ನೀಡಿರುವುದರಲ್ಲೇ ಓದಿಸಿಕೊಳ್ಳುವ ಗುಣವನ್ನು ದಕ್ಕಿಸಿಕೊಡಬೇಕೆಂಬ ಉಮೇದು ಸ್ಪಷ್ಟ.

ಮೊದಲ ಭಾಗದಲ್ಲಿ ವಿವಿಧ ಧರ್ಮಗಳಲ್ಲಿ ಅನ್ನಾಹಾರದ ಕುರಿತ ಉಲ್ಲೇಖಗಳನ್ನು ಬಳಸಿಕೊಂಡು ರಾಧಾಕೃಷ್ಣ ಅವರು ಲೇಖನಗಳನ್ನು ಬರೆದಿದ್ದಾರೆ. ಸ್ತೋತ್ರಗಳು, ಬೈಬಲ್‌ನಲ್ಲಿನ ಉಲ್ಲೇಖಗಳು, ಇಸ್ಲಾಂ ಧರ್ಮ ಯಾವ್ಯಾವುದನ್ನು ಪವಿತ್ರ ಆಹಾರ ಎನ್ನುತ್ತದೆ ಎನ್ನುವುದರ ಪ್ರಸ್ತಾಪ, ಜೈನಾಹಾರ ಹೇಗಿರುತ್ತದೆ ಎನ್ನುವ ಒಳನೋಟ ಎಲ್ಲವನ್ನೂ ಒಳಗೊಂಡ ಭಾಗವು ಲಘು ಧಾಟಿಯ ಬರಹಗಳಲ್ಲೂ ಇರುವ ಅಧ್ಯಯನಶೀಲ ಗುಣವನ್ನೂ ಅನಾವರಣಗೊಳಿಸುತ್ತದೆ.

ಸಾಂಪ್ರದಾಯಿಕ ತಿನಿಸುಗಳು, ಆಹಾರ ಪದ್ಧತಿಯಷ್ಟೇ ಅಲ್ಲದೆ ಈ ಕಾಲದ ಪಿಡ್ಜಾ ಕುರಿತಂತೆ ಆಸಕ್ತಿಕರ ಲೇಖನವೊಂದು ಕೃತಿಯಲ್ಲಿದೆ. ಅದರಲ್ಲಿ ಬರುವ ಈ ಪ್ಯಾರಾ ಗಮನಿಸೋಣ: 'ಎರಡನೇ ಮಹಾಯುದ್ಧದ ಸಂದರ್ಭ, 'ಮಿತ್ರಸೈನ್ಯ'ಗಳು ಇಟಲಿಯಲ್ಲಿ ಬೀಡುಬಿಟ್ಟ ಬಳಿಕ, ಕಾಳಗದ ಮಧ್ಯೆಯೂ ಸುಲಭವಾಗಿ ತಿನ್ನಬಲ್ಲ ಈ ಪಿಜ್ಜಾ ಸೈನಿಕರಿಗೆ ಪ್ರಿಯವಾಯಿತು. ಯುದ್ಧಾನಂತರ ಇಟಲಿಯೇತರರೂ, ಪಿಜ್ಜಾವನ್ನು ಬೇಂಡ್ ಬಾಜಾದೊಂದಿಗೆ ಪಲ್ಲಕ್ಕಿ ಮೆರವಣಿಗೆ ಮಾಡಿದರು'.

ತಿನಿಸೊಂದರ ವ್ಯಾಪಕತೆಯ ಬೀಜವನ್ನು ಹುಡುಕುವ ಇಂತಹ ಪ್ರಯತ್ನಗಳು ಪುಸ್ತಕದಲ್ಲಿ ಢಾಳಾಗಿ ಕಾಣುತ್ತವೆ. ಕವಿವಾಣಿ, ಸ್ತೋತ್ರ, ನುಡಿಗಟ್ಟುಗಳ ಬಳಕೆ, ಪದಗಳ ಚಮತ್ಕಾರ ಎಲ್ಲವೂ ಇರುವುದರಿಂದ ಒಳ್ಳೆಯ ಓದನ್ನು ದಕ್ಕಿಸಿಕೊಡುತ್ತದೆ. ಕಾಯಿಪಲ್ಲೆಗಳ ಪ್ರಸ್ತಾಪ ಮಾಡುವ ಬರಹಗಳಲ್ಲದೆ, ಪಾಶ್ಚಿಮಾತ್ಯ ದೇಶಗಳಿಂದ ಬಂದ ಕೇಕ್ ಮತ್ತಿತರ ತಿನಿಸುಗಳ ಆಕಸ್ತಿಕರ ಮಾಹಿತಿಯೂ ಇದರಲ್ಲಿದೆ.



ಪು: 260 ₹300

ಊಟಾ...ಹಾರ
ಲೇ: ಪ್ರೊ.ಕೆ.ಈ.ರಾಧಾಕೃಷ್ಣ
ಪ್ರ: ಸಪ್ನ
ಪು:300
ಬೆ:₹295
ಸಂ.: 080 40114455

ಹಕ್ಕಿಗಳ ವಲಸೆ...

ಕೊರಳಪಟ್ಟಿ ಇದ್ದ ಪಟ್ಟೆ ಹೆಬ್ಬಾತು

9ನೇ ಪುಟದಿಂದ

ವಲಸೆ ಅಧ್ಯಯನದ ಬಗೆ: ವಲಸೆ ಹಕ್ಕಿಗಳ ಸೋಜಿಗದ ಜೀವನಕ್ರಮವನ್ನು ಅಧ್ಯಯನ ಮಾಡಲು ವಿಶ್ವದಾದ್ಯಂತ ವಿಜ್ಞಾನಿಗಳು ಅವಿರತವಾಗಿ ತೊಡಗಿಸಿಕೊಂಡಿದ್ದಾರೆ. ವಿಶ್ವದ ಪ್ರತಿಷ್ಠಿತ ವೈಜ್ಞಾನಿಕ ಮತ್ತು ವನ್ಯಜೀವಿ ಸಂಶೋಧನಾ ಸಂಸ್ಥೆಗಳು ವಲಸೆ ಅಧ್ಯಯನಕ್ಕೆ ಉನ್ನತಮಟ್ಟದ ಸಂಶೋಧನಾ ಉಪಕರಣಗಳನ್ನು ಅಭಿವೃದ್ಧಿಪಡಿಸಿವೆ. ಈ ಮೊದಲು ಹಕ್ಕಿಗಳ ಕಾಲಿಗೆ ಸಂಕೇತಾಕ್ಷರವಿರುವ ಉಂಗುರ ತೊಡಿಸಲಾಗುತ್ತಿತ್ತು. ಇದನ್ನು 'ರಿಂಗಿಂಗ್' ಎನ್ನುವರು. ದೊಡ್ಡ ಹಕ್ಕಿಗಳಲ್ಲಿ ಕುತ್ತಿಗೆಗೆ ಹಾಕುವ ಪಟ್ಟಿ ತಯಾರಾಯಿತು. ಇತ್ತೀಚಿನ ವರ್ಷಗಳಲ್ಲಿ ವಲಸೆ ಅಧ್ಯಯನದ ದಿಕ್ಕನ್ನೇ ಬದಲಿಸುವ ಎಲೆಕ್ಟ್ರಾನಿಕ್ ಉಪಕರಣಗಳು ಅಭಿವೃದ್ಧಿಗೊಂಡಿವೆ. ಅದರಲ್ಲಿ ಪ್ರಮುಖವಾದದ್ದು ಉಪಗ್ರಹ-ಆಧಾರಿತ ರೇಡಿಯೊ ಟೆಲಿಮೆಟ್ರಿ. ಹಕ್ಕಿಗಳ ಗಾತ್ರ, ಆಕಾರ, ಜೀವನ ಶೈಲಿ, ಹಾರುವ ರೀತಿ ಮುಂತಾದ ಅಂಶಗಳನ್ನು ಗಮನದಲ್ಲಿರಿಸಿಕೊಂಡು ವಿವಿಧ ರೀತಿಯ ಉಪಕರಣಗಳು ತಯಾರಾಗಿವೆ. ಹಕ್ಕಿಗಳ ಕಾಲಿನಲ್ಲಿ ಅಳವಡಿಸುವ ಕಾಲುಂಗುರದಂತಹ ಮೈಕ್ರೊಚಿಪ್‌ನಿಂದ ಹಿಡಿದು, ಕುತ್ತಿಗೆಯಲ್ಲಿ ಅಳವಡಿಸುವ ಪಟ್ಟಿ ಮತ್ತು ಬೆನ್ನಮೇಲೆ ಅಳವಡಿಸುವ ಬೆಂಕಿಪೊಟ್ಟಣ ಗಾತ್ರದ ವಿಡಿಯೊ ಕ್ಯಾಮೆರಾ ಒಳಗೊಂಡ ಉಪಕರಣಗಳು ಅಭಿವೃದ್ಧಿಗೊಂಡಿವೆ. ಭಾರತದಲ್ಲಿ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಯು ಹಕ್ಕಿಗಳಿಗೆ ಗುರುತು ಪಟ್ಟಿ ತೊಡಿಸುವ ತರಬೇತಿ ಕಾರ್ಯಾಗಾರಗಳನ್ನು ನಡೆಸುತ್ತದೆ. ಆದರೆ ಭಾರತದಲ್ಲಿ ಉಪಗ್ರಹ ಆಧಾರಿತ ರೇಡಿಯೋ ಟೆಲಿಮೆಟ್ರಿ ವಿಧಾನವನ್ನು ಉಪಯೋಗಿಸಿ ನಡೆಸುವ ಅಧ್ಯಯನ ಅತಿ ವಿರಳ. ಮಂಗೋಲಿಯಾ ವನ್ಯಜೀವಿ ವಿಜ್ಞಾನ ಮತ್ತು ಸಂರಕ್ಷಣಾ ಕೇಂದ್ರದ ಡಾ.ಬ್ಯಾಟ್ ಬೆಯರ್ ಅವರ ತಂಡ ಪಟ್ಟೆ ಹೆಬ್ಬಾತುಗಳ ವಲಸೆ ಅಧ್ಯಯನಕ್ಕಾಗಿ ನಿರ್ದಿಷ್ಟ ಸಂಖ್ಯೆಯ ಕೊರಳಿನ ಪಟ್ಟಿಯನ್ನು ನೂರು ಹಕ್ಕಿಗಳಿಗೆ ತೊಡಿಸಿ ಅಲ್ಲಿನ ಬಾಯನ್ ಸರೋವರದಲ್ಲಿ ಹಾರಿಬಿಟ್ಟರು. ಈ ಹಕ್ಕಿಗಳು ಭಾರತದಲ್ಲಿ ಯಾವ ಪ್ರದೇಶಕ್ಕೆ ವಲಸೆ ಹೋಗುತ್ತವೆ ಎಂಬುದನ್ನು ಕಂಡುಹಿಡಿಯುವುದು ಈ ಅಧ್ಯಯನದ ಉದ್ದೇಶವಾಗಿತ್ತು. 2015ರ ನವೆಂಬರ್ ತಿಂಗಳಲ್ಲಿ ಒಂದು ಹಸಿರು ಕೊರಳಪಟ್ಟಿಯಿದ್ದ 'ಎಕ್ಸ್90' ಸಂಖ್ಯೆಯ ಹಕ್ಕಿ ತನ್ನ ಜೊತೆಗಾರರೊಂದಿಗೆ ದಾವಣಗೆರೆಯ ಕುಂದವಾಡ ಕೆರೆಯಲ್ಲಿ ಕಂಡುಬಂತು. ಈ ಹಕ್ಕಿಯ ಚಿತ್ರವನ್ನು ತೆಗೆದು ಡಾ.ಬ್ಯಾಟ್ ಬೆಯರ್ ಅವರಿಗೆ ಕಳುಹಿಸಿದಾಗ ಈ ಹಕ್ಕಿಗಳು ಮಂಗೋಲಿಯಾದಿಂದ ದಾವಣಗೆರೆಗೆ ಬಂದಿರುವುದಕ್ಕೆ ದೃಢೀಕರಣ ಸಿಕ್ಕಿತು.

ಹಗರಿಬೊಮ್ಮನ ಹಳ್ಳಿಯ ತುಂಗಭದ್ರಾ ನದಿಯ ಹಿನ್ನೀರಿನ ಪ್ರದೇಶದಲ್ಲಿ ಪ್ರತಿವರ್ಷ ರಾಜಹಂಸಗಳು ಸಹಸ್ರ ಸಂಖ್ಯೆಯಲ್ಲಿ ಬರುತ್ತಿದ್ದವು. ಕಳೆದ ವರ್ಷದ ಅತಿವೃಷ್ಟಿ ಮತ್ತು ವಿಸ್ತರಿಸಲಾದ ಮಳೆಗಾಲದ ಅವಧಿಯಿಂದ ಹಿನ್ನೀರಿನ ಪ್ರದೇಶವೆಲ್ಲಾ ಜಲಾವೃತವಾಗಿ ರಾಜಹಂಸಗಳಿಗೆ ಅಗತ್ಯವಾದ ಕೆಸರು ಲಭ್ಯವಿಲ್ಲದೇ ಹೋದದ್ದರಿಂದ ಅಥವಾ ಅಲ್ಲಿ ಸ್ಥಳೀಯ ತೊಂದರೆಗಳಿಂದ ಈ ವರ್ಷ ಇಲ್ಲಿ ರಾಜಹಂಸಗಳು ದಾಖಲಾಗಿಲ್ಲ. ಆದರೆ, ಏಪ್ರಿಲ್ ಮೊದಲ ವಾರದಲ್ಲಿ ಬಾಗಲಕೋಟೆಯ ಆಲಮಟ್ಟಿ ಹಿನ್ನೀರಿನ ಪ್ರದೇಶದಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ರಾಜಹಂಸಗಳು ಬೀಡುಬಿಟ್ಟಿವೆ. ಕಳೆದೆರಡು ವರ್ಷಗಳಿಂದ ದಾವಣಗೆರೆಯಲ್ಲಿ ಕಾಣದಾಗಿದ್ದ ವಲಸೆಗಾರ ಗುಲಾಬಿ ಕಬ್ಬಕ್ಕಿಗಳು ಈ ವರ್ಷ ನೂರಾರು ಸಂಖ್ಯೆಯಲ್ಲಿ ದಾಖಲಾದವು. ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಅವ್ಯಾಹತ ಮಳೆಯಾಗಿದ್ದರಿಂದ ಅಲ್ಲಿರುವ ಹಳದಿ ಕಾಲಿನ ಹಸಿರು ಪಾರಿವಾಳಗಳು ದಾವಣಗೆರೆಯನ್ನು ತಮ್ಮ ಹೊಸ ತಂಗುದಾಣವನ್ನಾಗಿ ಮಾಡಿಕೊಂಡಿವೆ. ಮನುಷ್ಯನ ನೆನಪಿನ ಶಕ್ತಿಗೆ ಸವಾಲೆಸೆಯುವಂತಹ ನೆನಪಿನ ಶಕ್ತಿ ಹಕ್ಕಿಗಳಿಗಿವೆ ಎಂದು ವಲಸೆ ಅಧ್ಯಯನದಿಂದ ತಿಳಿದುಬಂದಿದೆ. ತಂದೆ-ತಾಯಿಯ ಅನುಸರಿಸಿ ಬರುವ ಮರಿಗಳು ಮುಂದಿನ ಋತುಗಳಲ್ಲಿ ಸ್ವತಂತ್ರವಾಗಿ ವಲಸೆ ಬಂದು ತಮ್ಮ ಗಮ್ಯವನ್ನು ತಲುಪುತ್ತವೆ. ಹವಾಮಾನ ವೈಪರೀತ್ಯ, ಭೂ ತಾಪಮಾನ ಏರಿಕೆ, ಮನುಷ್ಯರನ್ನೊಳಗೊಂಡಂತೆ ಬೇಟೆಗಾರ ಪ್ರಾಣಿಗಳು, ಆವಾಸ ಸ್ಥಾನಗಳ ಕೊರತೆ, ಆಹಾರದ ಕೊರತೆ, ಕೃಷಿಭೂಮಿ ಮತ್ತು ಕಾಡಿನ ನಾಶ ಮುಂತಾದವುಗಳು ತೊಂದರೆಗಳನ್ನು ಒಡ್ಡುತ್ತವೆ.

ಕರ್ನಾಟಕದ ವಲಸೆ ಹಕ್ಕಿಗಳ ತಾಣಗಳು: ರಂಗನತಿಟ್ಟು, ಗುಡವಿ, ಅಂಕಸಮುದ್ರ ಪಕ್ಷಿ ಧಾಮಗಳು, ಹಗರಿಬೊಮ್ಮನ ಹಳ್ಳಿಯ ತುಂಗಭದ್ರಾ, ಕಬನಿ, ಅಲಮಟ್ಟಿ ಹಿನ್ನೀರು ಪ್ರದೇಶಗಳು, ಮಂಗಳೂರು, ಉಡುಪಿ, ಮಲ್ಪೆ, ಕಾರವಾರ ಸಮುದ್ರ ತೀರಗಳು ಅಲ್ಲದೆ ಮೈಸೂರು, ದಾವಣಗೆರೆ, ತುಮಕೂರು, ಬೆಂಗಳೂರಿನ ಕೆರೆಗಳಲ್ಲಿ ವಲಸೆ ಹಕ್ಕಿಗಳು ಹೆಚ್ಚಾಗಿ ಕಂಡುಬರುತ್ತವೆ. ಕರ್ನಾಟಕದಲ್ಲಿ ವಲಸೆ ಹಕ್ಕಿಗಳ ಗುರುತಿಸುವಿಕೆ ಮತ್ತು ದಾಖಲೀಕರಣ ಸೀಮಿತ ಮಟ್ಟದ್ದಾಗಿದೆ. ಮೈಸೂರ್ ನೇಚರ್ ಸಂಸ್ಥೆಯು ಕಳೆದ ಹಲವಾರು ವರ್ಷಗಳಿಂದ ಮೈಸೂರಿಗೆ ಬರುವ ವಲಸೆ ಹಕ್ಕಿಗಳ ಗಣತಿಯನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸಿ ಅಭೂತಪೂರ್ವ ಮಾಹಿತಿಯನ್ನು ಸಂಗ್ರಹಿಸಿರುವುದು ಶ್ಲಾಘನೀಯ. ಕರ್ನಾಟಕ ವಲಸೆ ಹಕ್ಕಿಗಳ ನೆಚ್ಚಿನತಾಣವಾಗಿ ಮುಂದುವರಿಯುವಂತೆ ಮಾಡುವುದು ಪ್ರಜ್ಞಾವಂತ ನಾಗರಿಕರ ಕರ್ತವ್ಯ.

(ಚಿತ್ರಗಳು: ಲೇಖಕರವು, ಲೇಖಕರು ಸೂಕ್ಷ್ಮಜೀವಿ ವಿಜ್ಞಾನದ ಪ್ರಾಧ್ಯಾಪಕ ಹಾಗೂ ಪಕ್ಷಿವೀಕ್ಷಕ)

ದಾವಣಗೆರೆಯಲ್ಲಿ ಕಂಡುಬಂದ ಯೂರೋಪಿನ ಕಪ್ಪು ಬಾಲದ ಗೊರವಗಳು

ಮೊದಲ ಓದು

ಕನಸುಗಾರನ ಛಲದ ಹೆಜ್ಜೆಗಳು

ಪರಿಶ್ರಮ, ಛಲ ಮತ್ತು ದೂರದೃಷ್ಟಿ ಇದ್ದವರಿಗೆ ಬಡತನ ಅಥವಾ ಇನ್ಯಾವುದೋ ಕೊರತೆಗಳು ಸಾಧನೆಗೆ ಅಡ್ಡಿಯಾಗಲಾರವು. ಅಂಥದ್ದೊಂದು ಕಥನವನ್ನು ಕಟ್ಟಿಕೊಟ್ಟಿದೆ ಈ ಕೃತಿ. ಬೆಂಗಳೂರಿನಲ್ಲಿ ಎಂ.ಎಸ್. ರಾಮಯ್ಯ ಸಮೂಹದ ಸಂಸ್ಥೆಗಳನ್ನು ನೋಡುತ್ತಿದ್ದೇವೆ. ಆದರೆ ಆ ಸೌಧಗಳ ಹಿಂದಿನ ಕನಸುಗಾರ ಬೆಳೆದು ಬಂದ ಪರಿಯ ಚಿತ್ರಗಳು ಇಲ್ಲಿವೆ. ರೈಲು ಎಂಜಿನ್‌ಗೆ ಇದ್ದಿಲು ತುಂಬುತ್ತಿದ್ದ ಸಾಮಾನ್ಯ ಯುವಕನೊಬ್ಬ ಮುಂದೆ ದೇಶದ ಬೃಹತ್ ನಿರ್ಮಾಣಗಳ ಗುತ್ತಿಗೆದಾರರಾಗಿ ಬೆಳೆದ ರೋಚಕ ಸಂಗತಿಗಳು ಅನಾವರಣಗೊಂಡಿವೆ.

ಅಷ್ಟಾಗಿ ಓದಿರದ ಆದರೆ ಲೋಕವ್ಯವಹಾರವನ್ನು ಅದ್ಭುತವಾಗಿ ನಡೆಸಿದ ರಾಮಯ್ಯ ಅವರು ತಮ್ಮ ದುಡಿಮೆಯನ್ನು ಅಕ್ಷರ ಸೇವೆಗೆ ಮುಡಿಪಾಗಿಟ್ಟದ್ದು ಅವರ ಬದುಕಿನ ಮಹತ್ವದ ಮಜಲು. ಹಾಗೆ ನೋಡಿದರೆ ರಾಮಯ್ಯ ಅವರು ಎಲ್ಲ ಕ್ಷೇತ್ರಗಳಲ್ಲೂ ಛಾಪು ಮೂಡಿಸಿದವರೇ. ಕೃಷಿ, ಇಟ್ಟಿಗೆ ಉದ್ಯಮ, ಕೈಗಾರಿಕೆ, ಭೂವ್ಯವಹಾರ, ಹೈನುಗಾರಿಕೆ, ಪತ್ರಿಕೋದ್ಯಮ, ಶಿಕ್ಷಣ, ನಿರ್ಮಾಣ ಕ್ಷೇತ್ರ, ಧಾರ್ಮಿಕ ಕ್ಷೇತ್ರ ಹೀಗೆ ಎಲ್ಲ ಕಡೆಗಳಲ್ಲೂ ರಾಮಯ್ಯ ಅವರ ಹೆಜ್ಜೆಗಳಿವೆ.

ಅಧಿಕಾರ ವಲಯದೊಂದಿಗೆ ಅವರ ನಂಟು, ಅಧಿಕಾರಶಾಹಿಯ ಕಿರುಕುಳಗಳನ್ನು ಎದುರಿಸಿ ಗೆದ್ದ ಪರಿ, ನಿರ್ಧಾರ ತೆಗೆದುಕೊಳ್ಳುವ ಸಂದರ್ಭಗಳು, ವ್ಯಕ್ತಿ, ವ್ಯವಸ್ಥೆಯ ತೀಕ್ಷ್ಣ ಪರಿಶೀಲನೆ ಮಾಡುವುದು ಎಲ್ಲವೂ ಅಧ್ಯಯನ ವಸ್ತುಗಳೇ. ಹೀಗೆ ಬೆಂಗಳೂರು ಸೇರಿದಂತೆ ನಾಡಿಗೆ ಮಹತ್ವದ ಕೊಡುಗೆ ನೀಡಿದ ಹಿರಿಯ ಚೇತನವೊಂದರ ನೆನಪಿನ ದಾಖಲೆಯಿದು.

ಪುಸ್ತಕದ ಆರಂಭದಲ್ಲಿ ಚಿತ್ರಸಂಪುಟವಿದೆ. ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರ ಮುನ್ನುಡಿಯಿದೆ.



ಪು: 168 ₹200

ಅಪೂರ್ವ ಸಾಧಕ ಡಾ.ಎಂ.ಎಸ್.ರಾಮಯ್ಯ
ಲೇ: ಬಾಬು ಕೃಷ್ಣಮೂರ್ತಿ
ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ
ಸಂ: 9448110034

ಬಚ್ಚಿಟ್ಟ ವಚನಗಳ ಅನಾವರಣ

ಬಸವ ತತ್ವ, ವಚನಗಳಲ್ಲಿ ವಿಶೇಷ ಅಧ್ಯಯನ ಮತ್ತು ಆಸಕ್ತಿ ಹೊಂದಿರುವ ಶರಣ ರತ್ನ ಸಚ್ಚಿದಾನಂದ ಪ್ರಭು ಅವರು ಸಾಮಾನ್ಯರಿಗೆ ಸಿಗದಿರುವ ವಚನಗಳನ್ನು ಪರಿಚಯಿಸುವ ಕೆಲಸವನ್ನು ಈ ಕೃತಿಯ ಮೂಲಕ ಮಾಡಿದ್ದಾರೆ. ಗುರು ಬಸವಣ್ಣನವರ ಹಾಗೂ ಆದಿ ಶರಣರ ವಚನಗಳನ್ನು ಉದಾಸೀನ ಮಾಡುವುದು ಬಸವಣ್ಣನವರಿಗೆ, ಲಿಂಗದೇವರಿಗೆ ಮತ್ತು ಸಮಾಜಕ್ಕೆ ಮಾಡುವ ವಂಚನೆ ಎಂದು ಲೇಖಕರು ಕೃತಿಯ ಆರಂಭದಲ್ಲೇ ಹೇಳುವ ಮೂಲಕ ಕೃತಿಯ ಉದ್ದೇಶವನ್ನು ದಾಟಿಸುತ್ತಾರೆ. ಸಾಕಷ್ಟು ಉತ್ತಮ ವಚನಗಳನ್ನು ಜನರಿಂದ ದೂರ ಇಟ್ಟಿರುವ ಮಠ, ಮಠಾಧೀಶರ ಕುರಿತು ಆಕ್ರೋಶವನ್ನು ವ್ಯಕ್ತಪಡಿಸುತ್ತಾರೆ. ಒಂದಷ್ಟು ವಚನಗಳನ್ನು ಏಕೆ ಸಮಾಜದಿಂದ ದೂರವಿಡಲಾಗಿದೆ ಎಂಬ ಕಾರಣವನ್ನು ಇವರು ಪ್ರಾರಂಭದಲ್ಲಿಯೇ ಸ್ಪಷ್ಟಪಡಿಸಿಬಿಡುತ್ತಾರೆ.

ಮಠ, ಪೀಠ, ಪ್ರತಿಷ್ಠಾನಗಳು ಇದುವರೆಗೆ ಬೋಧಿಸದೇ ಇರುವ ಮತ್ತು ಆಚರಿಸದೇ ಇರುವ ಕೆಲವು ವಚನಗಳು ಮತ್ತು ಅವುಗಳ ವಿವರಣೆ ಕೃತಿಯಲ್ಲಿ ಕಾಣಿಸುತ್ತದೆ. ಮೊದಲ ಲೇಖನದಲ್ಲಿಯೇ 'ಮಠಗಳಿಗೆ ತರುವ ಕಾಣಿಕೆ ನನ್ನದಲ್ಲ' ಎಂದು ಹೇಳುವ ವಚನ ಮತ್ತು ವಿವರಣೆ ಸಿಗುತ್ತದೆ. 'ಸಯದಾನವ ತಂದು ನೀಡುವೆನಲ್ಲದೆ ಸಂಬಂಧಿ ನಾನಲ್ಲಯ್ಯ' ಎಂಬ ಈ ವಚನದ ಸಾಲನ್ನು ಹಣದ ಹಿಂದೆ ಬಿದ್ದಿರುವ, ಕಾಣಿಕೆ ಹುಂಡಿ ನಂಬಿರುವ ಕೆಲವು ಮಠಗಳಿಗೆ ಅರಗಿಸಿಕೊಳ್ಳಲು ಕಷ್ಟವಾಗಬಹುದು. ಆ ಉದ್ದೇಶದಿಂದಲೇ ಈ ವಚನವನ್ನು ಮುನ್ನೆಲೆಗೆ ತಂದಿಲ್ಲ ಎಂಬ ಲೇಖಕರ ಆಕ್ರೋಶವೂ ಈ ಅಧ್ಯಾಯದಲ್ಲಿ ಕಾಣುತ್ತದೆ. ಐಷಾರಾಮಿ, ವಿಲಾಸಿ ಜೀವನ ನಡೆಸುವ ಮಠಾಧೀಶರ ವಿರುದ್ಧದ ಕಿಚ್ಚು ಕೂಡ ಇಲ್ಲಿ ಕಾಣಿಸುತ್ತದೆ.

'ಗುರು ಸರ್ವರಿಗೂ ಅಮೃತಸಮಾನವಾಗಿರಬೇಕು' ಎಂಬ ಲೇಖನವು ಲಿಂಗಾಯತ ಧರ್ಮದ ಪ್ರಕಾರ ಗುರು ತತ್ವ ಮತ್ತು ಜಂಗಮ ತತ್ವದ ವಿಶೇಷತೆಯನ್ನು ವಿವರಿಸುತ್ತದೆ. ಗುರುವೆನಿಸಿಕೊಂಡವರು ಎಲ್ಲ ಶಿಷ್ಯರನ್ನೂ ಸಮಾನವಾಗಿ ಕಾಣಬೇಕೆಂಬ ಆಶಯ ಇಲ್ಲಿದೆ. ಕೆಲ ಮಠಾಧೀಶರು ಕೆಲವರಿಗೆ ಅಮೃತವಾಗಿ, ಕೆಲವರಿಗೆ ವಿಷವಾಗುತ್ತಿರುವ ಕುರಿತಾದ ವಿಷಾದವೂ ಇಲ್ಲಿ ಕಾಣಿಸುತ್ತದೆ. ಮುಂದಿನ ಲೇಖನದಲ್ಲಿ ಮಠಾಧೀಶರು ಭಕ್ತರ ಮತವೇ ತನ್ನ ಮತ ಎನ್ನಬೇಕು ಎಂಬ ವಿಷಯವನ್ನು ಹೇಳುತ್ತಾರೆ. ಮಠದ ಸಂಪತ್ತಿಗೆ ಮಠಾಧೀಶರಲ್ಲ, ಭಕ್ತರೇ ನಿಜವಾದ ಒಡೆಯರ ಎಂಬ ಲೇಖನವು ಜಾಗ, ಆಸ್ತಿ, ಅಂತಸ್ತಿನ ಹಿಂದೆ ಬಿದ್ದ ಮಠಗಳನ್ನೊಮ್ಮೆ ತಮ್ಮನ್ನು ತಾವು ಅವಲೋಕಿಸಿಕೊಳ್ಳುವಂತೆ ಮಾಡುತ್ತದೆ.

ಮಠ, ಹಿರೇಮಠ, ಮಹಾಮಠ, ಪೀಠ ಪ್ರತಿಷ್ಠಾನಗಳು ಬೋಧಿಸದೇ ಬಚ್ಚಿಟ್ಟ ವಚನಗಳು ಮತ್ತು ವಚನ ದಂಡ ಸಂಹಿತೆಗಳ ಲೇಖನದಲ್ಲಿ ಗುರುಬಸವಣ್ಣನವರೇ ಎಲ್ಲರಿಗೂ ದೀಕ್ಷಾಗುರು. ಅವರಿಗಿಂತ ಬೇರೆ ಮಠವಿಲ್ಲ ಎಂದು ಲೇಖಕರು ಬಣ್ಣಿಸುತ್ತಾರೆ. ಬಸವಣ್ಣನವರ ನಿಜವಾದ ಆಶಯವನ್ನು ಓದುಗರೆದುರು ತೆರೆದಿಡುವ ಯತ್ನ ಮಾಡುತ್ತಾರೆ. ಇಡೀ ಕೃತಿ ಈಗಿನ ವಚನ ಸಾಹಿತ್ಯ, ಮಠಗಳು ಜಗತ್ತಿನಿಂದ ದೂರವಿಟ್ಟ ಅಪರೂಪದ, ಅರ್ಥಪೂರ್ಣವಾದ ವಚನಗಳನ್ನು ಪರಿಚಯಿಸುವ ಯತ್ನ ಮಾಡುತ್ತದೆ.

ಪು: 72 ₹50

ಮಠ ಪೀಠ ಪ್ರತಿಷ್ಠಾನಗಳು ಬೋಧಿಸದೆ ಬಚ್ಚಿಟ್ಟ ವಚನಗಳು
ಲೇ: ಶರಣ ರತ್ನ ಸಚ್ಚಿದಾನಂದ ಪ್ರಭು ಚಟ್ನಳ್ಳಿ
ಪ್ರ: ಲಿಂಗದೇವ ಸುಗ್ರಂಥ ಮಾಲೆ, ಬೆಂಗಳೂರು
ಸಂ: 9886694454

ಆಯ್ದ ಬರಹಗಾರರ ಕೈಪಿಡಿ

ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಅವರ ಈ ಕೃತಿ ಸಾಹಿತ್ಯ ಜಗತ್ತಿಗೊಂದು ಪುಟ್ಟ ಕೈಪಿಡಿ. ಮುನ್ನುಡಿಯಲ್ಲಿ ಸಿ.ಪಿ.ಕೆ ಹೇಳುವಂತೆ ಒಂದು ಅಪರೂಪದ ಕೃತಿ. ಇದನ್ನು ಯಾವ ರೂಪಕ್ಕೆ ಸೇರಿಸಬೇಕೆಂದು ಹೇಳುವುದು ಕಷ್ಟ. ಇಲ್ಲಿ ವ್ಯಕ್ತಿ ಪರಿಚಯವಿದೆ. ಸಾಹಿತ್ಯದ ಕೃತಿಗಳ ಕಿರುನೋಟವಿದೆ. ಕಾದಂಬರಿ, ಕಥೆ, ಕವಿತೆಗಳ ಸಣ್ಣ ಪರಿಚಯವಿದೆ. ಒಟ್ಟಾರೆಯಾಗಿ ನಾಡಿನ ವಿವಿಧ ಲೇಖಕರು, ಸಾಹಿತಿಗಳ ಕೃತಿಗಳನ್ನು ಪರಿಚಯಿಸಿಕೊಡುವ ಕೃತಿ ಎನ್ನಬಹುದು.

ಸುಮಾರು 160 ಭಿನ್ನವಾದ ಕೃತಿಗಳ ಪರಿಚಯ ಇದರಲ್ಲಿದೆ. ಇನ್ನೊಂದು ವಿಶೇಷವೆಂದರೆ ಅಷ್ಟೇನೂ ಜನಪ್ರಿಯವಲ್ಲದ, ಗಂಭೀರವಾಗಿ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಸಾಕಷ್ಟು ಹೊಸ ಲೇಖಕರನ್ನು ಪರಿಚಯಿಸಿದ್ದಾರೆ. ಪ್ರತಿ ಪುಟದಲ್ಲೊಂದು ಹೊಸ ಕೃತಿ, ಲೇಖಕ, ಪ್ರಕಾಶಕರ ವಿವರ ಹೊಂದಿರುವ ಪರಿಚಯಾತ್ಮಕ ಲೇಖನವಿದೆ. ಸಾಹಿತ್ಯ, ವ್ಯಕ್ತಿ/ಜೀವನ ಚಿತ್ರಗಳು, ಕಾದಂಬರಿಗಳು,ಕಥೆಗಳು, ಕವಿತೆಗಳು, ಜಾನಪದ, ಲಲಿತ ಪ್ರಬಂಧಗಳು/ಲೇಖನಗಳು, ಪ್ರವಾಸ, ಆರೋಗ್ಯ, ಇತರೆ ಎಂಬ ಪ್ರತ್ಯೇಕ ವಿಭಾಗದಡಿಯಲ್ಲಿ ಆಯಾ ಕೃತಿಗಳನ್ನು ಪರಿಚಯಿಸಲಾಗಿದೆ.

ಚಾಮರಾಜನಗರದ ವೆಂಕಟರಮಣ ಶಾಸ್ತ್ರಿಗಳು ಬರೆದ 'ಲೋಕಸೇವಾನಿರತ ಅಂಬಳೆ ಅಣ್ಣಯ್ಯ ಪಂಡಿತರ ಚರಿತ್ರೆ' ಎಂಬ ಕೃತಿಯನ್ನು ಅಂಶಿ ಇಲ್ಲಿ ಪರಿಚಯಿಸುತ್ತಾರೆ. ಮೈಸೂರಿನಲ್ಲಿ ಅಣ್ಣಯ್ಯ ಪಂಡಿತರ ವೃತ್ತವಿದೆ. ನಗರ ಪಾಲಿಕೆ ನಿರ್ವಹಿಸುವ ಉಚಿತ ವಿದ್ಯಾರ್ಥಿನಿಲಯವಿದೆ. ಆದರೆ ಪಂಡಿತರು ಯಾರೆಂದು ಬಹುತೇಕರಿಗೆ ಗೊತ್ತಿಲ್ಲ. ಅವರನ್ನು ಪರಿಚಯ ಮಾಡಿಕೊಡುವ ಕೃತಿಯನ್ನು ತಮ್ಮ ಪುಸ್ತಕದಲ್ಲಿ ಅಂಶಿ ಮಾಡಿದ್ದಾರೆ ಮತ್ತು ಈ ಕೆಲಸ ಬಹಳ ಸೊಗಸಾಗಿದೆ.

ತ.ಸು.ಶಾಮರಾಯರ ವಿಭಿನ್ನ ಕೃತಿ 'ನೆನಪಿನ ಅಲೆಗಳು', ಡಾ.ಪ್ರಧಾನ್ ಗುರುದತ್ತರ 'ಅನುವಾದ-ಆಧುನಿಕ ಜಗತ್ತಿನಲ್ಲಿ' ಕೃತಿ ಕುರಿತಾದ ಸೊಗಸಾದ ಪರಿಚಯವಿದೆ. ಪ್ರೊ ಮಲ್ಲೇಪುರಂ ಜಿ.ವೆಂಕಟೇಶ ಅವರ 'ತೌಲನಿಕ ಸಾಹಿತ್ಯಾಧ್ಯಯನ' ಕೃತಿಯ ಪರಿಚಯವಿದೆ. ಅದೇ ರೀತಿ ಡಾ.ದೊಡ್ಡರಂಗೇಗೌಡರ ಭಾವಗೀತೆಗಳ ಸಂಕಲನ 'ಗಂಧವತೀ ಪೃಥ್ವೀ' ಕುರಿತಾದ ಒಂದು ಪರಿಚಯ ಲೇಖನವಿದೆ. ಬಹಳ ವಿರಳವಾಗಿ ಹೆಸರು ಕೇಳಿರುವ, ಆದರೆ ಗಟ್ಟಿಯಾದ ಸಾಹಿತ್ಯ ಕೃತಿ ರಚಿಸಿರುವ ಅನೇಕ ಲೇಖಕರನ್ನು ಈ ಪುಸ್ತಕದಲ್ಲಿ ಅಂಶಿ ಪರಿಚಯಿಸಿಕೊಟ್ಟಿದ್ದಾರೆ. ರಾಜ್ಯದ ಒಂದಷ್ಟು ಪ್ರಕಾಶಕರ, ಲೇಖಕರ ದೂರವಾಣಿ ಸಂಖ್ಯೆಗಳ ಪಟ್ಟಿಯನ್ನು ನೀಡಿದ್ದಾರೆ. ಒಟ್ಟಿನಲ್ಲಿ ಆಯ್ದ ಬರಹಗಾರರ ಕುರಿತಾದ ಸಣ್ಣ ಮಾಹಿತಿಗೆ ಕೈಪಿಡಿಯಂತಹ ಕೃತಿ ಇದಾಗಿದೆ.

ಪು: 260 ₹300

ಸಾಹಿತ್ಯ ಸಂಪದ
ಲೇ: ಅಂಶಿ ಪ್ರಸನ್ನ ಕುಮಾರ್
ಪ್ರ: ವಿಸ್ಮಯ ಬುಕ್‌ಹೌಸ್, ಮೈಸೂರು
ಸಂ: 0821-2952545

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕವನ
ಅನಷ್ಕು ಅವರ ಪ್ರವಾಸಿ
ಕವನ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಕಥೆ
ಡಾ.ಲಕ್ಷಣ್ ವಿ ಎ ಅವರ ಕೌದಿ
ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಸಕುರಾ ಸಕುರಾ... ಹೂರಾಗದ ಆಲಾಪ



ನೆರಳಿಗೂ ಹೂಬಣ್ಣ ಮರದ ಕೆಳಗೆ

ಡಿ.ಜಿ.ಮಲ್ಲಿಕಾರ್ಜುನ

ವಸಂತ ಋತುವಿನ ನೀಲಾಗಸವನು/ಸಕುರಾ ಸಕುರಾ ತುಂಬಿದೆ/ಎಲ್ಲೆಡೆಯರಳಿದ ಚೆರ್ರಿ ಕುಸುಮವು/ಸುಮಧುರ ವಾಸನೆ ಚೆಲ್ಲಿದೆ..// ಮುಸುಕಿದ ಮಂಜೂ ಕವಿದಿಹ ಮೋಡವು

ಕಂಪನು ಎಲ್ಲೆಡೆ ಪಸರಿಸಿದೆ/ಚಂದದ ಹೂವಿನ ಮರಗಳ ನೋಡಲು

ಬನ್ನಿರಿ ಎನ್ನುತ ಕರೆಯುತಿದೆ..

'ಸಕುರಾ ಸಕುರಾ...' ಎಂದು ರಾಗವಾಗಿ ಹಾಡುವ ಜಪಾನಿ ಜಾನಪದ ಗೀತೆಯ ಭಾವಾರ್ಥವಿದು.

> ವಸಂತ ಮೂಡಿಸುವ ಚಿಗುರು ಪರಿಮಳದ ಜತೆಗೆ ಹಸಿರಿನ ಹೊಸರಾಗಗಳನ್ನೂ ಚೆಲ್ಲವರಳಿಸುತ್ತದೆ. ಜಪಾನಿನಲ್ಲಿ ಚೆರ್ರಿ ಹೂಗಳನ್ನು ನೋಡಲೆಂದೇ ವಿಶ್ವದ ವಿವಿಧೆಡೆಗಳಿಂದ ಜನರು ಹೋಗಿ ಬರುತ್ತಾರೆ. ಅಲ್ಲಿನ ಹೂರಾಗದ ಆಲಾಪ ಇದೋ...

ಪ್ರವಾಸ

ಚೆರ್ರಿ ಹೂಗಳನ್ನು ಜಪಾನಿ ಭಾಷೆಯಲ್ಲಿ 'ಸಕುರಾ' ಎನ್ನುತ್ತಾರೆ. 'ಸಕುಯ' ಎಂದರೆ 'ಅರಳು' ಎಂಬರ್ಥವಿದೆ. ಫ್ಯುಜಿ ಪರ್ವತದಲ್ಲಿ ನೆಲೆಸಿರುವ ದೇವತೆ 'ಕೊನೊ ಹನ ನೋ ಸಕುಯ ಹಿಮೆ' (ಮರದ ಹೂವರಳುವ ರಾಜಕುಮಾರಿ) ಸ್ವರ್ಗದಿಂದ ಚೆರ್ರಿ ಮರದ ಮೇಲೆ ಇಳಿದಳೆಂಬುದು ಅವರ ನಂಬಿಕೆ.

ಜಪಾನಿನಲ್ಲಿ ವಸಂತ ಋತು ಶುರು ಆರಂಭವಾಗುವುದು ಮಾರ್ಚ್ ತಿಂಗಳಿನಲ್ಲಿ. ಈ ವಸಂತದ ಆಗಮನದೊಂದಿಗೆ ಜಪಾನಿನೆಲ್ಲೆಡೆ ಸಕುರಾ ಮರಗಳಲ್ಲಿ ಬಿಳಿ, ನಸುಗೆಂಪು ಹಾಗೂ ತಿಳಿಗೆಂಪು ಬಣ್ಣದ ಸಕುರಾ ಹೂಗಳು ಅರಳತೊಡಗುತ್ತವೆ.

ಜಪಾನಿನಲ್ಲಿ ಚೆರ್ರಿ ಹೂವುಗಳನ್ನು ನೋಡುವುದೇ ಚೆಂದ. ಈ ಹೂವುಗಳು ಪ್ರತಿವರ್ಷ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಈ ಚೆರ್ರಿ ಹೂವುಗಳು ಮಾರ್ಚ್ ತಿಂಗಳ ಅಂತ್ಯದಿಂದ ಏಪ್ರಿಲ್ ತಿಂಗಳ ಆರಂಭದವರೆಗೆ ನೋಡಲು ಸಿಗುತ್ತವೆ. ಟೋಕಿಯೊ, ಕ್ಯೋಟೋ ಮತ್ತು ಒಸಾಕಾದಂತಹ ಜನಪ್ರಿಯ ನಗರಗಳಲ್ಲಿ ಈ ಹೂವುಗಳನ್ನು ನೋಡಲು ಪ್ರವಾಸಿಗರು ಕಿಕ್ಕಿರಿದಿರುತ್ತಾರೆ.

ಸಕುರಾ- ಜಪಾನ್‌ನ ರಾಷ್ಟ್ರೀಯ ಹೂವು ಮತ್ತು ಅದು ಅರಳುವುದನ್ನು ನೋಡುವುದು ನಿಜವಾಗಿಯೂ ಅವಿಸ್ಮರಣೀಯ ಅನುಭವ. ಅಲ್ಲಿ ಚೆರ್ರಿ ಬ್ಲಾಸಮ್ (cherry blossom) ಅರಳಿ ನಿಂತಾಗ ಅಲ್ಲಿನ ಜನರು ಅದನ್ನು ಹಬ್ಬವಾಗಿ ಆಚರಿಸುತ್ತಾರೆ. ಅದನ್ನು 'ಹನಾಮಿ' ಹಬ್ಬ ಎಂದು ಕರೆಯಲಾಗುತ್ತದೆ. ಈ ಹೂವನ್ನು ಅವರು ಭರವಸೆಯ ಸಂಕೇತವೆಂದು ಪರಿಗಣಿಸುತ್ತಾರೆ.

ಜಪಾನ್‌ನಲ್ಲಿ ಚೆರ್ರಿ ಹೂವನ್ನು ನೋಡಲು ಅನೇಕ ಸುಂದರವಾದ ಸ್ಥಳಗಳಿವೆ. ಕ್ಯೋಟೋದಲ್ಲಿರುವ ಕಿಂಕಕು-ಜಿ ಈ ಪ್ರಮುಖ ತಾಣಗಳಲ್ಲಿ ಒಂದು. ಇದನ್ನು ಗೋಲ್ಡನ್ ಪೆವಿಲಿಯನ್ ಎಂದೂ ಕರೆಯುವರು. ಟೋಕಿಯೋ ನಗರದ ಇಂಪೀರಿಯಲ್ ಪ್ಯಾಲೆಸ್‌ನ ಸಮೀಪವಿರುವ ಪ್ರಸಿದ್ಧ ಚಿಡೋರಿಗಾಫುಚಿ ಉದ್ಯಾನಕ್ಕೆ ಸಕುರಾ ವೀಕ್ಷಣೆಗೆ ಸಾವಿರಾರು ಜನರು ಬರುತ್ತಾರೆ. ಅಲ್ಲಿ ಮರಗಳ ಕೆಳಗೆ ಭೋಜನಕೂಟ ಆಯೋಜಿಸುವರು, ಬೋಟ್ ವಿಹಾರ ಮಾಡುವ ಮೂಲಕ ಹೂವಿನ ಋತುವನ್ನು ಸಂಭ್ರಮದಿಂದ ಆಚರಿಸುವರು.

ಜಪಾನಿನ ಕವಿ ಇಸ್ಸಾ, 'ಎಂಥ ವಿಚಿತ್ರ ಜಗತ್ತು, ಚಂದದ ಹೂಗಳೂ ಉದುರಿ ಹೋಗುತ್ತವೆ, ನಮ್ಮಂತೆಯೇ' ಎಂಬ ಹಾಯ್ಕು ರಚಿಸಿದ್ದಾನೆ.

ಚೆರ್ರಿ ಹೂವುಗಳು ಅರಳುತ್ತವೆ ಮತ್ತು ಕೆಲ ದಿನಗಳು ಮಾತ್ರವಿದ್ದು, ಸಾಮೂಹಿಕವಾಗಿ ನೆಲಕ್ಕೆ ಉದುರುತ್ತವೆ. ಇದು ಶುದ್ಧತೆಯ ಸೂಚಕವಾಗಿದೆ ಎನ್ನುವ ಜಪಾನೀಯರಿಗೆ ಈ ಹೂವುಗಳು ಜೀವನದ ಭಾಗ. ಚೆರ್ರಿ ಹೂಗಳನ್ನು ಆಸ್ವಾದಿಸುವ ಬಗ್ಗೆ ಅವರದ್ದೇ ಒಂದು ಸಂಪ್ರದಾಯವಿದೆ. ಸಕುರಾ ಹೂವುಗಳ ಅಸ್ಥಿರತೆ, ಸೌಂದರ್ಯ ಮತ್ತು ಚಂಚಲತೆ, ಜೀವನದ ಅಲ್ಪಕಾಲಿಕ ಗುಣಕ್ಕೆ ರೂಪಕವಾಗಿದೆ.

ಸಕುರಾ ಹೂವಿನ ಚೆಲುವನ್ನು ತನ್ನ ಕವಿತೆಯಲ್ಲಿ ಬಣ್ಣಿಸಿರುವ ಸೈಗ್ಯೋ (1118-1190) ಎಂಬ ಜಪಾನಿ ಕವಿ,

'ವಸಂತ ಋತುವಲಿ/ಹುಣ್ಣಿಮೆ ದಿನದಲಿ/ಅರಳಿದ ಕುಸುಮಗಳಡಿಯಲ್ಲಿ/ತನುವನು ಬಿಡುತಲಿ/ನಲಿಯುವೆ ದಿನದಲಿ/ಮಲಗುತ ಪ್ರಕೃತಿಯ ಮಡಿಲಲ್ಲಿ...'

ಸಕುರಾ ಹೂ ಅರಳಿರುವ ಬೆಳದಿಂಗಳ ರಾತ್ರಿಯಲ್ಲಿ ತನ್ನ ಪ್ರಾಣ ಹೋಗಲಿ ಎನ್ನುತ್ತಾನೆ.

(ಚಿತ್ರಗಳು: ಲೇಖಕರವು)

ಸಕುರಾ...ಸುಮಗಾನ



ಹೂಹಾದಿಯಲಿ ಮುದದ ಪ್ರಯಾಣ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಎರಡು ಅಕ್ಷರಗಳಿಗೆ ಪಕ್ಕದಲ್ಲಿ ನೀಡಲಾದ ಸುಳಿವು ಆಧರಿಸಿ ನಾಲ್ಕು ಅಕ್ಷರಗಳ ಅರ್ಥವತ್ತಾದ ಪದ ರಚಿಸಿ

				ಸುಳಿವು
1		ಹ	ಣ	ಹಣದಿಂದ ಮೇಲಕ್ಕೇರುವುದು
2		ದಾ	ನಿ	ದಾನಿಯೊಬ್ಬರು ಕೊಟ್ಟ ಉಗುಳುಪಾತ್ರೆ
3		ಮಾ	ನ	ಮಾನ ಹೆಚ್ಚಿಸಲು ಕೊಟ್ಟ ಉಡುಗೊರೆ
4		ಜ	ನ	ಜನರಿಂದ ಆದ ಉಪಯೋಗ
5		ವಾ	ರ	ವಾರಕ್ಕೊಮ್ಮೆ ತಪ್ಪದೇ ಹೋಗಿ ಬರುವ ಪಟ್ಟಣ

ಅದಲು ಬದಲು ಕಂಚಿ ಕದಲು

1 ರಮಣನ ಜನ = ______
2 ರಾಮ ಹಾಜರು = ______
3 ಆ ರವಿ ವಸ್ತಿ = ______
4 ಯಾರಗಡಿ = ______

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಪದಗಳ ಮೊದಲ ಅಕ್ಷರ ತೆಗೆದು ಆ ಸ್ಥಳದಲ್ಲಿ ಬೇರೊಂದು ಅಕ್ಷರ ಸೇರಿಸಿ ಹೊಸ ಪದ ಮಾಡಿ

1. ಗುಡಿಸಲು	
	ಡಿಸಲು
2. ಕರಿ ಕೋತಿ	
	ರಿಕೋತಿ
3. ಗುರಿ ಮಾಡು	
	ರಿಮಾಡು
4. ದರ ಕಾರ	
	ರಕಾರ
5. ಹಣವಂತ	
	ಣವಂತ
6. ಶನಿವಾರ	
	ನಿವಾರ

ಬಿಡಿ ಅಂಕಿ ಹೇಳು -ಇಡೀ ಸಂಖ್ಯೆ ಕೇಳು

ನಿಮ್ಮ ಮಿತ್ರನಿಗೆ ಮೂರು ಅಂಕಿಗಳುಳ್ಳ ಒಂದು ಸಂಖ್ಯೆ ಬರೆದುಕೊಳ್ಳುವಂತೆ ತಿಳಿಸಿ. ಆ ಸಂಖ್ಯೆಯ ಅಂಕಿಗಳನ್ನು ಇಳಿಕೆ ಕ್ರಮದಲ್ಲಿ ಬರೆಯುವಂತೆ ಹೇಳಿ, ಈಗ ಆ ಸಂಖ್ಯೆಯ ತಿರುವು ಸಂಖ್ಯೆ' (ವಿಲೋಮ ಸಂಖ್ಯೆ)ಯನ್ನು ಅದರ ಕೆಳಗೆ ಬರೆದು ಕಳೆಯುವಂತೆ ಹೇಳಿ, ಈಗ ಬಂದ ಉತರದ ಕೊನೆ ಅಂಕಿ ಹೇಳಿದರೆ ಸಾಕು ನೀವು ಇಡೀ ಸಂಖ್ಯೆ ಹೇಳಿ ಬಿಡಬಲ್ಲಿರಿ. ಅದು ಹೇಗೆ ?

ನಿನ್ನ ಮಿತ್ರ ಕೊನೆಯ ಅಂಕಿ ಹೇಳಿದಾಗ ಆ ಅಂಕಿಯನ್ನು 9 ರಲ್ಲಿ ಕಳೆಯಿರಿ. ಬಂದ ಅಂಕಿ ಉತ್ತರದ ಮೊದಲಿನ ಅಂಕಿಯಾಗಿರುತ್ತದೆ. ಇದರ ಮುಂದೆ ಸ್ಥಿರಾಂಕ 9. ಇದು ಪ್ರತಿ ಬಾರಿಯೂ ಮಧ್ಯದಲ್ಲಿ ಇದ್ದೇ ಇರುತ್ತದೆ. ಈಗ ಉತ್ತರದ ಮೂರು ಅಂಕಿಗಳು ದೊರೆತಂತಾಯಿತು. ಈ ಮೂರು ಅಂಕಿಗಳ ಸಂಖ್ಯೆಯನ್ನು ನಿಮ್ಮ ಮಿತ್ರನಿಗೆ ತಿಳಿಸಿ. ಅವನು ನಿಜಕ್ಕೂ ಆಶ್ಚರ್ಯಗೊಳ್ಳುತ್ತಾನೆ. ಗುಟ್ಟು ರಟ್ಟಾಗುವವರೆಗೂ ಇದು ಜಾದುವಿನಂತೆ ತೋರುತ್ತದೆ.

ಉದಾ: ನಿಮ್ಮ ಮಿತ್ರನ ಸಂಖ್ಯೆ 319
ಇಳಿಕೆ ಕ್ರಮದಲ್ಲಿ ಬರೆದಾಗ 931
ತಿರುವು ಸಂಖ್ಯೆ 139
ಕಳೆದಾಗ 792

ಇಲ್ಲಿ ಕೊನೆಯ ಅಂಕಿ 2 ಎಂದು ನಿಮ್ಮ ಮಿತ್ರ ಹೇಳಿದಾಗ ಇಡೀ ಸಂಖ್ಯೆಯ ಮೊದಲ ಅಂಕಿ 7 ಅಲ್ಲವೇ ? 9-2 = 7 ಹಾಗೆ 9 ಸ್ಥಿರಾಂಕ. ಈಗ ಎಲ್ಲಾ ಸೇರಿ 792 ಎಂದು ಹೇಳಿ ಬಿಟ್ಟರೆ ಆಯ್ತು.

ಗುಂಡ ಮತ್ತು ಹೆಲಿಕಾಪ್ಟರ್

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸಬೇಕೆಂಬುದು ಗುಂಡನ ಬಹಳ ದಿನದ ಕನಸಾಗಿತ್ತು. ಹೀಗಾಗಿ ಗುಂಡ ಬಹಳ ಖುಷಿಯಿಂದಲೇ ಹೆಲಿಕಾಪ್ಟರ್ ಏರಿದ್ದ. ಆದರೆ ಅದು ದಾರಿಯ ನಡುವೆ ಕೆಟ್ಟು, ಅದರಿಂದ ಹಾರುವಂತಹ ಪರಿಸ್ಥಿತಿ ಎದುರಾದಾಗ ಗುಂಡನ ಭಯ, ದುಃಖ ಹೇಳತೀರದು.

ಮುಂದೇನೆಂಬ ಭಯದಿಂದ ಕೆಳಕ್ಕೆ ಕಾಲಿಟ್ಟ ಗುಂಡನಿಗೆ ದೇವರಂತೆ ಸಹಾಯಕ್ಕೆ ಬಂದಿದ್ದು ಪ್ಯಾರಾಚ್ಯೂಟ್. ಗುಂಡನ ಖುಷಿಗೆ ಪಾರಾವೇ ಇರಲಿಲ್ಲ. ವಿಮಾನ ಏರಿದ್ದೂ ಆಯಿತು. ಪ್ಯಾರಾಚ್ಯೂಟ್ ನೋಡಿದ್ದೂ ಆಯಿತೆಂದು ಖುಷಿಯಿಂದ ಇಳಿಯುತ್ತಿದ್ದ.



ಪ್ಯಾರಾಚ್ಯೂಟ್ ಹಿಡಿದು, ಸುತ್ತಲಿನ ಆಕಾಶ ನೋಡುತ್ತ ಗುಂಡ ಬಹಳ ಖುಷಿಯಿಂದ ಕೆಳಕ್ಕೆ ಇಳಿಯುತ್ತಿದ್ದ. ಹೆಲಿಕಾಪ್ಟರ್‌ಗಿಂತಲೂ ಮಜವಾದ ಪಯಣವಿದು ಎಂದುಕೊಂಡಿದ್ದ ಗುಂಡನಿಗೆ ಹದ್ದು ಹಿಂಬಾಲಿಸುತ್ತಿರುವುದು ತಿಳಿಯಲೇ ಇಲ್ಲ.

ಗುಂಡನನ್ನು ನಗುತ್ತ ಹಿಂಬಾಲಿಸಿದ ಹದ್ದು ಒಂದು ಜಾಗದಲ್ಲಿ ಗುಂಡನ ಪ್ಯಾರಾಚ್ಯೂಟ್‌ಗೆ ಬಾಯಿಟ್ಟಿತು. ಗುಂಡ ಅಲ್ಲಾಡಿ, ನಡುಗಿಹೋದ. ಹೆಲಿಕಾಪ್ಟರೂ ಇಲ್ಲದೆ, ಪ್ಯಾರಾಚ್ಯೂಟ್ ಕೂಡ ಸಿಗದೇ ಆಗಸದ ನಡುವೆ ಗುಂಡನ ಗೋಳು ಹೇಳತೀರದು.

ಹೊಂದಿಸು ಆನಂದಿಸು

ಇಲ್ಲಿ ಕೊಟ್ಟಿರುವ ದೇವಾಲಯಗಳಿಗೂ ಕ್ಷೇತ್ರಗಳಿಗೂ ಹೊಂದಿಸಿ

1 ಕೊಲ್ಲೂರು	A ಮೀನಾಕ್ಷಿ
2 ಸವದತ್ತಿ	B ಚೌಡೇಶ್ವರಿ
3 ಹೊರನಾಡು	C ಬನಶಂಕರಿ
4 ಮೈಸೂರು	D ಯಲ್ಲಮ್ಮ
5 ಕೊಲ್ಲಾಪುರ	E ಮಹಾಲಕ್ಷ್ಮಿ
6 ಬಾದಾಮಿ	F ಚಾಮುಂಡೇಶ್ವರಿ
7 ಶಿರಸಿ	G ಮೂಕಾಂಬಿಕೆ
8 ಸಿಗಂದೂರು	H ಅನ್ನಪೂರ್ಣೇಶ್ವರಿ
9 ಮಧುರೈ	I ಕಾಮಾಕ್ಷಿ
10 ಕಂಚಿ	J ಮಾರಿಕಾಂಬೆ

ಲೆಕ್ಕ ಮಾಡು ಮೋಜು ಮಾಡು

182447 X 9

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ: 1 ಪುರುಸೊತ್ತು 2 ಅಮೆರಿಕಾ 3 ಸುವಾಸನೆ 4 ಅಗಣಿತ 5 ಉದಾರತೆ

ಅದಲು ಬದಲು: 1 ನವದಂಪತಿ 2 ದಾಳಿಕೋರ 3 ಕವನರೂಪ 4 ಮತದಾರ

ಪದಶೋಧ: ಬಾಬು ಜಗಜೀವನರಾಮ

ರಜಾ ಮಜಾ ಆಟ: 8-4-1-3-2-6-5-7-1

ಪದಸಂಕಲನ : 1 ಚದರಡಿ 2 ಅಪಾಯಕಾರಿ 3 ಜೋಳದ ರಾಶಿ 4 ಅಂಗವಿಕಲ 5 ಚಿರತೆಮರಿ

ಉಚ್ಚಾರ ಕೂಡಿಸಿದರೆ = CIRCUS

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ದಿಶಾ ಆರ್.ಜಿ
ಸಿದ್ದಾಪುರ, ಉತ್ತರಕನ್ನಡ

ಗಗನ್ ಜಗದೀಶ್
ಮುಂಡರಗಿ



ಗಿರಿಧರ್ ಸಿಂಗ್ ಆರ್
ಕೋಲಾರ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸಿಬಿಐನಿಂದ ಸಮನ್ಸ್: ಅರವಿಂದ ಕೇಜ್ರಿವಾಲ್ ಜೊತೆ ಎಐಸಿಸಿ ಅಧ್ಯಕ್ಷ ಖರ್ಗೆ ಮಾತುಕತೆ

ವಿರೋಧ ಪಕ್ಷಗಳ ಒಗ್ಗಟ್ಟಿಗೆ ಇನ್ನಷ್ಟು ಬಲ?

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ವಿಚಾರಣೆಗೆ ಹಾಜರಾಗಲು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸಿಬಿಐ ಸಮನ್ಸ್ ನೀಡಿದ ಬೆನ್ನಲ್ಲೇ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೇಜ್ರಿವಾಲ್ ಜೊತೆ ಮಾತುಕತೆ ನಡೆಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ



ಅರವಿಂದ ಕೇಜ್ರಿವಾಲ್

'ಉಭಯ ನಾಯಕರ ನಡುವೆ ನಡೆದ ಮಾತುಕತೆ ಕುರಿತು ಹೆಚ್ಚಿನ ವಿವರಗಳು ಬಹಿರಂಗಗೊಂಡಿಲ್ಲ. ಆದರೆ, ಸಿಬಿಐ ಸಮನ್ಸ್ ನೀಡಿರುವ ಹಿನ್ನೆಲೆಯಲ್ಲಿ ಮಾತುಕತೆಯ ಸ್ವರೂಪದಲ್ಲಿ ಬದಲಾವಣೆ ಇತ್ತು. ಇಷ್ಟವಿಲ್ಲದಿದ್ದರೂ, ಕಾಂಗ್ರೆಸ್ ಪಕ್ಷವು ಎಎಪಿ ಜೊತೆ ಮಾತುಕತೆ ನಡೆಸಿದಂತಾಗಿದೆ' ಎಂದು ಮೂಲಗಳು ಹೇಳಿವೆ.

ಸಿಬಿಐ ಸಮನ್ಸ್ ಜಾರಿಗೊಳಿಸಿದ ನಂತರ, ಶುಕ್ರವಾರ ಸಂಜೆಯೇ ಖರ್ಗೆ ಅವರು ಕೇಜ್ರಿವಾಲ್ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದರು ಎಂದು ಇವೇ ಮೂಲಗಳು ಹೇಳಿವೆ.

ಖರ್ಗೆ ಅವರು ಕೇಜ್ರಿವಾಲ್ ಜೊತೆ ಮಾತುಕತೆ ನಡೆಸಿರುವ ವಿಷಯ ಬಹಿರಂಗಗೊಂಡ ಬೆನ್ನಲ್ಲೇ, ಕಾಂಗ್ರೆಸ್ ನಾಯಕರಿಂದಲೇ ಅಪಸ್ವರ ಕೇಳಿಬಂತು. ಪಂಜಾಬ್ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದ ಕಾಂಗ್ರೆಸ್‌ನ ಪ್ರತಾಪ್‌ಸಿಂಗ್ ಬಾಜ್ವಾ, 'ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಕೇಜ್ರಿವಾಲ್‌ಗೆ ಮಾತನಾಡುವ ಹಕ್ಕಿಲ್ಲ' ಎಂದು ಟ್ವೀಟ್ ಮಾಡಿದರು. ಎಎಪಿ ನಾಯಕರಾದ ಮನೀಷ್ ಸಿಸೋಡಿಯಾ ಹಾಗೂ ಸತ್ಯೇಂದರ್ ಜೈನ್ ಅವರನ್ನು ಈಗಾಗಲೇ ಜೈಲಿನಲ್ಲಿರಿಸಿದ್ದನ್ನು ಅವರು ತಮ್ಮ ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಈ ದಿಢೀರ್ ಬೆಳವಣಿಗೆಯು, ಬಿಜೆಪಿ ವಿರುದ್ಧ ಒಗ್ಗಟ್ಟಾಗಬೇಕು ಎಂಬ ವಿರೋಧ ಪಕ್ಷಗಳ ಪ್ರಯತ್ನಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

'ವಿಪಕ್ಷಗಳ ಒಗ್ಗಟ್ಟು ಸಾಧಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇರಿಸಲಾಗಿದ್ದು, ಇನ್ನೂ ಹಲವು ಸುತ್ತಿನ ಮಾತುಕತೆ ನಡೆಯಬೇಕಿದೆ. ಹೀಗಾಗಿ, ಖರ್ಗೆ ಅವರು ಕೇಜ್ರಿವಾಲ್ ಜೊತೆ ನಡೆಸಿರುವ ಮಾತುಕತೆ ಬಗ್ಗೆ ಹೆಚ್ಚು ಪ್ರಾಮುಖ್ಯ ನೀಡುವ ಅಗತ್ಯವಿಲ್ಲ' ಎಂದು ಕಾಂಗ್ರೆಸ್ ಹಿರಿಯ ನಾಯಕರು ಪ್ರತಿಕ್ರಿಯಿಸಿದ್ದಾರೆ.

ಕೇಜ್ರಿವಾಲ್ ಅವರಿಗೆ ಸಿಬಿಐ ಸಮನ್ಸ್ ಜಾರಿ ಮಾಡಿರುವುದನ್ನು ಕಾಂಗ್ರೆಸ್‌ನ ದೆಹಲಿ ಘಟಕವು ಸ್ವಾಗತಿಸಿದೆ. ರಾಷ್ಟ್ರ ರಾಜಧಾನಿಯ ರಾಜಕೀಯ ಪರಿಸ್ಥಿತಿಯೇ ಬೇರೆ. ಹಾಗಾಗಿ, ಹಲವಾರು ವಿಷಯಗಳ ಕುರಿತು ಎರಡೂ ಪಕ್ಷಗಳು ನಿರಂತರವಾಗಿ ಅಂತರ ಕಾಯ್ದುಕೊಂಡು ಬಂದಿವೆ.

ಸಂಸತ್ ಕಲಾಪದ ವೇಳೆ, ಎಎಪಿ ಹಾಗೂ ಕಾಂಗ್ರೆಸ್ ಜೊತೆಯಾಗಿಯೇ ಹೆಜ್ಜೆ ಹಾಕಿವೆ. ಆದರೆ, ಕಾಂಗ್ರೆಸ್ ಪ್ರಾಬಲ್ಯ ಇರುವ ರಾಜ್ಯಗಳಲ್ಲಿ ಅದರೊಂದಿಗೆ ವೇದಿಕೆ ಹಂಚಿಕೊಳ್ಳಲು ಎಎಪಿ ನಿರಾಕರಿಸುತ್ತಲೇ ಬಂದಿದೆ. ದೆಹಲಿ ಹಾಗೂ ಪಂಜಾಬ್ ವಿಧಾನಸಭೆಗಳಿಗೆ ನಡೆದ ಚುನಾವಣೆಯಲ್ಲಿ ಎಎಪಿ, ಕಾಂಗ್ರೆಸ್‌ಗೆ ಮಣ್ಣು ಮುಕ್ಕಿಸಿದೆ. ಗುಜರಾತ್ ಹಾಗೂ ಗೋವಾದಲ್ಲಿ ಕಾಂಗ್ರೆಸ್‌ನ ನಿದ್ದೆಗೆಡಿಸಿದೆ.

> **ಅರವಿಂದ ಕೇಜ್ರಿವಾಲ್ ಅವರು ತಮ್ಮ ವಿರುದ್ಧದ ಷಡ್ಯಂತ್ರಗಳಿಗೆ ಸೂಕ್ತ ಸಮಯದಲ್ಲಿ ತಕ್ಕ ಉತ್ತರ ನೀಡುತ್ತಾರೆ**
> **ನಿತೀಶ್ ಕುಮಾರ್,** ಬಿಹಾರ ಮುಖ್ಯಮಂತ್ರಿ

> **ಕೇಜ್ರಿವಾಲ್ ಅವರು ಭ್ರಷ್ಟಾಚಾರ ವಿರುದ್ಧ ಧ್ವನಿ ಎತ್ತುವ ಏಕೈಕ ನಾಯಕ. ಇದೇ ಕಾರಣಕ್ಕೆ ಅವರ ದನಿ ಅಡಗಿಸುವ ಪ್ರಯತ್ನಗಳು ನಡೆಯುತ್ತಿವೆ**
> **ಆತಿಶಿ ಮಾರ್ಲೆನಾ,** ದೆಹಲಿ ಶಿಕ್ಷಣ ಸಚಿವೆ

> **ಬಿಜೆಪಿಯು ವಿರೋಧ ಪಕ್ಷ ಮುಕ್ತ ಭಾರತ ನಿರ್ಮಿಸಲು ಯತ್ನಿಸುತ್ತಿದೆ. ತನ್ನ ವಿರುದ್ಧ ಮಾತನಾಡುವ ನಾಯಕರ ವರ್ಚಸ್ಸಿಗೆ ಮಸಿ ಬಳಿಯುತ್ತಿದೆ**
> **ಕಪಿಲ್ ಸಿಬಲ್,** ರಾಜ್ಯಸಭಾ ಸದಸ್ಯ

ಹಲವು ಸಂದರ್ಭಗಳಲ್ಲಿ, ಆಮ್ ಆದ್ಮಿ ಪಾರ್ಟಿಯು ಬಿಜೆಪಿಯ ಬಿ–ಟೀಮ್ ಎಂದು ಕಾಂಗ್ರೆಸ್ ಟೀಕಿಸಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ ಕುರಿತ ಎಎಪಿಯ ನಿಲುವಿನಲ್ಲಿ ಬದಲಾವಣೆ ಕಾಣಬಹುದಾಗಿದೆ ಎಂದು ಹೇಳಲಾಗುತ್ತಿದೆ.

ಮಾನನಷ್ಟ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾದ ರಾಹುಲ್ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿದ್ದನ್ನು ಮೊದಲು ಖಂಡಿಸಿದ್ದೇ ಎಎಪಿ.

ಆದರೆ, ಸ್ಥಳೀಯ ಮಟ್ಟದ ರಾಜಕೀಯ ಸನ್ನಿವೇಶಕ್ಕೆ ಸಂಬಂಧಿಸಿ ರಾಜ್ಯ ಮಟ್ಟದ ನಾಯಕರು ಪರಸ್ಪರರ ವಿರುದ್ಧ ಹೇಳಿಕೆಗಳನ್ನು ನೀಡುವುದರಲ್ಲಿ ತಪ್ಪಿಲ್ಲ. ರಾಷ್ಟ್ರ ಮಟ್ಟದಲ್ಲಿ ಇಂಥ ನಡೆಗಳನ್ನು ಒಪ್ಪಲಾಗದು ಎಂದು ಎರಡೂ ಪಕ್ಷಗಳ ನಾಯಕರು ಹೇಳುತ್ತಾರೆ.

'ಸಂವಿಧಾನದ ಮೇಲೆ ಪ್ರಹಾರ'

ನವದೆಹಲಿ (ಪಿಟಿಐ): 'ಸಂವಿಧಾನದ ಮೇಲೆ ನಿತ್ಯವೂ ಪ್ರಹಾರ ನಡೆಯುತ್ತಿದೆ. ದೇಶದ ಒಕ್ಕೂಟ ವ್ಯವಸ್ಥೆಯೇ ಅಪಾಯದಲ್ಲಿದೆ' ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಶನಿವಾರ ಹೇಳಿದ್ದಾರೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರಿಗೆ ಬರೆದಿರುವ ಪತ್ರದಲ್ಲಿ ಕೇಜ್ರಿವಾಲ್ ಈ ಕಳವಳ ವ್ಯಕ್ತಪಡಿಸಿದ್ದಾರೆ.

'ಸ್ವಾತಂತ್ರ್ಯ, ಸಮಾನತೆ, ಜಾತ್ಯತೀತತೆ ಅಥವಾ ಸಹೋದರತ್ವ ಸೇರಿದಂತೆ ಸಂವಿಧಾನದ ಪ್ರತಿಯೊಂದು ಆಶಯ–ತತ್ವದೊಂದಿಗೆ ರಾಜಿ ಮಾಡಿಕೊಳ್ಳಲಾಗುತ್ತಿದೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

2ನೇ ಚಾರ್ಜ್‌ಶೀಟ್ ವಿಚಾರಣೆ 24ಕ್ಕೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿರುವ ಎರಡನೇ ಪೂರಕ ದೋಷಾರೋಪ ಪಟ್ಟಿ ಕುರಿತ ವಿಚಾರಣೆಯನ್ನು ಏ.24ರಂದು ನಡೆಸುವುದಾಗಿ ದೆಹಲಿ ನ್ಯಾಯಾಲಯ ಶನಿವಾರ ಹೇಳಿದೆ. ಇದೇ ಪ್ರಕರಣಕ್ಕೆ ಸಂಬಂಧಿಸಿ ಮನೀಷ್ ಸಿಸೋಡಿಯಾ ಅವರ ಜಾಮೀನು ಅರ್ಜಿ ವಿಚಾರಣೆಯನ್ನು ಏ.18ಕ್ಕೆ ಮುಂದೂಡಿ ನ್ಯಾಯಾಧೀಶರು ಆದೇಶಿಸಿದರು.

'ಮೊಬೈಲ್ ನಾಶ ಆರೋಪ: ನಿಜ ಸಂಗತಿಯೇ ಬೇರೆ'

ನವದೆಹಲಿ (ಪಿಟಿಐ): 'ಸಿಬಿಐ ಹಾಗೂ ಇ.ಡಿ ಸುಳ್ಳು ಅಫಿಡವಿಟ್‌ಗಳನ್ನು ಸಲ್ಲಿಸಿವೆ. ಮಾಜಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರು 14 ಮೊಬೈಲ್ ಫೋನ್‌ಗಳನ್ನು ನಾಶ ಮಾಡಿದ್ದಾರೆ ಎಂದು ಸಿಬಿಐ ಆರೋಪಿಸುತ್ತಿದೆ. ಆದರೆ, ನಿಜ ಸಂಗತಿ ಬೇರೆಯೇ ಇದೆ' ಎಂದು ಅರವಿಂದ ಕೇಜ್ರಿವಾಲ್ ಹೇಳಿದರು.

'14 ಫೋನ್‌ಗಳ ಪೈಕಿ, ನಾಲ್ಕು ಫೋನ್‌ಗಳು ಇ.ಡಿ, ಒಂದು ಫೋನ್ ಸಿಬಿಐ ಬಳಿ ಇದೆ. ಉಳಿದ ಮೊಬೈಲ್ ಫೋನ್‌ಗಳು ಸಕ್ರಿಯವಾಗಿದ್ದು, ಪಕ್ಷದ ಕಾರ್ಯಕರ್ತರು ಬಳಸುತ್ತಿದ್ದಾರೆ. ಸಿಬಿಐ ಹಾಗೂ ಇ.ಡಿ.ಗೆ ಈ ವಿಷಯ ಗೊತ್ತಿದ್ದರೂ, ಕೋರ್ಟ್‌ಗೆ ಸುಳ್ಳು ಅಫಿಡವಿಟ್ ಸಲ್ಲಿಸಿವೆ' ಎಂದು ಟೀಕಿಸಿದರು.

'₹ 100 ಕೋಟಿ ಲಂಚ ತೆಗೆದುಕೊಳ್ಳಲಾಗಿದೆ ಎಂದು ಆರೋಪಿಸಲಾಗಿದೆ. ಆದರೆ, ಇಷ್ಟೊಂದು ಹಣ ಎಲ್ಲಿದೆ' ಎಂದು ಕೇಜ್ರಿವಾಲ್ ಪ್ರಶ್ನಿಸಿದರು.

'ಲಂಚವಾಗಿ ಪಡೆದ ಹಣವನ್ನು ಗೋವಾ ವಿಧಾನಸಭಾ ಚುನಾವಣೆಯಲ್ಲಿ ಬಳಕೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಂಡಿದ್ದ ಸಿಬ್ಬಂದಿಯನ್ನು ಒದಗಿಸಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನೂ ಸಿಬಿಐ ಪ್ರಶ್ನಿಸಿದೆ. ಆದರೆ, ಅವರಿಗೆ ಯಾವುದೇ ಸಾಕ್ಷ್ಯ ಸಿಕ್ಕಿಲ್ಲ. ಹೀಗಾಗಿ, ಅಬಕಾರಿ ನೀತಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದರು.

'ಕಳೆದ ತಿಂಗಳು ವಿಧಾನಸಭೆ ಅಧಿವೇಶನದ ವೇಳೆ ನಾನು ಭ್ರಷ್ಟಾಚಾರ ಕುರಿತು ಮಾತನಾಡಿದ್ದೆ. ಹೀಗಾಗಿ, ತನಿಖಾ ಸಂಸ್ಥೆಗಳು ನಡೆಯುವ ವಿಚಾರಣೆ ಎದುರಿಸುವುದಕ್ಕೆ ಸಂಬಂಧಿಸಿ, ಮುಂದಿನ ಸರದಿ ನನ್ನದೇ ಎಂಬುದು ನನಗೆ ಕೆಲವರು ತಿಳಿಸಿದ್ದರು' ಎಂದೂ ಕೇಜ್ರಿವಾಲ್ ಹೇಳಿದರು.

ಬಿಗಿ ಭದ್ರತೆ: ಸಮನ್ಸ್ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ವಿಚಾರಣೆಗೆ ಭಾನುವಾರ ಹಾಜರಾಗಲಿದ್ದು, ಸಿಬಿಐ ಕಚೇರಿ ಬಳಿ ಭಾರಿ ಪೊಲೀಸ್ ಭದ್ರತೆ ಹಾಕಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಅರೆ ಸೇನಾ ಪಡೆ ಸೇರಿದಂತೆ 1,000ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಆಮ್ ಆದ್ಮಿ ಪಕ್ಷದ ಕಚೇರಿ ಬಳಿಯೂ ಪೊಲೀಸರನ್ನು ನಿಯೋಜಿಸಲಾಗುವುದು ಎಂದೂ ಅವರು ತಿಳಿಸಿದ್ದಾರೆ.

ಶಕ್ತಿ ಪ್ರದರ್ಶನ: ಸಿಬಿಐ ಕಚೇರಿಗೆ ಭಾನುವಾರ ತೆರಳಲಿರುವ ಅರವಿಂದ ಕೇಜ್ರಿವಾಲ್ ಅವರಿಗೆ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್, ದೆಹಲಿ ಸಂಪುಟದ ಎಲ್ಲ ಸಚಿವರು ಹಾಗೂ ಪಕ್ಷದ ರಾಜ್ಯಸಭಾ ಸದಸ್ಯರು ಸಾಥ್ ನೀಡಲಿದ್ದಾರೆ. ಈ ಮೂಲಕ ಅವರು ಶಕ್ತಿ ಪ್ರದರ್ಶನ ನಡೆಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಸುಳ್ಳುಪತ್ತೆ ಪರೀಕ್ಷೆಗೆ ಒಳಗಾಗಿ: ಬಿಜೆಪಿ ಸವಾಲು

'ದೆಹಲಿ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಸಮನ್ಸ್ ಜಾರಿಗೊಳಿಸಿದ ನಂತರ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ನಡುಕ ಶುರುವಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಹೆದರುವ ಕಾರಣ ಇಲ್ಲ ಎನ್ನುವುದಾದರೆ ಕೇಜ್ರಿವಾಲ್ ಅವರು ಸುಳ್ಳು ಪತ್ತೆ ಪರೀಕ್ಷೆಗೆ ಒಳಗಾಗಲಿ' ಎಂದು ಬಿಜೆಪಿ ಶನಿವಾರ ಸವಾಲು ಹಾಕಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ, ಸಿಬಿಐ ಸಮನ್ಸ್ ನೀಡಿದ ಮೇಲೆ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಕೇಜ್ರಿವಾಲ್ ನಡೆಯನ್ನು ಖಂಡಿಸಿದರು.

'ಶಿಕ್ಷೆಯಾದರೆ ಕೋರ್ಟ್ ವಿರುದ್ಧ ದಾವೆ ಹೂಡುತ್ತೀರಾ?'

'ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಒಂದು ವೇಳೆ ನಿಮಗೆ ಶಿಕ್ಷೆಯಾದರೆ, ನೀವು ಕೋರ್ಟ್ ವಿರುದ್ಧ ದಾವೆ ಹೂಡುತ್ತೀರಾ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಶನಿವಾರ ಪ್ರಶ್ನಿಸಿದ್ದಾರೆ.

ಅಬಕಾರಿ ನೀತಿ ಪ್ರಕರಣದಲ್ಲಿ ತಮ್ಮ ವಿರುದ್ಧ ಸಿಬಿಐ ಹಾಗೂ ಇ.ಡಿ ಸುಳ್ಳು ಪ್ರಕರಣ ದಾಖಲಿಸಿ, ಅಫಿಡವಿಟ್‌ಗಳನ್ನು ಸಲ್ಲಿಸಿದ್ದು, ಈ ತನಿಖಾ ಸಂಸ್ಥೆಗಳ ವಿರುದ್ಧ ಕೋರ್ಟ್ ಮೆಟ್ಟಿಲೇರುವುದಾಗಿ ಕೇಜ್ರಿವಾಲ್ ಹೇಳಿದ್ದರು. ಈ ಹಿನ್ನೆಲೆಯಲ್ಲಿ ಸಚಿವ ರಿಜಿಜು ಈ ಪ್ರಶ್ನೆ ಕೇಳಿದ್ದಾರೆ.

ಕೇಜ್ರಿವಾಲ್ ಅವರ ಈ ಹೇಳಿಕೆಯನ್ನು ತಮ್ಮ ಟ್ವೀಟ್‌ನಲ್ಲಿ ಹಂಚಿಕೊಂಡಿರುವ ರಿಜಿಜು, 'ಭ್ರಷ್ಟಾಚಾರವು ಕೇಜ್ರಿವಾಲ್ ಪಾಲಿಗೆ ಎಂದಿಗೂ ಸಮಸ್ಯೆಯೇ ಆಗಿರಲಿಲ್ಲ' ಎಂದು ಕುಟುಕಿದ್ದಾರೆ.

ಖುದ್ದು ಹಾಜರಿ: ರಾಹುಲ್‌ಗೆ ವಿನಾಯಿತಿ

ಠಾಣೆ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪದಾಧಿಕಾರಿಯೊಬ್ಬರು ದಾಖಲಿಸಿರುವ ಮಾನನಷ್ಟ ಮೊಕದ್ದಮೆ ಪ್ರಕರಣದ ವಿಚಾರಣೆಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಖುದ್ದು ಹಾಜರಾತಿಯಿಂದ ಠಾಣೆಯ ಜಿಲ್ಲಾ ನ್ಯಾಯಾಲಯವು ಕಾಯಂ ವಿನಾಯಿತಿ ನೀಡಿದೆ.

ಭಿವಂಡಿ ಪ್ರಥಮದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ವಿನಾಯಿತಿಯ ಆದೇಶ ನೀಡಿದ್ದಾರೆ.

ಕೋವಿಡ್: 27 ಮಂದಿ ಸಾವು

ನವದೆಹಲಿ (ಪಿಟಿಐ): ದೇಶದಲ್ಲಿ ಹೊಸದಾಗಿ ಕೋವಿಡ್‌ನ 10,753 ಪ್ರಕರಣಗಳು ಪತ್ತೆಯಾಗಿದ್ದು, 27 ಮಂದಿ ಮೃತಪಟ್ಟಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 53,720ಕ್ಕೆ ಏರಿಕೆಯಾಗಿದೆ. ದೇಶದಲ್ಲಿ ಇಲ್ಲಿಯವರೆಗೆ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 5,31,091ಕ್ಕೆ ಏರಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ದೆಹಲಿ ಮತ್ತು ಕೇರಳದಲ್ಲಿ ತಲಾ ಆರು, ಮಹಾರಾಷ್ಟ್ರದಲ್ಲಿ ನಾಲ್ಕು, ರಾಜಸ್ಥಾನದಲ್ಲಿ ಮೂವರು, ಛತ್ತೀಸಗಢ, ಗುಜರಾತ್, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಧ್ಯಪ್ರದೇಶ, ಉತ್ತರಾಖಂಡ ಮತ್ತು ಉತ್ತರ ಪ್ರದೇಶದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ದೈನಂದಿನ ಸೋಂಕು ಹರಡುವಿಕೆ ಪ್ರಮಾಣ ಶೇ 6.78ರಷ್ಟಿದೆ. ವಾರದ ಪ್ರಮಾಣ ಶೇ 4.49ರಷ್ಟಿದೆ. ಚೇತರಿಕೆ ಪ್ರಮಾಣ ಶೇ 98.69ರಷ್ಟಿದೆ. ಇಲ್ಲಿಯವರೆಗೆ ದೇಶದಲ್ಲಿ 4.42 ಕೋಟಿ ಜನರು ಸೋಂಕಿಗೆ ತುತ್ತಾಗಿದ್ದಾರೆ ಎಂದು ಇಲಾಖೆ ತಿಳಿಸಿದೆ.

ವಿಶ್ವ ಕಲಾ ದಿನ

'ವಿಶ್ವ ಕಲಾ ದಿನ' ನಿಮಿತ್ತ ಕೋಲ್ಕತ್ತದಲ್ಲಿ ಶನಿವಾರ ನಡೆದ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಪುರುಲಿಯಾದ ಚೌ ನೃತ್ಯಪಟುಗಳು ಗಮನಸೆಳೆದರು

–ಪಿಟಿಐ ಚಿತ್ರ

ಕಾಂಗ್ರೆಸ್‌ನಿಂದಾಗಿ ಸುದೀರ್ಘ ರಾಜಕೀಯ ಬದುಕು: ಖರ್ಗೆ

ಹೈದರಾಬಾದ್ (ಪಿಟಿಐ): 'ತಳಮಟ್ಟದ ಹಿನ್ನೆಲೆಯಿಂದ ಬಂದ ನನ್ನಂತಹ ವ್ಯಕ್ತಿ ಸುದೀರ್ಘ ಕಾಲ ರಾಜಕೀಯ ಬದುಕಿನಲ್ಲಿ ಇರಲು, ಶಾಸಕ, ಸಂಸದ ಸೇರಿದಂತೆ ಉನ್ನತ ಹುದ್ದೆಗಳನ್ನು ಹೊಂದಲು ಕಾಂಗ್ರೆಸ್ ಪಕ್ಷದಿಂದಾಗಿ ಸಾಧ್ಯವಾಯಿತು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ತೆಲಂಗಾಣದಲ್ಲಿ ಶುಕ್ರವಾರ ನಡೆದ 'ಜೈ ಭಾರತ್ ಸತ್ಯಾಗ್ರಹ ಸಭಾ'ದಲ್ಲಿ ಮಾತನಾಡಿದ ಅವರು, 'ಮಾಜಿ ಪ್ರಧಾನಿ ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಪ್ರೋತ್ಸಾಹ ನೀಡದಿದ್ದರೆ ನನ್ನಂತಹ ಬಡವ, ಜನಪ್ರತಿನಿಧಿ ಆಗುವುದು ಆಗುತ್ತಿರಲಿಲ್ಲ' ಎಂದರು.

ಈಗ ಎಐಸಿಸಿ ಅಧ್ಯಕ್ಷನಾಗುವ ಅವಕಾಶವನ್ನು ನನಗೆ ಸೋನಿಯಾ ಗಾಂಧಿ ಅವರು ಕಲ್ಪಿಸಿದ್ದಾರೆ. ಇದೊಂದು ಅತಿದೊಡ್ಡ ಹೊಣೆಗಾರಿಕೆಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದ ಅವರು, ಮಾನಹಾನಿ ಪ್ರಕರಣದಲ್ಲಿ ಶಿಕ್ಷೆ ಪ್ರಕಟವಾದ 24 ಗಂಟೆಗಳಲ್ಲಿ ರಾಹುಲ್ ಗಾಂಧಿ ಅವರನ್ನು ಲೋಕಸಭೆಯ ಸದಸ್ಯತ್ವದಿಂದ ಅನರ್ಹಗೊಳಿಸಲಾಗುತ್ತದೆ. ಆದರೆ, ಗುಜರಾತ್‌ನ ಸಂಸದರೊಬ್ಬರು ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾದರೂ ಸದಸ್ಯತ್ವದಿಂದ ಅನರ್ಹಗೊಳಿಸುವುದಿಲ್ಲ ಎಂದು ದೂರಿದರು. ಆದರೆ, ಖರ್ಗೆ ಅವರು ಗುಜರಾತ್‌ನ ಸಂಸದನ ಹೆಸರು ಉಲ್ಲೇಖಿಸಲಿಲ್ಲ.

ದಲಿತ ಕುಟುಂಬಗಳಿಗೆ ಮೂರು ಎಕರೆ ಭೂಮಿ ನೀಡದಿರುವುದು ಸೇರಿದಂತೆ ತನ್ನ ಭರವಸೆಗಳನ್ನು ಈಡೇರಿಸದ ತೆಲಂಗಾಣದ ಬಿಆರ್‌ಎಸ್ ಸರ್ಕಾರದ ಆಡಳಿತ ವೈಖರಿಯನ್ನು ಅವರು ತರಾಟೆಗೆ ತೆಗೆದುಕೊಂಡರು.

ಸಂಕ್ಷಿಪ್ತ ಸುದ್ದಿ

ಮೋದಿ ಪದವಿ: ಕೇಜ್ರಿವಾಲ್‌ಗೆ ಸಮನ್ಸ್

ಅಹಮದಾಬಾದ್: ಪ್ರಧಾನಿ ನರೇಂದ್ರ ಮೋದಿ ಅವರ ಪದವಿಗೆ ಸಂಬಂಧಿಸಿ ಗುಜರಾತ್ ವಿಶ್ವವಿದ್ಯಾಲಯ ದಾಖಲಿಸಿದ್ದ ಕ್ರಿಮಿನಲ್ ಮಾನನಷ್ಟ ಹಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮೇ 23ರಂದು ಹಾಜರಾಗುವಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಎಎಪಿ ರಾಜ್ಯಸಭಾ ಸಂಸದ ಸಂಜಯ್ ಸಿಂಗ್ ಅವರಿಗೆ ಇಲ್ಲಿನ ನ್ಯಾಯಾಲಯ ಶನಿವಾರ ಸಮನ್ಸ್ ಜಾರಿ ಮಾಡಿದೆ.

ಶ್ರದ್ಧಾ ಕಳೇಬರ ನೀಡುವಂತೆ ಕೋರ್ಟ್ ಮೆಟ್ಟಿಲೇರಿದ ತಂದೆ

ನವದೆಹಲಿ (ಪಿಟಿಐ): ಸಹಜೀವನ ಸಂಗಾತಿಯಿಂದಲೇ ಹತ್ಯೆಗೊಳಗಾದ ಶ್ರದ್ಧಾ ವಾಲ್ಕರ್ ಅವರ ಅಂತ್ಯಸಂಸ್ಕಾರ ನೆರವೇರಿಸಲು ಕಳೇಬರದ ಉಳಿದ ಭಾಗಗಳನ್ನು ನೀಡುವಂತೆ ಕೋರಿ ಶ್ರದ್ಧಾ ತಂದೆ ವಿಕಾಸ್ ಮದನ್ ವಾಲ್ಕರ್ ಶನಿವಾರ ಇಲ್ಲಿನ ಕೋರ್ಟ್ ಮೊರೆ ಹೋಗಿದ್ದಾರೆ.

ಸಂಪ್ರದಾಯದ ಪ್ರಕಾರ, ಮೃತಪಟ್ಟ ಒಂದು ವರ್ಷದ ಒಳಗೆ ಅಂತ್ಯಸಂಸ್ಕಾರ ನೆರವೇರಿಸಬೇಕು. ಹಿಂದೂ ಕ್ಯಾಲೆಂಡರ್ ಪ್ರಕಾರ ಮೇ 8ರ ಒಳಗಾಗಿ ಅಂತಿಮ ವಿಧಿವಿಧಾನ ನೆರವೇರಿಸಬೇಕು ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ.

ಅರ್ಜಿ ವಿಚಾರಣೆ ವೇಳೆ ಏ.29ರಂದು ಈ ಬಗ್ಗೆ ಪ್ರತಿಕ್ರಿಯೆ ನೀಡುವುದಾಗಿ ದೆಹಲಿ ಪೊಲೀಸರು ತಿಳಿಸಿದ್ದಾರೆ.

ನರೋಡ ಹತ್ಯಾಕಾಂಡ: 20ಕ್ಕೆ ತೀರ್ಪು ಪ್ರಕಟ

ಅಹಮದಾಬಾದ್: ಗುಜರಾತ್‌ನ ಮಾಜಿ ಸಚಿವೆ ಮಾಯಾ ಕೊಡ್ನಾನಿ, ಬಜರಂಗ ದಳದ ಮುಖಂಡ ಬಾಬು ಬಜರಂಗಿ ಪ್ರಮುಖ ಆರೋಪಿಗಳಾಗಿರುವ ನರೋಡ ಹತ್ಯಾಕಾಂಡ ಪ್ರಕರಣದ ತೀರ್ಪನ್ನು ವಿಶೇಷ ನ್ಯಾಯಾಲಯವು ಏಪ್ರಿಲ್ 20ರಂದು ಪ್ರಕಟಿಸಲಿದೆ.

ಕಳೆದ ವಾರವೇ ಪ್ರಕರಣದ ವಿಚಾರಣೆ ಪೂರ್ಣಗೊಳಿಸಿರುವ ಪ್ರಧಾನ ಸೆಷನ್ಸ್ ನ್ಯಾಯಾಧೀಶರು ತೀರ್ಪನ್ನು ಕಾಯ್ದಿರಿಸಿದ್ದರು.

'ಜಗದ ಕಲ್ಯಾಣಕ್ಕಾಗಿ ಭಾರತದ ಉಗಮ'

ಅಹಮದಾಬಾದ್ (ಪಿಟಿಐ): 'ಜಗದ ಕಲ್ಯಾಣಕ್ಕಾಗಿ ಭಾರತದ ಉಗಮವಾಗಿದೆ. ವಿಶ್ವದಲ್ಲಿ ಹೆಚ್ಚುತ್ತಿರುವ ತನ್ನ ಬಲ, ವರ್ಚಸ್ಸಿನ ನಡುವೆಯೂ ತನ್ನ ಜ್ಞಾನವನ್ನು ಹಂಚಿಕೊಳ್ಳುವುದು ಅದರ ಕರ್ತವ್ಯವಾಗಿದೆ' ಎಂದು ಆರ್‌ಎಸ್‌ಎಸ್‌ನ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದರು.

ಗುಜರಾತ್ ವಿಶ್ವವಿದ್ಯಾಲಯದಲ್ಲಿ ಪುನರುತ್ಥಾನ ವಿದ್ಯಾಪೀಠವು ಸಿದ್ಧಪಡಿಸಿರುವ ಭಾರತದ ಪ್ರಾಚೀನ ಜ್ಞಾನ ಭಂಡಾರದ ವಿವಿಧ ವಿಷಯಗಳನ್ನು ಕುರಿತ 1,051 ಸಂಪುಟಗಳನ್ನು ಬಿಡುಗಡೆ ಮಾಡಿ ಮಾತನಾಡಿದರು.

'ಪುಲ್ವಾಮಾ ದಾಳಿ ಸರ್ಕಾರದ್ದೇ ಲೋಪ'

ಒಂದನೇ ಪುಟದಿಂದ...

'ಸಿಆರ್‌ಪಿಎಫ್ ಅಧಿಕಾರಿಗಳು ಹೆಲಿಕಾಪ್ಟರ್ ಒದಗಿಸುವಂತೆ ಕೋರಿದ್ದರು. ಏಕೆಂದರೆ ಸಿಬ್ಬಂದಿಯು ದೊಡ್ಡ ಸಂಖ್ಯೆಯಲ್ಲಿದ್ದಾಗ, ಅವರನ್ನು ರಸ್ತೆ ಮೂಲಕ ಕಳುಹಿಸುವುದಿಲ್ಲ. ಅವರಿಗೆ ಐದು ಹೆಲಿಕಾಪ್ಟರ್‌ಗಳ ಅವಶ್ಯಕತೆ ಇತ್ತು. ಅವರು ಸಂಬಂಧಿತ ಅಧಿಕಾರಿಯ ಮೂಲಕ ಗೃಹ ಸಚಿವಾಲಯಕ್ಕೆ ಈ ಸಂಬಂಧ ಮನವಿ ಮಾಡಿದ್ದರು. ಹೆಲಿಕಾಪ್ಟರ್ ನೀಡಲು ಗೃಹ ಸಚಿವಾಲಯ ನಿರಾಕರಿಸಿತು' ಎಂದು ಅವರು ಆರೋಪಿಸಿದ್ದಾರೆ.

'ನನಗೆ ಸ್ಪಷ್ಟವಾಗಿ ನೆನಪಿದೆ. ದಾಳಿ ನಡೆದಾಗ ಪ್ರಧಾನಿಯುವರು ಜಿಮ್ ಕಾರ್ಬೆಟ್ ಉದ್ಯಾನದಲ್ಲಿ ಚಿತ್ರೀಕರಣದಲ್ಲಿದ್ದರು. ಅಲ್ಲಿಗೆ ಫೋನ್ ಹೋಗುತ್ತಿರಲಿಲ್ಲ. ಅಲ್ಲಿಂದ ಹೊರಬಂದ ತಕ್ಷಣ ಅವರು ನನಗೆ ಕರೆ ಮಾಡಿದ್ದರು' ಎಂದು ಮಲಿಕ್ ಹೇಳಿದ್ದಾರೆ. (ಮ್ಯಾನ್ ವರ್ಸಸ್ ವೈಲ್ಡ್ ಕಾರ್ಯಕ್ರಮಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗಿಯಾಗಿದ್ದ ಸಂಚಿಕೆಯ ಚಿತ್ರೀಕರಣ ಅಲ್ಲಿ ನಡೆಯುತ್ತಿತ್ತು. ಅದೇ ದಿನ ಪುಲ್ವಾಮಾ ದಾಳಿ ನಡೆದಿತ್ತು).

'ಇದು ನಮ್ಮ ತಪ್ಪಿನಿಂದಲೇ ಆದ ಕೃತ್ಯ. ಹೆಲಿಕಾಪ್ಟರ್ ನೀಡಿದ್ದಿದ್ದರೆ, ಈ ರೀತಿ ಆಗುತ್ತಿರಲಿಲ್ಲ ಎಂದು ಅವರಿಗೆ ವಿವರಿಸಿದ್ದೆ. ಆಗ ಪ್ರಧಾನಿ, 'ಈಗ ನೀನು ಸುಮ್ಮನಿರು' ಎಂದಿದ್ದರು. ಇದು ನಮ್ಮದೇ ಲೋಪ ಎಂದು ನಾನು ಅಷ್ಟರಲ್ಲಾಗಲೇ ಒಂದೆರಡು ಸುದ್ದಿ ವಾಹಿನಿಗಳಿಗೆ ಪ್ರತಿಕ್ರಿಯೆ ನೀಡಿದ್ದೆ. ಅದಕ್ಕೆ ಪ್ರಧಾನಿ, 'ಇದನ್ನೆಲ್ಲಾ ಮಾತನಾಡಬೇಡ. ಈ ವಿಷಯವೇ ಬೇರೆ. ಅದನ್ನು ನಾವು ಸಂಭಾಳಿಸುತ್ತೇವೆ. ಆ ಬಗ್ಗೆ ನಾನು ಮಾತನಾಡುತ್ತೇನೆ' ಎಂದು ನನಗೆ ತಾಕೀತು ಮಾಡಿದ್ದರು. ಅಜಿತ್ ಡೊಭಾಲ್ ಸಹ ಸುಮ್ಮನಿರಿ, ಏನೂ ಮಾತನಾಡಬೇಡಿ ಎಂದು ನನಗೆ ಸೂಚಿಸಿದ್ದರು' ಎಂದು ಸತ್ಯಪಾಲ್ ಮಲಿಕ್ ಹೇಳಿದ್ದಾರೆ.

> **ಸತ್ಯಪಾಲ್ ಮಲಿಕ್ ಇಂಥ ಆರೋಪಗಳನ್ನು ಹಿಂದೆಯೂ ಮಾಡಿದ್ದರು. ಆದರೆ, ಇಂಥ ಹೇಳಿಕೆಗಳು ಅವರ ಉತ್ತರದಾಯಿತ್ವ ಕುರಿತು ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ**
> **ಅಮಿತ್ ಮಾಳವೀಯ,** ಬಿಜೆಪಿ ಐ.ಟಿ.ವಿಭಾಗದ ಮುಖ್ಯಸ್ಥ

ಒಂದು ವಿದ್ಯುತ್ ಯೋಜನೆ ಮತ್ತು ರಿಲಯನ್ಸ್ ವಿಮಾ ಯೋಜನೆಗೆ ಅನುಮತಿ ನೀಡುವಂತೆ ಬಿಜೆಪಿ–ಆರ್‌ಎಸ್‌ಎಸ್ ನಾಯಕ ರಾಮ ಮಾಧವ್ ತಮ್ಮ ಮೇಲೆ ಒತ್ತಡ ಹೇರಿದ್ದರು ಎಂದೂ ಮಲಿಕ್ ಆರೋಪಿಸಿದ್ದಾರೆ. ಆದರೆ, ತಾವು ತಪ್ಪು ಮಾಡುವುದಿಲ್ಲ ಎಂದು ಹೇಳಿ ಅನುಮತಿ ನಿರಾಕರಿಸಿದ್ದೆ ಎಂದಿದ್ದಾರೆ. ಈ ಯೋಜನೆಗಳಿಗೆ ಅನುಮತಿ ನೀಡಿದ್ದರೆ ತಮಗೆ ₹300 ಕೋಟಿ ದೊರೆಯುತ್ತಿತ್ತು ಎಂದು ಕೆಲವು ಜನರು ಹೇಳಿದ್ದರು ಎಂದೂ ಅವರು ನೆನಪಿಸಿಕೊಂಡಿದ್ದಾರೆ.

ಕಾಶ್ಮೀರದ ಬಗ್ಗೆ ಪ್ರಧಾನಿಗೆ ಏನೇನೂ ಗೊತ್ತಿರಲಿಲ್ಲ. ಅಲ್ಲಿನ ಹುರಿಯತ್ ಹೇಗೆ ಕೆಲಸ ಮಾಡುತ್ತದೆ ಎಂಬುದರ ಬಗ್ಗೆ ಅವರಿಗೆ ಗೊತ್ತಿಲ್ಲ. ಕಾಶ್ಮೀರಿ ಜನರ ನಿಜವಾದ ಸಮಸ್ಯೆಗಳ ಬಗ್ಗೆ ಪ್ರಧಾನಿಗೆ ಅರಿವಿಲ್ಲ. ಕಾಶ್ಮೀರದ ಇಂದಿನ ಎಲ್ಲಾ ಸಮಸ್ಯೆಗಳಿಗೆ ಕಾಶ್ಮೀರಿ ಜನರೇ ಸಂಪೂರ್ಣ ಹೊಣೆಯಲ್ಲ. ದೆಹಲಿಯಲ್ಲಿ ಕುಳಿತಿರುವವರ ಹೊಣೆಗಾರಿಕೆ ಶೇ 50ರಷ್ಟಿದೆ ಎಂದು ನಾನು 2018ರಲ್ಲೇ ಹೇಳಿದ್ದೆ. ನಾವು (ಕೇಂದ್ರ ಸರ್ಕಾರ) ಪ್ರಾಮಾಣಿಕವಾಗಿ ಕೆಲಸ ಮಾಡಿದ್ದರೆ ಆ ಸಮಸ್ಯೆಗಳನ್ನು ಬಗೆಹರಿಸಬಹುದಿತ್ತು. ಆದರೆ, ನಾವು ಪ್ರಾಮಾಣಿಕವಾಗಿ ಕೆಲಸ ಮಾಡಿಲ್ಲ. ಚುನಾವಣಾ ಫಲಿತಾಂಶವನ್ನು ಬದಲಿಸಿದೆವು. ಈ ರೀತಿ ಮಾಡುತ್ತಿರುವುದರಿಂದಲೇ ಅಲ್ಲಿನ ಜನರಿಗೆ ನಮ್ಮ ಮೇಲೆ ನಂಬಿಕೆ ಬರುವುದಿಲ್ಲ. ಆ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು ಎಂದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಲು ಸಮಯ ಕೇಳಿದರೆ ಈ ಬಗ್ಗೆಯೂ ಪ್ರಧಾನಿ ಕಚೇರಿಯೇ ನಿರ್ಧಾರ ಕೈಗೊಳ್ಳುತ್ತದೆ. ನಾನು ರಾಜ್ಯಪಾಲರಾಗಿದ್ದಾಗ ಮುರ್ಮು ಅವರನ್ನು ಭೇಟಿಯಾಗಲು ಸಮಯ ನಿಗದಿ ಮಾಡಿಕೊಂಡಿದ್ದೆ. ರಾಷ್ಟ್ರಪತಿ ಅವರನ್ನು ಭೇಟಿಯಾಗಲು ರಾಷ್ಟ್ರಪತಿ ಭವನದತ್ತ ಹೊರಟಿದ್ದೆ. ಅದೇ ಸಂದರ್ಭದಲ್ಲಿ ಭೇಟಿಯನ್ನು ರದ್ದುಪಡಿಸಲಾಗಿತ್ತು ಎಂದು ಮಲಿಕ್ ಹೇಳಿದ್ದಾರೆ.

ವಿಮಾನ ಏಕೆ ಕೊಟ್ಟಿಲ್ಲ: ಕಾಂಗ್ರೆಸ್ ಪ್ರಶ್ನೆ

ಸಿಆರ್‌ಪಿಎಫ್ ಸಿಬ್ಬಂದಿಯು ರಸ್ತೆ ಮಾರ್ಗದಲ್ಲಿ ಸಂಚರಿಸಿದರೆ ಉಗ್ರರ ದಾಳಿಯ ಅಪಾಯ ಇದ್ದರೂ ವಿಮಾನದ ವ್ಯವಸ್ಥೆ ಏಕೆ ಮಾಡಿಲ್ಲ ಎಂದು ಕಾಂಗ್ರೆಸ್ ಪ್ರಶ್ನಿಸಿದೆ. ಪುಲ್ವಾಮಾ ದಾಳಿಯ ಕುರಿತ ತನಿಖೆಯ ಫಲಿತಾಂಶ ಏನಾಗಿದೆ ಎಂದೂ ಕೇಳಿದೆ.

ಸತ್ಯಪಾಲ್ ಮಲಿಕ್ ಅವರು ಮಾಡಿರುವ ಆರೋಪಗಳ ಕುರಿತು ಸರ್ಕಾರ ಪ್ರತಿಕ್ರಿಯೆ ನೀಡಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆಗ್ರಹಿಸಿದ್ದಾರೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವನ್ನು 'ಕನಿಷ್ಠ ಆಳ್ವಿಕೆ, ಗರಿಷ್ಠ ಮೌನ' ಎಂದು ಅವರು ಬಣ್ಣಿಸಿದ್ದಾರೆ.

'ಜೈಷ್ ಎ ಮೊಹಮ್ಮದ್ ಉಗ್ರರಿಂದ ಇದ್ದ ಬೆದರಿಕೆಯನ್ನು ನಿರ್ಲಕ್ಷಿಸಿದ್ದು ಏಕೆ? 2019ರ ಜನವರಿ 2ರಿಂದ 2019ರ ಫೆಬ್ರುವರಿ 13ರ ನಡುವೆ ಗುಪ್ತಚರ ವಿಭಾಗದಿಂದ 11 ಮಾಹಿತಿಗಳು ಬಂದಿದ್ದವು. ಅವುಗಳನ್ನು ನಿರ್ಲಕ್ಷಿಸಿದ್ದು ಏಕೆ? ಉಗ್ರರಿಗೆ 300 ಕಿಲೋ ಆರ್‌ಡಿಎಕ್ಸ್ ಸಿಕ್ಕಿದ್ದು ಹೇಗೆ' ಎಂದು ಕಾಂಗ್ರೆಸ್ ನಾಯಕಿ ಸುಪ್ರಿಯಾ ಶ್ರೀನಾತೆ ಪ್ರಶ್ನಿಸಿದ್ದಾರೆ. 'ಪುಲ್ವಾಮಾ ದಾಳಿಯಾಗಿ ನಾಲ್ಕು ವರ್ಷಗಳಾದವು. ತನಿಖೆ ಎಲ್ಲಿಗೆ ಬಂದಿದೆ. ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡಭಾಲ್ ಮತ್ತು ಆಗಿನ ಗೃಹ ಸಚಿವ ರಾಜನಾಥ್ ಸಿಂಗ್ ಅವರ ಮೇಲೆ ಯಾವಾಗ ಹೇಗೆ ಉತ್ತರದಾಯಿತ್ವ ಹೊರಿಸುವಿರಿ' ಎಂದಿದ್ದಾರೆ.

'ಭ್ರಷ್ಟಾಚಾರ: ಮೋದಿ ತಲೆಕೆಡಿಸಿಕೊಳ್ಳುವುದಿಲ್ಲ'

ಭ್ರಷ್ಟಾಚಾರದ ಕುರಿತು ಮೋದಿ ಅವರು ತಲೆಯೇ ಕೆಡಿಸಿಕೊಂಡಿಲ್ಲ. ಭ್ರಷ್ಟಾಚಾರದ ಹಲವು ಪ್ರಕರಣಗಳನ್ನು ಮೋದಿ ಅವರ ಗಮನಕ್ಕೆ ಪದೇ ಪದೇ ತಂದ ಕಾರಣಕ್ಕಾಗಿಯೇ ತಮ್ಮನ್ನು ಗೋವಾ ರಾಜ್ಯಪಾಲ ಹುದ್ದೆಯಿಂದ ಮೇಘಾಲಯಕ್ಕೆ 2020ರ ಆಗಸ್ಟ್‌ನಲ್ಲಿ ಕಳುಹಿಸಲಾಯಿತು. ಭ್ರಷ್ಟಾಚಾರ ಪ್ರಕರಣಗಳ ತನಿಖೆ ನಡೆಸುವುದರ ಬದಲಿಗೆ ನಿರ್ಲಕ್ಷಿಸಲು ಸರ್ಕಾರ ನಿರ್ಧರಿಸಿತು. ಪ್ರಧಾನಿಯ ಸುತ್ತಲೂ ಇರುವ ಜನರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಅವರು ಪ್ರಧಾನಿ ಕಚೇರಿಯ ಹೆಸರನ್ನೂ ಬಳಸಿಕೊಳ್ಳುತ್ತಿದ್ದಾರೆ. ಇವೆಲ್ಲವನ್ನೂ ಮೋದಿ ಅವರ ಗಮನಕ್ಕೆ ತಂದರೂ ಅವರು ಅದರ ಕುರಿತು ತಲೆ ಕೆಡಿಸಿಕೊಳ್ಳಲಿಲ್ಲ ಎಂದು ಮಲಿಕ್ ವಿವರಿಸಿದ್ದಾರೆ.

ಕೊಹ್ಲಿ ಅರ್ಧಶತಕ, ಪದಾರ್ಪಣೆ ಪಂದ್ಯದಲ್ಲಿ ಮಿಂಚಿದ ವೈಶಾಖ್; ಡೆಲ್ಲಿಗೆ 5ನೇ ಸೋಲು

ಗೆಲುವಿನ ಹಾದಿಗೆ ಮರಳಿದ ಆರ್‌ಸಿಬಿ

• ಮಹಮ್ಮದ್ ನೂಮಾನ್

ಬೆಂಗಳೂರು: ಆಲ್‌ರೌಂಡ್ ಆಟವಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ವಾರಾಂತ್ಯ ದಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಿಕ್ಕಿರಿದ ಪ್ರೇಕ್ಷಕರಿಗೆ ಗೆಲುವಿನ ರಸದೌತಣ ಉಣಬಡಿಸಿತು.

ಶನಿವಾರ ನಡೆದ ಐಪಿಎಲ್ ಪಂದ್ಯವನ್ನು 23 ರನ್‌ಗಳಿಂದ ಗೆದ್ದ ಫಫ್ ಡುಪ್ಲೆಸಿ ಬಳಗ, ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸತತ ಐದನೇ ಸೋಲಿನತ್ತ ನೂಕಿತು. ಈ ಬಾರಿಯ ಟೂರ್ನಿಯಲ್ಲಿ ಮೂರನೇ ಅರ್ಧಶತಕ ಗಳಿಸಿದ ವಿರಾಟ್ ಕೊಹ್ಲಿ (50, 34 ಎ.) ಮತ್ತು ಪದಾರ್ಪಣೆ ಪಂದ್ಯದಲ್ಲಿ ಮಿಂಚಿದ ಕರ್ನಾಟಕದ ವೇಗಿ ವೈಶಾಖ್ ವಿಜಯಕುಮಾರ್ (20ಕ್ಕೆ 3) ಅವರು ಆರ್‌ಸಿಬಿ ಗೆಲುವಿನ ರೂವಾರಿಗಳು.

ಮೊದಲು ಬ್ಯಾಟ್ ಮಾಡಿದ ಬೆಂಗಳೂರಿನ ತಂಡ 6 ವಿಕೆಟ್‌ಗಳಿಗೆ 174 ರನ್ ಗಳಿಸಿದರೆ, ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ಡೇವಿಡ್ ವಾರ್ನರ್ ಬಳಗ 9 ವಿಕೆಟ್‌ಗಳಿಗೆ 151 ರನ್ ಕಲೆಹಾಕಿ ಸೋಲೊಪ್ಪಿಕೊಂಡಿತು. ಶಿಸ್ತಿನ ಬೌಲಿಂಗ್ ಜತೆ ಚುರುಕಿನ ಫೀಲ್ಡಿಂಗ್ ಕೂಡಾ ಆರ್‌ಸಿಬಿ ಗೆಲುವಿನ ಹಾದಿ ಸುಗಮಗೊಳಿಸಿತು.

ಮೊಹಮ್ಮದ್ ಸಿರಾಜ್ ಮತ್ತು ವೇಯ್ನ್ ಪಾರ್ನೆಲ್ ಎದುರಾಳಿ ತಂಡಕ್ಕೆ ಆರಂಭದಲ್ಲೇ ಆಘಾತ ನೀಡಿದರು. ಪೃಥ್ವಿ ಶಾ ಶೂನ್ಯಕ್ಕೆ ರನೌಟ್ ಆದರೆ, ಮಿಚೆಲ್ ಮಾರ್ಷ್ (0) ಅವರು ಪಾರ್ನೆಲ್‌ಗೆ ವಿಕೆಟ್ ಒಪ್ಪಿಸಿದರು. ಯಶ್ ಧುಲ್ ಅವರನ್ನು ಸಿರಾಜ್ ಎಲ್‌ಬಿ ಬಲೆಯಲ್ಲಿ ಕೆಡವಿದರು. ಎರಡು ರನ್ ಆಗುವಷ್ಟರಲ್ಲಿ ಮೂರು ವಿಕೆಟ್ ಕಳೆದುಕೊಂಡ ಡೆಲ್ಲಿ ಒತ್ತಡಕ್ಕೆ ಒಳಗಾಯಿತು.

ಆ ಬಳಿಕ ಮನೀಷ್ ಪಾಂಡೆ (50 ರನ್, 38 ಎ.) ಏಕಾಂಗಿ ಹೋರಾಟ ನಡೆಸಿದರೂ ತಂಡಕ್ಕೆ ಸೋಲು ತಪ್ಪಲಿಲ್ಲ.

ವೈಶಾಖ್ ಮಿಂಚು: ಹಿಂದಿನ ಪಂದ್ಯಗಳಲ್ಲಿ ಗಮನ ಸೆಳೆದಿದ್ದ ವಾರ್ನರ್ (19) ಅವರು ಇನಿಂಗ್ಸ್‌ಗೆ ಬಲ ತುಂಬುವ ಭರವಸೆ ಮೂಡಿಸಿದ್ದರು. ಆದರೆ ವೈಶಾಖ್ ಎಸೆತದಲ್ಲಿ ಕೊಹ್ಲಿಗೆ ಕ್ಯಾಚಿತ್ತು ಹೊರನಡೆದರು. ವೇಗದಲ್ಲಿ ಏರಿಳಿತ ಮಾಡುವ ಜತೆ, ನಿಖರ ಲೈನ್ ಮತ್ತು ಲೆಂಗ್ತ್ ಎಸೆತಗಳ ಮೂಲಕ ಬ್ಯಾಟರ್‌ಗಳನ್ನು ಕಾಡಿದ ವೈಶಾಖ್ ಮತ್ತೆರಡು ವಿಕೆಟ್‌ಗಳನ್ನು ಪಡೆದು ಚೊಚ್ಚಲ ಪಂದ್ಯವನ್ನು ಸ್ಮರಣೀಯವನ್ನಾಗಿಸಿಕೊಂಡರು. ರಜತ್ ಪಾಟೀದಾರ್ ಬದಲು ಕೆಲ ದಿನಗಳ ಹಿಂದೆಯಷ್ಟೇ ಅವರು ತಂಡವನ್ನು ಸೇರಿದ್ದರು.

ಕೊಹ್ಲಿ ಅರ್ಧಶತಕ: ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ ತಂಡ, ಕುಲದೀಪ್ ಯಾದವ್ ಮತ್ತು ಮಿಚೆಲ್ ಮಾರ್ಷ್ ಅವರ ಪರಿಣಾಮಕಾರಿ ಬೌಲಿಂಗ್ ನಡುವೆಯೂ ಸವಾಲಿನ ಮೊತ್ತ ಪೇರಿಸಿತು.

ಎನ್ರಿಚ್ ನಾಕಿಯಾ ಅವರ ಮೊದಲ ಓವರ್‌ನಲ್ಲಿ ಕೊಹ್ಲಿ ಎರಡು ಬೌಂಡರಿ ಹೊಡೆದರು. ಮೊದಲ ವಿಕೆಟ್‌ಗೆ 28 ಎಸೆತಗಳಲ್ಲಿ 42 ರನ್‌ಗಳು ಬಂದವು, ಡುಪ್ಲೆಸಿ ವಿಕೆಟ್ ಪಡೆದ ಮಿಚೆಲ್ ಮಾರ್ಷ್, ಡೆಲ್ಲಿಗೆ ಆರಂಭಿಕ ಯಶಸ್ಸು ತಂದಿತ್ತರು.

ಡುಪ್ಲೆಸಿ ಔಟಾದರೂ ಕೊಹ್ಲಿ ಬಿರುಸಿನ ಆಟ ಮುಂದುವರಿಸಿದರು. 10 ಓವರ್‌ಗಳು ಮುಗಿದಾಗ ಸ್ಕೋರ್ 89 ಆಗಿತ್ತು. ಮುಸ್ತಫಿಜುರ್ ಬೌಲ್ ಮಾಡಿದ 10ನೇ ಓವರ್‌ನಲ್ಲಿ 19 ರನ್‌ಗಳು ಬಂದವು. ಕೊಹ್ಲಿ 33 ಎಸೆತಗಳಲ್ಲಿ ಅರ್ಧಶತಕ ಪೂರೈಸಿ ಸಂಭ್ರಮಿಸಿದರು. ಆದರೆ ಲಲಿತ್ ಯಾದವ್ ಬೌಲ್ ಮಾಡಿದ ಮುಂದಿನ ಓವರ್‌ನಲ್ಲಿ ಸಿಕ್ಸರ್ ಹೊಡೆಯುವ ಪ್ರಯತ್ನದಲ್ಲಿ ಬೌಂಡರಿ ಲೈನ್ ಬಳಿ ಯಶ್ ಧುಲ್‌ಗೆ ಕ್ಯಾಚಿತ್ತರು.

ಗ್ಲೆನ್ ಮ್ಯಾಕ್ಸ್‌ವೆಲ್ (24) ಮೂರು ಸಿಕ್ಸರ್‌ಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರೂ, ಹೆಚ್ಚುಹೊತ್ತು ನಿಲ್ಲಲಿಲ್ಲ. ಮೂರು ವಿಕೆಟ್‌ಗಳಿಗೆ 132 ರನ್ ಗಳಿಸಿದ್ದ ಆರ್‌ಸಿಬಿ ಅದೇ ಮೊತ್ತಕ್ಕೆ ಹರ್ಷಲ್ ಪಟೇಲ್, ಮ್ಯಾಕ್ಸ್‌ವೆಲ್ ಮತ್ತು ದಿನೇಶ್ ಕಾರ್ತಿಕ್ ಅವರನ್ನು ಕಳೆದುಕೊಂಡಿತು. ಆ ಬಳಿಕ ಶಹಬಾಜ್ ಅಹಮದ್ ಮತ್ತು ಅನುಜ್ ರಾವತ್ ಅವರು ತಂಡವನ್ನು ಸವಾಲಿನ ಮೊತ್ತದತ್ತ ಮುನ್ನಡೆಸಿದರು.

ಹುರಿದುಂಬಿಸಲು ಬಂದ ಗ್ಲೆನ್ ಗೆಳೆಯರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡುತ್ತಿರುವ ಆಸ್ಟ್ರೇಲಿಯಾದ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಬಾಲ್ಯದ ಗೆಳೆಯರು ಉದ್ಯಾನನಗರಿಗೆ ಬಂದಿದ್ದಾರೆ.

ಮ್ಯಾಕ್ಸ್‌ವೆಲ್ ಅವರ ನಾಲ್ವರು ಗೆಳೆಯರಾದ ಮೆಕ್ಯಾನಿಕಲ್ ಫಾರ್ಮರ್ ಆಗಿರುವ ಅಂಥೋನಿ ಡೇವಿಸ್, ಶಾಲಾ ಶಿಕ್ಷಕ ಸಹೋದರರಾದ ಬ್ರೆಂಡನ್ ಮತ್ತು ನೇಥನ್ ವಾಲ್ಶ್ ಮತ್ತು ಎಲೆಕ್ಟ್ರಿಷಿಯನ್ ಆಗಿರುವ ಆ್ಯರನ್ ಡ್ಯಾನಿಲ್ಸ್ ಅವರು ಬಂದಿದ್ದಾರೆ.

'ಗ್ಲೆನ್ ಅವರ ಸಕಾರಾತ್ಮಕ ಗುಣ. ಚೈತನ್ಯಭರಿತ ನಡವಳಿಕೆಗಳು ಹಾಗೂ ದಯಾಗುಣಗಳು ಅವರನ್ನು ಉತ್ತಮ ವ್ಯಕ್ತಿಯನ್ನಾಗಿಸಿವೆ' ಎಂದು ಅಂಥೋನಿ ಡೇವಿಸ್ ಆರ್‌ಸಿಬಿಯ ಯೂಟ್ಯೂಬ್ ವಿಡಿಯೊದಲ್ಲಿ ಹೇಳಿದರು.

ಅನುಜ್ ಅದ್ಭುತ ಫೀಲ್ಡಿಂಗ್

ಆರ್‌ಸಿಬಿಯ ಅನುಜ್ ರಾವತ್ ಅದ್ಭುತ ಫೀಲ್ಡಿಂಗ್ ಮೂಲಕ ಪೃಥ್ವಿ ಶಾ ಅವರನ್ನು ರನೌಟ್ ಮಾಡಿ ಗಮನ ಸೆಳೆದರು. ಪೃಥ್ವಿ, ಎಕ್ಸ್‌ಟ್ರಾ ಕವರ್‌ನತ್ತ ಚೆಂಡನ್ನು ಹೊಡೆದು ಒಂದು ರನ್ ಗಳಿಸಲು ಮುಂದಾದರು. ಆದರೆ ಅನುಜ್ ಡೈವ್ ಮಾಡಿ ಚೆಂಡನ್ನು ಹಿಡಿತಕ್ಕೆ ಪಡೆದರಲ್ಲದೆ, ಮರುಕ್ಷಣದಲ್ಲೇ ಸ್ಟಂಪ್ ಗುರಿಯಾಗಿಸಿ ಎಸೆದರು. ಪೃಥ್ವಿ ಅವರ ವೈಫಲ್ಯ ಮತ್ತೆ ಮುಂದುವರಿಯಿತು.

ಡೆಲ್ಲಿ ತಂಡದ ಲಲಿತ್ ಯಾದವ್ ವಿಕೆಟ್ ಗಳಿಸಿದ ಸಂಭ್ರಮದಲ್ಲಿ ಆರ್‌ಸಿಬಿಯ ವೈಶಾಖ್ ವಿಜಯಕುಮಾರ್ –ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್

ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ– ಪ್ರಜಾವಾಣಿ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 6ಕ್ಕೆ 174 (20 ಓವರ್‌ಗಳಲ್ಲಿ))
ಕೊಹ್ಲಿ ಸಿ ಧುಲ್ ಬಿ ಲಲಿತ್ 50 (34 ಎ., 4X6, 6X1)
ಡುಪ್ಲೆಸಿ ಸಿ ಅಮನ್ ಬಿ ಮಾರ್ಷ್ 22 (16 ಎ., 3X4, 6X1)
ಮಹಿಪಾಲ್ ಸಿ ಪೊರೆಲ್ ಬಿ ಮಾರ್ಷ್ 26 (18 ಎ., 6X2)
ಮ್ಯಾಕ್ಸ್‌ವೆಲ್ ಸಿ ವಾರ್ನರ್ ಬಿ ಕುಲದೀಪ್ 24 (14 ಎ., 6X3)
ಹರ್ಷಲ್ ಸಿ ಪೊರೆಲ್ ಬಿ ಅಕ್ಷರ್ 6 (4 ಎ., 6X1)
ಶಹಬಾಜ್ ಔಟಾಗದೆ 20 (12 ಎ., 4X3)
ಕಾರ್ತಿಕ್ ಸಿ ಲಲಿತ್ ಬಿ ಕುಲದೀಪ್ 0 (1 ಎ)
ರಾವತ್ ಔಟಾಗದೆ 15 (22 ಎ., 4X1)
ಇತರೆ 11 (ಬೈ 1, ಲೆಗ್‌ಬೈ 6, ನೋಬಾಲ್ 1, ವೈಡ್ 3)
ವಿಕೆಟ್ ಪತನ: 1–42 (ಫಫ್ ಡುಪ್ಲೆಸಿ; 4.4), 2–89 (ವಿರಾಟ್ ಕೊಹ್ಲಿ; 10.1), 3–117 (ಮಹಿಪಾಲ್ ಲೊಮ್ರೊರ್; 12.3), 4–132 (ಹರ್ಷಲ್ ಪಟೇಲ್; 13.6), 5–132 (ಗ್ಲೆನ್ ಮ್ಯಾಕ್ಸ್‌ವೆಲ್; 14.1), 6–132 (ದಿನೇಶ್ ಕಾರ್ತಿಕ್; 14.2)
ಬೌಲಿಂಗ್: :ಎನ್ರಿಚ್ ನಾಕಿಯಾ 4–0–31–0, ಅಕ್ಷರ್ ಪಟೇಲ್ 3–0–25–1, ಮುಸ್ತಫಿಜುರ್ ರೆಹಮಾನ್ 3–0–41–0, ಮಿಚೆಲ್ ಮಾರ್ಷ್ 2–0–18–2, ಲಲಿತ್ ಯಾದವ್ 4–0–29–1, ಕುಲದೀಪ್ ಯಾದವ್ 4–1–23–2

ಡೆಲ್ಲಿ ಕ್ಯಾಪಿಟಲ್ಸ್ 9ಕ್ಕೆ 151 (20 ಓವರ್‌ಗಳಲ್ಲಿ)
ವಾರ್ನರ್ ಸಿ ಕೊಹ್ಲಿ ಬಿ ವೈಶಾಖ್ 19 (13 ಎ., 4X4)
ಪೃಥ್ವಿ ಶಾ ರನೌಟ್ (ಅನುಜ್) 0 (2 ಎ)
ಮಾರ್ಷ್ ಸಿ ಕೊಹ್ಲಿ ಬಿ ಪಾರ್ನೆಲ್ 0 (4 ಎ)
ಯಶ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 1 (4 ಎ)
ಪಾಂಡೆ ಎಲ್‌ಬಿಡಬ್ಲ್ಯು ಬಿ ಹಸರಂಗ 50 (38 ಎ., 4X5, 6X1)
ಪೊರೆಲ್ ಸಿ ಪಾರ್ನೆಲ್ ಬಿ ಹರ್ಷಲ್ 5 (8 ಎ)
ಅಕ್ಷರ್ ಸಿ ಸಿರಾಜ್ ಬಿ ವೈಶಾಖ್ 21 (14 ಎ., 4X3)
ಅಮನ್ ಸಿ ಕೊಹ್ಲಿ ಬಿ ಸಿರಾಜ್ 18 (10 ಎ., 4X1, 6X1)
ಲಲಿತ್ ಸಿ ಮ್ಯಾಕ್ಸ್‌ವೆಲ್ ಬಿ ವೈಶಾಖ್ 4 (7 ಎ)
ಎನ್ರಿಚ್ ಔಟಾಗದೆ 23 (14 ಎ., 4X4)
ಕುಲದೀಪ್ ಔಟಾಗದೆ 7 (6 ಎ., 6X1)
ಇತರೆ 3 (ವೈಡ್ 3)
ವಿಕೆಟ್ ಪತನ: 1–1 (ಪೃಥ್ವಿ ಶಾ; 0.4), 2–1 (ಮಿಚೆಲ್ ಮಾರ್ಷ್; 1.4), 3–2 (ಯಶ್ ಧುಲ್; 2.2), 4–30 (ಡೇವಿಡ್ ವಾರ್ನರ್; 5.4), 5–53 (ಅಭಿಷೇಕ್ ಪೊರೆಲ್; 8.5), 6–80 (ಅಕ್ಷರ್ ಪಟೇಲ್; 12.2), 7–98 (ಮನೀಷ್ ಪಾಂಡೆ; 13.6), 8–110 (ಲಲಿತ್ ಯಾದವ್; 15.5), 9–128 (ಅಮನ್ ಹಕೀಮ್ ಖಾನ್; 17.3)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–23–2, ವೇಯ್ನ್ ಪಾರ್ನೆಲ್ 4–0–28–1, ವೈಶಾಖ್ ವಿಜಯ್‌ಕುಮಾರ್ 4–0–20–3, ಶಹಬಾಜ್ ಅಹಮದ್ 1–0–11–0, ವನಿಂದು ಹಸರಂಗ 3–0–37–1, ಹರ್ಷಲ್ ಪಟೇಲ್ 4–0–32–1

ಫಲಿತಾಂಶ: ಆರ್‌ಸಿಬಿಗೆ 23 ರನ್ ಗೆಲುವು

ಪಂದ್ಯ ವೀಕ್ಷಿಸಿದ ಗರ್ಭಿಣಿಯರು

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯವು ಅಪರೂಪದ ಕ್ಷಣಕ್ಕೆ ಸಾಕ್ಷಿಯಾಯಿತು. ಮಗುವಿನ ನಿರೀಕ್ಷೆಯಲ್ಲಿರುವ 20 ಗರ್ಭಿಣಿಯರು ಪಂದ್ಯ ವೀಕ್ಷಿಸಿ ಸಂಭ್ರಮಿಸಿದರು. ಅವರ ಪತಿಯಂದಿರೂ ಜತೆಗಿದ್ದರು.

ಆರ್‌ಸಿಬಿ ತಂಡದ ಜತೆ ಆರೋಗ್ಯ ಸಹಭಾಗಿತ್ವ ಮಾಡಿಕೊಂಡಿರುವ ಮಣಿಪಾಲ್ ಆಸ್ಪತ್ರೆಯು, ತನ್ನ ಗ್ರಾಹಕ ಕೇಂದ್ರಿತ ಉಪಕ್ರಮದ ಭಾಗವಾಗಿ ಗರ್ಭಿಣಿಯರಿಗೆ ಈ ಅವಕಾಶ ಕಲ್ಪಿಸಿತ್ತು.

ಕ್ರೀಡಾಂಗಣದಲ್ಲಿರುವಷ್ಟು ಸಮಯ ಅವರ ಆರೋಗ್ಯದ ಮೇಲೆ ನಿಗಾ ಇಡಲು ಮೂವರು ದಾದಿಯರು, ಒಬ್ಬರು ವೈದ್ಯರು ಮತ್ತು ಐವರು ಸ್ವಯಂಸೇವಕರನ್ನು ನಿಯೋಜಿಸಲಾಗಿತ್ತು. ಎಲ್ಲರಿಗೂ ಹೆಲ್ತ್ ಕಿಟ್ ಒದಗಿಸಲಾಗಿತ್ತು. ಆಟ ಆನಂದಿಸಿದ ಗರ್ಭಿಣಿಯರು ಈ ವಿಶೇಷ ದಿನವನ್ನು ಸ್ಮರಣೀಯವನ್ನಾಗಿಸಿಕೊಂಡರು ಎಂದು ಪ್ರಕಟಣೆ ತಿಳಿಸಿದೆ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	4	3	1	0	6	1.588
ಲಖನೌ	5	3	2	0	6	0.761
ಗುಜರಾತ್	4	3	1	0	6	0.341
ಪಂಜಾಬ್	5	3	2	0	6	-0.109
ಕೋಲ್ಕತ್ತ	4	2	2	0	4	0.711
ಚೆನ್ನೈ	4	2	2	0	4	0.225
ಬೆಂಗಳೂರು	4	2	2	0	4	-0.316
ಹೈದರಾಬಾದ್	4	2	2	0	4	-0.822
ಮುಂಬೈ	3	1	2	0	2	-0.879
ಡೆಲ್ಲಿ	5	0	5	0	0	-1.488

* ಶನಿವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಶಿಖರ್	ಪಂಜಾಬ್	233

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ವುಡ್	ಲಖನೌ	11

ಗುಜರಾತ್ ಟೈಟನ್ಸ್‌ಗೆ ರಾಜಸ್ಥಾನ ರಾಯಲ್ಸ್ ಸವಾಲು ಇಂದು

ಅಹಮದಾಬಾದ್ (ಪಿಟಿಐ): ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ಬಳಗವು ಭಾನುವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ.

ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ತಂಡವು ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ.

ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ರಾಯಲ್ಸ್ ತಂಡವು ಅಂಕಪಟ್ಟಿಯ ಅಗ್ರಸ್ಥಾನದಲ್ಲಿದೆ.

ಟೈಟನ್ಸ್ ಬಳಗದ ಆರಂಭಿಕ ಜೋಡಿ ಶುಭಮನ್ ಗಿಲ್ ಹಾಗೂ ವೃದ್ಧಿಮಾನ್ ಸಹಾ ಇನಿಂಗ್ಸ್‌ಗೆ ಉತ್ತಮ ಅಡಿಪಾಯ ಹಾಕುವಲ್ಲಿ ಯಶಸ್ವಿಯಾಗಿದ್ದಾರೆ. ಸಾಯಿ ಸುದರ್ಶನ್, ವಿಜಯಶಂಕರ್ ಅವರೂ ಮಧ್ಯಮ ಕ್ರಮಾಂಕದಲ್ಲಿ ಉತ್ತಮ ಲಯದಲ್ಲಿದ್ದಾರೆ.

ಇವರನ್ನು ಕಟ್ಟಿಹಾಕುವ ಸವಾಲು ರಾಜಸ್ಥಾನ ತಂಡದ ಬೌಲರ್‌ಗಳಾದ ಸಂದೀಪ್ ಶರ್ಮಾ, ಆರ್.ಅಶ್ವಿನ್ ಮತ್ತು ಯಜುವೇಂದ್ರ ಚಾಹಲ್ ಅವರ ಮುಂದಿದೆ.

ಯಶಸ್ವಿ ಜೈಸ್ವಾಲ್, ಜೋಸ್ ಬಟ್ಲರ್, ದೇವದತ್ತ ಪಡಿಕ್ಕಲ್ ಹಾಗೂ ಶಿಮ್ರಾನ್ ಹೆಟ್ಮೆಯರ್ ಅವರು ಉತ್ತಮ ಲಯದಲ್ಲಿರುವುದರಿಂದ ರಾಜಸ್ಥಾನ ತಂಡವು ಬ್ಯಾಟಿಂಗ್‌ನಲ್ಲಿಯೂ ಪಾರಮ್ಯ ಮೆರೆಯುವ ಸಾಮರ್ಥ್ಯ ಹೊಂದಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್.

ಶುಭಮನ್

ದೇವದತ್ತ

ಪಂಜಾಬ್ ಕಿಂಗ್ಸ್‌ಗೆ ಜಯ

ಲಖನೌ (ಪಿಟಿಐ): ಸಿಕಂದರ್ ರಜಾ ಬ್ಯಾಟಿಂಗ್ ಹಾಗೂ ಸ್ಯಾಮ್ ಕರನ್ ಅವರ ಬೌಲಿಂಗ್ ಬಲದಿಂದ ಪಂಜಾಬ್ ಕಿಂಗ್ಸ್ ತಂಡವು ಐಪಿಎಲ್ ಪಂದ್ಯದಲ್ಲಿ ಜಯ ಗಳಿಸಿತು.

ಏಕನಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಪಂಜಾಬ್ 2 ವಿಕೆಟ್‌ಗಳಿಂದ ಲಖನೌಗೆ ಸೋಲುಣಿಸಿತು.

ಮೊದಲು ಬ್ಯಾಟ್ ಮಾಡಿದ ಲಖನೌ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 159 ರನ್ ಗಳಿಸಿತು. ಪಂಜಾಬ್ 19.3 ಓವರ್‌ಗಳಲ್ಲಿ ಎಂಟು ವಿಕೆಟ್ ಕಳೆದುಕೊಂಡು ಗೆಲುವು ಸಾಧಿಸಿತು.

ಗುರಿ ಬೆನ್ನತ್ತಿದ ಪಂಜಾಬ್ 17 ರನ್‌ಗಳಾಗುವಷ್ಟರಲ್ಲಿ ಎರಡು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಮೂರನೇ ಕ್ರಮಾಂಕದಲ್ಲಿ ಆಡಲಿಳಿದ ಮ್ಯಾಥ್ಯು ಶಾರ್ಟ್ (34) ತಂಡಕ್ಕೆ ಆಸರೆಯಾಗುವ ನಿರೀಕ್ಷೆ ಮೂಡಿಸಿದ್ದರು. ಆದರೆ ಏಳನೇ ಓವರ್‌ನಲ್ಲಿ ತಂಡದ ಮೊತ್ತ 45 ರನ್‌ಗಳಾಗಿದ್ದಾಗ ಅವರು ಕೆ.ಗೌತಮ್ ಅವರಿಗೆ ವಿಕೆಟ್ ಒಪ್ಪಿಸಿದರು. ನಾಲ್ಕನೇ ವಿಕೆಟ್‌ಗೆ ಹರಪ್ರೀತ್ ಬ್ರಾರ್ (22) ಮತ್ತು ಸಿಕಂದರ್ ರಾಜಾ (57) ಅವರು 37 ರನ್‌ಗಳ ಜೊತೆಯಾಟವಾಡಿದರು.

ಹರ್‌ಪ್ರೀತ್ ಸಿಂಗ್ ಔಟಾದ ಬಳಿಕ, ಸ್ಯಾಮ್ ಕರನ್ (6) ಮತ್ತು ಜಿತೇಶ್ ಶರ್ಮಾ (2) ಕೂಡ ಅಲ್ಪಮೊತ್ತಕ್ಕೆ ವಿಕೆಟ್ ಒಪ್ಪಿಸಿದರು. 18ನೇ ಓವರ್‌ನಲ್ಲಿ ಸಿಕಂದರ್ ಅವರು ರವಿ ಬಿಷ್ಣೋಯಿ (18ಕ್ಕೆ 2) ಅವರಿಗೆ ವಿಕೆಟ್ ಕೈಚೆಲ್ಲಿದರು. ಕೊನೆಯಲ್ಲಿ ಅಬ್ಬರಿಸಿದ ಶಾರೂಕ್ ಖಾನ್ (23, 10ಎ, 4X1, 6X2) ಆಟಕ್ಕೆ ಗೆಲುವು ಒಲಿಯಿತು.

ರಾಹುಲ್ ಅರ್ಧಶತಕ: ನಾಯಕ ಕೆ.ಎಲ್. ರಾಹುಲ್ ಅರ್ಧಶತಕದ ಬಲದಿಂದ ಲಖನೌ ಗೌರವಯುತ ಮೊತ್ತ ಗಳಿಸಿತು. ರಾಹುಲ್ (74; 56ಎ, 4X8, 6X1) ಅರ್ಧಶತಕ ಗಳಿಸಿದರು.ಅವರು ಮತ್ತು ಕೈಲ್ ಮೇಯರ್ಸ್ (29; 23ಎ, 4X1, 6X3) ಮೊದಲ ವಿಕೆಟ್‌ಗೆ 53 ರನ್ ಸೇರಿಸಿದರು. ಕೃಣಾಲ್ ಪಾಂಡ್ಯ (18) ಮತ್ತು ಮಾರ್ಕಸ್ ಸ್ಟೊಯಿನಿಸ್ (15) ಅವರ ಕೊಡುಗೆಯಿಂದ ತಂಡ 150ರ ಗಡಿ ದಾಟಿತು. ಸ್ಯಾಮ್ ಕರನ್ (31ಕ್ಕೆ 3) ಬೌಲಿಂಗ್‌ನಲ್ಲಿ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಲಖನೌ ಸೂಪರ್‌ಜೈಂಟ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 159 (ಕೆ.ಎಲ್. ರಾಹುಲ್ 74, ಕೈಲ್ ಮೇಯರ್ಸ್ 29, ಕೃಣಾಲ್ ಪಾಂಡ್ಯ 18, ಮಾರ್ಕಸ್ ಸ್ಟೊಯಿನಿಸ್ 15, ಕಗಿಸೊ ರಬಾಡ 34ಕ್ಕೆ2, ಸ್ಯಾಮ್ ಕರನ್ 31ಕ್ಕೆ3). ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 161 (ಮ್ಯಾಥ್ಯು ಶಾರ್ಟ್ 34, ಹರಪ್ರೀತ್ ಸಿಂಗ್ 22, ಸಿಕಂದರ್ ರಾಜಾ 57, ಶಾರೂಕ್ ಖಾನ್ 23; ಯುದ್ವೀರ್ ಸಿಂಗ್ 19ಕ್ಕೆ 2, ಮಾರ್ಕ್ ವುಡ್ 35ಕ್ಕೆ 2, ರವಿ ಬಿಷ್ಣೋಯಿ 18ಕ್ಕೆ 2). ಫಲಿತಾಂಶ: ಪಂಜಾಬ್‌ಗೆ ಎರಡು ವಿಕೆಟ್‌ಗಳ ಜಯ

ಸಿಕಂದರ್ ರಾಜಾ ಆಟದ ಪರಿ– ಎಎಫ್‌ಪಿ ಚಿತ್ರ

ರಾಹುಲ್ ನಾಲ್ಕು ಸಾವಿರ ರನ್

ಕನ್ನಡಿಗ ಕೆ.ಎಲ್. ರಾಹುಲ್ ಅವರು ಐಪಿಎಲ್‌ನಲ್ಲಿ ನಾಲ್ಕು ಸಾವಿರ ರನ್ ಗಡಿ ದಾಟಿದರು. ಶನಿವಾರ ನಡೆದ ಪಂದ್ಯದಲ್ಲಿ 30 ರನ್ ಗಳಿಸಿದ ಹಂತದಲ್ಲಿ ಈ ಸಾಧನೆ ಮಾಡಿದರು. ಈ ಪಂದ್ಯಕ್ಕೂ ಮುನ್ನ ಅವರ ಖಾತೆಯಲ್ಲಿ 3970 ರನ್‌ಗಳು ಇದ್ದವು.

114 ಪಂದ್ಯಗಳಲ್ಲಿ ಅವರು 105 ಇನಿಂಗ್ಸ್‌ಗಳಲ್ಲಿ ಬ್ಯಾಟಿಂಗ್ ಮಾಡಿದ್ದಾರೆ. ಈ ಹಾದಿಯಲ್ಲಿ ಅವರು ಕ್ರಿಸ್ ಗೇಲ್ (112 ಪಂದ್ಯ), ಡೇವಿಡ್ ವಾರ್ನರ್ (114 ಪಂದ್ಯ), ವಿರಾಟ್ ಕೊಹ್ಲಿ (128 ಪಂದ್ಯ) ಹಾಗೂ ಎಬಿ ಡಿವಿಲಿಯರ್ಸ್ (138 ಪಂದ್ಯ) ಅವರ ದಾಖಲೆಯನ್ನು 30 ವರ್ಷದ ರಾಹುಲ್ ಮೀರಿದರು.

ಜಯದ ತವಕದಲ್ಲಿ ರೋಹಿತ್ ಪಡೆ

ಮುಂಬೈ (ಪಿಟಿಐ): ರೋಹಿತ್ ಶರ್ಮಾ ನಾಯಕತ್ವದ ಮುಂಬೈ ಇಂಡಿಯನ್ಸ್ ತಂಡವು ಭಾನುವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಎದುರಿಸಲಿದೆ.

ಮುಂಬೈಗೆ ಹೋಲಿಸಿದರೆ ಕೋಲ್ಕತ್ತ ಆಟಗಾರರು ತುಸು ಹೆಚ್ಚು ಬಲಾಢ್ಯರಾಗಿದ್ದಾರೆ. ನಾಯಕ ನಿತೀಶ್ ರಾಣಾ ಹಾಗೂ ಏಳನೇ ಕ್ರಮಾಂಕದಲ್ಲಿ ಆಡುವ 'ಸಿಕ್ಸರ್ ಕಿಂಗ್' ರಿಂಕು ಸಿಂಗ್ ಅಮೋಘ ಲಯದಲ್ಲಿದ್ದಾರೆ. ವೆಂಕಟೇಶ್ ಅಯ್ಯರ್, ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಹಾಗೂ ಎನ್. ಜಗದೀಶನ್ ಅವರೂ ರನ್‌ಗಳ ಕಾಣಿಕೆ ನೀಡುವ ಸಮರ್ಥರು.

ತಂಡದ ಬೌಲರ್‌ಗಳಾದ ಲಾಕಿ ಫರ್ಗ್ಯುಸನ್, ಉಮೇಶ್ ಯಾದವ್, ಆ್ಯಂಡ್ರೆ ರಸೆಲ್ ಹಾಗೂ ವರುಣ್ ಚಕ್ರವರ್ತಿ ಉತ್ತಮವಾಗಿ ಬೌಲಿಂಗ್ ಮಾಡುತ್ತಿದ್ದಾರೆ. ಇವರ ಎದುರು ಮುಂಬೈ ಬ್ಯಾಟರ್‌ಗಳು ಯಶಸ್ವಿಯಾಗಲು ವಿಶೇಷ ಕಾರ್ಯತಂತ್ರ ರೂಪಿಸುವುದು ಅನಿವಾರ್ಯ.ರೋಹಿತ್ ಮತ್ತು ಇಶಾನ್ ಲಯವನ್ನು ಉಳಿಸಿಕೊಂಡರೆ ತಂಡದ ದೊಡ್ಡ ಮೊತ್ತದ ಗಳಿಕೆ ಮತ್ತು ಚೇಸಿಂಗ್ ಎರಡಕ್ಕೂ ಬಲ ತುಂಬಲು ಸಾಧ್ಯವಿದೆ. ಆದರೆ ತಂಡದ ಮಧ್ಯಮ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್ ಪದೇ ಪದೇ ವಿಫಲರಾಗುತ್ತಿದ್ದಾರೆ. ಟಿಮ್ ಡೇವಿಡ್ ಕೂಡ ಅಬ್ಬರಿಸುತ್ತಿಲ್ಲ. ತಿಲಕ್ ವರ್ಮಾ ಅವರ ಮೇಲೆ ಮಾತ್ರ ವಿಶ್ವಾಸವಿಡಬಹುದು. ಮುಂಬೈ ತಂಡದ ಬೆರೆನ್‌ಡಾರ್ಫ್ ಹಾಗೂ ಪಿಯೂಷ್ ಚಾವ್ಲಾ ಅವರು ಉತ್ತಮ ಲಯದಲ್ಲಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 3.30 ರಿಂದ

ರೋಹಿತ್ ಶರ್ಮಾ

ಎನ್‌ಸಿಎಯಲ್ಲಿ ಬೂಮ್ರಾಗೆ ಆರೈಕೆ

ಮುಂಬೈ (ಪಿಟಿಐ): ಭಾರತ ತಂಡದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಚೇತರಿಸಿಕೊಂಡಿದ್ದು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಪುನಶ್ಚೇತನ ಶಿಬಿರಕ್ಕೆ ಸೇರ್ಪಡೆಯಾಗಿದ್ದಾರೆ.

ಬೆನ್ನುನೋವಿನಿಂದ ಬಳಲುತ್ತಿದ್ದ ಅವರು ಈಚೆಗೆ ನ್ಯೂಜಿಲೆಂಡ್‌ನಲ್ಲಿ ಶಸ್ತ್ರಚಿಕಿತ್ಸೆಗೊಳಗಾಗಿದ್ದರು. 2022ರ ಸೆಪ್ಟೆಂಬರ್‌ನಲ್ಲಿ ಬೂಮ್ರಾ ಅವರು ಬೆನ್ನುನೋವಿನಿಂದಾಗಿ ಏಷ್ಯಾ ಕಪ್ ಹಾಗೂ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಿರಲಿಲ್ಲ. ಇದೀಗ ಅವರು ದೀರ್ಘ ಕಾಲದ ಸಮಸ್ಯೆಯಿಂದ ಮುಕ್ತರಾಗಿದ್ದಾರೆ. ನೋವು ಶಮನವಾಗಿದೆ. ಮುಂಬರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಕಣಕ್ಕಿಳಿಯುವ ನಿರೀಕ್ಷೆ ಇದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

'ಬೂಮ್ರಾ ನೋವಿನಿಂದ ಮುಕ್ತರಾಗಿದ್ದಾರೆ. ಅವರು ಬೆಂಗಳೂರಿನ ಎನ್‌ಸಿಎಯಲ್ಲಿ ಆರು ವಾರಗಳವರೆಗೆ ಆರೈಕೆ ಪಡೆಯುವರು. ಶುಕ್ರವಾರದಿಂದಲೇ ಅವರು ಎನ್‌ಸಿಎನಲ್ಲಿದ್ದಾರೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ಭಾರತ ತಂಡದ ಬ್ಯಾಟರ್ ಶ್ರೇಯಸ್ ಅಯ್ಯರ್ ಕೂಡ ಬೆನ್ನುನೋವಿನಿಂದ ಬಳಲುತ್ತಿದ್ದಾರೆ. ಅದರಿಂದಾಗಿ ಅವರು ಐಪಿಎಲ್‌ಗೆ ಅಲಭ್ಯರಾಗಿದ್ದಾರೆ. ಅವರೂ ಮುಂದಿನ ವಾರ ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುನ್ನಡೆದ ನಿಪೊಮ್‌ನಿಷಿ

ಅಸ್ತಾನಾ, ಕಜಕಸ್ತಾನ: ಅಸ್ತಾನ ನಗರದಲ್ಲಿ ಹಠಾತ್ತನೇ ಕುಸಿದ ತಾಪಮಾನ ಮತ್ತು ಹಿಮಪಾತ ಆಟಗಾರರು ಮತ್ತು ಅಧಿಕಾರಿಗಳನ್ನು ಅಚ್ಚರಿಯಲ್ಲಿ ಕೆಡವಿತು. ಇದರ ನಡುವೆ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಐದನೇ ಪಂದ್ಯದಲ್ಲಿ ಇಯಾನ್ ನಿಪೊಮ್‌ನಿಷಿ, ವಿಶ್ವದ ಮೂರನೇ ಕ್ರಮಾಂಕದ ಆಟಗಾರ ಡಿಂಗ್ ಲಿರೆನ್ ಅವರನ್ನು ಸೋಲಿಸಿದರು.

ಈಗ ನಿಪೊಮ್‌ನಿಷಿ 3–2 ಪಾಯಿಂಟ್‌ಗಳಿಂದ ಮುಂದಿದ್ದಾರೆ. ಭಾನುವಾರ ನಡೆಯುವ ಆರನೇ ಪಂದ್ಯದಲ್ಲಿ ಬಿಳಿ ಕಾಯಿಗಳೊಡನೆ ಆಡುವ ಸರದಿ ಲಿರೆನ್ ಅವರದ್ದು.

'ಉತ್ತಮ ಓಪನಿಂಗ್ ಸಿದ್ಧತೆ' ಮತ್ತು ಬೇಗನೆ ನಡೆಗಳನ್ನಿಟ್ಟು ಹೆಚ್ಚಿನ ಕಾಲಾವಕಾಶ ಉಳಿಸಿಕೊಂಡಿದ್ದ ನಿಪೊಮ್‌ನಿಷಿ ಎದುರಾಳಿಯ ಮೇಲೆ ಒತ್ತಡ ಹೇರಿದರು. ಕಪ್ಪು ಕಾಯಿಗಳಲ್ಲಿ ಆಡಿದ ಲಿರೆನ್ ನಿರ್ಣಾಯಕ ವೇಳೆ ತಪ್ಪುಗಳನ್ನೆಸಗಿ 48ನೇ ನಡೆಯಲ್ಲಿ ಪಂದ್ಯ ಬಿಟ್ಟುಕೊಟ್ಟರು.

ಆರ್‌ಐಟಿ: ಕ್ರಿಕೆಟ್ ಟೂರ್ನಿ 18ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಆರ್‌ಐಟಿ) ವಜ್ರಮಹೋತ್ಸವ ಹಾಗೂ ಡಾ.ಎಂ.ಎಸ್.ರಾಮಯ್ಯ ಅವರ ಜನ್ಮಶತಮಾನೋತ್ಸವ ಅಂಗವಾಗಿ ಅಖಿಲ ಭಾರತ ಅಂತರ ಇಂಜಿನಿಯರಿಂಗ್ ಕಾಲೇಜುಗಳ ಕ್ರಿಕೆಟ್ ಟೂರ್ನಿ ನಡೆಯಲಿದೆ.

ಏಪ್ರಿಲ್ 18ರಿಂದ 28ರವರೆಗೆ ಸಂಸ್ಥೆಯ ಅಂಗಣದಲ್ಲಿ ಟೂರ್ನಿ ನಡೆಯಲಿದೆ ಎಂದು ಶನಿವಾರ ಆರ್‌ಐಟಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಾಬರ್ 100ನೇ ಟಿ–20 ಪಂದ್ಯದಲ್ಲಿ ಪಾಕ್‌ಗೆ ಗೆಲುವು

ಲಾಹೋರ್ (ಎಪಿ): ಪಾಕಿಸ್ತಾನವು ಶುಕ್ರವಾರ ನಡೆದ ಮೊದಲ ಟಿ–20 ಪಂದ್ಯದಲ್ಲಿ 88 ರನ್‌ಗಳಿಂದ 'ದುರ್ಬಲ' ನ್ಯೂಜಿಲೆಂಡ್ ಮೇಲೆ ಸುಲಭ ಜಯಗಳಿಸುವ ಮೂಲಕ ಬಾಬರ್ ಅಜಂ ಅವರ ನೂರನೇ ಟಿ–20 ಪಂದ್ಯದ ಸಂಭ್ರಮವನ್ನು ಭರ್ಜರಿಯಾಗಿ ಆಚರಿಸಿತು.

ಕಿವೀಸ್ ತಂಡ ಐದು ಪಂದ್ಯಗಳ ಟಿ–20 ಸರಣಿ ಆಡುತ್ತಿದೆ. ಐಪಿಎಲ್‌ನಲ್ಲಿ ಎಂಟು ಪ್ರಮುಖ ಆಟಗಾರರು ಆಡುತ್ತಿರುವ ಕಾರಣ ತಂಡ ದುರ್ಬಲವಾಗಿದೆ.

ವೇಗದ ಬೌಲರ್ ಹ್ಯಾರಿಸ್ ರವೂಫ್ (18ಕ್ಕೆ4) ಅವರ ವೇಗದ ದಾಳಿಯ ಮುಂದೆ ನ್ಯೂಜಿಲೆಂಡ್ ಬೌಲರ್ ಮ್ಯಾಟ್ ಹೆನ್ರಿ ಅವರ ಹ್ಯಾಟ್ರಿಕ್ ಸಾಧನೆ ಎದ್ದುಕಾಣಲಿಲ್ಲ.

ಪಾಕಿಸ್ತಾನ ತಂಡ ಕೊನೆಯ ಓವರ್‌ನಲ್ಲಿ 182 ರನ್ನಿಗೆ ಆಲೌಟ್ ಆದರೆ, ರವೂಫ್ ದಾಳಿಯ ಮುಂದೆ ನ್ಯೂಜಿಲೆಂಡ್ 94 ರನ್ನಿಗೆ ಪತನಗೊಂಡಿತು. ಕೊನೆಯ ಐದು ವಿಕೆಟ್‌ಗಳು ಆರು ರನ್ನಿಗೆ ಉರುಳಿದವು.

ಸ್ಕೋರುಗಳು: ಪಾಕಿಸ್ತಾನ: 19.5 ಓವರುಗಳಲ್ಲಿ 182 (ಫಖ್ರ್ ಜಮಾನ್ 47, ಸಯೀಮ್ ಅಯೂಬ್ 47; ಮ್ಯಾಟ್ ಹೆನ್ರಿ 32ಕ್ಕೆ3, ಬೆನ್ ಲಿಸ್ಟರ್ 30ಕ್ಕೆ2); ನ್ಯೂಜಿಲೆಂಡ್: 15.3 ಓವರುಗಳಲ್ಲಿ 94 (ಮಾರ್ಕ್ ಚಾಪ್‌ಮನ್ 34; ಹ್ಯಾರಿಸ್ ರವೂಫ್ 18ಕ್ಕೆ4, ಇಮದ್ ವಾಸಿಂ 2ಕ್ಕೆ2).

ಗ್ರ್ಯಾನ್‌ಪ್ರಿ ಅಥ್ಲೆಟಿಕ್ಸ್ 4: ಲಾಂಗ್‌ಜಂಪ್‌ನಲ್ಲಿ ಶೈಲಿ ಸಿಂಗ್ ಸಾರ್ವಕಾಲಿಕ ಎರಡನೇ ಶ್ರೇಷ್ಠ ಸಾಧನೆ

ಕರ್ನಾಟಕದ ರಶ್ಮಿ, ಮನುಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ರಶ್ಮಿ ಸಿ.ಎಂ. ಹಾಗೂ ಡಿ.ಪಿ.ಮನು ಅವರು ಇಲ್ಲಿ ಶನಿವಾರ ನಡೆದ ಇಂಡಿಯನ್ ಗ್ರ್ಯಾನ್‌ಪ್ರಿ 4 ಅಥ್ಲೆಟಿಕ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕೂಟದ 1,500 ವಿಭಾಗದಲ್ಲಿ ರಶ್ಮಿ ಅವರಿಗೆ ಚಿನ್ನ ಒಲಿಯಿತು. ಅವರು 4 ನಿಮಿಷ 41.58 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಪುರುಷರ ಜಾವೆಲಿನ್ ಥ್ರೊನಲ್ಲಿ ಮನು ನಿರಾಸೆಗೊಳಿಸಲಿಲ್ಲ. 84.33 ಮೀ. ಸಾಧನೆಯೊಂದಿಗೆ ಅಗ್ರಸ್ಥಾನ ಗಳಿಸಿದರು.

ದಾನೇಶ್ವರಿ ಎ.ಟಿ. ಅವರು 100 ಮೀ. (11.82 ಸೆ.) ಮತ್ತು 200 ಮೀ. (24.59 ಸೆ.) ಓಟಗಳಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದುಕೊಂಡರು. 3,000 ಮೀ. ಸ್ಟೀಪಲ್‌ಚೇಸ್‌ನಲ್ಲಿ ಶಾಹೀನ್ ಧಾರವಾಡ (12 ನಿ.32.82 ಸೆ.) ಕಂಚು ಜಯಿಸಿದರು. ಪುರುಷರ ಲಾಂಗ್ ಜಂಪ್ ನಲ್ಲಿ ಆರ್ಯ ಎಸ್. (ಕರ್ನಾಟಕ, 7.64 ಮೀ.) 3ನೇ ಸ್ಥಾನ ಗಳಿಸಿದರು.

ಶೈಲಿ ಮಿಂಚು: ಮಹಿಳೆಯರ ಲಾಂಗ್ ಜಂಪ್‌ನಲ್ಲಿ ಉತ್ತರ ಪ್ರದೇಶದ ಶೈಲಿ ಸಿಂಗ್ ಅವರು ಭಾರತದ ಪರ ಸಾರ್ವಕಾಲಿಕ ಎರಡನೇ ಶ್ರೇಷ್ಠ ಸಾಧನೆ (6.76 ಮೀ.) ಮಾಡಿದರು. ಸಾರ್ವಕಾಲಿಕ ಶ್ರೇಷ್ಠ ದಾಖಲೆಯು ಖ್ಯಾತ ಅಥ್ಲೀಟ್ ಅಂಜು ಬಾಬಿ ಜಾರ್ಜ್ (6.83 ಮೀ.) ಅವರ ಹೆಸರಲ್ಲಿದೆ. ಬಾಬಿ ಅವರು ಶೈಲಿ ಅವರ ಮಾದರಿ ಅಥ್ಲೀಟ್ ಆಗಿದ್ದಾರೆ.

ಅಸ್ಸಾಂನ ಅಮ್ಲಾನ್ ಬೊರ್ಗೊಹೈನ್ ಅವರು ಪುರುಷರ ಸ್ಪ್ರಿಂಟ್‌ನಲ್ಲಿ ಪಾರಮ್ಯ ಮೆರೆದರು. 100 ಮತ್ತು 200 ಮೀ. ಓಟಗಳಲ್ಲಿ ಅಗ್ರಸ್ಥಾನ ಗಳಿಸಿದರು.

ಫಲಿತಾಂಶಗಳು: ಮಹಿಳೆಯರು: 100 ಮೀ. ಓಟ: ಅರ್ಚನಾ ಸುಶೀಂದ್ರನ್ (ತಮಿಳುನಾಡು, ಕಾಲ: 11.79)–1, ದಾನೇಶ್ವರಿ ಎ.ಟಿ (ಕರ್ನಾಟಕ, 11.82)–2, ನಂದಿನಿ ಅಗಸರ (ತೆಲಂಗಾಣ)–3.

200 ಮೀ.: ಜ್ಯೋತಿ ಯರಾಜಿ (ಆಂಧ್ರಪ್ರದೇಶ, ಕಾಲ: 23.60 ಸೆ.)–1, ಅರ್ಚನಾ ಸುಶೀಂದ್ರನ್ (ತಮಿಳುನಾಡು)–2, ದಾನೇಶ್ವರಿ (ಕರ್ನಾಟಕ, 24.59)–3

1,500 ಮೀ.: ರಶ್ಮಿ ಸಿ. ಎಂ. (ಕರ್ನಾಟಕ, ಕಾಲ: 4 ನಿಮಿಷ 41.58 ಸೆ.)–1, ಚಿತ್ರಾ ಉನ್ನಿಕೃಷ್ಣನ್ (ಕೇರಳ)–2, ನಿತಿನಾ (ಹರಿಯಾಣ)–3

ಶಾಟ್‌ಪಟ್: ಮನ್‌ಪ್ರೀತ್ ಕೌರ್ (ಹರಿಯಾಣ, ದೂರ: 16.81 ಮೀ.)–1, ಅಭಾ ಕತುವಾ (ಮಹಾರಾಷ್ಟ್ರ)–2, ತನ್ಲಾಯಿ (ಅಸ್ಸಾಂ)–3

ಲಾಂಗ್‌ಜಂಪ್: ಶೈಲಿ ಸಿಂಗ್ (ಉತ್ತರ ಪ್ರದೇಶ), ದೂರ: 6.76 ಮೀ.)–1, ನಯನಾ ಜೇಮ್ಸ್ (ಕೇರಳ)–2, ಕಾರ್ತಿಕಾ (ಆಂಧ್ರಪ್ರದೇಶ)–3.

3,000 ಮೀ. ಸ್ಟೀಪಲ್‌ಚೇಸ್: ಸುಶ್ಮಿತಾ ಟಿಗ್ಗಾ (ಒಡಿಶಾ, ಕಾಲ: 10 ನಿ. 53.94 ಸೆ.)–1, ಪ್ರೀತಿ ಚೌಧರಿ (ಉತ್ತರ ಪ್ರದೇಶ)–2, ಶಾಹೀನ್ ಧಾರವಾಡ (ಕರ್ನಾಟ)–3

ಪುರುಷರು: 100 ಮೀ. ಓಟ: ಅಮ್ಲಾನ್ ಬೊರ್ಗೊಹೈನ್ (ಅಸ್ಸಾಂ, ಕಾಲ: 10.53)–1, ರಾಘುಲ್ ಕುಮಾರ್ (ತಮಿಳುನಾಡು)–2, ತೇಜಸ್ ಅಶೋಕ ಶಿರ್ಸೆ (ಮಹಾರಾಷ್ಟ್ರ)–3.

200 ಮೀ.: ಅಮ್ಲಾನ್ ಬೊರ್ಗೊಹೈನ್ (ಅಸ್ಸಾಂ, ಕಾಲ: 20.78 ಸೆ.)–1, ಅನಿಮೇಶ್ ಕುಜುರ್ (ಛತ್ತೀಸಗಡ)–2, ಮುಹಮ್ಮದ್ ಅನೀಸ್ ಯಾಹ್ಯಾ (ಕೇರಳ)–3

ಲಾಂಗ್‌ಜಂಪ್: ಮುಹಮ್ಮದ್ ಅನೀಸ್ ಯಾಹ್ಯಾ (ಕೇರಳ, ದೂರ 7.89 ಮೀ.)–1, ರಿಷಭ್ ರಿಷೀಶ್ವರ್ (ಉತ್ತರ ಪ್ರದೇಶ)–2, ಆರ್ಯ ಎಸ್. (ಕರ್ನಾಟಕ, 7.64 ಮೀ.)–3

ಜಾವೆಲಿನ್ ಥ್ರೊ: ಮನು ಡಿ.ಪಿ. (ಕರ್ನಾಟಕ, ದೂರ: 84.33 ಮೀ.), ರೋಹಿತ್ ಯಾದವ್ (ಉತ್ತರ ಪ್ರದೇಶ)–2, ಶಿವಪಾಲ್ ಸಿಂಗ್ (ಉತ್ತರ ಪ್ರದೇಶ)–3

ಡಿ.ಪಿ. ಮನು

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

CHANDANA SIRI

CHANDANA SIRI
MANAGED
FARM LAND

ONE TIME INVESTMENT Lifetime Profits

98 km from BANGALORE CITY Madhugiri Taluk, Tumkur

Phase-1 - Sold Out
Phase-2 - Launching

PAY 30%
Register your FARMLAND
Balance in Easy EMI

Make a Smart Agri investment in
Sandalwood Farming
Golden chance to own a farm house

JUST Rs. 8.4 Lakhs

- Gated Community, Serene environment and best farming technology
- 6 Guntas farmland 40 Sandal Wood with Free Maintenance for first year
- Grow your own Fruits and Vegetable in complete Organic Method
- Year on Year Returns from Organic Farming
- 24x7 Security (Electric Fence, Metal Gate, Gunman, CCTV)
- High long term returns from Sandalwood Farming.
- Enjoy your Weekends peacefully

READY FOR REGISTRATION
BANK LOANS AVAILABLE
FLEXIBLE PAYMENT OPTION AVAILABLE

Surrounded by Tourist Destinations & Good Connectivity :
•Madhugiri Fort •Channarayana Durga •Jayamangali Blackbuck Reserve •Nandi Hills •Siddara Betta •Timmalapura Forest •Siddaganga Mutt •Mallinatha Temple •Shivagange Betta (Dabaspete) •Devarayana Durga

FOR MORE DETAILS CALL : 88675 03311 88673 83311



Grand launch on 15th April 2023

Avail Launch Offer

" Win gold upto 10 grams on booking till 30th April 2023 "

manasum
LUXURY SENIOR LIVING

BANYAN
AT GODREJ ROYALE WOODS

24X7 PARAMEDICAL SERVICES | RESIDENT PARAMEDICAL STAFF | 24X7 AMBULANCE | ON CALL DOCTOR
WEEKLY MOVIE SCREENING | FESTIVAL CELEBRATIONS | YOGA & MEDITATION | FOOD SERVICES

SENIOR LIVING HOMES
READY TO MOVE IN
1 & 2 BHK STARTING AT ₹ 46.45 LAKHS*

NORTH BENGALURU
(LOCATED NEAR AIRPORT TOLL)
+91 9513 815 815
WWW.MANASUM.COM

Call us today to book a free site visit

PROPERTY CORNER
ಕ್ಲಾಸಿಫೈಡ್ಸ್

BMRDA APPROVED **Sites**
Near Bidadi
Mysore Road
Ready for Registration & Construction
100% work completed, Bank Loan Avbl
PRM/KA/RERA/1251/310/AG/201102/002105
MH PROMOTERS
95138 50029
www.mhpromoters.in

REAL ESTATE SELLING

Sites

Anjanapura

ANJANAPURA 10TH Block 20×60 East, 1st Block 30×40 West, 6th Block 20×30 North, BDA Site For Sale, Contact: 9845298419

Banashankari

"BANASHANKARI 3RD-STAGE, 2nd Stage, 6th Stage , Kanakapura Road, 30x40, 40x60, 50x80, Residential, Commercial. 9845286505"

B.S.K. VI Stage available 20x20, 30x40, 40x60, 50x80 in all the Blocks, genuine buyers contact: Classic Property Consultants-9900088995

Basavanagudi

2BHK 1000 Sft GF House, Resedntial/ Commercial 30,000 Rent Advance 10 months Jain temple Street VVpuram. Commercial 60x30 NE corner prime location 35000/ Sft 'Eshwer Enterprises' 98454-97163

Chandra Layout

"CHANDRA LAYOUT 40x60 West facing BDA Residential Site for sale near Bus Depot. Excellent location. 9901405391"

J P Nagar

SALE OF Residential SITE 60x40 in JP.NAGAR IXth Phase, IInd Block. Brokers Excuse. 080- 26628146.

Kempegowda Layout

30X40 BDA NPKL 5TH Block Behind Challaghatta Metro. 500mtr to Mysore road. Arkavathi alternative site. Owner:9620721143

Mallathalli

"SALE 40X48 Site Clear Title East facing opposite BDA Park 7th Main Road NGEF Layout Mallathahalli, Owner 9845962915"

Mysore

HUNSUR ROAD Kubera nanda Sagara Layout, Sale 50X80 Site #691, 1 K.M. From Main Road. 9945724472.

Nagarabhavi

SITE FOR Sale- Nagarabavi 12th Block, Near Nammura Thindi, BDA Site No.264, West Facing, 40Feet Road, measuring 30x42sft. Contact Owner: 9844009086, 9343368313

"SALE 40X60, 30X40 Site in MPM Layout Mallathahalli, Good Location, Genuine Buyers Contact 7760388034/ 9242135834"

Nelamangala

INFOCITY NELAMANGALA
READY TO BUILD PLOTS FOR EVERY DREAM HOME
BMRDA Approved Sites available @ Nelamangala. Easy access to PRR (Peripheral Ring Road)
Call: 8660981179, 9986896859

Rajarajeshwari Nagar

"AVAILABLE SITE Rajarajeshwarinagar BEML Layout 5th stage 40x65 South-facing 40 feet-Road near Ujwal Meredian Apartment. Contact: 9632788913"

Vishweshwariah Layout

VISVESHWARAIAH LAYOUT 4th Block 30x40 W/F 100 feet parallel Road, Builder location. Contact: 9844533371/ 9341733480

"VISVESHWARAIAH LAYOUT 3rd Block West facing 30x40 BDA 1st Allottee Site for sale, good location. 9901405391"

SMV. 30X40. 4th Block East Near 100ft Road 5th North 3rd West Site Sale 9900224071



Celebrate all Your Occasions
@ VRR CONVENTION CENTRE
Hulimangala Main Road,
Near Electronic City Phase -1
Brand New Function Hall with 100 Rooms
Marriage / Engagement / Birthday / Functions

RAC/VRR
For reservation and more details contact:
080 29904030 / 9900973030 / 9513290443

"**50X80 NORTH** Facing Good Residential BDA Site 2nd Block Vishveshwaraiah Layout [Immediate Sale] Contact:- 9845143579"

Vidyaranyapura

RESIDENTIAL PLOT for Sale in Vidyaranyapura Ams Layout Bangalore 2400sqft (60X40) Contact: 9466723330 / 9945530202

House

Banashankari

BUILDING 3 BHK 20x30, 1.15cr. Banashankari 6th Stage 10th Block, Kodipalya. Mascot Constructions. 9945760765/ 9880909989.

Jayanagar

SALE (OLD_HOUSE) 40x60 East Facing Good Location, 1st Block Jayanagar Near Madhavan Park Contact Vani Estates 9845012548

J P Nagar

J.P.NAGAR SALE Two-Units House 30x40 (West) Third Phase Duplex House (North) Genuine Buyers Reddy: 9880226644

2100 SFT- Near Brigade Millenium (Corner)- Nataraja Layout J.P.NAGAR 7th Phase. Call: 98443-76310

Magadi Road

INDEPENDENT HOUSE with built-up area of 1,800 sq.ft in site measuring 720 sq.ft for sale at Sannakki Bayalu, Vrushabhavathi nagar, Kamakshipalya, Bengaluru. Contact: 9901902500

Horamavu

HENNUR ROAD/ Horamavu Independent House 4BHK Villa 2800 Sq.Feet @ Rs.2.80 Crores. Gated Community. 9962166444

Flat

Banashankari

"POORNA PRAGNA Layout 3BHK Luxury Flat 2100 Sq.ft one_floor one Flat, A_katha. 9845286505"

Basaveshwaranagar

"MAGADI MAIN-ROAD, 2BHK 1050.Sq.ft 68,00,000/- 3BHK 1315.Sq.ft 86,00,000/- with occupancy certificate. 9845286505"

Kanakapura Road

2&3-BHK FLATS Sale 1265Sqft Onwards 3900/- P.Sqft Off Kanakpura Road, Konankunte Near Junior Delhi Public School- 9343722162

K R Puram

1, 2, 3 BHK Flats, ready to occupy, RERA Registered, OC- Received, all amenities, 200 mtrs Jyothipuram Metrostation. K.R.Puram. 9880017767.

Malleshwaram

ONE BEDROOM APARTMENT FOR SALE 18TH CROSS MALLESWARAM NO CAR-PARK CALL: 9900648717 or 8017010808

Agricultural Land Converted

Intl Airport Road

SALE 3.32 Acres Land, Northside Bangalore opposite TIDCO Apartments, Hindupur, Clear Documents. 9343510635/ 9493640270

Agricultural Land

Mysore Road

"SALE HALF Acre to 4 Acre- Lands near Ramnagar, Chanapatna, Malavalli (proper document, fencing). 9845178335 Bangalore

Ramanagar

AGRICULTURAL FARM Land Sale Near Ramanagar3.5-km from Highway (0.5Km MudRoad) 3Acres 55 Lakhs PerAcre Clear Title-9900115519

Commercial Building

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram, Bangalore. Contact: 9663001940.

Mysore Road

FOR SALE 60X40 BUILDING WITH 65HP POWER IN INDUSTRIALAREA MYSORE ROAD CALL:9886080542

Commercial Land

Nelamangala

BANGALORE-SOLUR HIGHWAY 2 acres 17 guntas Commercial Land and 50x120 ft. Site for SALE. 9845780996

Commerical

HRBR Layout

HRBR Kammanahalli main Road Commercial Corner Property 50x40 Property Built-up 4000 Sft Ground +2 Floors rental Income 6 Lakhs for Sale 9.5 Crores Mob: 73493-22223

Koramangala

KORAMANGALA EXCELLENT PREMIUM COMMERCIAL PROPERTIES FOR SALE 40X65/ 40x80/ 50x76 Also available/ wanted, Good Tenanted Properties. Contact: 9845156191

Kanakapura Road

EXCELLANT EAST Facing 66Wx155D Commercial Property for Sale Kanakapura Road before SRI SRI Ashrama, IBA College adjacent @ Rs. 6900 Psft. Contact Mallesh 9743865623

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Farm House/ Land/ Resorts

Kanakapura Road

FOR SALE Kanakapura`Town near`City Bus-Stop 2 Acres,(33 Guntas Conversion+1.25 Acres Farm_House)with Water & Electricity. Kumar: 9945928994.

Mysore Road

RAMANGARA 5 Acres from Bangalore Mysore Highway 7km Fully Developed 56L/ Acre Clear Title: 9845169300

Industrial & Factory

Nelamangala

SALE, NELAMANGALA, 30000 sqft Land (28 Guntas), 300 meters from Bengaluru-Mangaluru Highway, before Toll-plaza. 9035767333, 9242251819

Tumkur Road

SALE 5 Acres, Industrial Land, suitable for any Red Catagory, Industrial Garments, Engineering, Pharmaceutical. 9141326819

REAL ESTATE BUYING

Agricultural Land

Devanahalli

WANTED 10- 20 Acres of agricultural land on Nandi Hill Road or Nandi Cross. Contact:- 9886517756.

Commerical

Multiple Locations

REQUIRED COMMERCIAL Property Surroundings Basaveshwarnagar,Rajajinagar, Vijayanagar & Mahalakshmi Layout. Contact 9972509095

Real Estate Agents

Multiple Locations

"WANTED PURCHASE Sites/Houses/ Industrial/ Commercial Banashankari, Kanakapura Road, Jayanagar, J.P.Nagar, Bannergatta Road, BTM, HSR. 9845286505"

Sites

Anjanapura

WANTED BDA SITES, ANY MEASUREMENT Anjanapura, Banashankari 6th Stage, JPNagar 8th/ 9th Phase Contact: 9845298419

OFFICE PREMISES FOR RENT IN BTM LAYOUT
No. 281, 7th Main, BTM Layout 2nd Stage, Bangalore-76
Ground Floor Premises 1500 Sq. feet
Ideal For Startups / IT Companies / MNC's / Bank's / NBFC / Small Finance Banks / Private & Public Sector Banks.
20 KW Power - 24 Hour Power Back up - Ready to Occupy.
Contact : 93412 19091

Banashankari

BDA SITES Wanted Arkavathy, Anjanapura Banshankari 6th stage Vishweswaraiah Kempegowda Any BDA Layout Call:9845062822 8660751654

HSR Layout

WANTED 50X80 SITE at HSR Layout and 4Acres Farm Land 50 Km from Bangalore. Contact: 9343728200.

Bannerghatta Road

"WANTED 30X40, 30x50 East North facing Site near Kaglipura Koppagate, Jigini Anekal Road. Call: 9845178335"

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any_BDA`Sites Wanted. Contact: SAPTHAGIRI. 9900268073, 9448068073.

WANTED 2400/1200 BDA OWNER SITE @ 5500/ SQ FT. FULL RTGS PAYMENT. NO BROKERS. 9980592277

Rajarajeshwari Nagar

WANTED 40X60 Site or Old House at R.R.Nagar, Genuine Owners Please Call: 8884378079. Brokers Excuse.

Vishweshwariah Layout

-:BUYING/ SELLING:- 20x30,30x40, 40x60, 50x80 BDA sites at Vishveshwaraiah Layout, BSK 6th stage. Contact: 9844533371/ 9341733480

RENTAL PROPERTIES

Accommodation Available

Commercial

BUILT TO suit vacant place off Ballery Road, Kodigehalli Junction 3300 sft. North East Corner for RENT. 8183032277

RENT COMMERCIAL Shops On Main Road, Suitable for Hotel & 2BHK Flat, Kumarapark. Owner: 6303110330

Industrial And Factory

NEWLY BUILT INDUSTRIAL WAREHOUSE 20000 (GF + MF) Sqft. at DABASPET, 1st STAGE. CALL: 9845094316, 9845017259

RENT TWO Sheds each 750 Sft, 15 ft Height, 23 HP Power Opp Skoda Service Centre, KKS Road, Srirampuram, Bangalore. Call: 9448206669

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

PUBLIC NOTICE

PUBLIC NOTICE

My client intends to purchase property bearing vacant site No. 3, Municipal Katha No. 43/5/3/3, situated at Muneshwara Block, Avalahalli Village, Uttarahalli Hobli, Bangalore South Taluk, in BBMP Limits, measuring East to West 68 Feet and North to South 87+100/2 feet and totally measuring 6358 Square feetmore fully described in the schedule herein below from **SRI.P.MADHUSUDAN,** Aged about 57 Years, **S/o Sri.P. Govindappa,** Residing at No. 10/123, Shastri Street, Madanapalli, Chittor District, Andhra Pradesh, **Represented by GPA holder, Sri.P.V.Govinda Charyulu,** Aged about 67 Years, S/o Late P.V.Lakshmipathi, Residing at No. 49, 11th Main Road, 34th Cross, Jayanagar, 4th T Block, Bangalore- 41, who claims to be the absolute owner of the Schedule Property and apart from him, no other person/s has/have any right, title, interest and/or claim/s in or upon the Schedule Property. If any person/s has/have any claims, right, title and/or interest in or upon the same, the same may be intimated to me **within 15 days** from the date of this publication along with documents in support thereof. If no tenable objections are received within the said period, my client will proceed to complete the transaction, deeming that there are no claims or objections whatsoever.

SCHEDULE PROPERTY

All that piece and parcel of property bearing vacant site No. 3, Municipal Katha No. 43/5/3/3, situated at Muneshwara Block, Avalahalli Village, Uttarahalli Hobli, Bangalore South Taluk, in BBMP Limits, measuring East to West 68 Feet and North to South 87+100/2 feet and totally measuring 6358 Square feet and bounded on the:

East by : Site No. 2
West by : Road
North by : Road,
South by : Private Property

S.K. MITHUN Advocate,
No.19/1, 3rd Cross, Shankarpura,
BANGALORE- 560 004
Mobile - 9845366658

EDUCATIONAL

General

FREE INTERNATIONAL ROBOTIC COMPETITION. Participate in International Robotic competition ROBOFEST by Lawrance Technological University Michigan, USA. Students from 8 years onwards FREE REGISTRATION. Contact 9019247247 Whatsup: 9341253057. robotic999@gmail.comwww. robofestindia.org

Language Classes

LEARN SANSKRIT Study Rg Veda In English In Detail Venue Malleshwaram Rajajinagar Whatsapp 9480014028

BUSINESS

Business to Business

Finance

FINANCE AGAINST PROPERTY / BUSINESS/ PROJECTS. Ct: +918610936362 / 917708215904

MORE Classifieds IN MAIN ISSUE

DH DECCAN HERALD ಪ್ರಜಾವಾಣಿ
BOOK YOUR REAL ESTATE
AD IN DECCAN HERALD ALL KARNATAKA
& PRAJAVANI ALL KARNATAKA
ON FRIDAY + SATURDAY + SUNDAY
@ 1600/-* Per Sqcm Single Column
@ 1800/-* Per Sqcm Multi Column
conditions apply*
For More Details Contact:
9845114560 | 9731810277 | 9901641752 | 9886213331
080- 45557163 | 45557164
dhclassifieds@deccanherald.co.in www.dhclassifieds.com

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

www.dsmaxproperties.com

PRM/KA/RERA/1251/310/PR/150223/005721

ಡಿಎಸ್ ಮ್ಯಾಕ್ಸ್

DR. K V SATISH, CHAIRMAN

DS MAX
ISO 9001:2015 COMPANY

ONE MORE GREAT REASON TO MAKE SAMYAK YOUR DREAM HOME!

KENGERI-CHALLAGHATTA METRO RAIL STRETCH TO BE OPERATIONAL BY MID OF 2023
Source : BMRCL

Now, your CONNECTIVITY
and the property value
APPRECIATION @ SAMYAK is
2X FASTER!

DS-MAX SAMYAK
MYSORE ROAD
NEAR RAJARAJESWARI DENTAL COLLEGE



2 & 3-BHK | 600 UNITS | BDA APPROVED | G + 14 FLOORS   Rs. 39.59 - 67.16 Lacs* | Rs. 3,700 / Sq. Ft*   CALL : 8088 445 445

*T & C Apply

1, 2 & 3-BHK APARTMENTS FOR SALE IN VARIOUS LOCATIONS

PRM/KA/RERA/1251/308/PR/201201/003733	PRM/KA/RERA/1251/309/PR/211209/004576	PRM/KA/RERA/1251/446/PR/110722/005059	PRM/KA/RERA/1251/308/PR/290122/004660	PRM/KA/RERA/1251/309/PR/180120/001878	PRM/KA/RERA/1251/308/PR/280222/004739	PRM/KA/RERA/1251/446/PR/210312/004002	PRM/KA/RERA/1251/309/PR/220223/005748
ELECTRONIC CITY	YELAHANKA	BEGUR	SARJAPURA	THANISANDRA RD.	CHANDAPURA	K R PURAM	THANISANDRA
HOSA ROAD JUNCTION	ISRO LAYOUT PH-II	10 MINS. SILK BOARD	SARJAPUR - ATTIBELE RD.	NR. MANYATA TECH PARK	NR. NARAYANA H CITY	NR. GARDEN CITY UNIV.	5 MINS. FROM KNSIT
₹ 3,500 / Sq. Ft.	₹ 4,200 / Sq. Ft.	₹ 4,000 / Sq. Ft.	₹ 3,000 / Sq. Ft.	READY TO OCCUPY	₹ 3,000 / Sq. Ft.	₹ 4,400 / Sq. Ft.*	₹ 4,200 / Sq. Ft.
₹ 35.00 - 35.87 Lacs*	₹ 37.46 - 63.04 Lacs*	₹ 31.96 - 46.48 Lacs*	₹ 29.04 - 37.35 Lacs*	₹ 1.31 - 1.49 Crores*	₹ 27.45 - 37.20 Lacs*	₹ 46.68 - 67.96 Lacs*	₹ 44.14 - 55.31 Lacs*
9164 045 000	8880 758 758	8880 472 472	9164 122 000	8088 779 779	8880 013 310	8880 438 000	8880 461 461

Contents of this advertisement are only for information; This is not an offer for agreement, and interpretation is not allowed. Reach our sales team for precise communication. And we value your independent inquiries before any definite conclusion. The apartment elevation, colour, landscaping or any features shown are indicative and for representation purposes only. All investment schemes, offers and discounts are subject to the management's discretion and subject to availability. All directions, locations, landmarks and travel times are from various sources and may not be of geographical accuracy, and the use of reliable resources is at your discretion. The artwork is for representation purposes only. Visit: www.rera.karnataka.gov.in

KRISH-V

ADDING *Elegance* TO SPACES INSIDE-OUT

PROFESSIONAL
FACILITY MANAGEMENT SERVICES
FOR APARTMENT & COMMERCIAL COMPLEXES

We are a team of trained and certified professionals managing over 100 Apartment and Commercial complexes across the city with highest customer satisfaction rate.

- ✓ Mechanical – Electrical – Plumbing
- ✓ Security Services
- ✓ Gardening & Landscaping
- ✓ STP / WTP / RO Maintenance
- ✓ Cleaning Services
- ✓ Swimming Pool Maintenance
- ✓ Lift / Escalator Maintenance
- and much more...

9164 022 000
www.krishvfacilitymanagement.com

ELEGANT INTERIORS
DIRECTLY FROM OUR FACTORY

VILLAS / APARTMENTS / INDEPENDENT HOUSES / OFFICES / RESTAURANTS / RETAIL SPACES

Unlimited Design Suggestions
Branded & Durable Fittings
Swift Delivery
Trained, Skilled & Certified Workforce
Custom-Made Furniture
Home Automation Solutions

9164 056 000
www.krishvinteriors.in

Celebrating
11th ANNIVERSARY YEARS
LIMITED TIME
SPECIAL OFFER
30% OFF
This Offer Applicable only for Domestic Water Purifier
AQUA PRO
R O S Y S T E M S
Care For Your Life....
CERTIFIED ISO 9001:2015 COMPANY
AQUA PRO Edge +
AQUA PRO Superb
Manual Automatic AQUA PRO Water Softener
AQUA PRO Water Softener20"
AQUA PRO 25/100 LPH
AQUA PRO 100 LPH to 1000 LPH RO Plant
AQUA PRO RO PLANT 1000 to 10000 LPH
* Terms & Conditions Apply
WANTED
Dealers & Distributers
All Over Karnataka
AQUA PRO TOTAL SOLUTIONS
99809 16333 / 81972 16758
1489, 29th Main, 'D' Group Layout,
Vishwaneedam Post,Nagarabhavi 2nd Stage,
Bangalore -560 091.

AISHWARYA TEA INDUSTRIES
ISO 22000:2005 Certified Company
AISHWARYA
TEA INDUSTRIES
AISHWARYA'S
"ಕರ್ನಾಟಕದ ಅತ್ಯಂತ ರುಚಿಕರವಾದ ಚಹಾ"
SHALIMAR GOLD
HIGH GROWN ASSAM TEA
KT Special Tea
CELEBRATING 25 Years
Unmatched Flavour & Aroma
ಒಂದು ಕಪ್ ಚಹಾ
ಮನಸ್ಸಿನ ನೂರು ಯೋಚನೆಗಳು ಪರಿಹಾರ
SHALIMAR Premium Assam TEA GOLD
THE HOMEMAKERS CHOICE
ಶಾಲಿಮಾರ್ ಗೋಲ್ಡ್
ಕೆ.ಟಿ ಸ್ಪೆಷಲ್ ಚಹಾ
TRADE ENQUIRIES
Bangalore
Shivaraj: +91 99809 23537
Rest of Karnataka
Satish RSM: +91 97313 03541
www.aishwaryateaindustries.com
aishwaryatea@gmail.com

ನಿರಾ ಇಂಟರ್‌ನ್ಯಾಷನಲ್
ಫ್ಯಾಮಿಲಿ ಸ್ಪಾ
Jacuzzi
Sauna Bath
Steam
Biggest & Luxurious Spa in Bangalore
ಸೇವೆಗಳು
■ ಕಪಲ್ ಮಸಾಜ್
■ ಕ್ಲಾಸಿಕ್
■ ಎಕ್ಸ್‌ಕ್ಲೂಸಿವ್
■ ಟರ್ಕಿಷ್ ಹಮ್ಮಾಮ್
■ ಸ್ಕ್ರಬ್ಸ್
■ ಬಾಡಿ ಪಾಲಿಶ್
■ ಬಾತ್ ಪ್ಯೂರಿಫೈಡ್ ವಾಟರ್
■ ಸ್ಟೀಮ್ ಸೇರಿದಂತೆ
VIP | VVIP | Platinum | Maharaja | Couples | Sauna Bath
ಬೆಂಗಳೂರಿನ ಅತ್ಯುತ್ತಮ
ಫ್ಯಾಮಿಲಿ ಸ್ಪಾ
ಜಕುಝಿ ಮತ್ತು
ಸ್ಪಾ ಪೂಲ್
ಸಾಂಪ್ರದಾಯಿಕ ಟರ್ಕಿಶ್ ಸ್ನಾನದ ಪ್ಯಾಕೇಜ್ 45 ನಿಮಿಷಗಳ ವಾಷಿಂಗ್‌ಅನ್ನು ಒಳಗೊಂಡಿದೆ; ಕೆಸೆ ಎಂದು ಕರೆಯಲ್ಪಡುವ ಕೈಯಿಂದ ನೇಯ್ದ ತೊಳೆಯುವ ಬಟ್ಟೆಯಿಂದ ಸಾಂಪ್ರದಾಯಿಕ ದೇಹದ ಸ್ಕ್ರಬ್ಬಿಂಗ್; ಒಂದು ಫೋಮ್ ವಾಶ್; & ಒಂದು ಮಸಾಜ್.
www.nirathai.in
+91 7022122808 , +91 7022122303
5ನೇ ಮಹಡಿ, ಶ್ರಾವಣಿ ಬಿಲ್ಡ್‌ಟೆಕ್, #754, A/B, 24ನೇ ಮುಖ್ಯ ರಸ್ತೆ,
ಜೆಪಿ ನಗರ 6ನೇ ಹಂತ ಕೆ ಆರ್ ಲೇಔಟ್, ಬೆಂಗಳೂರು – 560078 ಕರ್ನಾಟಕ